ಶುಕ್ರವಾರ, ಮಾರ್ಚ್ 14, 2025 | ₹ 7.00

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಭ್ರಮ
ಕಲಬುರಗಿಯಲ್ಲಿ ಗುರುವಾರ ಯುವತಿಯೊಬ್ಬರು ಹೋಳಿ ಹಬ್ಬವನ್ನು ಸಂಭ್ರಮಿಸಿದ ಪರಿ ಇದು

ಅಧಿಕ ತೆರಿಗೆ ವಿಧಿಸಿ ಆದಾಯ ಸಂಗ್ರಹ: ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್‌. ಅಶೋಕ ವಾಗ್ದಾಳಿ

‘ರಾಜ್ಯವನ್ನು ಸಾಲದ ಕೂಪಕ್ಕೆ ತಳ್ಳಿದ ಸಿ.ಎಂ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕವನ್ನು ಸಾಲದ ಕೂಪಕ್ಕೆ ತಳ್ಳಿದ್ದಾರೆ. ಈ ರಾಜ್ಯ ಕಂಡ ಮುಖ್ಯಮಂತ್ರಿಗಳಲ್ಲಿ ಅತಿ ಹೆಚ್ಚು ಸಾಲದ ಹೊರೆ ಹೊರಿಸಿದ ಕೀರ್ತಿ ಇವರಿಗೇ ಸಲ್ಲುತ್ತದೆ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಪ್ರತಿಪಾದಿಸಿದರು.



ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್‌.ಅಶೋಕ್ ಮಾತನಾಡಿದರು

ವಿಧಾನಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಗುರುವಾರ ಪಾಲ್ಗೊಂಡು ಮಾತನಾಡಿದ ಅವರು, ‘ಇವರ ಅವಧಿಯಲ್ಲಿ ₹4.91 ಲಕ್ಷ ಕೋಟಿ ಸಾಲ ಮಾಡಿದ್ದು, ಒಟ್ಟು ಸಾಲದಲ್ಲಿ ಶೇ 63ರಷ್ಟು ಪಾಲು ಇವರದೇ’ ಎಂದರು.

‘ಸಾಲದ ಮೊತ್ತವನ್ನು ₹1 ಲಕ್ಷ ಕೋಟಿ ಗಡಿ ದಾಟಿಸಿ, ₹1.16 ಲಕ್ಷ ಕೋಟಿಗೆ ಹೆಚ್ಚಿಸಿದ್ದಾರೆ. ಪ್ರತಿಯೊಬ್ಬ ಕನ್ನಡಿಗನ ಮೇಲೆ ₹1 ಲಕ್ಷ ಸಾಲದ ಹೊರೆ ಹೊರಿಸಿದ್ದಾರೆ. 2021–22ರಲ್ಲಿ ನಮ್ಮ ಸರ್ಕಾರ ಇದ್ದಾಗ ಕೋವಿಡ್ ಇತ್ತು. ಆಗ ಲಾಕ್‌ಡೌನ್ ಕಾರಣ ಸರ್ಕಾರಕ್ಕೆ ಯಾವುದೇ ಆದಾಯ ಇರಲಿಲ್ಲ. ಆಗ ಅನಿವಾರ್ಯವಾಗಿ ₹80,641 ಕೋಟಿ ಸಾಲ ತೆಗೆದುಕೊಳ್ಳಬೇಕಾಯಿತು. ಅದರ ನಂತರದ ವರ್ಷ ಸಾಲದ ಪ್ರಮಾಣ ಇಳಿಕೆ ಆಯಿತು. ಅಂದರೆ ₹44,549 ಕೋಟಿ ಮಾತ್ರ ಪಡೆದದ್ದು. ಆದರೆ, 2023–24ರಲ್ಲಿ ಸಿದ್ದರಾಮಯ್ಯ ಸರ್ಕಾರ ₹90,280 ಕೋಟಿ, 2024–25ರಲ್ಲಿ ₹1.07 ಲಕ್ಷ ಕೋಟಿ ಮತ್ತು ಈಗ ₹1.16 ಲಕ್ಷ ಕೋಟಿ ಸಾಲ ಪಡೆಯಲು ಮುಂದಾಗಿದೆ. ಈ ವರ್ಷ ಕಳೆದ ವರ್ಷಕ್ಕಿಂತ ಶೇ 15ರಷ್ಟು ಹೆಚ್ಚು ಸಾಲ ಪಡೆಯಲು ಅವಕಾಶ ಕಲ್ಪಿಸಿಕೊಂಡಿದ್ದಾರೆ. ಅಲ್ಲದೆ, ಸರ್ಕಾರದ ಹೊಣೆಗಾರಿಕೆ 2022–23ರಲ್ಲಿ ₹5.23 ಲಕ್ಷ ಕೋಟಿ ಇದ್ದದ್ದು, 2025–26ರಲ್ಲಿ 7.65 ಲಕ್ಷ ಕೋಟಿಗೆ ಏರಿಕೆ ಆಗಿದೆ. 3 ವರ್ಷಗಳಲ್ಲಿ ₹2.41 ಲಕ್ಷ ಕೋಟಿ ಹೆಚ್ಚಳವಾಗಿದೆ’ ಎಂದು ಅಶೋಕ ಹೇಳಿದರು.

‘2017ರಲ್ಲಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್‌ನಲ್ಲಿ ‘ಸರ್ಕಾರ ಸಾಲ ಸಿಗುತ್ತದೆ ಎಂದು ಸಾಲ ತೆಗೆದುಕೊಳ್ಳಬಾರದು. ನಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಸಾಲ ತೆಗೆದುಕೊಳ್ಳಬೇಕೇ ಹೊರತು ಸಾಮರ್ಥ್ಯವಿಲ್ಲದೇ ತೆಗೆದುಕೊಳ್ಳಬಾರದು. ತೆಗೆದುಕೊಂಡ ಸಾಲವನ್ನು ಆಸ್ತಿ ಸೃಜನೆಗೆ ಬಳಸಬೇಕು’ ಎಂದು ಹೇಳಿದ್ದರು. ಈಗ ಇವರು ಪಡೆಯುತ್ತಿರುವ ಸಾಲ ಆಸ್ತಿ ಸೃಜನೆ ಮತ್ತು ಅಭಿವೃದ್ಧಿಗಾಗಿ ಬಳಸುತ್ತಿಲ್ಲ. ಉಚಿತಗಳಿಗೆ ಬಳಸುತ್ತಿದ್ದಾರೆ’ ಎಂದು ತಿವಿದರು.

ಕಳೆದ ವರ್ಷವೂ ಬಜೆಟ್‌ನಲ್ಲಿ ತೆರಿಗೆ ಹೊರೆ ಇಲ್ಲ ಎಂದರು. ಆಕರ್ಷಕ ಯೋಜನೆಗಳನ್ನು ಪ್ರಕಟಿಸಿ, ಮಾಧ್ಯಮಗಳಲ್ಲಿ ಅದ್ಭುತ ಬಜೆಟ್ ಎಂದು ಹೊಗಳಿಸಿಕೊಂಡರು. ಆ ನಂತರ ಒಂದರ ಮೇಲೆ ಮತ್ತೊಂದು ಬೆಲೆ ಏರಿಕೆ ಮಾಡಿದರು. ಬೆಲೆ ಏರಿಕೆಯಿಂದ ಆದಾಯ ಸಂಗ್ರಹವಾಗಿದೆ. ಈ ಮೂಲದಿಂದ ₹41 ಸಾವಿರ ಕೋಟಿ ತೆರಿಗೆ ಸಂಗ್ರಹ ಮಾಡಿದರು. ಈ ವರ್ಷವೂ ಸಾರ್ವಜನಿಕರಿಗೆ ತೆರಿಗೆ ಏರಿಕೆಯ ಮಾರಿ ಹಬ್ಬ ಕಾದಿದೆ ಎಂದರು.

ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗೆ ಮೀಸಲಿಟ್ಟ ಅನುದಾನದಲ್ಲಿ ಶೇ 30ರಷ್ಟನ್ನು ಅನ್ಯ ಉದ್ದೇಶಕ್ಕೆ ವರ್ಗಾವಣೆ ಮಾಡಲಾಗುತ್ತಿದೆ. ಯೋಜನೆಯ ಮೂಲ ಉದ್ದೇಶಕ್ಕೆ ಸರ್ಕಾರವೇ ಕೊಡಲಿ ಪೆಟ್ಟು ಹಾಕುತ್ತಿದೆ ಎಂದು ದೂರಿದರು.

ಅಶೋಕ ಅವರು ಚರ್ಚೆ ಆರಂಭಿಸುವಾಗ ಒಂದಿಬ್ಬರು ಸಚಿವರು ಬಿಟ್ಟರೆ ಯಾರೂ ಇರಲಿಲ್ಲ. ಅಧಿಕಾರಿಗಳ ಗ್ಯಾಲರಿಯಲ್ಲೂ ಹಣಕಾಸು ಇಲಾಖೆ ಅಧಿಕಾರಿಗಳು ಇರಲಿಲ್ಲ. ಇದರಿಂದ ಕೆರಳಿದ ಬಿಜೆಪಿ ಸದಸ್ಯರು, ಮುಖ್ಯಮಂತ್ರಿ ಮತ್ತು ಹಣಕಾಸು ಇಲಾಖೆ ಪ್ರಧಾನ ಕಾರ್ಯದರ್ಶಿ ಇರಬೇಕು. ಯಾರೂ ಇಲ್ಲ ಎಂದು ಗದ್ದಲ ಎಬ್ಬಿಸಿದರು. ಸ್ವಲ್ಪ ಹೊತ್ತಿನಲ್ಲೇ ಮುಖ್ಯಮಂತ್ರಿ ಬಂದು ಕುಳಿತರು.

‘ಗೃಹಲಕ್ಷ್ಮಿ: ಪರಿಶಿಷ್ಟರಿಗೆ ₹4 ಸಾವಿರ ಕೊಡಿ’

ಪರಿಶಿಷ್ಟ ಜಾತಿ ಮತ್ತು ವರ್ಗದವರು ಸಾಮಾನ್ಯ ವರ್ಗದವರಿಗೆ ಹೋಲಿಸಿದಾಗ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ 10 ವರ್ಷಗಳಷ್ಟು ಹಿಂದೆ ಇರುತ್ತಾರೆ. ಹೀಗಾಗಿ ಯಾವುದೇ ಯೋಜನೆ ಅಡಿ ನೆರವು ನೀಡುವಾಗ ಸಾಮಾನ್ಯ ವರ್ಗ ಮತ್ತು ಪರಿಶಿಷ್ಟರಿಗೆ ಸಮ ಪ್ರಮಾಣದಲ್ಲಿ ನೆರವು ನೀಡುವುದು ಸರಿಯಲ್ಲ. ಗೃಹ ಲಕ್ಷ್ಮಿ ಯೋಜನೆಯಲ್ಲಿ ಸಾಮಾನ್ಯ ವರ್ಗಕ್ಕೆ ₹2,000 ನೀಡಿದರೆ, ಪರಿಶಿಷ್ಟರಿಗೆ ₹4,000 ನೀಡಬೇಕು ಎಂದು ಅಶೋಕ ಆಗ್ರಹಿಸಿದರು.

‘ರಾಜ್ಯದಲ್ಲಿ ಮುಸ್ಲಿಂ ಜನಸಂಖ್ಯೆ ಶೇ 14ರಷ್ಟು ಇದೆ, ಆದ್ದರಿಂದ ಮುಸ್ಲಿಮರಿಗೆ ₹60 ಸಾವಿರ ಕೋಟಿ ಕೊಡಬೇಕು ಎಂದು ಸಚಿವ ಜಮೀರ್ ಅಹಮದ್ ಖಾನ್ ಹೇಳಿದ್ದಾರೆ. ಜಮೀರ್ ಅವರ ಮಾನದಂಡ ಅನುಸರಿಸುವುದಾದರೆ ಶೇ 24ರಷ್ಟು ಜನಸಂಖ್ಯೆ ಹೊಂದಿರುವ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ₹98,701 ಕೋಟಿ ನೀಡಬೇಕಾಗುತ್ತದೆ’ ಎಂದು ಅವರು ಹೇಳಿದರು.

ಕೇಂದ್ರದ ಸಾಲ ₹200 ಲಕ್ಷ ಕೋಟಿ ದಾಟಿದೆ: ಸಿ.ಎಂ

‘ಕೇಂದ್ರದ ಸಾಲ ಸುಮಾರು ₹200 ಲಕ್ಷ ಕೋಟಿ ಮೀರಿದೆ. ಆ ಬಗ್ಗೆ ಏಕೆ ಮಾತನಾಡುವುದಿಲ್ಲ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ರಾಜ್ಯ ಸರ್ಕಾರದ ಸಾಲದ ಬಗ್ಗೆ ಅಶೋಕ ಪ್ರಸ್ತಾಪಿಸಿದಾಗ ಮಧ್ಯಪ್ರವೇಶಿಸಿದಮುಖ್ಯಮಂತ್ರಿ, ‘ಕೇಂದ್ರ ಸರ್ಕಾರ ಸಾಲ ಮಾಡಿಲ್ಲವೇ? ಎಷ್ಟು ಸಾಲ ಮಾಡಿದೆ? ಮೋದಿಯವರು ಸಾಲ ಮಾಡಿಲ್ಲವೇ’ ಎಂದು ಕೇಳಿದರು.

ಅದಕ್ಕೆ ಪ್ರತಿಕ್ರಿಯಿಸಿದ ಅಶೋಕ ಅವರು, ‘ಕೇಂದ್ರ ಸರ್ಕಾರ ಮಾತ್ರ ಅಲ್ಲ, ಜಗತ್ತಿನ ಎಲ್ಲ ರಾಷ್ಟ್ರಗಳೂ ಸಾಲ ಮಾಡುತ್ತವೆ. ಮಾಡಿದ ಸಾಲ ಹೇಗೆ ಖರ್ಚು ಮಾಡಲಾಗುತ್ತದೆ ಎನ್ನುವುದು ಮುಖ್ಯ. ಕೇಂದ್ರ ಸರ್ಕಾರ ಸಾಲ ಮಾಡಿದ್ದರಲ್ಲಿ ದೇಶ ವ್ಯಾಪಿ ಮೂಲ ಸೌಕರ್ಯಕ್ಕಾಗಿ, ಸ್ವತ್ತುಗಳ ನಿರ್ಮಾಣಕ್ಕೆ ಬಳಸುತ್ತಿದೆ. ನೀವು ಏನು ಮಾಡುತ್ತಿದ್ದೀರಿ’ ಎಂದು ಪ್ರಶ್ನಿಸಿದರು.

‘ನಾವು ಇಲ್ಲಿ ಚರ್ಚೆ ಮಾಡುತ್ತಿರುವುದು ರಾಜ್ಯ ಬಜೆಟ್ ಬಗ್ಗೆಯೇ ಹೊರತು ಕೇಂದ್ರದ ಬಜೆಟ್ ಬಗ್ಗೆ ಅಲ್ಲ. ನಿಮ್ಮ ಪ್ರಶ್ನೆಗಳಿಗೆ ಉತ್ತರ ಕೊಡಲು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಇಲ್ಲಿಗೆ ಬರುವುದಿಲ್ಲ. ಕೇಂದ್ರ ಸರ್ಕಾರವನ್ನು ಟೀಕೆ ಮಾಡಬೇಕು ಅಂತ ಇದ್ದರೆ ಸಂಸದರಾಗಿ ಸಂಸತ್ತಿಗೆ ಹೋಗಿ’ ಎಂದು ಅಶೋಕ ಸಲಹೆ ನೀಡಿದರು. ಈ ಹಂತದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ಮಧ್ಯೆ ಬಿರುಸಿನ ವಾಗ್ವಾದ ನಡೆಯಿತು.

ಸುದ್ದಿ 2 ನಿಮಿಷ

ಗ್ಯಾರಂಟಿ ಸಮಿತಿಯಿಂದ ಶಾಸಕರ ಹಕ್ಕುಚ್ಯುತಿಯಾಗಿಲ್ಲ: ಪುಷ್ಪಾ

ಮೈಸೂರು: ‘ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಉಸ್ತುವಾರಿಗೆ ಸಮಿತಿ ರಚಿಸಿರುವುದರಿಂದ ಯಾವ ಶಾಸಕರ ಹಕ್ಕುಚ್ಯುತಿಯೂ ಆಗಿಲ್ಲ. ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಸಮಿತಿ ಬೇಕು’ ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಪ್ರತಿಪಾದಿಸಿದರು.

‘ಗ್ಯಾರಂಟಿ ಎನ್ನುವುದು ಕೇವಲ ಒಂದು ವರ್ಷದ್ದಲ್ಲ, ಐದು ವರ್ಷದ ಕಾರ್ಯಕ್ರಮ. ಅಧಿಕಾರಿಗಳಿಂದಷ್ಟೇ ನಿರ್ವಹಣೆ ಸಾಧ್ಯವಿಲ್ಲ. ಸಮಿತಿ ಇದ್ದರಷ್ಟೇ ಸುಗಮವಾಗಿ ಕೆಲಸ ನಡೆಯುತ್ತದೆ’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅಭಿಪ್ರಾಯಪಟ್ಟರು.

‘ಸಮಿತಿ ಸದಸ್ಯರು ಯಾವುದೇ ಪಕ್ಷ, ಧರ್ಮದ ಪರ ಕೆಲಸ ಮಾಡುತ್ತಿಲ್ಲ. ವಾರ್ಷಿಕ ₹51 ಸಾವಿರ ಕೋಟಿ ಅನುದಾನವನ್ನು ಎಲ್ಲ ಜಾತಿ- ಧರ್ಮದ ಜನರಿಗೆ ತಲುಪಿಸುವ ಕೆಲಸ ಮಾಡುತ್ತಿದ್ದೇವೆ. ನಮ್ಮಿಂದ ಶಾಸಕರ ಅಧಿಕಾರಕ್ಕೆ ಯಾವುದೇ ಅಡ್ಡಿ ಇಲ್ಲ. ಅವರ ಅನುದಾನ- ಜವಾಬ್ದಾರಿಗಳು ಬೇರೆಯೇ ಇವೆ. ಅವನ್ನು ನೋಡಿಕೊಂಡರೆ ಸಾಕು’ ಎಂದು ಹೇಳಿದರು.

ಕಾಡಾನೆ ಸೆರೆ: ರಾಜ್ಯ ಅರಣ್ಯ ಇಲಾಖೆಗೆ ಮಹಾರಾಷ್ಟ್ರ ಮೊರೆ

ಖಾನಾಪುರ: ಮಹಾರಾಷ್ಟ್ರದ ಸಿಂಧದುರ್ಗ ಮತ್ತು ಕೊಲ್ಹಾಪುರ ಜಿಲ್ಲೆ ಅರಣ್ಯ ಪ್ರದೇಶದಲ್ಲಿನ ರೈತರಿಗೆ ತೊಂದರೆ ನೀಡುತ್ತಿರುವ ಕಾಡಾನೆಗಳನ್ನು ಸೆರೆಹಿಡಿಯಲು ತಮಗೆ ನೆರವಾಗುವಂತೆ ಮಹಾರಾಷ್ಟ್ರದ ಅರಣ್ಯ ಇಲಾಖೆಯು ಕರ್ನಾಟಕದ ಅರಣ್ಯ ಇಲಾಖೆ ಕೋರಿದೆ.

ಕೊಲ್ಹಾಪುರದ ಉಪ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದಲ್ಲಿ ಚಂದಗಡ, ಸಿಂಧದುರ್ಗ ಜಿಲ್ಲೆಯ ವೆಂಗುರ್ಲಾ ಮತ್ತು ಸಾವಂತವಾಡಿಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ವಲಯ ಅರಣ್ಯ ಅಧಿಕಾರಿಗಳು ಖಾನಾಪುರದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುನೀತಾ ನಿಂಬರಗಿ, ವಲಯ ಅರಣ್ಯಾಧಿಕಾರಿ ಶ್ರೀಕಾಂತ ಪಾಟೀಲ ಬಳಿ ಚರ್ಚಿಸಿದರು.

ಕೊಲ್ಹಾಪುರ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಿ.ಜಿ. ಸಿಂಗ್ ಮಾತನಾಡಿ, ‘ಮಹಾರಾಷ್ಟ್ರದ ಎರಡೂ ಜಿಲ್ಲೆಗಳ ಅರಣ್ಯ ಪ್ರದೇಶದಲ್ಲಿ 50ಕ್ಕೂ ಹೆಚ್ಚು ಕಾಡಾನೆಗಳಿದ್ದು, ಅವು ರೈತರ ಜಮೀನಿಗೆ ನುಗ್ಗಿ ಬೆಳೆಹಾನಿ ಮಾಡುತ್ತಿವೆ. ಕಾಡಿನಲ್ಲಿ ಇರುವ ಜನರಿಗೆ ಭಯ ಹುಟ್ಟಿಸುತ್ತಿವೆ. ಖಾನಾಪುರದಲ್ಲಿ ನಡೆಸಿದ ಕಾರ್ಯಾಚರಣೆ ಮಾದರಿಯಲ್ಲೇ, ಮಹಾರಾಷ್ಟ್ರದ ಅರಣ್ಯದಲ್ಲೂ ಕಾರ್ಯಾಚರಣೆ ನಡೆಸಿ ಕಾಡಾನೆಗಳನ್ನು ಸೆರೆ ಹಿಡಿಯಲು ನೆರವಾಗಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸುನೀತಾ ನಿಂಬರಗಿ, ‘ಶಿವಮೊಗ್ಗದ ಸಕ್ರೆಬೈಲ್ ಆನೆ ಬಿಡಾರದಲ್ಲಿ ಪಳಗಿದ ಆನೆಗಳನ್ನು ತರಿಸಿ, ಮಹಾರಾಷ್ಟ್ರದ ಕಾಡಾನೆಗಳನ್ನು ಸೆರೆಹಿಡಿಯಲು ಎಲ್ಲ ರೀತಿಯ ಸಹಕಾರ ನೀಡಲು ಸಿದ್ಧ. ಈ ವಿಷಯವಾಗಿ ಮಹಾರಾಷ್ಟ್ರ ಸರ್ಕಾರವು ಕರ್ನಾಟಕ ಸರ್ಕಾರದ ಜತೆಗೆ ಪತ್ರ ವ್ಯವಹಾರ ಮಾಡಬೇಕು’ ಎಂದರು.

ನಂತರ ಮಹಾರಾಷ್ಟ್ರದ ಅಧಿಕಾರಿಗಳು ತಾಲ್ಲೂಕಿನ ಜಳಗಾ ಗ್ರಾಮದ ಶ್ರೀಗಂಧ ನೆಡುತೋಪು ವೀಕ್ಷಿಸಿದರು. ಬೆಳಗಾವಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಮರಿಯಾ ಕ್ರಿಸ್ತು ರಾಜಾ ಇದ್ದರು.

ಮೌನ ಧ್ಯಾನ... ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಜಿ. ಪರಮೇಶ್ವರ ವಿಧಾನ ಪರಿಷತ್ ಕಲಾಪದ ವೇಳೆ ಹೀಗೆ ಚಿಂತಾಕ್ರಾಂತರಾಗಿ ಕುಳಿತಿದ್ದರು –ಪ್ರಜಾವಾಣಿ ಚಿತ್ರ

ತುಂಗಭದ್ರೆಗೆ ಸಮಾನಾಂತರ ಜಲಾಶಯ

ನವಲಿ ಬಳಿ ₹15,601 ಕೋಟಿ ವೆಚ್ಚದಲ್ಲಿ ಮತ್ತೊಂದು ಅಣೆಕಟ್ಟೆ: ಡಿ.ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಂಗಭದ್ರಾ ಜಲಾಶಯಕ್ಕೆ ಸಮಾನಾಂತರವಾಗಿ ₹15,601 ಕೋಟಿ ವೆಚ್ಚದಲ್ಲಿ ಮತ್ತೊಂದು ಅಣೆಕಟ್ಟೆ ನಿರ್ಮಿಸಲು ಸಿದ್ಧತೆ ನಡೆಯುತ್ತಿದ್ದು, ತೆಲಂಗಾಣ ಹಾಗೂ ಆಂಧ್ರಪ್ರದೇಶ ಮುಖ್ಯಮಂತ್ರಿಗಳ ಜತೆ ಚರ್ಚಿಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕಾಂಗ್ರೆಸ್‌ನ ಬಸನಗೌಡ ಬಾದರ್ಲಿ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ತುಂಗಭದ್ರಾ ಜಲಾಶಯದಲ್ಲಿ ತುಂಬಿರುವ ಹೂಳಿನಿಂದ ನೀರಿನ ಸಂಗ್ರಹ ಕಡಿಮೆಯಾಗಿದೆ. 132 ಟಿಎಂಸಿ ಅಡಿ ಸಾಮರ್ಥ್ಯದ ಜಲಾಶಯ 100 ಟಿಎಂಸಿ ಅಡಿಗೆ ಇಳಿದಿದೆ. ಈ ಕೊರತೆ ನೀಗಿಸಲು ಕೊಪ್ಪಳ ಜಿಲ್ಲೆಯ ನವಲಿ ಹತ್ತಿರ ಸಮತೋಲನ ಜಲಾಶಯ ನಿರ್ಮಿಸಲು ಯೋಜನೆ ರೂಪಿಸಲಾಗಿದೆ ಎಂದರು.

ಯೋಜನಾ ವೆಚ್ಚ ಒಳಗೊಂಡ ವಿವರವಾದ ವರದಿಯನ್ನು ತುಂಗಭದ್ರಾ ಮಂಡಳಿಗೆ ಈಗಾಗಲೇ ಸಲ್ಲಿಸಲಾಗಿದೆ. ಅಂತರರಾಜ್ಯ ಯೋಜನೆಯಾದ ಕಾರಣ ತೆಲಂಗಾಣ, ಆಂಧ್ರ ಪ್ರದೇಶಗಳ ಜತೆ ಚರ್ಚಿಸಲು ಸಮಯ ಕೋರಿ ಪತ್ರ ಬರೆಯಲಾಗಿದೆ ಎಂದು ವಿವರ ನೀಡಿದರು.

ಕೃಷ್ಣಾ: ಸ್ವಾಧೀನ ಬಾಕಿ 1.04 ಲಕ್ಷ ಎಕರೆ

ಕೃಷ್ಣಾ ಮೇಲ್ದಂಡೆ ಮೂರನೇ ಹಂತದ ಯೋಜನೆಗೆ 1.04 ಲಕ್ಷ ಎಕರೆ, 566 ಕಟ್ಟಡಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಬಾಕಿ ಇದೆ ಶಿವಕುಮಾರ್ ಹೇಳಿದರು.

ಬಿಜೆಪಿಯ ಹಣಮಂತ ನಿರಾಣಿ, ಪಿ.ಎಚ್. ಪೂಜಾರ್ ಅವರ ಪ್ರಶ್ನೆಗೆ ಉತ್ತರ ನೀಡಿದ ಅವರು, ಹಿಂದೆ ನಡೆದ ಸಭೆಯ ನಿರ್ಣಯ, ಐತೀರ್ಪಿನ ಪರಿಷ್ಕರಣೆ ಹಾಗೂ ಯೋಜನೆಯ ಪರಿಷ್ಕೃತ ಅಂದಾಜು ಪ್ರಸ್ತಾವನೆಗಳ ಅನುಮೋದನೆಗಾಗಿ ಸಚಿವ ಸಂಪುಟದ ಮುಂದೆ ಮಂಡಿಸಲು ಸಿದ್ಧತೆ ನಡೆದಿದೆ ಎಂದು ಅವರು ತಿಳಿಸಿದರು.

ನೀರು ಬಳಕೆದಾರರಿಗೆ ‘ಅಪೆಕ್ಸ್’

ನೀರು ಬಳಕೆದಾರರ ಸಹಕಾರ ಸಂಘಗಳ ರಾಜ್ಯಮಟ್ಟದ ಶೃಂಗ ಮಹಾಮಂಡಲ (ಅಪೆಕ್ಸ್) ರಚನೆ ಪ್ರಕ್ರಿಯೆ ಆರಂಭವಾಗಿದ್ದು, ಮುಖ್ಯ ಪ್ರವರ್ತಕರನ್ನು ನೇಮಿಸಲಾಗಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

ಕಾಂಗ್ರೆಸ್‌ನ ಮಧು ಮಾದೇಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ನೀರಾವರಿ ಬಳಕೆದಾರರ ಸಂಘಗಳ ನಿರ್ವಹಣೆಗಾಗಿ ಈಗ ನೀಡುತ್ತಿರುವ ವಾರ್ಷಿಕ ಅನುದಾನ ₹1 ಲಕ್ಷ ಮೊತ್ತವನ್ನು ₹2 ಲಕ್ಷಕ್ಕೆ ಹೆಚ್ಚಿಸಲಾಗಿದೆ. ನಿರ್ವಹಣಾ ಕಾಮಗಾರಿಗಳನ್ನು ಸಂಘಗಳಿಗೆ ವಹಿಸುವ ಕುರಿತು ಪರಿಶೀಲನೆ ನಡೆಸಲಾಗುವುದು ಎಂದರು.

ಗ್ರಾಮೀಣಾಭಿವೃದ್ಧಿ ವಿ.ವಿ.ಗೆ ಮಹಾತ್ಮ ಗಾಂಧಿ ಹೆಸರು

ಬೆಂಗಳೂರು: ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಹೆಸರನ್ನು ‘ಮಹಾತ್ಮ ಗಾಂಧೀಜಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ’ ಎಂದು ಬದಲಿಸುವ ಮಸೂದೆಗೆ ವಿಧಾನಸಭೆ ಗುರುವಾರ ಅಂಗೀಕಾರ ನೀಡಿತು.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ–2025 ಅನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮಂಡಿಸಿದರು. ಸದನವು ಧ್ವನಿಮತದ ಮೂಲಕ ಮಸೂದೆಗೆ ಒಪ್ಪಿಗೆ ನೀಡಿತು.

ಮೇಲ್ಮನೆಯಲ್ಲಿ ಮೈಸೂರಿನ ಉದಯಗಿರಿ ಪ್ರಕರಣದ ಪ್ರಸ್ತಾಪ– ಸರ್ಕಾರಕ್ಕೆ ವಿಪಕ್ಷಗಳ ತರಾಟೆ

‘ಕ್ರಿಮಿನಲ್‌ಗಳ ನಟ್ಟು- ಬೋಲ್ಟ್ ಟೈಟ್ ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪರಾಧ ಪ್ರಕರಣಗಳಲ್ಲಿ ಭಾಗಿಯಾದವರ ನಟ್ಟು– ಬೋಲ್ಟ್ ಟೈಟ್ ಮಾಡಿ’ ಎಂದು ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಟಿ. ರವಿ ಆಗ್ರಹಿಸಿದರು.

ಸಿ.ಟಿ.ರವಿ

ಮೈಸೂರಿನ ಉದಯಗಿರಿಯಲ್ಲಿ ನಡೆದ ಗಲಭೆ ಕುರಿತು ವಿಧಾನ ಪರಿಷತ್‌ನಲ್ಲಿ ನಡೆದ ಚರ್ಚೆಯಲ್ಲಿ ಮಾತನಾಡಿದ ಅವರು, ‘ಕ್ರಿಮಿನಲ್‌ಗಳನ್ನು ರಕ್ಷಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಹೀಗಾಗಿ, ಕಾನೂನು ಕೈಗೆತ್ತಿಕೊಳ್ಳಲು ಹಿಂಜರಿಯುವುದಿಲ್ಲ’ ಎಂದು ಆರೋಪಿಸಿದರು.

ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ‘ಪೊಲೀಸ್ ಇಲಾಖೆ ಮೇಲೆ ಭಯವೂ ಇಲ್ಲ. ವಿಶ್ವಾಸವೂ ಇಲ್ಲ ಎನ್ನುವ ಸ್ಥಿತಿ ರಾಜ್ಯದಲ್ಲಿದೆ. ಸರ್ಕಾರ ಕಠಿಣ ಕ್ರಮ ತೆಗೆದುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ಗಲಭೆಗಳು ಉಂಟಾಗಲಿವೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ಸರ್ಕಾರದ ಮೃದು ನೀತಿಯೇ ಎಲ್ಲ ಘಟನೆಗಳಿಗೆ ಕಾರಣ. ಸರ್ಕಾರದ್ದು ಒಂದು ನೀತಿಯಾದರೆ, ಮಂತ್ರಿಗಳದ್ದು ಮತ್ತೊಂದು ನೀತಿ. ಪೊಲೀಸ್ ಅಧಿಕಾರಿಗಳು ಸಮರ್ಥರಿದ್ದಾರೆ. ಆದರೆ, ಸರ್ಕಾರದ ನಿಲುವು ಸ್ಪಷ್ಟವಿಲ್ಲ’ ಎಂದು ಬಿಜೆಪಿಯ ಎನ್. ರವಿಕುಮಾರ್ ದೂರಿದರು.

ಬೆಳಗಾವಿಯಲ್ಲಿ ಡಿಸೆಂಬರ್‌ನಲ್ಲಿ ನಡೆದ ಅಧಿವೇಶನದ ಕೊನೆಯ ದಿನ ಸಿ.ಟಿ. ರವಿ ಅವರನ್ನು ಪೊಲೀಸರು ಬಂಧಿಸಿದ ನಂತರ ನಡೆಸಿಕೊಂಡ ರೀತಿಯ ಬಗ್ಗೆ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಚರ್ಚೆಯ ವೇಳೆ ಪ್ರಸ್ತಾಪಿಸಿದರು.

ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್, ‘ಸಿ.ಟಿ. ರವಿ ಅವರನ್ನು ಪೊಲೀಸರು ನಡೆಸಿಕೊಂಡಿದ್ದ ರೀತಿ ತಪ್ಪು. ಹಾಗೆಂದು, ಕರ್ನಾಟಕವನ್ನು ಬಿಹಾರಕ್ಕೆ ಹೋಲಿಸುವ ಅಗತ್ಯವಿಲ್ಲ. ರಾಜ್ಯದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ ಎಷ್ಟು ಮಂದಿಯ ಮೇಲೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ ಎಂಬ ಮಾಹಿತಿಯನ್ನು ಗೃಹ ಸಚಿವರು ಸಭೆಗೆ ನೀಡಬೇಕು’ ಎಂದರು.

ಎಲ್ಲರಿಗೂ ಮಾತನಾಡಲು ಅವಕಾಶ ಕೊಡಬೇಕು ಎಂದು ಆಡಳಿತ ಪಕ್ಷದ ಸದಸ್ಯರು ಪಟ್ಟು ಹಿಡಿದರು. ಅವಕಾಶ ನೀಡಲು ನಿರಾಕರಿಸಿದ ಸಭಾಪತಿ ಪೀಠದಲ್ಲಿದ್ದ ಉಪ ಸಭಾಪತಿ ಎಂ.ಕೆ. ಪ್ರಾಣೇಶ್, ‘ಚರ್ಚೆಗೆ ಎಷ್ಟು ಸಮಯ ಕೊಡಬೇಕು ಎನ್ನುವುದು ನಿಯಮಾವಳಿಯಲ್ಲಿದೆ. ಅದನ್ನು ಎಲ್ಲರೂ ಓದಬೇಕು’ ಎಂದು ಸಿಡಿಮಿಡಿಕೊಂಡರು.

ಗ್ಯಾರಂಟಿ ಮೌಲ್ಯಮಾಪನಕ್ಕೆ ಹಣ; ಮಾಹಿತಿಗೆ ಆಗ್ರಹ

ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೌಲ್ಯಮಾಪನ ಸೇರಿದಂತೆ ವಿವಿಧ ಸೇವೆಗಳನ್ನು ನೀಡಲು ಮೂರು ಸಂಸ್ಥೆಗಳಿಗೆ ಅವಕಾಶ ಕಲ್ಪಿಸಿರುವ ರಾಜ್ಯ ಸರ್ಕಾರ, ‘ರೈಟ್ ಪೀಪಲ್’ ಸಂಸ್ಥೆಗೆ ನೀಡಿರುವ ₹9.25 ಕೋಟಿ ಹಣದ ಮಾಹಿತಿ ಮುಚ್ಚಿಟ್ಟಿದೆ ಎಂದು ಬಿಜೆಪಿ–ಜೆಡಿಎಸ್ ಸದಸ್ಯರು ಆಕ್ರೋಶ ವ್ಯಕ್ತಪಡಿಸಿದರು.

ಜೆಡಿಎಸ್‌ನ ಟಿ.ಎಸ್. ಶರವಣ ಅವರ ಪ್ರಶ್ನೆಗೆ ಮುಖ್ಯಮಂತ್ರಿ ಪರವಾಗಿ ವಿಧಾನಪರಿಷತ್‌ನಲ್ಲಿ ಉತ್ತರ ನೀಡಿದ ಸಭಾನಾಯಕ ಎಸ್.ಎನ್. ಬೋಸರಾಜು, ಗ್ಯಾರಂಟಿಗಳ ಮೌಲ್ಯಮಾಪನಕ್ಕೆ ಆರು ಸಂಸ್ಥೆಗಳಿಗೆ ಅವಕಾಶ ನೀಡಲಾಗಿತ್ತು. ಅವುಗಳಲ್ಲಿ ನಾಲ್ಕು ಸಂಸ್ಥೆಗಳಿಗೆ ಸರ್ಕಾರ ಯಾವುದೇ ಆರ್ಥಿಕ ಸಹಾಯ ನೀಡಿಲ್ಲ. ಗೃಹಲಕ್ಷ್ಮಿ, ಶಕ್ತಿ, ಗೃಹಜ್ಯೋತಿ, ಅನ್ನಭಾಗ್ಯ ಯೋಜನೆಗಳ ಸಮೀಕ್ಷೆ ನಡೆಸಿದ ಎಂ2ಎಂ ಮೀಡಿಯಾ ಸಂಸ್ಥೆಗೆ ₹1.10 ಕೋಟಿ ನೀಡಲಾಗಿದೆ. ಮುಂಬೈನ ಎಕ್ಸ್ ಕೆಡಿಆರ್ ಫೋರಂಗೆ ಒಂದು ವರ್ಷಕ್ಕೆ ಜಿಎಸ್‌ಟಿ ಸೇರಿ ₹1.44 ಕೋಟಿ ಪಾವತಿಸಲಾಗಿದೆ. ಈ ಸಂಸ್ಥೆ ಎರಡು ವರದಿಗಳನ್ನು ಸಲ್ಲಿಸಿದೆ ಎಂದರು.

‘ರೈಟ್ ಪೀಪಲ್’ ಸಂಸ್ಥೆಗೆ ನೀಡಿರುವ ₹9.25 ಕೋಟಿ ಹಣದ ಮಾಹಿತಿ ನೀಡುವಂತೆ ಬಿಜೆಪಿ–ಜೆಡಿಎಸ್ ಸದಸ್ಯರು ಪಟ್ಟು ಹಿಡಿದರು. ಉತ್ತರ ನೀಡಲು ಬೋಸರಾಜು ತಡವರಿಸಿದರು. ಅವರ ನೆರವಿಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಂದರೂ ಸದಸ್ಯರು ಎತ್ತಿದ ಪ್ರಶ್ನೆಗೆ ಉತ್ತರ ನೀಡಲು ಅವರೂ ವಿಫಲರಾದರು.

ಮಾಹಿತಿ ಮುಚ್ಚಿಡಲು ಏನು ಕಾರಣ? ಸದನವನ್ನೇ ದಾರಿ ತಪ್ಪಿಸಿ, ಸಂಸ್ಥೆಯನ್ನು ರಕ್ಷಣೆ ಮಾಡುತ್ತಿರುವುದರ ಉದ್ದೇಶವೇನು? ಸದನಕ್ಕೆ ತಪ್ಪು ಮಾಹಿತಿ ನೀಡುವುದು ಹಕ್ಕುಚ್ಯುತಿಯಾಗುತ್ತದೆ ಎಂದು ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖ್ಯಸಚೇತಕ ಎನ್. ರವಿಕುಮಾರ್, ಬಿಜೆಪಿಯ ಸಿ.ಟಿ. ರವಿ, ಜೆಡಿಎಸ್‌ನ ಎಸ್. ಎಲ್. ಬೋಜೇಗೌಡ, ಕೆ.ಎಸ್. ನವೀನ್ ಸೇರಿದಂತೆ ಹಲವರು ಪ್ರಶ್ನಿಸಿದರು. ಗದ್ದಲ, ಮಾತಿನ ಚಕಮಕಿ ಮುಂದುವರಿಯಿತು. ಸಭಾಪತಿ ಬಸವರಾಜ ಹೊರಟ್ಟಿ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುವುದಾಗಿ ಕೇಳಿ, ಕಲಾಪಕ್ಕೆ ಅವಕಾಶ ಕಲ್ಪಿಸಿದರು.

ಕಲಾಪ ವೀಕ್ಷಣೆ... ವಿಧಾನ ಪರಿಷತ್ ಕಲಾಪ ವೀಕ್ಷಣೆಗೆ ಗುರುವಾರ ವೀಕ್ಷಕರ ಗ್ಯಾಲರಿಯಲ್ಲಿ ಯುವಜನರ ಹಾಜರಾತಿ ಗಮನಸೆಳೆಯಿತು – ಪ್ರಜಾವಾಣಿ ಚಿತ್ರ

‘ನೌಕರರಿಗೆ ಶೀಘ್ರ ಹಳೇ ಪಿಂಚಣಿ’

ಬೆಂಗಳೂರು: ರಾಷ್ಟ್ರೀಯ ಪಿಂಚಣಿ ಪಡೆಯುತ್ತಿರುವ ಎಲ್ಲ ನೌಕರರಿಗೂ ಹಳೇ ಪಿಂಚಣಿ ವ್ಯವಸ್ಥೆ ಜಾರಿಗೊಳಿಸಲಾಗುವುದು ಎಂದು ವಿಧಾನಪರಿಷತ್ ಸಭಾನಾಯಕ ಎಸ್.ಎನ್. ಬೋಸರಾಜು ಹೇಳಿದರು. ಕಾಂಗ್ರೆಸ್‌ನ ರಾಮೋಜಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ 2.86 ಲಕ್ಷ ನೌಕರರು ಎನ್‌ಪಿಎಸ್ ಯೋಜನೆಯಡಿ ಇದ್ದಾರೆ. ಅವರನ್ನು ಮತ್ತೆ ಹಳೇ ಪಿಂಚಣಿ ವ್ಯವಸ್ಥೆಗೆ ಒಳಪಡಿಸಲು ವಿವಿಧ ರಾಜ್ಯಗಳಿಗೆ ಭೇಟಿ ನೀಡಿ, ವರದಿ ಸಲ್ಲಿಸಲು ಸಮಿತಿ ರಚಿಸಲಾಗಿದೆ. ವರದಿ ತಲುಪಿದ ಬಳಿಕ ಕ್ರಮಕೈಗೊಳ್ಳಲಾಗುವುದು ಎಂದರು.

ಪರಿಷತ್ ಪ್ರಶ್ನೋತ್ತರ

ಅಕ್ರಮ ತಡೆಗೆ ಆಧುನಿಕ ತಂತ್ರಜ್ಞಾನ

ರಾಜ್ಯದ ಎಲ್ಲ ಕಾರಾಗೃಹಗಳ ಒಳಗೆ ಅಕ್ರಮ ಚಟುವಟಿಕೆ ತಡೆಗೆ ಆಧುನಿಕ ತಂತ್ರಜ್ಞಾನ ಬಳಕೆ ಮಾಡಲು ನಿರ್ಧರಿಸಲಾಗಿದೆ. ಮಾದಕ ಪದಾರ್ಥಗಳ ಪತ್ತೆಗೆ ಶ್ವಾನದಳ ನಿಯೋಜಿಸಲಾಗುವುದು. ಪ್ರತಿ ಠಾಣೆಯಲ್ಲೂ ಸಾಮಾಜಿಕ ಜಾಲತಾಣ ನಿಯಂತ್ರಣ ಘಟಕ ಸ್ಥಾಪಿಸಲಾಗಿದೆ.

ಬಿಜೆಪಿಯ ಪ್ರತಾಪ್‌ಸಿಂಹ ನಾಯಕ್, ಕೆ.ಎಸ್. ನವೀನ್ ಅವರ ಪ್ರಶ್ನೆಗೆ ಗೃಹ ಸಚಿವ ಜಿ. ಪರಮೇಶ್ವರ ಉತ್ತರ

ನೋಟರಿ ನೇಮಕ; ಮೀಸಲಾತಿ ಇಲ್ಲ

ರಾಜ್ಯದಲ್ಲಿ 895 ನೋಂದಾಯಿತ ನೋಟರಿಗಳು ಇದ್ದು, ಕೇಂದ್ರದ ನೋಟರಿಗಳ ಕಾಯ್ದೆ ಅನ್ವಯ ಪ್ರವರ್ಗವಾರು, ಜಿಲ್ಲಾವಾರು ಮೀಸಲಾತಿ ಕಲ್ಪಿಸಲು ಅವಕಾಶ ಇಲ್ಲ. ನೇಮಕಾತಿಯಲ್ಲಿ ಹಿಂದುಳಿದ ವರ್ಗ, ದಲಿತರು, ಅಲ್ಪಸಂಖ್ಯಾತರು ವಂಚಿತರಾಗಿರುವುದು ಗಮನಕ್ಕೆ ಬಂದಿಲ್ಲ.

ಕಾಂಗ್ರೆಸ್‌ನ ಬಲ್ಕೀಸ್ ಬಾನು ಪ್ರಶ್ನೆಗೆ ಕಾನೂನು ಸಚಿವ ಎಚ್.ಕೆ. ಪಾಟೀಲ ಉತ್ತರ

ವಿಧಾನ ಸಭೆ ಪ್ರಶ್ನೋತ್ತರ

ಕಾಲೇಜು ಶಿಕ್ಷಣ: 2,000 ಹುದ್ದೆಗಳಿಗೆ ಶೀಘ್ರ ನೇಮಕ: ಸಚಿವ ಸುಧಾಕರ್

ಎಂ.ಸಿ. ಸುಧಾಕರ

ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗಳಲ್ಲಿ ಖಾಲಿ ಇರುವ 2,000 ಬೋಧಕ ಮತ್ತು ಬೋಧಕೇತರ ಹುದ್ದೆಗಳಿಗೆ ಶೀಘ್ರವೇ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗುವುದು. ರಾಜ್ಯದ ಹಲವು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಹುದ್ದೆಗಳ ಕೊರತೆ ಇದೆ. ಎಲ್ಲ ಹುದ್ದೆಗಳ ಭರ್ತಿಗೆ ಮುಖ್ಯಮಂತ್ರಿಯವರು ಒಪ್ಪಿಗೆ ನೀಡಿದ್ದಾರೆ.

(ಕಾಂಗ್ರೆಸ್‌ನ ರಾಘವೇಂದ್ರ ಹಿಟ್ನಾಳ್ ಅವರ ಪ್ರಶ್ನೆಗೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಉತ್ತರ)

ಪ್ರಾಂಶುಪಾಲರ ನೇಮಕ

ಪದವಿ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಯನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುತ್ತಿದ್ದು, ಮೆರಿಟ್ ಪಟ್ಟಿಯಲ್ಲಿನ ಅಭ್ಯರ್ಥಿಗಳಿಂದ ಸ್ವೀಕೃತಗೊಂಡ ದಾಖಲೆಗಳು ಪರಿಶೀಲನೆ ಹಂತದಲ್ಲಿವೆ. ಶೀಘ್ರವಾಗಿ ತಾತ್ಕಾಲಿಕ ಪಟ್ಟಿ ಪ್ರಕಟಿಸಲು ಕ್ರಮ ವಹಿಸಲಾಗುವುದು. ವಿವಿಧ ಇಲಾಖೆಗಳಿಗೆ ನಿಯೋಜನೆ ಮೇಲೆ ಹೋಗಿರುವ ಪ್ರಾಧ್ಯಾಪಕರನ್ನು ವಾಪಸ್ ಕರೆಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು

(ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಅವರ ಪ್ರಶ್ನೆಗೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಉತ್ತರ)

ವೈದ್ಯಾಧಿಕಾರಿಗಳ ನೇಮಕ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ತಜ್ಞರು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹಾಗೂ ದಂತ ವೈದ್ಯ ಆರೋಗ್ಯ ಅಧಿಕಾರಿಗಳನ್ನು ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು. ಖಾಲಿ ಇರುವ 120 ತಜ್ಞ ವೈದ್ಯರು ಹಾಗು 100 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆ ಸಹಮತಿ ನೀಡಿದೆ.

(ಕಾಂಗ್ರೆಸ್‌ನ ವಿಜಯಾನಂದ ಕಾಶಪ್ಪನವರ ಪ್ರಶ್ನೆಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉತ್ತರ’

ಔಷಧ ಕೊರತೆ ನೀಗಿಸಲು ಕ್ರಮ

ದಿನೇಶ್ ಗುಂಡೂರಾವ್

ರಾಜ್ಯದಲ್ಲಿ ಔಷಧ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಹಲವು ಕ್ರಮಗಳನ್ನು ಕೈಗೊಂಡಿದೆ. ಔಷಧಿಗಳ ಪಟ್ಟಿಯನ್ನು 732ರಿಂದ 1,032ಕ್ಕೆ ಹೆಚ್ಚಿಸಲಾಗಿದೆ. ಕೆಲವು ಔಷಧಗಳ ಕೊರತೆಗೆ ಟೆಂಡರ್‌ಗಳಲ್ಲಿ ಯಾರೂ ಭಾಗವಹಿಸದೇ ಇರುವುದು ಮುಖ್ಯ ಕಾರಣ. ಈ ಔಷಧಗಳ ಮೌಲ್ಯ ಮತ್ತು ಪ್ರಮಾಣ ಕಡಿಮೆ ಇರುವುದರಿಂದ ಹಲವಾರು ಬಾರಿ ಟೆಂಡರ್ ಕರೆದರೂ ಯಾರೂ ಸ್ಪಂದಿಸಿಲ್ಲ. ಹೀಗಾಗಿ ಔಷಧ ಸರಬರಾಜು, ಖರೀದಿ ಪ್ರಕ್ರಿಯೆಯ ಟೆಂಡರ್ ಷರತ್ತುಗಳನ್ನು ಸರಳೀಕರಣ ಮಾಡಿ ಔಷಧಗಳನ್ನು ಸರಬರಾಜು ಮಾಡಲು ಹೆಚ್ಚಿನ ಬಿಡ್‌ದಾರರು ಭಾಗವಹಿಸಲು ಕ್ರಮ ವಹಿಸಲಾಗುತ್ತಿದೆ.

(ಬಿಜೆಪಿ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಅವರ ಪ್ರಶ್ನೆಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉತ್ತರ)

ಜನ್ಮಶತಮಾನೋತ್ಸವ ಆಚರಣೆ ಸಮಾರಂಭದಲ್ಲಿ ಒಡನಾಡಿಗಳು, ಆಪ್ತರ ಸ್ಮರಣೆ

‘ರಾಜಿಯಾಗದ ರಾಜಕಾರಣಿ ಕೆ.ಎಚ್.ಪಾಟೀಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಹಕಾರ ರಂಗದ ಧುರೀಣರಾದ ಕೆ.ಎಚ್. ಪಾಟೀಲ ಅವರು ನಿಷ್ಠುರ ಹಾಗೂ ರಾಜಿ ಮಾಡಿಕೊಳ್ಳದ ರಾಜಕಾರಣಿಯಾಗಿದ್ದರು. ಸರ್ಕಾರದಿಂದ ಸಾಧ್ಯವಾಗದೇ ಇದ್ದುದನ್ನು ಅವರು ವ್ಯಕ್ತಿಯಾಗಿ ಸಾಧಿಸಿ ತೋರಿಸಿದ್ದರು’ ಎಂದು ಕೆ.ಎಚ್. ಪಾಟೀಲ ಅವರ ಒಡನಾಡಿಗಳು ಹಾಗೂ ಆಪ್ತರು ಸ್ಮರಿಸಿಕೊಂಡರು.

ಸಹಕಾರ ಭೀಷ್ಮ ಕೆ.ಎಚ್. ಪಾಟೀಲ ಅಭಿಮಾನಿಗಳ ಬಳಗ, ಬೆಂಗಳೂರು ನಗರದ ವಿವಿಧ ಸಹಕಾರ ಸಂಘಗಳು, ಕೆ.ಎಚ್. ಪಾಟೀಲ ಮೆಮೋರಿಯಲ್ ಟ್ರಸ್ಟ್ ಜಂಟಿಯಾಗಿ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕೆ.ಎಚ್. ಪಾಟೀಲ ಜನ್ಮಶತಮಾನೋತ್ಸವ ಆಚರಣೆ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

‘ಸಾಧಿಸುವ ಛಲ ಹೊಂದಿದ್ದವರನ್ನು ಯಾರೂ ತಡೆಯಲು ಸಾಧ್ಯವಿಲ್ಲ. ನಾನು ಮತ್ತು ರಾಷ್ಟ್ರಪತಿಯಾಗಿದ್ದ ಅಬ್ದುಲ್ ಕಲಾಂ ಅವರು ಗದಗದ ಹುಲಕೋಟಿಗೆ ಹಿಂದೆ ಭೇಟಿ ನೀಡಿದ್ದೆವು. ಅಲ್ಲಿ ಪಾಟೀಲರು ಮಾಡಿದ ಕೆಲಸವನ್ನು ವೀಕ್ಷಿಸಿ, ಆಶ್ಚರ್ಯಕ್ಕೆ ಒಳಗಾದೆವು. ಸರ್ಕಾರದಿಂದ ಸಾಧ್ಯವಾಗದ್ದನ್ನು ಅವರು ಸಾಧಿಸಿ ತೋರಿಸಿದ್ದರು. ಅಲ್ಲಿ ಕೈಗಾರಿಕೆ, ಶಾಲಾ–ಕಾಲೇಜು, ಆಸ್ಪತ್ರೆಗಳನ್ನು ನಿರ್ಮಿಸಿದ್ದಾರೆ’ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್. ವೆಂಕಟಾಚಲಯ್ಯ ಹೇಳಿದರು.

> **ಉತ್ತಮ ಸಾಮಾಜಿಕ, ರಾಜಕೀಯ ನಾಯಕರಾಗಲು ಕೆ.ಎಚ್. ಪಾಟೀಲ ಅವರ ವ್ಯಕ್ತಿತ್ವ ಹಾಗೂ ವಿಚಾರಧಾರೆಗಳನ್ನು ಮೈಗೂಡಿಸಿಕೊಳ್ಳಬೇಕು**
> **ಯು.ಟಿ. ಖಾದರ್** ವಿಧಾನಸಭೆಯ ಸಭಾಧ್ಯಕ್ಷ

> **ಕೆ.ಎಚ್. ಪಾಟೀಲರು ವ್ಯಾವಹಾರಿಕ ರಾಜಕಾರಣಿಯಾಗಿರಲಿಲ್ಲ. ಸೇವಾ ಮನೋಧರ್ಮವನ್ನು ಅವರು ಹೊಂದಿದ್ದರು. ಧೈರ್ಯದಿಂದ ಹೋರಾಡುತ್ತಿದ್ದರು**
> **ಜಿ. ಪರಮೇಶ್ವರ,** ಗೃಹ ಸಚಿವ

ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, ‘ಕೆ.ಎಚ್. ಪಾಟೀಲ ಅವರು ಸ್ನೇಹಮಯಿಯಾಗಿದ್ದರು. ಇಡೀ ಗದಗದ ವಾತಾವರಣವನ್ನು ಅವರು ಬದಲಾಯಿಸಿದರು. ನಿಷ್ಠುರವಾದಿಯಾಗಿದ್ದು, ಅವರಂತಹ ರಾಜಕಾರಣಿ ಕಾಣಸಿಗುವುದು ಅಪರೂಪ. ಒಂದು ವೇಳೆ ಅವರು ನಿಷ್ಠುರವಾಗಿರದಿದ್ದರೆ ರಾಜ್ಯದ ಮುಖ್ಯಮಂತ್ರಿಯಾಗುತ್ತಿದ್ದರು. ಯಾವುದೇ ಯೋಚನೆ ಮಾಡದೆ ನೇರವಾಗಿ ಮಾತನಾಡುತ್ತಿದ್ದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ವೀರಪ್ಪ ಮೊಯಿಲಿ ಅವರು ಕೆ.ಎಚ್.ಪಾಟೀಲ ಕಾನೂನು ಶಾಲೆಯ ಲಾಂಛನವನ್ನು ಅನಾವರಣ ಮಾಡಿದರು. ಎಚ್.ಕೆ.ಪಾಟೀಲ, ಆರ್.ವಿ.ದೇಶಪಾಂಡೆ, ಕೆ.ಜೆ.ಜಾರ್ಜ್, ಬಸವರಾಜ ಹೊರಟ್ಟಿ, ಎಂ.ಎನ್.ವೆಂಕಟಾಚಲಯ್ಯ, ಯು.ಟಿ. ಖಾದರ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ‘ಪಾಟೀಲರ ಆಶೀರ್ವಾದದಿಂದಲೇ ನಾನು ಈ ಸ್ಥಾನಕ್ಕೆ ಬಂದಿದ್ದೇನೆ. ಹುಲಕೋಟಿ ಹೆಸರನ್ನು ಅವರು ರಾಷ್ಟ್ರಮಟ್ಟಕ್ಕೆ ಕೊಂಡೊಯ್ದರು. ಸ್ವಂತ ಪರಿಶ್ರಮ, ಹೋರಾಟದಿಂದ ಅಂದುಕೊಂಡಿದ್ದನ್ನು ಸಾಧಿಸಿದರು’ ಎಂದು ಹೇಳಿದರು.

ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ, ‘ಯುವಜನರಿಗೆ ಪಾಟೀಲರು ಉತ್ತೇಜನ ನೀಡುತ್ತಿದ್ದರು. ನನ್ನ ರಾಜಕೀಯ ಬೆಳವಣಿಗೆಯಲ್ಲಿಯೂ ಅವರ ಪಾತ್ರವಿದೆ. ರಾಜಕೀಯ ಕ್ಷೇತ್ರದಲ್ಲಿ ಬೆಳೆಯಲು ಅವರಂತಹ ನಿಷ್ಠಾವಂತ, ಪ್ರಾಮಾಣಿಕ ಗುರು ಸಿಗಬೇಕು’ ಎಂದರು.

ಮಾಜಿ ಸಭಾಪತಿ ವಿ.ಆರ್. ಸುದರ್ಶನ್, ‘ಸಹಕಾರಿ ಕ್ಷೇತ್ರದ ಸಾಧಕರಿಗೆ ಸಹಕಾರಿ ರತ್ನ ಪ್ರಶಸ್ತಿ ನೀಡಲಾಗುತ್ತಿದೆ. ಈ ಕ್ಷೇತ್ರದ ಸಾಧಕರಿಗೆ ಸರ್ಕಾರವು ಕೆ.ಎಚ್. ಪಾಟೀಲ ಅವರ ಹೆಸರಿನಲ್ಲಿಯೂ ಪ್ರಶಸ್ತಿ ನೀಡಬೇಕು’ ಎಂದು ಆಗ್ರಹಿಸಿದರು.

ಕೆ.ಎಚ್. ಪಾಟೀಲ ಕಾನೂನು ಶಾಲೆ

ಕೆ.ಎಚ್. ಪಾಟೀಲ ಕಾನೂನು ಶಾಲೆಯನ್ನು ಉದ್ಘಾಟಿಸಿದ ಎಂ.ಎನ್. ವೆಂಕಟಾಚಲಯ್ಯ, ‘ದೇಶದಲ್ಲಿ 160 ಕಾನೂನು ಕಾಲೇಜುಗಳಿವೆ. ಮತ್ತೊಂದು ಕಾನೂನು ಕಾಲೇಜು ಏಕೆ ಎಂಬ ಪ್ರಶ್ನೆ ಮೂಡುವುದು ಸಹಜ. ಕಾನೂನು ಪದವೀಧರರು ದೇಶದ ಆಸ್ತಿ. ಪ್ರಜಾಪ್ರಭುತ್ವ ಉಳಿಯಲು ಸಹಕಾರಿ. ಗುಣಮಟ್ಟದ ಕಾನೂನು ಶಿಕ್ಷಣ ಅಗತ್ಯ’ ಎಂದರು.

ಈ ಕಾಲೇಜು ಐದು ವರ್ಷಗಳ ಬಿ.ಎ., ಎಲ್‌ಎಲ್.ಬಿ, ಬಿ.ಕಾಂ., ಎಲ್‌ಎಲ್.ಬಿ., ಮೂರು ವರ್ಷಗಳ ಎಲ್‌ಎಲ್.ಬಿ. ಕಾರ್ಯಕ್ರಮ ಹೊಂದಿವೆ.

ಶುಕ್ರವಾರ, ಮಾರ್ಚ್ 14, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 73 | ಪುಟ 16

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಮನದ ಕಡಲಿನಲ್ಲಿ
ಹೊಸಮುಖ
ಈ ಸುಮುಖ

ಆಳ-ಅಗಲ
1975ರ ವಿಶ್ವಕಪ್ ಗೆಲುವಿಗೆ
'ಸುವರ್ಣ ಸಂಭ್ರಮ'

ಹೋಳಿ ಹಬ್ಬದ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,828	22,397	₹91,250 (ಬೆಂಗಳೂರು)	₹1.04 ಲಕ್ಷ (ಬೆಂಗಳೂರು)	87.05

ಚಿನ್ನ ಕಳ್ಳಸಾಗಣೆ ಪ್ರಕರಣ: ಮುಂಬೈ, ಬೆಂಗಳೂರಿನ ಹಲವೆಡೆ ಶೋಧ • ಅಧಿಕಾರಿಗಳ ವಿಚಾರಣೆ

ಚಿನ್ನ: ತನಿಖೆಗೆ ಧುಮುಕಿದ ಇ.ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟಿ ರನ್ಯಾ ರಾವ್ ದುಬೈನಿಂದ ಭಾರತಕ್ಕೆ ಚಿನ್ನ ಕಳ್ಳಸಾಗಣೆ ಮಾಡಿದ ಪ್ರಕರಣದ ಬೆನ್ನು ಹತ್ತಿರುವ ಮೂರು ತನಿಖಾ ಸಂಸ್ಥೆಗಳು ಕೇಂದ್ರ ಸರ್ಕಾರದ ಕಸ್ಟಮ್ಸ್ ಇಲಾಖೆ, ವಿಮಾನ ನಿಲ್ದಾಣ ಪ್ರಾಧಿಕಾರ ಹಾಗೂ ರಾಜತಾಂತ್ರಿಕ ಕಚೇರಿಯ ಅಧಿಕಾರಿಗಳು ಮತ್ತು ಭದ್ರತಾ ಸಿಬ್ಬಂದಿಯನ್ನು ತೀವ್ರ ವಿಚಾರಣೆಗೆ ಗುರಿಪಡಿಸಿವೆ.

ಈ ಜಾಲಕ್ಕೆ ನೆರವು ನೀಡುವಲ್ಲಿ ಯಾರ ಪಾತ್ರವಿದೆ ಎಂಬುದನ್ನು ಭೇದಿಸಲು, ರೆವೆನ್ಯೂ ಗುಪ್ತಚರ ನಿರ್ದೇಶನಾಲಯ (ಡಿಆರ್ಐ), ಸಿಬಿಐ ಮಾತ್ರ ಈ ಪ್ರಕರಣದ ತನಿಖೆ ನಡೆಸುತ್ತಿದ್ದವು. ಜಾರಿ ನಿರ್ದೇಶನಾಲಯವೂ (ಇ.ಡಿ) ಗುರುವಾರದಿಂದ ತನಿಖೆ ಆರಂಭಿಸಿದ್ದು, ಕರ್ನಾಟಕ ಮತ್ತು ಮಹಾರಾಷ್ಟ್ರದ 15 ಕಡೆ ಶೋಧ ನಡೆಸಿದೆ.

ಅಧಿಕಾರಿ, ಸಿಬ್ಬಂದಿಗೆ ಸಂಬಂಧಿಸಿದ ಮನೆ, ಕಚೇರಿಗಳ ಶೋಧ ನಡೆಸಿದ ಸಿಬಿಐ ಹಾಗೂ ಇ.ಡಿ ಅಧಿಕಾರಿಗಳ ತಂಡಗಳು, ರನ್ಯಾರಾವ್, ಅವರ ಪತಿ ಜತಿನ್ ಹುಕ್ಕೇರಿ ಹಾಗೂ ರನ್ಯಾ ಸ್ನೇಹಿತ ತರುಣ್ ರಾಜು ಅವರ ಮನೆ, ಕಚೇರಿಗಳಲ್ಲಿ ಶೋಧ ನಡೆಸಿವೆ.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 6

ಕೇಂದ್ರದ ಅಧಿಕಾರಿಗಳಿಗೆ ತನಿಖೆಯ ಬಿಸಿ...

- ಬೆಂಗಳೂರಿನಲ್ಲಿ ಒಬ್ಬ ಕಸ್ಟಮ್ಸ್ ಅಧಿಕಾರಿ, ಇಬ್ಬರು ಸಿಬ್ಬಂದಿಯ ವಿಚಾರಣೆ. ಮುಂಬೈನಲ್ಲಿ ಮೂವರು ಅಧಿಕಾರಿಗಳಿಗೆ ವಿಚಾರಣೆ ಬಿಸಿ
- ಮುಂಬೈ–ಬೆಂಗಳೂರಿನಲ್ಲಿ ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳಿಗೆ ಸಮನ್ಸ್
- ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ ಸಿಬ್ಬಂದಿಯಿಂದಲೂ ಮಾಹಿತಿ ಕಲೆ ಹಾಕಿದ ಸಿಬಿಐ, ಇ.ಡಿ
- ಭಾರತೀಯ ರಾಜತಾಂತ್ರಿಕ ಅಧಿಕಾರಿ–ಸಿಬ್ಬಂದಿಯ ವಿದೇಶಿ ಪ್ರವಾಸ ವಿವರ ಕಲೆ ಹಾಕುತ್ತಿರುವ ತನಿಖಾಧಿಕಾರಿಗಳು

ಜ್ಯೋತಿಷಿ ಮನೆಯಲ್ಲಿ ಶೋಧ

ರಾಜ್ಯ ಸರ್ಕಾರದ ಪ್ರಭಾವಿ ಸಚಿವರೊಬ್ಬರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ, ಸದ್ಯ ದುಬೈನಲ್ಲಿ ನೆಲಸಿರುವ 'ಹೆಲಿಕಾಪ್ಟರ್ ಜ್ಯೋತಿಷಿ'ಯೊಬ್ಬರ ಮನೆಯಲ್ಲಿ ಡಿಆರ್ಐ ಮತ್ತು ಇ.ಡಿ ಅಧಿಕಾರಿಗಳು ಶೋಧ ನಡೆಸಿದ್ದಾರೆ.

ತಮ್ಮ ಹೆಸರಿನ ಜತೆಗೆ ಸ್ವಾಮೀಜಿ ಎಂದು ಸೇರಿಸಿಕೊಳ್ಳುವ ಈ ಜ್ಯೋತಿಷಿ ಅವರು ಬೆಂಗಳೂರಿನ ಆರ್.ಟಿ.ನಗರದಲ್ಲಿ ಮನೆ ಮತ್ತು ಕಚೇರಿ ಹೊಂದಿದ್ದಾರೆ. ಅವರ ಬ್ಯಾಂಕ್ ಖಾತೆ ವಹಿವಾಟುಗಳು, ವಿದೇಶಿ ಪ್ರಯಾಣದ ಮಾಹಿತಿ ಮತ್ತು ಕರೆ ವಿವರಗಳನ್ನು ತನಿಖಾಧಿಕಾರಿಗಳು ಕಲೆ ಹಾಕುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಜೆ ಮೇಲೆ ತೆರಳಿದ ರಾಮಚಂದ್ರ ರಾವ್

ತನಿಖೆಗೆ ಆದೇಶಿಸಿದ ಬೆನ್ನಲ್ಲೇ ರಾಜ್ಯ ಪೊಲೀಸ್ ಗೃಹ ನಿರ್ಮಾಣ ಮತ್ತು ಮೂಲಸೌಕರ್ಯ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ. ರಾಮಚಂದ್ರ ರಾವ್ ಅವರು ರಜೆ ಮೇಲೆ ತೆರಳಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

6ನೇ ಪುಟ ನೋಡಿ

ಡಿಆರ್ಐ ಶೋಧ: ಪತ್ತೆಯಾಗಿದ್ದೇನು?

- ಪತಿ ಜತಿನ್ ಹುಕ್ಕೇರಿ ಅವರ ಕ್ರೆಡಿಟ್ ಕಾರ್ಡ್ ಬಳಸಿ ರನ್ಯಾ ರಾವ್, ಮಾರ್ಚ್ 1ರಂದು ದುಬೈಗೆ ಪ್ರಯಾಣಿಸಲು ಎಮಿರೇಟ್ಸ್ ವೆಬ್‌ಸೈಟ್‌ನಲ್ಲಿ ವಿಮಾನದ ಟಿಕೆಟ್ ಬುಕ್ ಮಾಡಿರುವ ಮಾಹಿತಿ ಲಭ್ಯ

6ನೇ ಪುಟ ನೋಡಿ

ತಮಿಳುನಾಡು: ₹ ಚಿಹ್ನೆಗೆ ಕೊಕ್

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: ತಮಿಳುನಾಡು ರಾಜ್ಯ ಸರ್ಕಾರ 2025–26ನೇ ಸಾಲಿನ ಬಜೆಟ್‌ನ ಪ್ರತಿಗಳಲ್ಲಿ ರೂಪಾಯಿ ಚಿಹ್ನೆ (₹) ಬಳಸಿಲ್ಲ. ಬದಲಾಗಿ, ತಮಿಳು ಅಕ್ಷರ 'ರೂ' ಎಂದು ಮುದ್ರಿಸಿದೆ.

ಈ ಮೂಲಕ, ಹಿಂದಿ ಹೇರಿಕೆ ಹಾಗೂ ರಾಷ್ಟ್ರೀಯ ಶಿಕ್ಷಣ ನೀತಿ (ಎನ್ಇಪಿ) ಅಳವಡಿಕೆ ವಿಚಾರವಾಗಿ ಕೇಂದ್ರ ಸರ್ಕಾರದೊಡನೆ ಅದು ನಡೆಸುತ್ತಿರುವ ಸಂಘರ್ಷ ಮತ್ತೊಂದು ಹಂತಕ್ಕೆ ಹೋದಂತಾಗಿದೆ. ತಮಿಳುನಾಡು ವಿಧಾನಸಭೆಯಲ್ಲಿ ಹಣಕಾಸು ಸಚಿವ ತಂಗಂ ತೆನ್ನರಸು ಅವರು ಶುಕ್ರವಾರ ಬಜೆಟ್ ಮಂಡಿಸಲಿದ್ದಾರೆ.

'ಇದೊಂದು 'ರಾಜಕೀಯ ನಿರ್ಧಾರ'ವಾಗಿದ್ದು, ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಇದಕ್ಕೆ ಒಪ್ಪಿಗೆ ಸೂಚಿಸಿದ್ದಾರೆ. ರಾಜ್ಯದಲ್ಲಿ ತಮಿಳು ಭಾಷೆಗೆ ಹೆಚ್ಚು ಪ್ರಾಧಾನ್ಯ ಇರಬೇಕು ಎಂಬ ದೃಷ್ಟಿಯಿಂದ ಅವರು ಸಮ್ಮತಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

ಡಿಎಂಕೆ ನೇತೃತ್ವದ ರಾಜ್ಯ ಸರ್ಕಾರದ ರೂಪಾಯಿ ಚಿಹ್ನೆ ಬಳಸದಿರುವ ನಡೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಕೆ.ಅಣ್ಣಾಮಲೈ ಆಕ್ರೋಶ ವ್ಯಕ್ತಪಡಿಸಿದ್ದಾರೆ.

10ನೇ ಪುಟ ನೋಡಿ

'₹: ಡಿಎಂಕೆ ಮಾಜಿ ಶಾಸಕ ಪುತ್ರನಿಂದ ವಿನ್ಯಾಸ'

'ತಮಿಳು ಭಾಷಿಕ ವಿನ್ಯಾಸ ಮಾಡಿರುವ ರೂಪಾಯಿ ಚಿಹ್ನೆಯನ್ನು ಭಾರತದ ಕರೆನ್ಸಿಯಲ್ಲಿ ಅಳವಡಿಸಿಕೊಳ್ಳಲಾಗಿದೆ' ಎಂದು ಅಣ್ಣಾಮಲೈ ಅವರು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ.

10ನೇ ಪುಟ ನೋಡಿ

ಅಧಿವೇಶನದಲ್ಲಿ ಪ್ರಶ್ನೆ ಕೇಳದೆ ಇರಲು ಹಣ: ಆರೋಪ

ಮುಂಬೈ: ಮಹಾ ವಿಕಾಸ ಆಘಾಡಿ ಮೈತ್ರಿಕೂಟಕ್ಕೆ ಸೇರಿದ ಶಾಸಕರೊಬ್ಬರು ಗಡ್ಚಿರೋಲಿ ಜಿಲ್ಲೆಯ ಅಕ್ಕಿ ಗಿರಣಿಗಳಿಗೆ ಸಂಬಂಧಿಸಿದ ವಿಚಾರವಾಗಿ ಪ್ರಶ್ನೆಗಳನ್ನು ಕೇಳದೆ ಇರಲು ಏಜೆಂಟರ ಮೂಲಕ ಹಣ ಕೇಳಿದ್ದಾರೆ ಎಂದು ಬಿಜೆಪಿ ಶಾಸಕ ಡಾ. ಪರಿಣಯ್ ಫುಕೆ ಅವರು ಆರೋಪಿಸಿದ್ದಾರೆ. 7

'ಉಕ್ರೇನ್ ಸೇನೆಗೆ ನೀಡುತ್ತಿರುವ ಬಿಡುವಷ್ಟೇ' 10

'ದೂರು ದಾಖಲಿಸುವ ಹಕ್ಕು ಚುನಾವಣೆ ಆಯೋಗಕ್ಕೆ ಮಾತ್ರ' 6

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಶೇ 40 ಕಮಿಷನ್; ಭಾಗಶಃ ಸಾಬೀತು

ನ್ಯಾ.ನಾಗಮೋಹನ್‌ದಾಸ್ ವಿಚಾರಣಾ ಆಯೋಗದ ವರದಿಯಲ್ಲಿ ಉಲ್ಲೇಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ಧಾರವಾಡ, ಚಿತ್ರದುರ್ಗ ಸೇರಿದಂತೆ ಕೆಲವೆಡೆ ಗುತ್ತಿಗೆದಾರರಿಂದ ಶೇ 40ರಷ್ಟು ಕಮಿಷನ್ ಪಡೆದಿರುವುದು ಸಾಕ್ಷ್ಯಾಧಾರಗಳಿಂದ ಸಾಬೀತಾಗಿದೆ ಎಂದು ನ್ಯಾ.ಎಚ್.ಎನ್. ನಾಗಮೋಹನ್‌ದಾಸ್ ವಿಚಾರಣಾ ಆಯೋಗ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘ ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ವಿರುದ್ಧ ಮಾಡಿದ್ದ ಶೇ 40ರಷ್ಟು ಕಮಿಷನ್ ಆರೋಪಗಳ ಕುರಿತು ತನಿಖೆ ನಡೆಸಲು ನೇಮಿಸಿದ್ದ ವಿಚಾರಣಾ ಆಯೋಗ ತನ್ನ ತನಿಖಾ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದೆ. ಕಮಿಷನ್ ಸೇರಿದಂತೆ ಟೆಂಡರ್ ಕಾಮಗಾರಿ ಪ್ರಕ್ರಿಯೆಗಳಲ್ಲಿನ ಹಲವು ಲೋಪ, ನಿಯಮಗಳ ದುರ್ಬಳಕೆ, ಸ್ವಹಿತಾಸಕ್ತಿ ಪ್ರಕರಣಗಳ ಮೇಲೆ ವರದಿ ಬೆಳಕು ಚೆಲ್ಲಿದೆ.

ಚಿತ್ರದುರ್ಗದಲ್ಲಿ ಕೈಗೊಂಡಿದ್ದ ಹಲವು ಕಾಮಗಾರಿಗಳಲ್ಲಿ ಅಲ್ಲಿನ ಶಾಸಕರು ಹಸ್ತಕ್ಷೇಪ ಮಾಡಿದ್ದಾರೆ. ಕಮಿಷನ್ ವ್ಯವಹಾರ ನಡೆಸಿದ್ದಾರೆ. ಗುತ್ತಿಗೆದಾರರು, ಮಾಡಿದ ಆರೋಪಗಳಿಗೆ ಸೂಕ್ತ ಸಾಕ್ಷ್ಯ, ದಾಖಲೆ ಒದಗಿಸಿದ್ದಾರೆ. ಹಾಗೆಯೇ, ಧಾರವಾಡದಲ್ಲಿ ಕೈಗೊಂಡ ಲೋಕೋಪಯೋಗಿ ಇಲಾಖೆಯ ವಿವಿಧ ಕಾಮಗಾರಿಗಳಲ್ಲಿ ಅಲ್ಲಿನ ಮುಖ್ಯ ಎಂಜಿನಿಯರ್ ಲೋಪ, ಅಕ್ರಮ ಎಸಗಿರುವುದು ದೃಢಪಟ್ಟಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ನಾರಾಯಣಪುರ ಬಲದಂಡೆ ಮುಖ್ಯ ಕಾಲುವೆಗೆ ಅಡ್ಡಲಾಗಿ ನಿರ್ಮಿಸಲಾದ ಉಪ ಕಾಲುವೆಗಳ ಆಧುನೀಕರಣ ಕಾಮಗಾರಿಯಲ್ಲಿ ಉನ್ನತ ಮಟ್ಟದ ಅಧಿಕಾರಿಗಳು ಲೋಪ ಎಸಗಿದ್ದಾರೆ. ಅಂದಾಜು ಪಟ್ಟಿಯನ್ನು ಬದಲಿಸುವ ಮೂಲಕ 'ವ್ಯವಹಾರ' ನಡೆಸಿರುವುದು ಪತ್ತೆಯಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಅಂಕಿ ಅಂಶಗಳು

20 ಸಾವಿರ ಪುಟ
ಶೇ 40ರ ಕಮಿಷನ್ ಆರೋಪ ಕುರಿತ ವರದಿ

1,800 ಪುಟ
ನಾರಾಯಣಪುರ ಬಲದಂಡೆ ಕಾಮಗಾರಿ ಅಕ್ರಮದ ವರದಿ

ಉಪಗ್ರಹಗಳ 'ಅನ್‌ಡಾಕಿಂಗ್' ಯಶಸ್ವಿ

ನವದೆಹಲಿ (ಪಿಟಿಐ): ಬಾಹ್ಯಾಕಾಶದಲ್ಲಿ ಉಪಗ್ರಹಗಳ ಜೋಡಣೆಯನ್ನು (ಡಾಕಿಂಗ್) ಯಶಸ್ವಿಯಾಗಿ ನಿರ್ವಹಿಸಿದ್ದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ), ಈಗ ಅವುಗಳನ್ನು ಬೇರ್ಪಡಿಸುವಲ್ಲಿಯೂ (ಅನ್‌ಡಾಕಿಂಗ್) ಗುರುವಾರ ಯಶ ಕಂಡಿದೆ.

'ಗುರುವಾರ ಬೆಳಿಗ್ಗೆ 9.20ಕ್ಕೆ ಎರಡು ಸ್ಪೇಡೆಕ್ಸ್ ಉಪಗ್ರಹಗಳನ್ನು ಮೊದಲ ಪ್ರಯತ್ನದಲ್ಲಿಯೇ ಯಶಸ್ವಿಯಾಗಿ ಬೇರ್ಪಡಿಸಲಾಗಿದೆ' ಎಂದು ಇಸ್ರೊ ಹೇಳಿದೆ. ಈ ಪ್ರಯೋಗದೊಂದಿಗೆ ಇಸ್ರೊ, ಬಾಹ್ಯಾಕಾಶ ಕ್ಷೇತ್ರದಲ್ಲಿ ಮತ್ತೊಂದು ಮೈಲುಗಲ್ಲು ಸ್ಥಾಪಿಸಿದಂತಾಗಿದೆ.

ಚಂದ್ರಯಾನ, ಮಾನವಸಹಿತ ಗಗನಯಾನ, ಬಾಹ್ಯಾಕಾಶ ನಿಲ್ದಾಣ ನಿರ್ಮಾಣ ಸೇರಿ ಭವಿಷ್ಯದ ಕಾರ್ಯಕ್ರಮಗಳಿಗೆ ದಾರಿ ಸುಗಮಗೊಂಡಂತೆಯೂ ಆಗಿದೆ.

7ನೇ ಪುಟ ನೋಡಿ

ಪ್ರಮುಖ ಘಟ್ಟಗಳು

ಡಿ.30, 2024: ಯೋಜನೆಯ 'ಎಸ್‌ಡಿಎಕ್ಸ್–01' ಹಾಗೂ 'ಎಸ್‌ಡಿಎಕ್ಸ್–02' ಉಪಗ್ರಹಗಳ ಉಡ್ಡಯನ
ಜ.16, 2025: ಡಾಕಿಂಗ್ ಪ್ರಯೋಗ ಯಶಸ್ವಿ
ಮಾ.13, 2025: ಅನ್‌ಡಾಕಿಂಗ್ ಪ್ರಯೋಗ ಯಶಸ್ವಿ

Hy - CNG Duo Hyundai EXTER ಮತ್ತು Grand i10 NIOS ನಲ್ಲಿ ಲಭ್ಯವಿದೆ. ಸ್ಥಳಾವಕಾಶ ಇದೆ. ಮೈಲೇಜ್ ಇದೆ.
##ಮಾನ್ಯತೆ ಹೊಂದಿದ ಪ್ರಮಾಣಪತ್ರವನ್ನು ನೀಡಿದರೆ ಹೆಚ್ಚುವರಿ ಸ್ಕ್ರಾಪೇಜ್ ಬೋನಸ್ ಸಿಗಲಿದೆ. #CSD ಮತ್ತು KPKB ಗ್ರಾಹಕರಿಗೆ ಹೆಚ್ಚುವರಿ ಲಾಭಗಳು.

HYUNDAI

Hyundai Cl!ck to Buy Scan here | 3 YEAR Unlimited** Kilometer Warranty | UPTO 7 YEARS Extended Warranty^ | 3 YEARS Road Side Assistance (RSA)*** | UPTO 5 YEARS Shield of Trust Running Repair Package~ | UPTO 5 YEARS Shield of Trust Super Maintenance Package~ | Hy - CNG Duo

For Information Contact: Toll Free:1800114645 **Bangalore:** Advaith Hyundai, Residency Road, Ph: 9606076451 Marathahalli, Outer Ring Road, Ph: 9606076452 Vasanthnagar, Ph: 9606076453 Bannerghatta Road, Ph: 9606076454 Koramangala, Ph: 9606076455 Avalahalli, Ph: 9606076456, Sarjapura Ph: 9606076458 Bilekahalli, Ph: 9606076457, Trident Hyundai, Sankey Road, Ph: 7353762526, K R Puram, Ph: 9844266873, Hosur Road, Ph: 9743786716, Indiranagar, Ph: 9743107927, Yelahanka, Ph: 7353750677, Yeshwanthpur, Ph: 9844701452, Blue Hyundai, Mysore Road, Ph: 9591100001, Rajajinagar, Ph: 9591200001, Magadi Road, Ph: 9513200033, New Bel Road, Ph: 9513000800, Basavanagudi, Ph: 9591211118, Lakshmi Hyundai, Hebbal Ph: 9900037900, Kalyan Nagar, Ph: 8494913303, HBR Layout, Ph: 8884441111, Whitefield, Ph: 8884497700, Devanahalli, Ph: 8884499037, Pavan Hyundai, Kanakpura Road, Ph: 7337882522, Electronic City, Ph: 7337882522, Dhruvdesh Hyundai, Ph: 9205770577 **Mangalore:** Kanchana Hyundai, Ph: 9900144113, Advaith Hyundai, Ph: 7760962815 **Udupi:** Kanchana Hyundai, Ph: 9972440758 **Mysore:** Advaith Hyundai, Belavadi, Ph: 9620257012 JLB Road, Ph: 9606938831, KPR Hyundai, Mysore Ph: 9606470291 **Hassan:** Advaith Hyundai, Ph: 9606938828 **Shimoga:** Rahul Hyundai, Ph: 6364465441 **Hubli:** Bellad Hyundai, Ph: 9900035084, Raam Hyundai, Ph: 8495072555, **Kanakpura:** Pavan Hyundai, Ph: 7892718572 **Belgaum:** Nagshanti Hyundai, Ph: 9844890456, 9844890459 **Bijapur:** Narayan Hyundai, Ph: 9742272157, 9742272153 **Davanagere:** K J Hyundai, Ph: 7022001201 **Gulbarga:** Shah Hyundai, Ph: 9108049250 **Tumkur:** Pavan Hyundai, Ph: 7337882522 **Bellari:** Anika Hyundai, Ph: 8884484020 **Ramanagara:** Advaith Hyundai, Ph: 9900095504 **Kolar:** Advaith Hyundai, Ph: 9620229885, **Chintamani**: Ph: 8147994737 **Mandya:** Advaith Hyundai, Ph: 9740060075 **Coorg:** Advaith Hyundai, Madikeri, Ph: 9538971151 Gonikoppal, Ph: 9945774088 Kushalnagar, Ph: 9538971149 **Tiptur :** Advaith Hyundai, Ph: 7619577050 **Chikodi:** Nagshanti Hyundai, Ph: 8951947001 **Gokak:** Nagshanti Hyundai, Ph: 8147978240 **Savadatti:** Nagshanti Hyundai, Ph: 8147978240 **Athani:** Nagshanti Hyundai, Ph: 7411307080 **Belthangady:** Advaith Hyundai, Ph: 7760962819 **Sullia:** Advaith Hyundai Ph: 7760962813 **Dharwad:** Bellad Hyundai, Ph: 6364333461, **Hunsur:** KPR Hyundai, Ph: 9538879235 **Channarayapatna:** KPR Hyundai, Ph: 9538879238 **Kollegala:** KPR Hyundai, Ph: 9606478215 **Sakleshpura:** KPR Hyundai, Ph: 9035708716 **Raichur:** Shah Hyundai, Ph: 9108049252 **Bidar:** Shah Hyundai, Ph: 7625093556 **Yadgir:** Shah Hyundai, Ph: 9108049262 **Sindhanur:** Shah Hyundai, Ph: 9071411136/9513897444 **Basavakalyan:** Shah Hyundai, Ph: 7353307776 **Bagalkot:** Narayan Hyundai, Ph: 9742253245 **Jamkhandi:** Narayan Hyundai, Ph: 9742272179 **Madikeri:** Advaith Hyundai, Ph: 9538971151 **Kushalnagar:** Advaith Hyundai, Ph: 9538971149 **Gonikoppa:** Advaith Hyundai, Ph: 9945774088 **Mandya:** Advaith Hyundai, Ph: 9740060075 **Belthangady:** Advaith Hyundai, Ph: 77609 62819 **Sullia:** Advaith Hyundai, Ph: 7760962813 **Chikmagalur:** Rahul Hyundai, Ph: 7795800038 **Sagara:** Rahul Hyundai, Ph: 7625080180 **Thirthahalli:** Rahul Hyundai, Ph: 7625080183 **Shikaripura:** Rahul Hyundai, Ph: 9108843230 **Puttur:** Kanchana Hyundai, Ph: 9740873450 **Surathkal:** Kanchana Hyundai, Ph: 9482574530 **Karkala:** Kanchana Hyundai, Ph: 9740412899 **Kundapura:** Kanchana Hyundai, Ph: 9900145948 **Kumta:** Kanchana Hyundai, Ph: 9535855966 **Sirsi:** Kanchana Hyundai, Ph: 9731856300 **Karwara:** Kanchana Hyundai, Ph: 6364860518, **Hospet:** Anika Hyundai, Ph: 8884484018 **Ballair:** Anika Hyundai, Ph: 8884484020 **Koppal:** Anika Hyundai, Ph: 8884484031

my Hyundai app

Hyundai Promise
Certified Pre-Owned Car

Scan to chat with us or give a missed call at 9555295868

*Terms & Conditions apply. Benefits mentioned include applicable cash, exchange and corporate benefits. Benefits may vary with variants. **3-year warranty or upto 100 000 km whichever is earlier for Grand i10 NIOS, AURA, i20 & i20 N Line. 3-year unlimited km warranty is applicable for EXTER, VENUE, VENUE N Line, CRETA, CRETA N Line, CRETA Electric, ALCAZAR, TUCSON, VERNA and IONIQ 5. ^Upto 7 Years extended warranty is available for Grand i10 NIOS, i20, i20 N Line, AURA, VERNA, EXTER, VENUE, VENUE N Line, CRETA, CRETA N Line, CRETA Electric, ALCAZAR & TUCSON in all variants (Petrol/Diesel/CNG) and subject to payment. ***3 years Roadside Assistance (with taxi support & introduction of 10 year retail program). ~For detailed T&C of RSA, Shield of Trust & Super, kindly visit Hyundai India website. This advertisement and car shown here is for creative representation purposes only and the depictions are for illustrative purposes. Features and specifications shown may vary or may not be a part of standard fitment and are subject to change without prior notice. Hyundai Motor India Limited reserves the right to change specifications, colour, equipment and schemes at any time without prior notice. The black shade on glasses are due to lighting effect. Size and colour may appear to vary due to lighting and position effect. Extended Warranty and Shield of Trust & Super are on payable basis. For more details on warranty, please refer owners' manual, ##Scrappage bonus is applicable on select models subject to receipt of valid Certificate of Deposit issued by Govt. approved & operational vehicle scrappage center. #CSD: Canteen Stores Department, KPKB: Kendriya Police Kalyan Bhandar. INNOCEAN-012/25 KAN

ವಸತಿಶಾಲೆಯ ವಿದ್ಯಾರ್ಥಿನಿ ಸಾವು

ಶನಿವಾರಸಂತೆ (ಕೊಡಗು ಜಿಲ್ಲೆ): ಸಮೀಪದ ಕೊಡ್ಲಿಪೇಟೆಯಲ್ಲಿರುವ ಡಾ.ಎಪಿಜೆ ಅಬ್ದುಲ್ ಕಲಾಂ ವಸತಿಶಾಲೆಯ 7ನೇ ತರಗತಿ ವಿದ್ಯಾರ್ಥಿನಿ ಪೂರ್ವಿಕಾ ಅಸ್ವಸ್ಥಗೊಂಡು ಮೃತಪಟ್ಟಿದ್ದಾಳೆ.'ಗುರುವಾರ ಮಧ್ಯಾಹ್ನ ತರಗತಿಯಲ್ಲಿ ಪೂರ್ವಿಕಾ ಅಸ್ವಸ್ಥಳಾದಳು. ಶಾಲೆಯಲ್ಲಿದ್ದ ಶುಶ್ರೂಷಕಿ ನೋಡಿ ಕೊಡ್ಲಿಪೇಟೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆ ತಂದರು.

ಬಾಲಕಿಯ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು, ಹಾಸನದ ಜಿಲ್ಲಾ ಆಸ್ಪತ್ರೆಗೆ ದಾಖಲಿಸುವಂತೆ ವೈದ್ಯರು ಸೂಚಿಸಿದರು. ಆಸ್ಪತ್ರೆಗೆ ಕರೆದುಕೊಂಡು ಹೋಗುವಷ್ಟರಲ್ಲಿ ಬಾಲಕಿ ಮೃತಪಟ್ಟಿದ್ದಾಳೆ. ಹೃದಯಾಘಾತ ಆಗಿರಬಹುದೆಂದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ವೈದ್ಯರು ಹೇಳಿದ್ದಾರೆ. ಮರಣೋತ್ತರ ಪರೀಕ್ಷೆ ನಂತರ ನಿಖರ ಕಾರಣ ತಿಳಿಯಲಿದೆ ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಕೃಷ್ಣಮೂರ್ತಿ ತಿಳಿಸಿದರು.

ಪ್ರವಾಸೋದ್ಯಮ ಇಲಾಖೆ
ಕೋಲಾರ ಜಿಲ್ಲೆ

ಸಂಖ್ಯೆ : ಸ.ನಿ/ಪ್ರಇ/ಕೋ/ಟೆಂ.ಪ್ರ/07/2025–26 ದಿನಾಂಕ:10.03.2025

ಟೆಂಡರ್ ಪ್ರಕಟಣೆ

2025–26ನೇ ಸಾಲಿಗೆ ಪ್ರವಾಸೋದ್ಯಮ ಇಲಾಖೆ, ಕೋಲಾರ ಈ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಲು ಅವಶ್ಯಕವಿರುವ ಸಿಬ್ಬಂದಿಗಳಾದ ಕಂಪ್ಯೂಟರ್ ಆಪರೇಟರ್ ಹಾಗೂ ಗ್ರೂಪ್ "ಡಿ" ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಒದಗಿಸಲು ಅರ್ಹರಿರುವ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಟೆಂಡರ್ ಆಹ್ವಾನಿಸಲಾಗಿದೆ. **ದಿ: 12.3.2025 ರಿಂದ ದಿ: 25.03.2025ರವರೆಗೆ ಟೆಂಡರ್ ಫಾರಂ ಅನ್ನು ವಿತರಿಸಲಾಗುತ್ತದೆ. ಭರ್ತಿ ಮಾಡಿದ ಟೆಂಡರ್ ಫಾರಂ ಅನ್ನು ದಿ: 25.3.2025ರ ಸಂಜೆ: 5.00 ಗಂಟೆಯೊಳಗೆ ಸಲ್ಲಿಸಬೇಕು.** ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ **ಸಹಾಯಕ ನಿರ್ದೇಶಕರ ಕಛೇರಿ, ಪ್ರವಾಸೋದ್ಯಮ ಇಲಾಖೆ, ನಂ.ಎಸ್–17, ಜಿಲ್ಲಾಡಳಿತ ಭವನ, ಕೋಲಾರ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.**

ಸಹಿ/–
ಸಹಾಯಕ ನಿರ್ದೇಶಕರು
ಪ್ರವಾಸೋದ್ಯಮ ಇಲಾಖೆ
ಕೋಲಾರ ಜಿಲ್ಲೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:521/ಕೆಎಸ್‌ಎಂಸಿಎ/2024–25

ಸಮಾಜ ಕಲ್ಯಾಣ ಇಲಾಖೆ

ರಾಮನಗರ ಜಿಲ್ಲಾ ಪಂಚಾಯತ್, ಜಂಟಿ ನಿರ್ದೇಶಕರ ಕಛೇರಿ, ಪಂಚಾಯತ್ ಭವನ, 2ನೇ ಮಹಡಿ, ಬಿ.ಎಂ. ರಸ್ತೆ, ರಾಮನಗರ ಜಿಲ್ಲೆ – 562159.
ದೂರವಾಣಿ: 080–2727 3003, ಇ–ಮೇಲ್: dswormgm12@gmail.com

ಸಂಖ್ಯೆ : ಉ.ನಿ.ಕ./ಸ.ಕ.ಇ./ರಾ./ಸಿಬ್ಬಂದಿ–01/ಸಿಆರ್/2017–18
ದಿನಾಂಕ : 11–03–2025

ಪತ್ರಿಕಾ ಪ್ರಕಟಣೆ

ಶ್ರೀ. ಕುಮಾರ್ ಕೆ. ಅಡುಗೆ ಸಹಾಯಕರು ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ ಹಾರೋಹಳ್ಳಿ ಕನಕಪುರ ತಾಲ್ಲೂಕು ರಾಮನಗರ ಜಿಲ್ಲೆ ಆದ ನೀವು ದಿನಾಂಕ : 15–12–2022 ರ ಅಂತ್ಯಕ್ಕೆ ಸುಮಾರು 3241 ದಿನಗಳು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತೀರಿ. ಈ ಕುರಿತು ತಾಲ್ಲೂಕು ಹಾಗೂ ಜಿಲ್ಲಾ ಕಛೇರಿಯಿಂದ ಅನೇಕ ಬಾರಿ ಕಾರಣ ಕೇಳಿ ನೋಟೀಸ್ ಜಾರಿ ಮಾಡಿದ ನಂತರ ಕೆಲವು ದಿನಗಳು ಕರ್ತವ್ಯಕ್ಕೆ ಹಾಜರಾಗುವುದು ಮತ್ತು ದಿನಾಂಕ : 17–10–2022 ರಿಂದ ಇಲ್ಲಿಯವರೆಗೆ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತೀರಿ. ಇದುವರೆಗೂ ತಮ್ಮಿಂದ ಯಾವುದೇ ಸಮಜಾಯಿಸಿ ಉತ್ತರ ಬಂದಿರುವುದಿಲ್ಲ. ಇದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ 3(i-ii-iii) ರ ಉಲ್ಲಂಘನೆಯಾಗಿದ್ದು. ನೀವು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ಅನ್ವಯ ಶಿಸ್ತು ಕ್ರಮಕ್ಕೆ ಗುರಿಯಾಗಿರುತ್ತೀರಿ. ಆದ್ದರಿಂದ ಈ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದ್ದು. **ಈ ಪತ್ರಿಕಾ ಪ್ರಕಟಣೆ ಪ್ರಕಟಗೊಂಡ 07 ದಿನಗಳ ಒಳಗಾಗಿ ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ರಾಮನಗರ ಜಿಲ್ಲೆ ಇಲ್ಲಿಗೆ ಖುದ್ದು ಹಾಜರಾಗಿ ನಿಮ್ಮ ಸ್ವ – ಹೇಳಿಕೆ ದಾಖಲಿಸಲು ತಿಳಿಸಿದೆ.** ಒಂದು ವೇಳೆ ಈ ಪತ್ರಿಕಾ ಪ್ರಕಟಣೆ ಪ್ರಕಟಗೊಂಡ ನಂತರವೂ ಹಾಜರಾಗದಿದ್ದಲ್ಲಿ ನಿಮ್ಮ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ವ ಶಿಸ್ತು ಕ್ರಮ ಜರುಗಿಸಲಾಗುವುದು.

ಸಹಿ/– ಜಂಟಿ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ರಾಮನಗರ ಜಿಲ್ಲೆ.

ಡಿಐಪಿಆರ್/ರಾಮನಗರ/650/ಮಣಿಪಾಲ್/24–25

ಜಲಮಂಡಳಿಗೆ ಬಿಐಎಸ್ ಪ್ರಮಾಣಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲಮಂಡಳಿಯ ಕುಡಿಯುವ ನೀರು ಸರಬರಾಜು ನಿರ್ವಹಣಾ ವ್ಯವಸ್ಥೆಗೆ ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್‌ನಿಂದ (ಬಿಐಎಸ್) ಪ್ರಮಾಣಪತ್ರ ಸಂದಿದೆ.

ನೀರು ಸರಬರಾಜು ವ್ಯವಸ್ಥೆಯಲ್ಲಿ ಅಳವಡಿಸಿಕೊಂಡಿರುವ ಅಂತರ ರಾಷ್ಟ್ರೀಯ ಮಾನದಂಡಗಳನ್ನು ಪರಿಶೀಲನೆ ನಡೆಸಲಾಗಿತ್ತು. ಆರು ತಿಂಗಳಿನಿಂದ ವಿವಿಧ ಹಂತಗಳಲ್ಲಿ ಪರೀಕ್ಷೆಗಳು ನಡೆದಿದ್ದವು. ಎಲ್ಲ ಪರೀಕ್ಷೆ, ಪರಿಶೀಲನೆಗಳಲ್ಲಿ ಉತ್ತಮ ಗುಣಮಟ್ಟ ಕಂಡುಬಂದಿದ್ದರಿಂದ ಬಿಐಎಸ್ ಪ್ರಮಾಣ ನೀಡಿದೆ.

ಬಿಐಎಸ್ ಪ್ರಮಾಣೀಕರಣದ ವ್ಯಾಪ್ತಿಯು ಜಲಮಂಡಳಿಯ ಸಮಗ್ರ ನೀರಿನ ನಿರ್ವಹಣಾ ಕಾರ್ಯಾಚರಣೆಗಳನ್ನು ಒಳಗೊಂಡಿದೆ. ನೀರಿನ ಸಂಸ್ಕರಣೆ, ಸಂಗ್ರಹಣೆ, ಪಂಪಿಂಗ್, ಜಲಮಂಡಳಿ ವ್ಯಾಪ್ತಿಯಲ್ಲಿ ಪೈಪ್ ಸಂಪರ್ಕಜಾಲದ ಮೂಲಕ ವಿತರಣೆ, ನಿರ್ವಹಣೆ, ಮೀಟರಿಂಗ್ ಮತ್ತು ಗ್ರಾಹಕರಿಗೆ ಬಿಲ್ಲಿಂಗ್ ಒಳಗೊಂಡಿದೆ.

ಈ ಕುರಿತಂತೆ ಪ್ರತಿಕ್ರಿಯಿಸಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ನಗರದ ಜನರಿಗೆ ಶುದ್ಧ ಮತ್ತು ಸುರಕ್ಷಿತ ನೀರು ಒದಗಿಸುವುದು ನಮ್ಮ ಆದ್ಯತೆ. ಬಿಐಎಸ್ ಪ್ರಮಾಣೀಕರಣ ಪಡೆದ ದೇಶದ ಮೊದಲ ಸಂಸ್ಥೆ ಎಂಬ ಹೆಗ್ಗಳಿಕೆ ಜಲ ಮಂಡಳಿಯದ್ದಾಗಿರುವುದು ಹೆಮ್ಮೆಯ ವಿಚಾರ' ಎಂದು ಶ್ಲಾಘಿಸಿದರು.

'ನಾವು ನೀರಿನ ಗುಣಮಟ್ಟ ಮತ್ತು ಸುರಕ್ಷತೆಗೆ ವಿಶೇಷ ಮಾನದಂಡ ಹೊಂದಿದ್ದೇವೆ. ಇದು ಸಾರ್ವಜನಿಕ ಸೇವೆಗಳು ಮತ್ತು ನಗರ ಸುಸ್ಥಿರತೆಯಲ್ಲಿ ಅತ್ಯುನ್ನತ ಮಾನದಂಡಗಳನ್ನು ಅಳವಡಿಸಿಕೊಳ್ಳುವ ನಗರವಾಗಿ ಬ್ರ್ಯಾಂಡ್ ಬೆಂಗಳೂರು ಉಪಕ್ರಮಕ್ಕೆ ಇನ್ನಷ್ಟು ಶಕ್ತಿ ನೀಡಲಿದೆ' ಎಂದು ತಿಳಿಸಿದರು.

'ಬೆಂಗಳೂರಿನ ಲಕ್ಷಾಂತರ ನಿವಾಸಿಗಳಿಗೆ ಸೇವೆ ಸಲ್ಲಿಸುತ್ತಿರುವ ಜಲಮಂಡಳಿಯ ಕಾರ್ಯನಿರ್ವಹಣೆಗೆ ಬಿಐಎಸ್ ಪ್ರಮಾಣಪತ್ರ ಲಭಿಸಿರುವುದು ಮಹತ್ವದ ಮೈಲಿಗಲ್ಲು' ಎಂದು ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ಹೇಳಿದರು.

ನಂದಿನಿ ಹಾಲಿನ ದರ ಏರಿಕೆಗೆ ಹೋಟೆಲ್‌ಗಳ ಸಂಘ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಂದಿನ ಹಾಲಿನ ದರ ₹5ಕ್ಕೆ ಹೆಚ್ಚಿಸುವ ಕರ್ನಾಟಕ ಹಾಲು ಮಹಾಮಂಡಳದ ಪ್ರಸ್ತಾವಕ್ಕೆ ಕರ್ನಾಟಕ ರಾಜ್ಯ ಹೋಟೆಲುಗಳ ಸಂಘ ವಿರೋಧ ವ್ಯಕ್ತಪಡಿಸಿದೆ.

ಈ ಕುರಿತು ರಾಜ್ಯ ಸರ್ಕಾರ ಹಾಗೂ ಕರ್ನಾಟಕ ಹಾಲು ಮಹಾಮಂಡಳಕ್ಕೆ (ಕೆಎಂಎಫ್) ಪತ್ರ ಬರೆದಿರುವ ಅವರು, 'ಪ್ರತಿ ಲೀಟರ್ ನಂದಿನ ಹಾಲಿನ ದರ ಹೆಚ್ಚಳ ಮಾಡಿದರೆ, ಅದು ಹೋಟೆಲ್ ಉದ್ಯಮದ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ. ಆದ್ದರಿಂದ ಹಾಲಿನ ದರ ಏರಿಕೆಯ ಪ್ರಸ್ತಾವವನ್ನು ಕೈಬಿಡಬೇಕು' ಎಂದು ಸಂಘದ ಅಧ್ಯಕ್ಷ ಜಿ.ಕೆ. ಶೆಟ್ಟಿ ಒತ್ತಾಯಿಸಿದ್ದಾರೆ.

'ಈಗಾಗಲೇ ಕಾಫಿಪುಡಿ ದರ ಹೆಚ್ಚಳವಾಗಿದೆ. ಈಗ ಹಾಲಿನ ದರ ಹೆಚ್ಚಿಸಿದರೆ ಚಹಾ, ಕಾಫಿಯ ಬೆಲೆ ಏರಿಕೆ ಮಾಡುವುದು ಹೋಟೆಲ್‌ಗಳ ಮಾಲೀಕರಿಗೆ ಅನಿವಾರ್ಯವಾಗಲಿದೆ. ಹೋಟೆಲ್ ಉದ್ಯಮ ರಾಜ್ಯದಲ್ಲಿ ಲಕ್ಷಾಂತರ ಕುಟುಂಬಗಳಿಗೆ ಜೀವನಾಧಾರವಾಗಿದೆ. ಸರ್ಕಾರ ಹಾಗೂ ಸ್ಥಳೀಯ ಸಂಘ–ಸಂಸ್ಥೆಗಳಿಗೆ ದೊಡ್ಡಮಟ್ಟ ತೆರಿಗೆ ಮೂಲವಾಗಿದೆ' ಎಂದು ತಿಳಿಸಿದ್ದಾರೆ.

'ಹೋಟೆಲ್‌ಗಳಲ್ಲಿ ಗ್ರಾಹಕರಿಗೆ ಆಹಾರ ಸುರಕ್ಷತಾ ನೀತಿಗೆ ಅನುಗುಣವಾಗಿ ಶುಚಿತ್ವ ಹಾಗೂ ಗುಣಮಟ್ಟದ ನೀತಿ ಅನುಸರಿಸುತ್ತಾ ಚಹಾ, ಕಾಫಿ, ಇತರೆ ಪಾನೀಯಗಳು ಸೇರಿದಂತೆ ತಿಂಡಿಯನ್ನು ಒದಗಿಸುತ್ತವೆ.

ಒಂದೊಮ್ಮೆ ಹಾಲಿನ ದರ ಹೆಚ್ಚಳಗೊಂಡರೆ, ಇವುಗಳ ಬೆಲೆ ಏರಿಕೆ ಅನಿವಾರ್ಯವಾಗಲಿದೆ' ಎಂದು ಜಿ.ಕೆ. ಶೆಟ್ಟಿ ಅವರು ತಿಳಿಸಿದ್ದಾರೆ.

30ರಿಂದ ರಂಗನಾಥಸ್ವಾಮಿ ಜಾತ್ರೆ

ಮಾಗಡಿ ಪಟ್ಟಣದಲ್ಲಿರುವ ತಿರುಮಲೆ ರಂಗನಾಥ ಸ್ವಾಮಿ ದೇವಸ್ಥಾನದ ಜಾತ್ರಾ ಮಹೋತ್ಸವ ಹಾಗೂ ಬ್ರಹ್ಮರಥೋತ್ಸವದ ಪೂರ್ವಸಿದ್ಧತೆ ಕುರಿತು ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಚಂದ್ರಯ್ಯ ಅವರು ರಾಮನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು

ಪ್ರಜಾವಾಣಿ ವಾರ್ತೆ

ರಾಮನಗರ: ಜಿಲ್ಲೆಯ ಮಾಗಡಿ ತಿರುಮಲೆ ರಂಗನಾಥಸ್ವಾಮಿ ದೇವಸ್ಥಾನದ ಜಾತ್ರಾ ಮಹೋತ್ಸವ ಹಾಗೂ ರಥೋತ್ಸವ ಮಾರ್ಚ್ 30ರಿಂದ ಏಪ್ರಿಲ್ 14ರವರೆಗೆ ನಡೆಯಲಿದೆ. ಜಾತ್ರೆಗೆ ಸಂಬಂಧಿಸಿದಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಚಂದ್ರಯ್ಯ ಅವರು, ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಿದರು.

'ಜಾತ್ರೆ ಹಾಗೂ ಬ್ರಹ್ಮ ರಥೋತ್ಸವದಲ್ಲಿ ಅಂದಾಜು 2 ಲಕ್ಷಕ್ಕೂ ಹೆಚ್ಚು ಭಕ್ತರು ಸೇರುವ ನಿರೀಕ್ಷೆ ಇದೆ. ಯಾವುದೇ ಅವ್ಯವಸ್ಥೆ ಉಂಟಾಗದಂತೆ ಎಲ್ಲ ರೀತಿಯ ಕ್ರಮ ಕೈಗೊಳ್ಳಬೇಕು. ವಾಹನಗಳ ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆ ಮಾಡಿಕೊಳ್ಳಬೇಕು. ಪೊಲೀಸರಿಂದ ಸೂಕ್ತ ಭದ್ರತೆ ಒದಗಿಸಬೇಕು' ಎಂದು ಸೂಚಿಸಿದರು.

ಅಂಗಾಂಗ ದಾನ ಮಾಡುವ ಮೂಲಕ ನೆರವಾಗಲು ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಗಾಂಗ ವೈಫಲ್ಯಕ್ಕೆ ಒಳಗಾದವರಿಗೆ ಅಂಗಾಂಗ ದಾನದ ಮೂಲಕ ನೆರವಾಗಬಹುದಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ಅಂಗಾಂಗ ದಾನದ ಪ್ರತಿಜ್ಞೆ ಕೈಗೊಳ್ಳಬೇಕು' ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ವಿ. ಪಾಟೀಲ ಅಭಿಮತ ವ್ಯಕ್ತಪಡಿಸಿದರು.

ವಿಶ್ವ ಮೂತ್ರಪಿಂಡ ದಿನದ ಪ್ರಯುಕ್ತ ಸ್ಪರ್ಶ್ ಆಸ್ಪತ್ರೆ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ಅಂಗಾಂಗ ದಾನದ ಬಗ್ಗೆ ಜನರು ಜಾಗೃತರಾಗಬೇಕು. ಸಾವಿನ ನಂತರ ವ್ಯಕ್ತಿಯು ತನ್ನ ಅಂಗಾಂಗಗಳನ್ನು ದಾನಮಾಡುವ ಮೂಲಕ ಸಾವಿನಲ್ಲೂ ಸಾರ್ಥಕತೆ ಮೆರೆಯಬಹುದು. ವೈದ್ಯಕೀಯ ತಂತ್ರಜ್ಞಾನಗಳ ಪ್ರಗತಿಯೊಂದಿಗೆ ಜೀವ ಉಳಿಸುವ ಅಂಗಾಂಗಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ರಾಜ್ಯದಲ್ಲಿ ಸಾವಿರಾರು ಮಂದಿ ಅಂಗಾಂಗಕ್ಕೆ ಕಾಯುತ್ತಿದ್ದಾರೆ. ಸರಿ ಹೊಂದುವ ಅಂಗಾಂಗ ಸಿಕ್ಕಲ್ಲಿ ಮಾತ್ರ ಅವರು ಚೇತರಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಅಂಗಾಂಗ ದಾನಕ್ಕೆ ಸ್ವಯಂ ಪ್ರೇರಿತರಾಗಿ ಮುಂದಕ್ಕೆ ಬರಬೇಕು' ಎಂದರು.

'ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯು (ಸೊಟ್ಟೊ) ಉತ್ತಮ ಕಾರ್ಯನಿರ್ವಹಿಸುತ್ತಿದ್ದು, ಅಂಗಾಂಗ ವೈಫಲ್ಯಕ್ಕೆ ಒಳಗಾದವರಿಗೆ ನೆರವಾಗುತ್ತಿದೆ' ಎಂದರು.



ನ್ಯಾ.ಶಿವರಾಜ್ ವಿ.ಪಾಟೀಲ

ಸ್ಪರ್ಶ್ ಆಸ್ಪತ್ರೆ ಸ ಮೂ ಹ ದ ಅಧ್ಯಕ್ಷ ಡಾ.ಶರಣ್ ಶಿವರಾಜ್ ಪಾಟೀಲ, 'ಅಂಗಾಂಗ ಕಸಿ ರೋಗಿಗಳಿಗೆ ಹೊಸ ಭರವಸೆ ನೀಡುತ್ತಿದೆ ಮೂತ್ರಪಿಂಡದ ಮಹತ್ವದ ಬಗ್ಗೆ ಬಹಳಷ್ಟು ಜನರಿಗೆ ಜಾಗೃತಿಯಿಲ್ಲ. ಇದರಿಂದಾಗಿ ಅದರ ಆರೋಗ್ಯದ ಕಡೆಗೆ ಹೆಚ್ಚಿನ ಗಮನಹರಿಸದೇ ಮೂತ್ರಪಿಂಡದ ಸಮಸ್ಯೆ ತಂದೊಡ್ಡಿಕೊಳ್ಳುತ್ತಿದ್ದಾರೆ. ಪ್ರಾಥಮಿಕ ಹಂತದಲ್ಲೇ ಪತ್ತೆ ಮಾಡಿ, ಇದಕ್ಕೆ ಸೂಕ್ತ ಚಿಕಿತ್ಸೆಯನ್ನು ಒದಗಿಸಬೇಕು' ಎಂದರು.

ಕಾರ್ಯಕ್ರಮದಲ್ಲಿ ಆಸ್ಪತ್ರೆಯ ಮೂತ್ರಪಿಂಡ ವಿಜ್ಞಾನ ವಿಭಾಗದ ಡಾ.ಹರ್ಷ ಕುಮಾರ್, ಡಾ.ಸುನಿಲ್ ಆರ್. ಉಪಸ್ಥಿತರಿದ್ದರು.

'ಸೆಕೆಂಡ್ಸ್' ರೇಷ್ಮೆ ಸೀರೆ ಖರೀದಿಗೆ ನೂಕುನುಗ್ಗಲು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಮಾನಂದವಾಡಿ ರಸ್ತೆಯಲ್ಲಿರುವ ಕೆಎಸ್‌ಐಸಿ ಸಿಲ್ಕ್ ಫ್ಯಾಕ್ಟರಿ ಶತಮಾನೋತ್ಸವ ಭವನದಲ್ಲಿ ಗುರುವಾರ ಶೇ 25ರ ರಿಯಾಯಿತಿಯಲ್ಲಿ 'ಸೆಕೆಂಡ್ಸ್ ರೇಷ್ಮೆ ಸೀರೆ'ಗಳ ಮಾರಾಟ ಆರಂಭಗೊಂಡಿದ್ದು, ಮೊದಲ ದಿನವೇ ನಾರಿಯರು ಸೀರೆ ಖರೀದಿಗೆ ಮುಗಿಬಿದ್ದರು.

ಯುಗಾದಿ ಪ್ರಯುಕ್ತ ಮಾರ್ಚ್ 15ರವರೆಗೆ ಈ ಸೀರೆಗಳ ಮಾರಾಟ ಆಯೋಜಿಸಿದೆ. ಪ್ರತಿ ದಿನ ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಸೀರೆ ಖರೀದಿಗೆ ಅವಕಾಶವಿದೆ. ಮೊದಲ ದಿನ ಮುಂಜಾನೆ 6ರಿಂದಲೇ ಭವನದ ಆವರಣದಲ್ಲಿ ಜನರ ಸಾಲು ನೆರೆದಿತ್ತು. ಪೊಲೀಸ್ ಭದ್ರತೆಯಲ್ಲಿ ಬ್ಯಾರಿಕೇಡ್ ಹಾಕಿ ಜನರನ್ನು ಒಳಬಿಡಲಾಯಿತು.

'ಮೊದಲು ಬಂದವರಿಗೆ ಮೊದಲ ಆದ್ಯತೆ' ಎಂದು ಭವನದ ಮುಂಭಾಗ ಫಲಕ ಹಾಕಿದ್ದು, ಒಬ್ಬರಿಗೆ ಒಂದು ಸೀರೆ ಖರೀದಿಗೆ ಮಾತ್ರ ಅವಕಾಶ ನೀಡಲಾಗಿತ್ತು. ಮೊದಲ ದಿನ 1 ಸಾವಿರ ಸೀರೆಗಳು ಖರೀದಿಗೆ ಲಭ್ಯವಿದ್ದು, ನೀರೆಯರು ಕಣ್ಣಲ್ಲೇ ಅಳೆದು ತೂಗಿ ತಮ್ಮಿಷ್ಟದ ಬಣ್ಣದ ಸೀರೆಗಳನ್ನು ಆಯ್ಕೆ ಮಾಡಿಕೊಂಡರು. ₹15 ಸಾವಿರದಿಂದ ₹2 ಲಕ್ಷ ಮೌಲ್ಯದ ಸೀರೆಗಳನ್ನು ಮಾರಾಟಕ್ಕೆ ಇಡಲಾಗಿತ್ತು. ಕೆಎಸ್‌ಐಸಿಯ 30ಕ್ಕೂ ಹೆಚ್ಚು ಸಿಬ್ಬಂದಿ ಗ್ರಾಹಕರಿಗೆ ಸೀರೆ ತೋರಿಸುವಲ್ಲಿ ಸುಸ್ತಾದರು.

'ಮೂರು ದಿನದಲ್ಲಿ 3 ಸಾವಿರ ಸೀರೆ ಮಾರಾಟಕ್ಕೆ ಅವಕಾಶ ಕಲ್ಪಿಸಲಾಗಿದೆ. ಪ್ರತಿದಿನ 1 ಸಾವಿರ ಸೀರೆ ಮಾರಾಟ ನಡೆದಿದ್ದು, ಸ್ಟಾಕ್ ಮುಗಿಯುವವರೆಗೆ ಖರೀದಿಗೆ ಅವಕಾಶವಿದೆ' ಎಂದು ಕೆಎಸ್‌ಐಸಿ ಸಿಬ್ಬಂದಿ ತಿಳಿಸಿದರು.

ಕರ್ನಾಟಕ ಸರ್ಕಾರ
(ಆರ್ಥಿಕ ಇಲಾಖೆ)
ವಿತ್ತೀಯ ಕಾರ್ಯನೀತಿ ಸಂಸ್ಥೆ (ವಿಕಾಸಂ)
ಬೆಂಗಳೂರು–ಮೈಸೂರು ರಸ್ತೆ, ಕೆಂಗೇರಿ, ಬೆಂಗಳೂರು – 560060
ದೂ: 080–26971000, ವೆಬ್‌ಸೈಟ್: www.fpibengaluru.karnataka.gov.in

ಸಂಖ್ಯೆ: FPI-ADMN0MISC(MISC)/15/2024-ADMN-FPI ದಿನಾಂಕ:13.03.2025

ಸಾರ್ವಜನಿಕ ಬಹಿರಂಗ ಹರಾಜು ಪ್ರಕಟಣೆ

ವಿತ್ತೀಯ ಕಾರ್ಯನೀತಿ ಸಂಸ್ಥೆಯ ಸರ್ಕಾರಿ **ವಾಹನ ಸಂಖ್ಯೆ : ಕೆಎ–41 ಜಿ–0013 (ಮಹೀಂದ್ರಾ ಜೈಲೊ)** ವಾಹನವನ್ನು **"ಎಲ್ಲಿದೆಯೋ, ಹೇಗಿದೆಯೋ ಹಾಗೆಯೇ" ದಿನಾಂಕ: 24.03.2025ರಂದು ಸಾರ್ವಜನಿಕ ಬಹಿರಂಗ ಹರಾಜು ಮೂಲಕ** ವಿಲೇವಾರಿ ಮಾಡಲು ತೀರ್ಮಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಆಸಕ್ತ ಬಿಡ್‌ದಾರರು ವಿತ್ತೀಯ ಕಾರ್ಯನೀತಿ ಸಂಸ್ಥೆಯ ವೆಬ್‌ಸೈಟ್ **https://fpibengaluru.karnataka.gov.in** ಸಂಪರ್ಕಿಸುವುದು.

ಸಹಿ/– ನಿರ್ದೇಶಕರು
ವಿತ್ತೀಯ ಕಾರ್ಯನೀತಿ ಸಂಸ್ಥೆ

DIPR/CP/YC/5631/2024-25

BANGALORE TURF CLUB LTD.
Post Box No. 5038, Race Course Road, Bangalore-560001
Email : ceo@btcraces.com Land Line No.22262391/2/3 Extn:480
CIN: U99999KA1962PLC001449 GST No.29AABCB6217G1ZT

TENDER NOTICE - 13.03.2025

Sealed Tenders are invited individually for the below mentioned supply and services :
(1) Public canteen (Veg & Non-Veg) and Club House catering Contract
(2) Jockeys stand Canteen Contract
(3) Cycle / Scooter Stand parking contract
(4) Supply of Organic manure for Turf grass track
(5) Stables and other waste collection services
(6) Security services Contract
(7) Pest Control Services

For more details visit our website : www.bangaloreraces.com
Last date and time for submission of quotation along with the necessary documents on or before below said dates:
(SL No. 1 to 3) By 11.00 AM on Wednesday, 26th March 2025.
(SL No. 4 & 5) By 11.00 AM on Thursday, 27th March 2025.
(SL No. 6 & 7) By 11.00 AM on Friday, 11th April 2025.

SD/-
Date : 13.03.2025 CEO & Secretary

ನೈಋತ್ಯ ರೈಲ್ವೆ

ಓಪನ್ ಟೆಂಡರು ಸೂಚನೆ ಸಂ. 05/SBC/25, ದಿನಾಂಕ: 06.03.2025

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	**ಬೆಂಗಳೂರು–ತುಮಕೂರು–ಅರಸೀಕೆರೆ ವಿಭಾಗ:** ನಿಡವಂದ – ಹಿರೇಹಳ್ಳಿ ನಿಲ್ದಾಣಗಳ ನಡುವೆ (ಡಬಲ್ ಟ್ರ್ಯಾಕ್) ಕಿಮೀ. 49/200–300 ರಲ್ಲಿ ಎಲ್‌ಸಿ ನಂ. 28 ಕ್ಕೆ ಬದಲಾಗಿ 1x5ಮೀx3ಮೀ ಅಳತೆಯ ಪ್ರಸ್ತಾವಿತ ಆರ್‌ಯುಬಿಯ ನಿರ್ಮಾಣ. ನಿರ್ವಹಣೆಯ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 4,03,66,340/-
2	**ಬೆಂಗಳೂರು ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್ / ಧರ್ಮಪುರಿ ಉಪ ವಿಭಾಗದ ಹೀಲಲಿಗೆ ನಿಲ್ದಾಣದಲ್ಲಿ ಪ್ರಸ್ತಾವಿತ ಟೈಪ್–2 ಮಾದರಿಯ 7 ಸಿಬ್ಬಂದಿ ಗೃಹಗಳ ನಿರ್ಮಾಣ (ಎಲೆಕ್ಟ್ರಿಕ್ ಪೋರ್ಷನ್ ಒಳಗೊಂಡಂತೆ) (ಸಂಯುಕ್ತ ಟೆಂಡರು). ನಿರ್ವಹಣೆಯ ಅವಧಿ 12 ತಿಂಗಳುಗಳು.	ರೂ. 2,37,11,365/-
3	**ಉಪ ಕಾಮಗಾರಿ–1: ಬೆಂಗಳೂರು – ಸೇಲಂ ವಿಭಾಗ:** ಪಾಲಕ್ಕೋಡು (ಪಿಸಿವಿ) ನಿಲ್ದಾಣದಲ್ಲಿ ಫುಟ್ ಓವರ್ ಬ್ರಿಡ್ಜ್ (ಎಫ್‌ಓಬಿ) ನ ನಿರ್ಮಾಣ. **ಉಪ ಕಾಮಗಾರಿ–2: ಬೆಂಗಳೂರು – ಸೇಲಂ ವಿಭಾಗ:** ಪೆರಿಯನಾಗತುಣ್ಯೆ (ಪಿಆರ್‌ಎನ್‌ಟಿ) ನಿಲ್ದಾಣದಲ್ಲಿ ಫುಟ್ ಓವರ್ ಬ್ರಿಡ್ಜ್ (ಎಫ್‌ಓಬಿ) ನ ನಿರ್ಮಾಣ. ನಿರ್ವಹಣೆಯ ಅವಧಿ 12 ತಿಂಗಳುಗಳು.	ರೂ. 4,32,53,126/-
4	**ಬೆಂಗಳೂರು – ಸೇಲಂ ವಿಭಾಗ:** ಸಹಾಯಕ ವಿಭಾಗೀಯ ಇಂಜಿನಿಯರ್ / ಧರ್ಮಪುರಿ ಉಪ–ವಿಭಾಗದ ಪೆರಿಯನಾಗತುಣ್ಯೆ (ಪಿಆರ್‌ಎನ್‌ಟಿ) ನಿಲ್ದಾಣದಲ್ಲಿ 1x5.0x4.50 ಅಳತೆಯ ಆರ್‌ಸಿಸಿ ಬಾಕ್ಸ್ ಅನ್ನು ರೋಲಿಂಗ್ / ಲಾಂಚಿಂಗ್ ಮಾದರಿಯ ಮೂಲಕ ಆರ್‌ಯುಬಿ ಯ ನಿರ್ಮಾಣ. ನಿರ್ವಹಣೆಯ ಅವಧಿ 6 ತಿಂಗಳುಗಳು ಅಥವಾ ಒಂದು ಮಾನ್ಸೂನ್ ಅವಧಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 9,46,58,658/-
5	**ಬೆಂಗಳೂರು – ಜೋಲಾರ್‌ಪೇಟೆ ವಿಭಾಗ: ಉಪ ಕಾಮಗಾರಿ–1:** ಕಿಮೀ. 351/930 – 353/864 ರವರೆಗೆ ಕರ್ವ್ ನಂ. 9, 10, 11 ಮತ್ತು 12 ರ ಅಪ್ ಲೈನಿನಲ್ಲಿ 1.152 ಕಿಮೀ. ಉದ್ದದ ಪ್ರತ್ಯೇಕ ಸ್ಥಳಗಳಲ್ಲಿ ಈಗಿರುವ 60 ಕೆಜಿ. ಪಿಎಸ್‌ಸಿ ಯನ್ನು 60 ಕೆಜಿ ವೈಡರ್ ಬೇಸ್ಡ್ ಸ್ಲಾಕ್ ಗೇಜ್ ಪಿಎಸ್‌ಸಿ (ಕ್ಲಾಸ್–1) ನಿಂದ ಥ್ರೂ ಸ್ಲೀಪರ್ ರಿನ್ಯೂವಲ್ (ಪಿ) ಕಾಮಗಾರಿ. **ಉಪ ಕಾಮಗಾರಿ–2:** ಎಸ್‌ಎಸ್‌ಇ/ಪಿ.ವೇ/ಬೆಂಗಳೂರು ವಿಭಾಗದಲ್ಲಿ ಕಿಮೀ. 352/305–354/566 ರ ಅಪ್ ಲೈನಿನವರೆಗೆ 1.379 ಕಿಮೀ. ಉದ್ದದ ಪ್ರತ್ಯೇಕ ಸ್ಥಳಗಳಲ್ಲಿ ಥ್ರೂ ಫಿಟಿಂಗ್ ರಿನ್ಯೂವಲ್ (ಪಿ) ಕಾಮಗಾರಿ. **ಉಪ ಕಾಮಗಾರಿ–3:** ಕಿಮೀ. 352/753–966, 352/966–353/456, 353/704–864 ಮತ್ತು 354/578–908 (ಡೌನ್ ಲೈನ್) (ಕರ್ವ್ ನಂ. 10, 11, 12 ಮತ್ತು 16) ರವರೆಗೆ 1.193 ಕಿಮೀ. ಉದ್ದಕ್ಕೆ 60 ಕೆಜಿ ವೈಡರ್ ಬೇಸ್ಡ್ ಸ್ಲಾಕ್ ಗೇಜ್ ಪಿಎಸ್‌ಸಿ (ಕ್ಲಾಸ್–1) ನಿಂದ ಥ್ರೂ ಸ್ಲೀಪರ್ [illegible]	ರೂ. 1,38,67,014/-
6	**ಬೆಂಗಳೂರು – ಜೋಲಾರ್‌ಪೇಟೆ ವಿಭಾಗ:** [illegible]	ರೂ. 6,51,66,028/-
7	**ಬೆಂಗಳೂರು – ಮೈಸೂರು ವಿಭಾಗ:** [illegible]	ರೂ. 95,65,819/-

[illegible] www.ireps.gov.in [illegible]

PUB/846/AAF/PRB/SWR/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಸಾರ್ವಜನಿಕರಿಗೆ ಸೂಚನೆ:

ರಾಜ್ಯ ಹೆದ್ದಾರಿ – ೧೩೭ರ ರೈಲ್ವೆ ಕಿ.ಮೀ. ೩೪/೭೦೦–೮೦೦ರಲ್ಲಿ ಎಲ್.ಸಿ. ಸಂಖ್ಯೆ ೧೮ರಲ್ಲಿ ಅಣ್ಣಿಗೇರಿ – ನವಲಗುಂದ ರಸ್ತೆ ನೇರ ಅಣ್ಣಿಗೇರಿಯಲ್ಲಿ ರಸ್ತೆ ಓವರ್ ಬ್ರಿಡ್ಜ್ ನಿರ್ಮಾಣಕ್ಕಾಗಿ ತಾತ್ಕಾಲಿಕ ತಿರುವು ರಸ್ತೆ ಸಿದ್ಧವಾಗಿದೆ. ಲೆವೆಲ್ ಕ್ರಾಸಿಂಗ್ ಬಳಿಯ ವಾಹನ ಸಂಚಾರವನ್ನು ಈ ತಿರುವು ರಸ್ತೆಯ ಮೇಲೆ ತಿರುಗಿಸಲಾಗುತ್ತದೆ, ರಸ್ತೆ ಮೇಲ್ಸೇತುವೆ ನಿರ್ಮಾಣ ಪೂರ್ಣಗೊಳ್ಳುವವರೆಗೆ ತಾತ್ಕಾಲಿಕ ತಿರುವು ರಸ್ತೆಯು ೧೦.೦೩.೨೦೨೫ ರಿಂದ ಎರಡೂ ದಿಕ್ಕುಗಳಲ್ಲಿ ರಸ್ತೆ ಸಂಚಾರವನ್ನು ನಿಯೋಜಿಸಲು ಮತ್ತು ತಿರುತಿಸಲು ಸಿದ್ಧವಗಿದೆ.

ಉಪ ಮುಖ್ಯ ಅಭಿಯಂತರರು/ನಿರ್ಮಾಣ/ಸಾಮಾನ್ಯ
ಬೆಂಗಳೂರು ಕಂಟೋನ್ಮೆಂಟ್

ಪಿಯುಬಿ/849/ಎಎಡಿ360/ಪಿಆರ್ ಬಿ/ಎಸ್ ಡಬ್ಲ್ಯು ಆರ್/2024–25

South Western Railway - SWR | SWRRLY | SWRRLY

PUBLIC NOTICE

1. The Publics are hereby informed that my client intended to purchase the below mentioned Schedule property from its owners **Smt. Chandrakala**, W/o Late Sri. Vijayendrudu and her children Sri. R V Chetan and Smt. R V Deepa alias Smt. Deepa G S (herein after referred to as Owners). The Owners have represented to our client that they are the sole and absolute owners of the Schedule Property with clear and marketable title and absolute right, interest and Possession over the Schedule property and that apart from them, there are no other person/s having any right or claim over the Schedule Property.

2. The Owners have further represented that they have not entered into any Agreement in respect of the Schedule Property or any part thereof and have not created mortgage or any type of encumbrance in respect of the Schedule Property.

3. Any person claiming to have any manner of right, title, claim or interest over the Schedule Property or any objection for the sale transaction thereof in favour of my client, is hereby called upon to notify the undersigned of such right, title, claim, interest or objection with supporting documents thereof, within Fifteen **(15) days** from the date of this Notice, after which period, it shall be assumed that there are no claims of whatsoever nature with regard to the Schedule Property or any part thereof nor any objections for the execution of Sale deed thereof by the Owners in favour of my client.

SCHEDULE

All that piece and parcel of immovable property bearing New Sy.No. 60/2 measuring 14 guntas, forming portion of Sy.No. 60 situated at Hebbagodi Village, Attibele Hobli, Anekal Taluk, Bangalore Urban District and bounded by: **East by:** Ananthanagara Road and Kammasandra Village gadi and Sy.No. 113/2 of Kammasandra village, **West by:** Narayan Das Carlo's Land, **North by:** Private Property of T. Raja Reddy & N. Prakash, **South by:** Private Property of B.R.Ravindra

Sd/- **Ravishankar .A**, Advocate
No.404, Ranka Park Apartments
Lalbagh Road, Near Richmond Circle,
Bangalore- 560 027. Date: 13.03.2025

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

JOB OPPORTUNITIES

Teachers/ Professors

ORCHIDS The International School
TEACHERS WANTED
Freshers and Experienced Female candidates can only apply
English, Mathematics, Chess, Dance, Music, Theatre, Drawing, Physical Education & Other Subject Teachers
For Walk In, visit Sarjapur Branch & other branches during weekends
Kindly drop your CV to: careers@orchids.edu.in
8888-060-888

General

'LIFE GUARD Required for Swimming Pool. Please Contact Mobile 8970050795, Jp nagar phase 2

ಯುಗಾದಿ ಮತ್ತು ರಂಜಾನ್ ಹಬ್ಬದ ವಿಶೇಷ ಹಾಗೂ ಮದುವೆ ಸಮಾರಂಭಗಳ ಪ್ರಯುಕ್ತ

OPENING TODAY

ಅಭಿವೃದ್ಧಿ ಸಿಲ್ಕ್ ಇಂಡಿಯ 2025

Exclusive Wedding Collections

ಭಾರತದ ಎಲ್ಲಾ ರಾಜ್ಯಗಳ ಪರಿಶುದ್ಧ ರೇಷ್ಮೆ ಸೀರೆ ಮತ್ತು ರೇಷ್ಮೆ ಉತ್ಪನ್ನಗಳ
ಪ್ರದರ್ಶನ ಮತ್ತು ಮಾರಾಟ

ಬಿಹಾರ್:ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು ಕರ್ನಾಟಕ:ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ತಮಿಳುನಾಡು:ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು ಆಂಧ್ರ ಪ್ರದೇಶ:ಧರ್ಮಾವರಂ ಸೀರೆಗಳು, ಉಪ್ಪಡಾ ಮತ್ತು ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೂಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ:ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ ಮಹಾರಾಷ್ಟ್ರ:ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್ ಪಂಜಾಬ್: ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ:ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಚತ್ತೀಸ್‌ಘಡ್:ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು ಮಧ್ಯ ಪ್ರದೇಶ:ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ:ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೊತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು ಅಸ್ಸಾಂ : ಮುಗಾ ಮತ್ತು ಎರ್ರಿ ರೇಷ್ಮೆ ಸೀರೆಗಳು ಜಮ್ಮು ಮತ್ತು ಕಾಶ್ಮೀರ:ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು

ಪ್ರವೇಶ ಉಚಿತ
ಎಲ್ಲಾ ರೀತಿಯ ಕ್ರೆಡಿಟ್ ಹಾಗೂ ಡೆಬಿಟ್ ಕಾರ್ಡ್‌ಗಳನ್ನು ಸ್ವೀಕರಿಸುತ್ತೇವೆ
ಸಂಪರ್ಕಿಸಿ: 63641 65152, 99008 03345
Organised by : abhivruddhi

ವೈಟ್ ಪೆಟಲ್ಸ್
ಬಿ.ಎಂ.ಟಿ.ಸಿ. ಬಸ್ ಡಿಪೋ, ಮಾರುತಿ ಮಂದಿರದ ಹತ್ತಿರ, ವಿಜಯನಗರ, ಬೆಂಗಳೂರು

14 ರಿಂದ 23 ಮಾರ್ಚ್ 2025 ರವರೆಗೆ
ಬೆಳಿಗ್ಗೆ 10.30 ರಿಂದ ಸಂಜೆ 8.30 ರವರೆಗೆ

PUBLIC NOTICE

KARNATAKA STATE RIFLE ASSOCIATION
Sports Authority of India Complex, Bangalore University Campus, Mysore Road, Bangalore-560 056. Ph.: 91485 19777
Registered Under the Karnataka Societies Registration Act of 1904/Reg. No. S-926/53-54

MEETING NOTICE

Notice is hereby given for the Annual General Body Meeting which will be held on **Sunday, 6th April 2025** at **10:30 A.M** & Followed by **Election** of Karnataka State Rifle Association at **11:30 A.M** at VIJAYANAGAR CLUB (C.Chikkanna Auditorium) #1-4, Sri Hakka Road, 1st Main, 4th Cross, Hampi Nagar, Vijayanagar 2nd Stage, Bengaluru, Kamataka-560104.

For Karnataka State Rifle Association
Sd/- G Susheel
Hon. Secretary

Industrial & Factory

Out-Station

IMMEDIATE SALE: INDUSTRIAL LAND-5.71 Acres with 145000 sqft high roof sheds/buildings on Thally road, HOSUR. Call: 9059026979 (Genuine buyers only).

Residential/ Commercial

Singsandra

FOR SALE 55×50- 2750Sqft Site @ near Manipal County Signal Singasandra Metro Station Hosur Road, Rs. 8900/-persqft. Bengaluru-68. Contact: 6360169268

Sites

Vishweshwariah Layout

BDA 60X40 Site for sale. South facing Rs. 3.5Cr. Immediate Sale. Brokers Excuse. Contact:- 9448455164.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Agricultural Land

Mysore

100 ACRES AGRICULTURE LAND For SAL Nanjangud Taluk 35 Lakhs /acre Genuine Buyers Contact: 9739627282

Flat

Jayanagar

JAYANAGAR 8TH Block, ADARSHA RESIDENTIAL APARTMENT for SALE 3 BHK 2200 sft. All Amenities. 2 Carpark. 9880629468.

DH Classifieds More value, more impact | ಪ್ರಜಾವಾಣಿ

REAL ESTATE

BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY

@ 2481/-* FOR 15 WORDS

www.dhclassifieds.com
BOOK NOW

Book your ad with us now!
For more details contact:
+91 9845114560 | +91 9901641752
+91 9886213331
+91 9731810277 | +91 9900428036
080-45557163/164

*Conditions apply

PROPERTY CORNER

FOR SALE
Commercial land in Gouribidanur City for Sale Right Next to State Highway 9 Gouribidanur Hindupur Highway Bypass Consisting 1 Acre 2.5 Gunta, 1.4 km from RMC Market Gauribidanur. Expected Price Rs. 14.75 Lakh per Gunta.
Only genuine buyers need Contact :
9902948217 / 8453440291

BUSINESS

Business Offers

Finance

NRI'S INVESTMENTS and finance NOW available (HIGH VALUE FUNDS) on low interest against LANDs & PROPERTIES call -7204995189

TOURS & TRAVEL

Travel

VISIT BHUTAN, the most Wonderful Country with Expert Guide and Best Arrangements. GANESH SHENOY 8310028157

PERSONAL

Change of Name

CHANGE OF NAME AND DATE OF BIRTH

I, M. A. AMBUJA M/O 14268473X Ex Naik (TS) M. R. Nagendra residing at GF004, Garudadri Lavender Appartment, Judicial Layout, Thalaghattapura, Kanakapura Road Bangalore-560109 have changed my name from **M. A. AMBUJA and Date of birth 01.07.1930** (Existing name and Date of birth as per service documents) **and AMBUJA M. A. date of birth 26.04.1945** are one and the same affidavit dated 12.03.2025 at Bangalore sworn before advocate and Notary Sri L Puttaraju Bangalore.

I, BHAVISHYA Mandanna Balekuttira (Bhavishya B M) D/o Mandanna B M (Mandanna Machaiah Balekuttira) have changed my name to Bhavishya Mandanna vide affidavit Dtd 10-March-25 sworn before notary C Sharada.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಎಲ್ಲರಿಗೂ ಬಣ್ಣದ ಹೋಳಿ ಹಬ್ಬದ ಶುಭಾಶಯಗಳು!

ಹತ್ಯಾಕಾಂಡ ನಡೆದು ಕಾಲು ಶತಮಾನವಾದರೂ ಆರೋಪಿಗಳಿಗಿಲ್ಲ ಶಿಕ್ಷೆ • ಸುಪ್ರೀಂ ಕೋರ್ಟ್‌ನಲ್ಲಿದೆ ಮೇಲ್ಮನವಿ

ಕಂಬಾಲಪಲ್ಲಿ ಪರಿಶಿಷ್ಟರ ಸಜೀವ ದಹನಕ್ಕೆ 25 ವರ್ಷ

• ಡಿ.ಎಂ.ಕುರ್ಕೆ ಪ್ರಶಾಂತ್

ಚಿಕ್ಕಬಳ್ಳಾಪುರ: ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿ ಗ್ರಾಮದಲ್ಲಿ ನಡೆದ ಪರಿಶಿಷ್ಟರ ಸಜೀವ ದಹನದ ಅಮಾನುಷ ಘಟನೆ ನಡೆದು 25 ವರ್ಷವಾಗಿದೆ. ರಾಷ್ಟ್ರಮಟ್ಟದಲ್ಲಿ ಸದ್ದು ಮಾಡಿದ್ದ ಹತ್ಯಾಕಾಂಡದ ಬಗ್ಗೆ ಇಂದಿಗೂ ಚರ್ಚೆ ನಡೆಯುತ್ತಿದೆ. ಆದರೆ ಇಲ್ಲಿಯವರೆಗೆ ಆರೋಪಿಗಳಿಗೆ ಶಿಕ್ಷೆ ಆಗಿಲ್ಲ.

ರಾಜ್ಯದಲ್ಲಿ ನಡೆದ ಪರಿಶಿಷ್ಟರ ಹತ್ಯೆಗಳಲ್ಲಿ ಕಂಬಾಲಪಲ್ಲಿ ಪ್ರಕರಣ ಪ್ರಮುಖವಾದುದು. ಸಾಕ್ಷ್ಯಾಧಾರ ಇಲ್ಲ ಎಂದು ಆರೋಪಿಗಳು ಜಿಲ್ಲಾ ನ್ಯಾಯಾಲಯ ಮತ್ತು ಹೈಕೋರ್ಟ್‌ನಿಂದ ಖುಲಾಸೆಗೊಂಡಿದ್ದಾರೆ.

ನಂತರ ದಲಿತ ಸಂಘರ್ಷ ಸಮಿತಿಯ ಒತ್ತಡದಿಂದ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ. ಮೇಲ್ಮನವಿ ಸಲ್ಲಿಸಿ ದಶಕ ಕಳೆದರೂ ಪ್ರಕರಣದ ವಿಚಾರಣೆ ನಡೆದಿಲ್ಲ. ಹಲವಾರು ಹೋರಾಟ ನಡೆದರೂ ಆರೋಪಿಗಳಿಗೆ ಶಿಕ್ಷೆಯಾಗಿಲ್ಲ.

ಆ ರಾತ್ರಿ ನಡೆದದ್ದು ಏನು?: ಅವಿಭಜಿತ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕು ಕೇಂದ್ರದಿಂದ 30 ಕಿ.ಮೀ. ದೂರದಲ್ಲಿ ಕಂಬಾಲಪಲ್ಲಿ ಗ್ರಾಮವಿದೆ. 2000ದ ಮಾರ್ಚ್ 11ರ ಶನಿವಾರ ರಾತ್ರಿ ಎಂಟು ಗಂಟೆಗೆ ಒಕ್ಕಲಿಗ ಸಮುದಾಯದ ಗುಂಪು ಪರಿಶಿಷ್ಟರ ಮನೆಗಳ ಮೇಲೆ ದಾಳಿ ನಡೆಸಿತ್ತು.

ಒಕ್ಕಲಿಗರು ಹಾಗೂ ಪರಿಶಿಷ್ಟರ ನಡುವಿನ ಹಳೆಯ ವೈಷಮ್ಯ ಅಂದು ಸ್ಫೋಟವಾಗಿತ್ತು. ಪರಿಶಿಷ್ಟರ ಮನೆಗೆ ಬೆಂಕಿ ಹಚ್ಚಲಾಯಿತು. ಮೂವರು ಮಹಿಳೆಯರೂ ಸೇರಿದಂತೆ ಏಳು ಮಂದಿ ಪರಿಶಿಷ್ಟರನ್ನು ಸಜೀವವಾಗಿ ದಹಿಸಲಾಗಿತ್ತು.

ಕಂಬಾಲಪಲ್ಲಿಯಲ್ಲಿ ದಹನವಾದ ಮನೆ

ಚಿಂತಾಮಣಿಯಿಂದ ಕಂಬಾಲಪಲ್ಲಿಗೆ ರಾತ್ರಿ ಬಸ್‌ನಲ್ಲಿ ಬಂದು ಇಳಿದ ಗ್ರಾಮದ ನೀರಗಂಟಿ ಕೃಷ್ಣಾರೆಡ್ಡಿ ಅವರಿಗೆ ಗುಂಪೊಂದು ಚೂರಿಯಿಂದ ಇರಿಯಿತು. ಅವರು ಸ್ಥಳದಲ್ಲಿಯೇ ಮೃತಪಟ್ಟರು.

ಈ ಘಟನೆಯಿಂದ ಕೆರಳಿದ ಒಕ್ಕಲಿಗರು ದಲಿತರ ಕೇರಿಗೆ ನುಗ್ಗಿದರು. ಜೀವಭಯದಿಂದ ಮೂರು ಪರಿಶಿಷ್ಟ ಜಾತಿಯ ಕುಟುಂಬಗಳ ಏಳು ಸದಸ್ಯರು ಮೂರು ಮನೆಗಳ ಒಳಗೆ ಸೇರಿ ಚಿಲಕ ಹಾಕಿ ಬಾಗಿಲು ಭದ್ರಪಡಿಸಿಕೊಂಡರು.

ಆಕ್ರೋಶಗೊಂಡ ಗುಂಪು ಸೀಮೆಎಣ್ಣೆ ಸುರಿದು ಮನೆಗೆ ಬೆಂಕಿ ಹಚ್ಚಿತು. ಶ್ರೀರಾಮ, ಅಂಜಿನಪ್ಪ, ಚಿಕ್ಕಪಾಪಣ್ಣ, ನರಸಿಂಹಯ್ಯ, ಪಾಪಮ್ಮ, ಸುಬ್ಬಮ್ಮ, ರಾಮಕ್ಕ ಸುಟ್ಟು ಕರಕಲಾದರು. ಬೆಂಕಿ ನಂದಿಸಲು ಬಂದ ಅಗ್ನಿಶಾಮಕ ಸಿಬ್ಬಂದಿಯನ್ನು ತಡೆಯಲಾಯಿತು.

ದುರ್ಘಟನೆ ಕುರಿತು ಲೋಕಸಭೆಯಲ್ಲಿ ಚರ್ಚೆಗಳು ನಡೆದವು. ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿ, ಅಂದಿನ ಮುಖ್ಯಮಂತ್ರಿ ಎಸ್‌.ಎಂ. ಕೃಷ್ಣ, ಗೃಹ ಸಚಿವ ಮಲ್ಲಿಕಾರ್ಜುನ ಖರ್ಗೆ, ಕೇಂದ್ರ ಸಚಿವ ರಾಮ್‌ವಿಲಾಸ್ ಪಾಸ್ವಾನ್ ಸೇರಿದಂತೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ನಾಯಕರು ಕಂಬಾಲಪಲ್ಲಿಗೆ ಭೇಟಿ ನೀಡಿದ್ದರು.

ಘಟನೆಯಲ್ಲಿ 32 ಜನರನ್ನು ಆರೋಪಿಗಳನ್ನಾಗಿ ಗುರುತಿಸಲಾಯಿತು. ದೀರ್ಘ ವಿಚಾರಣೆ ನಂತರ 2007ರ ಡಿ. 4ರಂದು ಕೋಲಾರದ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಆರೋಪಿಗಳ ವಿರುದ್ಧ ಯಾವುದೇ ಸಾಕ್ಷ್ಯ ಇಲ್ಲದ ಕಾರಣ ಆರೋಪಮುಕ್ತಗೊಳಿಸಿ ತೀರ್ಪು ನೀಡಿತು.

ವಿಚಾರಣೆ ಅವಧಿಯಲ್ಲಿ 40 ಸಾಕ್ಷಿಗಳು ವಿರುದ್ಧ ಹೇಳಿಕೆ ನೀಡಿದ್ದರು. ಆ ಪರಿಣಾಮ 32 ಆರೋಪಿಗಳನ್ನು ಆರೋಪಮುಕ್ತಗೊಳಿಸಲಾಗಿತ್ತು.

ಈ ಆದೇಶದ ವಿರುದ್ಧ ಸರ್ಕಾರ ಸಲ್ಲಿಸಿದ್ದ ಮೇಲ್ಮವಿಯ ವಿಚಾರಣೆ ನಡೆಸಿದ ಹೈಕೋರ್ಟ್ 2014ರ ಆ. 21ರಂದು ಕೋಲಾರ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದಿತ್ತು. 14 ವರ್ಷಗಳ ಅವಧಿಯಲ್ಲಿ ಪ್ರಕಟವಾದ ಎರಡನೇ ಆದೇಶದಲ್ಲಿಯೂ ಆರೋಪಿಗಳು ಆರೋಪಮುಕ್ತರಾಗಿದ್ದರು.

ಹೀಗೆ ಪರಿಶಿಷ್ಟರ ಮೇಲೆ ನಡೆದ ಅಮಾನುಷ ಹತ್ಯಾಕಾಂಡ ಕಾಲು ಶತಮಾನ ಪೂರ್ಣಗೊಳಿಸಿದೆ. ಮೇಲ್ಮನವಿ ಸುಪ್ರೀಂ ಕೋರ್ಟ್‌ನಲ್ಲಿದೆ. ದಸಂಸ ನೇತೃತ್ವದಲ್ಲಿ ಹೋರಾಟಗಳು ನಡೆದರೂ ಆರೋಪಿಗಳಿಗೆ ಮಾತ್ರ ಶಿಕ್ಷೆಯಾಗಿಲ್ಲ. ದಲಿತ ಚಳವಳಿಗಳ ಒಡಲಿನಲ್ಲಿ ಕಂಬಾಲಪಲ್ಲಿಯ ಹತ್ಯಾಕಾಂಡ ಆರದ ಕೆಂಡವಾಗಿದೆ.

ಮರೀಚಿಕೆ ಆಯಿತೇ ನ್ಯಾಯ?

ಕಂಬಾಲಪಲ್ಲಿ ದಲಿತರ ಹತ್ಯಾಕಾಂಡದ ಪ್ರಮುಖ ಸಾಕ್ಷಿ ಹಾಗೂ ಕುಟುಂಬದ 5 ಜನರನ್ನು ಕಳೆದುಕೊಂಡು ನ್ಯಾಯಕ್ಕಾಗಿ ಕೊನೆಯವರೆಗೂ ಹೋರಾಟ ನಡೆಸಿದ ವೆಂಕಟರಾಯಪ್ಪ 2017ರಲ್ಲಿ ನಿಧನರಾದರು. ನ್ಯಾಯಕ್ಕಾಗಿ ಅವರ ಹಂಬಲ ಇಂದಿಗೂ ಈಡೇರಿಲ್ಲ.

ವೆಂಕಟರಾಯಪ್ಪ ಅವರ ಪತ್ನಿ ರಾಮಕ್ಕ, ಪುತ್ರಿ ಪಾಪಮ್ಮ, ಪುತ್ರರಾದ ಅಂಜನಪ್ಪ, ಶ್ರೀರಾಮ, ನರಸಿಂಹಯ್ಯ ಸಜೀವವಾಗಿ ದಹನವಾಗಿದ್ದರು. ವೆಂಕಟರಾಯಪ್ಪ 78ನೇ ವರ್ಷದಲ್ಲಿ ಮೃತಪಟ್ಟರು. ಸಾಯುವವರೆಗೂ ಅವರು ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿದ್ದರು. ಕೊನೆಗೂ ನ್ಯಾಯ ಅವರಿಗೆ ಮರೀಚಿಕೆಯಾಯಿತು.

‘ವ್ಯವಸ್ಥೆಯನ್ನೇ ಬಳಸಿಕೊಳ್ಳುವ ಪ್ರಬಲರು’

ಗಡ್ಡಂ ವೆಂಕಟೇಶ್

‘ಜಿಲ್ಲಾ ನ್ಯಾಯಾಲಯದಲ್ಲಿ ಮತ್ತು ಹೈಕೋರ್ಟ್‌ನಲ್ಲಿ ಪ್ರಕರಣ ಖುಲಾಸೆ ಆಯಿತು. ನಂತರ ಸರ್ಕಾರದ ಮೇಲೆ ಒತ್ತಡ ತಂದು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವಂತೆ ಮಾಡಿದ್ದೇವೆ. ಎಂ.ಎನ್. ರಾವ್ ಅವರು ಪ್ರಕರಣದ ವಕಾಲತ್ತು ವಹಿಸಿದ್ದಾರೆ’ ಎಂದು ಕಂಬಾಲಪಲ್ಲಿ ಪ್ರಕರಣದಲ್ಲಿ ಹೋರಾಟ ನಡೆಸುತ್ತಿರುವ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಗಡ್ಡಂ ಎನ್.ವೆಂಕಟೇಶ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಜಾತಿ ಆಧಾರಿತ ಸಮಾಜ ನಮ್ಮದು. ಕೊಲೆಗಡುಕರ ಪರವಾಗಿಯೂ ಪ್ರಬಲ ಸಮುದಾಯಗಳು ನಿಲ್ಲುತ್ತವೆ. ಇವರು ವ್ಯವಸ್ಥೆಯ ಎಲ್ಲ ವಿಚಾರದಲ್ಲಿಯೂ ಪ್ರಭಾವ ಬೀರುತ್ತಾರೆ. ವ್ಯವಸ್ಥೆಯನ್ನು ತಮಗೆ ಬೇಕಾದ ರೀತಿಯಲ್ಲಿ ರೂಪಿಸಿಕೊಳ್ಳುತ್ತಾರೆ’ ಎಂದರು.

ದಹನವಾದ ಕುಟುಂಬಗಳ ಅಕ್ಕ ತಂಗಿಯರು ಇದ್ದಾರೆ. ಸಮಾಜ ಕಲ್ಯಾಣ ಇಲಾಖೆಯಿಂದ ಆ ಕುಟುಂಬಗಳಿಗೆ ಉದ್ಯೋಗ ನೀಡಲಾಗಿದೆ. ಆದರೆ ಅಂದಿನ ದುರ್ಘಟನೆ ಆ ಕುಟುಂಬಗಳ ಸ್ಮೃತಿಯಿಂದ ಮಾಸಿಲ್ಲ. ಅವರ ಮನೆಯಲ್ಲಿ ದಹನವಾದವರ ಚಿತ್ರಗಳು ಇವೆ ಎಂದು ತಿಳಿಸಿದರು.

ಬೆಂಗಳೂರು ರೇಸ್

ಕ್ಸಾರ್ ಗೆಲ್ಲುವ ನಿರೀಕ್ಷೆ

ಮದ್ರಾಸ್ ರೇಸ್ ಕ್ಲಬ್ ಟ್ರೋಫಿ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕ್ಸಾರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಚರಿಸ್ಮಾಟಿಕ್ 1, ಜಿವಾ 8, ಸ್ಟಾರ್ ಸ್ಟಡೆಡ್ 3
2ನೇ ರೇಸ್: ಸ್ಟೆಂಟೋರಿಯನ್ 6, ವಫಾದಾರ್ 5, ದಿವಿಸ್ಪರ್‌ಕ್ವೈಯೆಟ್ಲ 1
3ನೇ ರೇಸ್: ಅಥರ್ವ್ 1, ಫ್ಲೇಮಿಂಗ್ ಸ್ಪೋರ್ಡ್ 3, ಹುಸನಾರ 7
4ನೇ ರೇಸ್: ಇನ್ವಿನ್ಸಿಬಲ್ 2, ಆಗಸ್ಟೊ 7, ಸ್ಪ್ರಿಂಗ್‌ಸ್ಟೀನ್ 6
5ನೇ ರೇಸ್: ಕ್ಸಾರ್ 2, ಆಲ್ಡ್‌ಗೇಟ್ 3, ಮೆಟ್‌ಜಿಂಗರ್ 7
6ನೇ ರೇಸ್: ವಿನ್‌ಫೀಲ್ಡ್ 8, ವೆರ್ರಾಜಾನೊ 4, ಲಾರ್ಡ್ ಗ್ರೇಸ್ 5
7ನೇ ರೇಸ್: ಡಫಿ 3, ಅಗೆರಾ 1, ಸೂಪರ್‌ಕೈಂಡ್ 5

ಉತ್ತಮ ಬೆಟ್: ಸ್ಟೆಂಟೋರಿಯನ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
3,4,5,6,7	2,3,4	5,6,7

ಹೋಳಿ ಹಬ್ಬ: ಹಿಂದಿ ಪರೀಕ್ಷೆ ಬರೆಯಲು ಇನ್ನೊಂದು ಅವಕಾಶ

ನವದೆಹಲಿ (ಪಿಟಿಐ): ಮಾರ್ಚ್ 15ಕ್ಕೆ ನಿಗದಿ ಆಗಿರುವ 12ನೆಯ ತರಗತಿಯ ಹಿಂದಿ ಪರೀಕ್ಷೆಗೆ ಹಾಜರಾಗಲು ಹೋಳಿ ಹಬ್ಬದ ಕಾರಣಕ್ಕಾಗಿ ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಇನ್ನೊಂದು ಅವಕಾಶ ಸಿಗಲಿದೆ ಎಂದು ಸಿಬಿಎಸ್‌ಇ ಗುರುವಾರ ಹೇಳಿದೆ.

‘ದೇಶದ ಕೆಲವು ಕಡೆಗಳಲ್ಲಿ ಹೋಳಿ ಹಬ್ಬವನ್ನು ಮಾರ್ಚ್ 15ರಂದು ಆಚರಿಸಲಾಗುತ್ತದೆ ಎಂದು ನಮಗೆ ಮಾಹಿತಿ ನೀಡಲಾಗಿದೆ’ ಎಂದು ಸಿಬಿಎಸ್‌ಇ ಪರೀಕ್ಷಾ ನಿಯಂತ್ರಕ ಸನ್ಯಂ ಭಾರದ್ವಾಜ್ ಹೇಳಿದ್ದಾರೆ.

ಮಾರ್ಚ್ 15ರ ಪರೀಕ್ಷೆಯು ನಿಗದಿಯಂತೆ ನಡೆಯಲಿದೆ. ಆದರೆ ಅಂದು ಪರೀಕ್ಷೆಗೆ ಹಾಜರಾಗಲು ಆಗದ ವಿದ್ಯಾರ್ಥಿಗಳಿಗೆ ಇನ್ನೊಂದು ದಿನ ಪರೀಕ್ಷೆ ನಡೆಯಲಿದೆ. ರಾಷ್ಟ್ರೀಯ ಅಥವಾ ಅಂತರ-ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ವಿಶೇಷವಾಗಿ ಪರೀಕ್ಷೆ ನಡೆಸುವಾಗ ಇವರಿಗೂ ಪರೀಕ್ಷೆ ಬರೆಯಲು ಅವಕಾಶ ಸಿಗುತ್ತದೆ ಎಂದು ತಿಳಿಸಿದ್ದಾರೆ.

ನಗರದಲ್ಲಿ ಇಂದು

ಸಂತ ತುಕಾರಾಮ ಮಹಾರಾಜರ ಸಪ್ತಾಹ ದಿಂಡಿ ಉತ್ಸವ: ಬೆಳಿಗ್ಗೆ 10ಕ್ಕೆ ಅಭಿಷೇಕ, ಕಳಶ ಸ್ಥಾಪನೆ, ಅಖಂಡ ವೀಣಾ ಜಾಗರಣೆಯೊಂದಿಗೆ ಸಪ್ತಾಹ ಪ್ರಾರಂಭ, ಬೆಳಿಗ್ಗೆ 11.30ಕ್ಕೆ ಸಾಂಪ್ರದಾಯಿಕ ಪಂಢರಿ ಭಜನೆ, ಮಹಾಮಂಗಳಾರತಿ, ಸಂಜೆ 5.30ರಿಂದ ಪ್ರವಚನ, ರಾತ್ರಿ 7.30ರಿಂದ ಭಜನೆ, ಕೀರ್ತನೆ, ಆಯೋಜನೆ ಮತ್ತು ಸ್ಥಳ: ನಂಜುಂಡೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್, ರಂಗಸ್ವಾಮಿ ಗುಡಿಬೀದಿ, ಗುಡುಮ್ಮೈಯ್ಯನಪೇಟೆ, ಆರ್‌.ಟಿ. ಸ್ಟ್ರೀಟ್.

ರಾಮ್‌ಪ್ರಸಾತ್ ಮನೋಹರ್

‘ಜಲಪಥ’ ವಿಚಾರಸಂಕಿರಣ ಸರಣಿ ಸಂಚಿಕೆ–1: ‘ಮಳೆ ನೀರು ಕೊಯ್ಲು ಮತ್ತು ಅಂತರ್ಜಲ ಸಂರಕ್ಷಣೆ’ ಉಪನ್ಯಾಸ: ದೇವರಾಜ್ ರೆಡ್ಡಿ ಎನ್‌.ಜೆ., ಮಹಿಳಾ ದಿನಾಚರಣೆ ಅಂಗವಾಗಿ ಗೌರವ ಪ್ರದಾನ: ಲೀನಾ ಎಸ್. ನಾಯಕ್, ಚಂದ್ರಪ್ರಭ ಎ.ವಿ., ಅಧ್ಯಕ್ಷತೆ: ಡಾ. ರಾಮ್‌ಪ್ರಸಾತ್ ಮನೋಹರ್, ಆಯೋಜನೆ: ಬೆಂಗಳೂರು ಜಲಮಂಡಳಿ ಎಂಜಿನಿಯರ್‌ಗಳ ಸಂಘ, ಸ್ಥಳ: ಜಲಮಂಡಳಿಯ ಸಭಾಂಗಣ, ನಾಲ್ಕನೇ ಮಹಡಿ, ಬೆಂಗಳೂರು ಜಲಮಂಡಳಿ ಕಾವೇರಿ ಭವನ, ಕೆ.ಜಿ. ರಸ್ತೆ, ಮಧ್ಯಾಹ್ನ 3.30

ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ ವಚನಕಾರ್ತಿಯರ ದಿನಾಚರಣೆ: ಉದ್ಘಾಟನೆ: ರೇಖಾ ಪ್ರಕಾಶ್, ಅಧ್ಯಕ್ಷತೆ: ಶಾಂತ ಕೊಟ್ರೇಶ್, ಅಭಿನಂದಿತರು: ಮುಕ್ತಾಂಬ ಬಸವರಾಜು, ಅತಿಥಿಗಳು: ರೂಪ ಜಗದೀಶ್, ಇಂದಿರಾ ಬಸವರಾಜು, ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಭೈರವ ರಾಗ ಅಂಗಳ, ವಿಜಯನಗರ ಮೆಟ್ರೊ ನಿಲ್ದಾಣದ ಸಮೀಪ, ವಿಜಯನಗರ, ಸಂಜೆ 4.30

ದ್ವಾರನಕುಂಟೆ ಪಾತಣ್ಣ–75ರ ಸಂಭ್ರಮ, ‘ದ್ವಾರನಕುಂಟೆ ಪಾತಣ್ಣ ಕಾದಂಬರಿ ಪ್ರಶಸ್ತಿ’ ಪ್ರದಾನ: ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ಬಿ.ಎಂ. ಹನೀಫ್, ಅತಿಥಿಗಳು: ವೂಡೇ ಪಿ. ಕೃಷ್ಣ, ಎಸ್. ಆರ್. ವಿಜಯಶಂಕರ್, ಅನುಪಮಾ ಪ್ರಸಾದ್, ಪ್ರಶಸ್ತಿ ಸ್ವೀಕರಿಸುವವರು: ತುಂಬಾಡಿ ರಾಮಯ್ಯ, ಗುರುಪ್ರಸಾದ್ ಕಂಟಲಗೆರೆ, ಉಪಸ್ಥಿತಿ: ದ್ವಾರನಕುಂಟೆ ಪಾತಣ್ಣ, ಆಯೋಜನೆ: ದ್ವಾರನಕುಂಟೆ ಪಾತಣ್ಣ ಪ್ರತಿಷ್ಠಾನ, ಸ್ಥಳ: ಶೇಷಾದ್ರಿಪುರಂ ಕಾಲೇಜಿನ ಸಭಾಂಗಣ, ಶೇಷಾದ್ರಿಪುರ, ಸಂಜೆ 5

ಬಿ.ವಿ. ರಾಜಾರಾಂ

ರಂಗ ಯುಗಾದಿ ಸಮಾರೋಪ ಸಮಾರಂಭ, ಮೇಕಪ್ ನಾಣಿ ಪ್ರಶಸ್ತಿ ಪ್ರದಾನ: ಬಿ.ವಿ. ರಾಜಾರಾಂ, ಪ್ರಶಸ್ತಿ ಸ್ವೀಕರಿಸುವವರು: ವಿಜಯ್ ಬೆಣಚ, ಅತಿಥಿ: ಕನ್ನಪ್ಪಾಡಿ ರಾಮಕೃಷ್ಣ, ‘ಕನ್ನಡಕ್ಕೊಬ್ಬನೆ ಕೈಲಾಸಂ’ ನಾಟಕ ಪ್ರದರ್ಶನ: ಮೂಲ: ಬಿ.ಎಸ್. ಕೇಶವರಾವ್, ರಂಗರೂಪ: ಶ್ರೀಧರ್ ಯಡ್ರಾವಿ, ಆಯೋಜನೆ: ಅಂತರಂಗ, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಸಂಜೆ 6.30

ಸೇಂಟ್ ಪಾಲ್ಸ್ ನ್ಯಾಷನಲ್ ಮೀಡಿಯಾ ಅವಾರ್ಡ್ಸ್–2025: ಅತಿಥಿಗಳು: ಬಿ.ಕೆ. ರವಿ, ಮಮತಾ ಬಿ.ಆರ್., ಆಯೇಷಾ ಖಾನುಂ, ಥಾಮಸ್ ಎಂ.ಜೆ., ಆಯೋಜನೆ ಮತ್ತು ಸ್ಥಳ: ಸೇಂಟ್ ಪಾಲ್ಸ್ ಕಾಲೇಜಿನ ಸಭಾಂಗಣ, ನಾಗಸಂದ್ರ, ಸಂಜೆ 5

ಕಾಳೇಗೌಡ ನಾಗವಾರ

‘ಶಾಂತವೇರಿ ಗೋಪಾಲಗೌಡ’ ಪ್ರಶಸ್ತಿ ಪ್ರದಾನ: ಬಸವರಾಜ ಹೊರಟ್ಟಿ, ಪ್ರಶಸ್ತಿ ಸ್ವೀಕರಿಸುವವರು: ಕಾಳೇಗೌಡ ನಾಗವಾರ, ಅಧ್ಯಕ್ಷತೆ: ಎಲ್‌.ಎನ್. ಮುಕುಂದರಾಜ್, ಅತಿಥಿ: ಬಿ. ಕೃಷ್ಣಪ್ಪ, ಉಪಸ್ಥಿತಿ: ಪಿ. ಮಲ್ಲಿಕಾರ್ಜುನಪ್ಪ, ಪ್ರಾಸ್ತಾವಿಕ ನುಡಿ: ಸಿ.ಕೆ. ರಾಮೇಗೌಡ, ಆಯೋಜನೆ: ಕನ್ನಡ ಜನಶಕ್ತಿ ಕೇಂದ್ರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಮೊಬೈಲ್ ಬ್ರಿಡ್ಜ್ ಶಾಲೆ ಮತ್ತು ಗ್ರಂಥಾಲಯದ ಉದ್ಘಾಟನೆ: ಅತಿಥಿಗಳು: ವಿ. ಶ್ರೀನಿವಾಸ್ ಮೂರ್ತಿ, ಎಚ್. ರಾಜೇಂದ್ರ ರೈ, ದೀಪಾ ಶಶೀಂದ್ರನ್, ಆಯೋಜನೆ: ರೋಟರಿ ಬೆಂಗಳೂರು ರಾಜಮಹಲ್ ವಿಲಾಸ್, ಸ್ಥಳ: ಆರ್‌ಎಂವಿ ಕ್ಲಬ್ ಹೌಸ್, ಆರ್‌ಎಂವಿ, ಸಂಜೆ 5.30

ಯೋಗಿನಾರೇಯಣ ಯತೀಂದ್ರರ ಜಯಂತಿ (ಕೈವಾರ ತಾತಯ್ಯ): ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5ರಿಂದ (ಸಭಾ ಕಾರ್ಯಕ್ರಮ ಸಂಜೆ 6ಕ್ಕೆ)

ಮಹಿಳಾ ಹುಣ್ಣಿಮೆ ಹಾಡು: ಗಾಯನ: ಸೀಮಾ ರಾಯ್ಕರ್, ಸವಿತಾ ಗಣೇಶ್ ಪ್ರಸಾದ್, ಪ್ರಭಾ ಜ.ಇನಾಂದಾರ್, ಅರ್ಪಿತಾ ವೇಣು, ಶ್ವೇತಾ ಪ್ರಭು, ಕೀ-ಬೋರ್ಡ್: ಪರಶುರಾಮ್ ಬಿಜಾಪುರ, ತಬಲಾ: ಪುಟ್ಟರಾಜು ಗೋನಾಲ್, ಕೊಳಲು: ಸಮರ್ಥ ಹೆಗಡೆ, ರಿದಮ್ ಪ್ಯಾಡ್: ಶಂಕರ್ ದಾವಣಗೆರೆ, ಗಿಟಾರ್: ವಿಲ್ಸನ್, ಸನ್ಮಾನಿತರು: ವಿಜಯಲಕ್ಷ್ಮೀ ಶಿಬರೂರು, ಎಸ್. ಉಮಾ ರಾಣಿ, ಅಂಜು ಮಾಲಾ ನಾಯಕ್, ಉಪಸ್ಥಿತಿ: ಬಾಲಚಂದ್ರ, ಬಿ.ಕೆ. ಶಿವರಾಂ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗ ಮಂದಿರ, ಮಲ್ಲೇಶ್ವರ, ಸಂಜೆ 6.30

ಶೈಕ್ಷಣಿಕ ಅನರ್ಹತೆ: ತನಿಖಾ ತಂಡ ರಚನೆ

ಮಂಡ್ಯ: ‘ಜಿಲ್ಲೆಯ ನಿರ್ಮಿತಿ ಕೇಂದ್ರದಲ್ಲಿ ಸೈಟ್ ಎಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಮೂವರು ನೌಕರರು ಹುದ್ದೆಗೆ ಪೂರಕವಾದ ವಿದ್ಯಾರ್ಹತೆ ಹೊಂದಿಲ್ಲ’ ಎಂಬ ದೂರಿನ ಮೇರೆಗೆ, ದಾಖಲೆ ಪರಿಶೀಲಿಸಲು ಜಿಲ್ಲಾಧಿಕಾರಿಯು ತನಿಖಾ ತಂಡ ರಚಿಸಿದ್ದಾರೆ. ಸೈಟ್ ಎಂಜಿನಿಯರ್‌ಗಳಾದ ಬಿ.ಎಲ್. ವೇಣುಗೋಪಾಲ್, ಪ್ರಶಾಂತ್ ಹಾಗೂ ಎಂಜಿನಿಯರ್ ಶ್ರೀಧರ್ ವಿರುದ್ಧ ಮಂಡ್ಯದ ಕಲ್ಲಹಳ್ಳಿಯ ಕೆ.ಆರ್. ರವೀಂದ್ರ ದೂರು ನೀಡಿದ್ದರು.

ಹೆಚ್ಚುವರಿ ಜಿಲ್ಲಾಧಿಕಾರಿ ಶಿವಾನಂದ ಮೂರ್ತಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಕಾರ್ಯಪಾಲಕ ಎಂಜಿನಿಯರ್ ಪ್ರತಾಪ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಾಘವೇಂದ್ರ ಅವರಿರುವ ತಂಡ ಪರಿಶೀಲನೆ ನಡೆಸಲಿದೆ.

ಗೋಕಾಕ ಶಿಕ್ಷಣ ಸಂಸ್ಥೆಯ
ಜೆ.ಎಸ್.ಎಸ್. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯ, ಗೋಕಾಕ-591307
NAAC ACCREDITATION 'A' GRADE
ಜಿಲ್ಲಾ : ಬೆಳಗಾವಿ ಬಸವೇಶ್ವರ ವೃತ್ತ, ಫಾಲ್ಸ್ ರೋಡ್ ರಾಜ್ಯ : ಕರ್ನಾಟಕ
ಫೋನ ನಂ. 08332-225141/229592
ಇ-ಮೇಲ್ : jssgokak@gmail.com ವೆಬ್‌ಸೈಟ್ : www.jssgokak.in
ತಿದ್ದುಪಡಿ
ದಿನಾಂಕ 12-03-2025 ರಂದು ಬಂದ ನೇಮಕಾತಿ ಪ್ರಕಟಣೆಯಲ್ಲಿ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ವಯೋಮಿತಿಯನ್ನು 18 ರಿಂದ 40 ಮತ್ತು ಅರ್ಹತೆಯನ್ನು ಪಿಯುಸಿ ಅಥವಾ ತತ್ಸಮಾನ ಎಂದು ಓದಿಕೊಳ್ಳತಕ್ಕದ್ದು.
ಸಹಿ/- ಶ್ರೀ ವ್ಹಿ.ಎ. ಕಡಕೋಳ ಚೇರಮನ್ನರು, ಆಡಳಿತ ಮಂಡಳಿ, ಗೋ.ಶಿ. ಸಂಸ್ಥೆ, ಗೋಕಾಕ
ಸಹಿ/- ಡಾ|| ಯು.ಬಿ. ಆಜರಿ ಚೇರಮನ್ನರು, ವಿಶ್ವಸ್ಥ ಮಂಡಳಿ, ಗೋಶಿ. ಸಂಸ್ಥೆ, ಗೋಕಾಕ

This Ugadi, bring home your favorite Kia with festive benefits. Visit your nearest dealership today to unlock the best benefits and discover our full range of services.

No.1 in Customer Experience~

Exclusive ownership benefits*

Exchange Benefits up to ₹40 000 (on Seltos, Sonet & Carens)	Extended Warranty** worth up to ₹27 000 (on Seltos & Carens)	Free maintenance for 3 years or 30 000 kms (on Sonet)	Accessories up to ₹10 000 (on Seltos & Sonet)

Now avail hassle-free exchange services.

Car evaluation at your convenience | Best price for your old car | Hassle-free transfer of ownership | Complete assurance of your car going into the right hands | Exclusive insurance and finance benefits

Exclusive scrappage benefits of up to ₹20 000/-^ | Additional benefits for select corporates
Kia cars are now available through Canteen Stores Department (CSD) & Kendriya Police Kalyan Bhandar (KPKB).

For more information, visit our dealership or contact:
1800 108 5000 | 093195 91407 | www.kia.com | Book Kia | kiacare@kiaindia.net | Look for "Kia India" @

*Terms & condition apply. Offer applicable only in Bangalore, Hyderabad and Chennai. ~Source: 2024 CEI Survey by FADA in Collaboration with Frost & Sullivan. **Free 2 years extended warranty applicable on Seltos (turbo & diesel) and Carens (turbo & diesel) trims only. ^Defined benefit is 1.5% of the value of Ex-showroom price of the purchased car or up to ₹ 20 000 which-ever is lower. The product shown is for representation purposes only. Actual features, colors, and specifications may not be part of standard fitment and may vary. Kia India Pvt. Ltd. reserves the right to make any changes with respect to the trims, colors, specifications, and other details of any model as mentioned or to modify/discontinue any offer/scheme/service without prior notice. These are meant to keep you safe on the roads. Visit your nearest Kia dealership for more details. Kia urges you to follow traffic rules.

Epitome Kia: Whitefield, Tel: 9606970216; Yelahanka, Tel: 7406343339; Kolar, Tel: 8951903224; Avalahalli, Tel: 7022317666 **PPS Kia:** Mysore Road, Tel: 6309990010; Tumkur, Tel: 6303622210 **JSP Kia:** Hosur Road, Tel: 9606011244; Bellandur, Tel: 9071077717; Sarjapur, Tel: 9513138856 **Advaith Kia:** Lalbagh Main Road, Tel: 9611006006, 6364871021; Banashankari, Tel: 6364871022; Basaveshwar Nagar, Tel: 6364871024; Magadi Road, Tel: 6364871023 **Naara Kia:** J.P Nagar, Tel: 7406528200; Kanakapura Road, Bangalore, Tel: 9071010099 **VST Kia:** Palace Road: Tel: 9606988123; Yeshwanthpur: Tel: 9606988124 **Taapasi Kia:** Kalyan Nagar, Tel: 8095537777; Kormangala, Tel: 9071177333

ಶುಕ್ರವಾರ • ಮಾರ್ಚ್ 14, 2025 ಪ್ರಜಾವಾಣಿ

ಬೀದಿನಾಯಿ ಕರೆತಂದು ತೊಂದರೆ ಇಬ್ಬರ ವಿರುದ್ಧ ಎಫ್ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಬ್ಬಲೂರಿನ ಸರ್ಜಾಪುರದ ಸನ್‌ಸಿಟಿ ಅಪಾರ್ಟ್‌ಮೆಂಟ್‌ಗೆ ಬೀದಿನಾಯಿಗಳನ್ನು ಕರೆತಂದು ಮಾಂಸಾಹಾರ ಹಾಕಿ ನಿವಾಸಿಗಳಿಗೆ ತೊಂದರೆ ನೀಡುತ್ತಿದ್ದ ಆರೋಪದ ಮೇಲೆ ಇಬ್ಬರ ವಿರುದ್ಧ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ಮೀನು ಸಿಂಗ್ ಹಾಗೂ ದೀಪಾ ಬಳವಳ್ಳಿ ವಿರುದ್ಧ ಎಫ್ಐಆರ್ ದಾಖಲಾಗಿದೆ. ಅಪಾರ್ಟ್‌ಮೆಂಟ್‌ನ ನಿವಾಸಿ ವಿ.ರಾಮಚಂದ್ರನ್ ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಅಪಾರ್ಟ್‌ಮೆಂಟ್‌ಗೆ ನಾಯಿಗಳನ್ನು ಕರೆತಂದು ಮಾಂಸಾಹಾರ ಹಾಕಿ ಅಲ್ಲಿಂದ ನಾಯಿಗಳು ಹೊರಕ್ಕೆ ಹೋಗದಂತೆ ಮಾಡಿದ್ದಾರೆ. ವೃದ್ಧರು, ಮಹಿಳೆಯರು ಹಾಗೂ ಮಕ್ಕಳು ಫ್ಲ್ಯಾಟ್‌ನಿಂದ ಹೊರಕ್ಕೆ ಹೋಗಲು ತೊಂದರೆ ಆಗುತ್ತಿದೆ. ಕಾರಿನ ಕೆಳಗೆ ನಾಯಿಗಳು ಬರುವುದು, ಕಾರಿನ ಎದುರು ಬರುವುದು ಮಾಡುತ್ತಿವೆ. ಮಕ್ಕಳು ಆಟವಾಡಲೂ ಹೊರಕ್ಕೆ ತೆರಳುತ್ತಿಲ್ಲ. ಪ್ರಶ್ನಿಸಿದರೆ, ಇಬ್ಬರು ಆರೋಪಿಗಳು ನಮ್ಮನ್ನೇ ನಿಂದಿಸಿದ್ದಾರೆ’ ಎಂದು ಆರೋಪಿಸಿ ದೂರು ನೀಡಲಾಗಿದೆ.

ಇದಕ್ಕೂ ಮೊದಲು ಈ ವಿಚಾರವು ಸದನದಲ್ಲಿ ಪ್ರಸ್ತಾಪವಾಗಿತ್ತು. ಬೊಮ್ಮನಹಳ್ಳಿ ಶಾಸಕ ಸತೀಶ್‌ರೆಡ್ಡಿ ಅವರು ಶೂನ್ಯವೇಳೆಯಲ್ಲಿ ಸರ್ಕಾರದ ಗಮನ ಸೆಳೆದಿದ್ದರು.

‘ನನ್ನ ಕ್ಷೇತ್ರದ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಮಹಿಳೆಯೊಬ್ಬರು ಹಲವು ಬೀದಿ ನಾಯಿಗಳನ್ನು ಕರೆದುಕೊಂಡು ಬರುತ್ತಾರೆ. 20ನೇ ಮಹಡಿಯಲ್ಲಿರುವ ತಮ್ಮ ಫ್ಲ್ಯಾಟ್‌ಗೆ ಕರೆದುಕೊಂಡು ಹೋಗುತ್ತಾರೆ. ಪಾರ್ಕಿಂಗ್ ಜಾಗಕ್ಕೂ ಕರೆದುಕೊಂಡು ಹೋಗುತ್ತಾರೆ. ಇದರಿಂದ ಅಪಾರ್ಟ್‌ಮೆಂಟ್ ವಾಸಿಗಳಿಗೆ ತೊಂದರೆ ಆಗಿದೆ’ ಎಂದು ಸತೀಶ್‌ರೆಡ್ಡಿ ಹೇಳಿದರು.

‘ಮಹಿಳೆಯ ನೆರೆ ಮನೆಯವರು, ಇದನ್ನು ಆಕ್ಷೇಪಿಸಿದ್ದಕ್ಕೆ ಅವರ ವಿರುದ್ಧ ಪೊಲೀಸರಿಗೆ ದೂರು ನೀಡಿ ಅತ್ಯಾಚಾರದ ಪ್ರಕರಣವನ್ನು ದಾಖಲಿಸಿದ್ದರು. ಆದ್ದರಿಂದ ಈ ಮಹಿಳೆಯ ಮೇಲೆ ಕ್ರಮ ತೆಗೆದುಕೊಂಡು ಬೀದಿ ನಾಯಿಗಳ ಕಾಟದಿಂದ ತಪ್ಪಿಸಬೇಕು’ ಎಂದು ಅವರು ಮನವಿ ಮಾಡಿದರು.

ಈ ಬಗ್ಗೆ ಬಿಬಿಎಂಪಿಗೆ ತಿಳಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗುವುದು ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಗನ್ ತೋರಿಸಿ ಹಣಕ್ಕಾಗಿ ಬೆದರಿಕೆ

ಬೆಂಗಳೂರು: ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ವ್ಯಕ್ತಿಯನ್ನು ಅಡ್ಡಗಟ್ಟಿ ಅಪಹರಿಸಿ ಗನ್ ತೋರಿಸಿ ಹಣಕ್ಕೆ ಬೇಡಿಕೆಯಿಟ್ಟಿದ್ದ ಆರು ಮಂದಿ ಅಪರಿಚಿತರ ವಿರುದ್ಧ ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಶ್ಚಿಮ ಬಂಗಾಳದ ಎಸ್.ಕೆ. ಫಾರೂಕ್ ಅವರು ಕುಂದನಹಳ್ಳಿಯ ಶೋಭಾ ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿದ್ದರು. ಫಾರೂಕ್ ಅವರು ಸ್ಕೂಟಿಯಲ್ಲಿ ಮುರುಗೇಶ ಪಾಳ್ಯದ ಸಿಗ್ನಲ್ ಬಳಿ ತೆರಳುತ್ತಿದ್ದರು. ಆಗ ಅವರನ್ನು ಅಡ್ಡಗಟ್ಟಿದ ಆರು ಮಂದಿ ಆರೋಪಿಗಳು ಕಾರಿನಲ್ಲಿ ಅಪಹರಿಸಿದ್ದರು. ಎಸ್‌ಎಂಬಿಟಿ ರೈಲ್ವೆ ನಿಲ್ದಾಣದ ಬಳಿಗೆ ಕರೆದೊಯ್ದು ಗನ್ ತೋರಿಸಿ ಹಣಕ್ಕೆ ಬೇಡಿಕೆ ಇಟ್ಟಿದ್ದರು. ಆಗ ಫಾರೂಕ್ ಅವರು ಅಪರಿಚಿತರಿಂದ ತಪ್ಪಿಸಿಕೊಂಡು ಬಂದು ದೂರು ನೀಡಿದ್ದಾರೆ. ಅವರು ನೀಡಿದ ದೂರು ಆಧರಿಸಿ ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಸ್ವಂತ ವಾಹನ ಬಳಕೆದಾರರ ಸಂಖ್ಯೆ ಏರಿಕೆ, ಹೆಚ್ಚಿದ ಸಂಚಾರ ದಟ್ಟಣೆ

2 ತಿಂಗಳಲ್ಲಿ 140 ಮಂದಿ ಸಾವು

• ಆದಿತ್ಯ ಕೆ.ಎ.

ಅಂಕಿ ಅಂಶಗಳು

1.40 ಕೋಟಿ ಬೆಂಗಳೂರು ನಗರದ ಜನಸಂಖ್ಯೆ

1.19 ಕೋಟಿ ನಗರದಲ್ಲಿ ವಾಹನಗಳ ಸಂಖ್ಯೆ

2,100 ಪ್ರತಿನಿತ್ಯ ವಾಹನಗಳ ನೋಂದಣಿ

(ಮಾಹಿತಿ: ಸಂಚಾರ ಪೊಲೀಸ್ ವಿಭಾಗ)

ವರ್ಷ	ಅಪಘಾತಗಳು	ಸಾವು	ಗಾಯಾಳು
2022	3,822	722	3,189
2023	4,974	910	4,191
2024	4,351	802	3,685
2025(ಫೆಬ್ರುವರಿ ತನಕ)	784	140	682

ಬೆಂಗಳೂರು: ನಗರದಲ್ಲಿ ರಸ್ತೆಗೆ ಇಳಿಯುತ್ತಿರುವ ಹೊಸ ವಾಹನಗಳ ಸಂಖ್ಯೆಯಲ್ಲಿ ಹೆಚ್ಚಳವಾದ ಬೆನ್ನಲ್ಲೇ ದಟ್ಟಣೆಯೂ ಮಿತಿಮೀರುತ್ತಿದೆ. ಸಂಚಾರ ನಿಯಮ ಉಲ್ಲಂಘಿಸುವವರ ಸಂಖ್ಯೆಯೂ ಏರಿಕೆಯಾಗಿದೆ. ಜತೆಗೆ, ಅಪಘಾತಗಳೂ ಹೆಚ್ಚಿನ ಪ್ರಮಾಣದಲ್ಲಿ ಸಂಭವಿಸುತ್ತಿದ್ದು, ಎರಡು ತಿಂಗಳಲ್ಲಿಯೇ 140 ಮಂದಿ ಮೃತಪಟ್ಟಿದ್ದಾರೆ.

ಈ ಅವಧಿಯಲ್ಲಿ ಸಂಭವಿಸಿದ 784 ಅಪಘಾತಗಳಲ್ಲಿ 682 ಮಂದಿ ಗಾಯಗೊಂಡಿದ್ದಾರೆ. 135 ಮಂದಿ ಗಂಭೀರವಾಗಿ ಗಾಯಗೊಂಡಿದ್ದು, ಕೆಲವರು ಶಾಶ್ವತವಾಗಿ ಅಂಗವಿಕಲರಾಗಿದ್ದಾರೆ.

ಕಳೆದ ಮೂರು ವರ್ಷಕ್ಕೆ ಹೋಲಿಸಿದರೆ, ಈ ವರ್ಷದ ಜನವರಿ ಹಾಗೂ ಫೆಬ್ರುವರಿಯಲ್ಲಿ ಹೆಚ್ಚಿನ ಅಪಘಾತಗಳು ಸಂಭವಿಸಿರುವುದು ವರದಿಯಾಗಿದೆ. 2023ರ ಜನವರಿ, ಫೆಬ್ರುವರಿ ತಿಂಗಳಲ್ಲಿ ಸಂಭವಿಸಿದ ಅಪಘಾತಗಳಿಂದ 120 ಮಂದಿ ಪ್ರಾಣ ಕಳೆದುಕೊಂಡಿದ್ದರು. 2024ರ ಜನವರಿ ಹಾಗೂ ಫೆಬ್ರುವರಿಯಲ್ಲಿ 128 ಮಂದಿ ಮೃತಪಟ್ಟಿದ್ದರು.

ಬಸ್, ಬೈಕ್, ನೀರು ಹಾಗೂ ಪೆಟ್ರೋಲ್ ಟ್ಯಾಂಕರ್, ಆಟೊ, ಲಾರಿ, ಕಾರು, ಕಂಟೈನರ್, ಜೀಪುಗಳ ಮಧ್ಯೆ ಅಪಘಾತಗಳು ನಡೆದಿವೆ. ಮದ್ಯ ಸೇವಿಸಿ ವಾಹನ ಚಾಲನೆ ಮಾಡಿಕೊಂಡು ಹೋಗಿ ಸ್ವಯಂ ಅಪಘಾತಕ್ಕೀಡಾಗುವವರ ಸಂಖ್ಯೆಯೂ ಹೆಚ್ಚಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ನಗರದ ಒಳಗೆ ಹಾದು ಹೋಗಿರುವ ರಾಜ್ಯ–ರಾಷ್ಟ್ರೀಯ ಹೆದ್ದಾರಿ, ಬಡಾವಣೆಯ ರಸ್ತೆಗಳು, ಹೊರ ವರ್ತುಲ ರಸ್ತೆಗಳಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿವೆ. ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳು, ಅತಿ ವೇಗದ ಚಾಲನೆ ಹಾಗೂ ಹೆಲ್ಮೆಟ್‌ರಹಿತ ಪ್ರಯಾಣ ಅಪಘಾತಕ್ಕೆ ಕಾರಣವಾಗುತ್ತಿದೆ ಎಂಬುದು ಸಂಚಾರ ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಒಂದು ತಿಂಗಳ ಹಿಂದೆ, ಬಿಎಂಆರ್‌ಸಿಎಲ್ ‘ನಮ್ಮ ಮೆಟ್ರೊ’ ಪ್ರಯಾಣ ದರವನ್ನು ಏರಿಕೆ ಮಾಡಿತ್ತು. ಮೆಟ್ರೊ ಪ್ರಯಾಣಕರು ದರ ಏರಿಕೆಗೆ ವಿರೋಧ ವ್ಯಕ್ತಪಡಿಸಿದ್ದರೂ, ಬಿಎಂಆರ್‌ಸಿಎಲ್ ಪ್ರಯಾಣ ದರವನ್ನು ಇಳಿಕೆ ಮಾಡಿಲ್ಲ. ಇದರ ಪರಿಣಾಮ ಸ್ವಂತ ವಾಹನ ಬಳಸುವವರು ಸಂಖ್ಯೆ ಹೆಚ್ಚಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸ್ವಂತ ವಾಹನಗಳು ರಸ್ತೆಗಳು ಇಳಿದ ಪರಿಣಾಮ, ಸಂಚಾರ ದಟ್ಟಣೆಯೂ ಆರಂಭವಾಗಿದೆ. ಅಲ್ಲಲ್ಲಿ ಅಪಘಾತಗಳೂ ಸಂಭವಿಸುತ್ತಿವೆ. ಫೆಬ್ರುವರಿಯಲ್ಲಿ ಹೆಚ್ಚು ಅಪಘಾತಗಳು ನಡೆದಿವೆ ಎಂದು ಸಂಚಾರ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಬಿಎಂಟಿಸಿ ಬಸ್ ಚಾಲಕರಿಗೆ ಎಚ್ಚರಿಕೆ: ಕಳೆದ ಎರಡು ತಿಂಗಳಲ್ಲಿ ಬಿಎಂಟಿಸಿ ಬಸ್‌ನಿಂದ ಹೆಚ್ಚಿನ ಅಪಘಾತಗಳು ಸಂಭವಿಸಿವೆ. ಇದಕ್ಕೆ ಚಾಲಕರ ನಿರ್ಲಕ್ಷ್ಯವೇ ಕಾರಣವಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು. ಬನಶಂಕರಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳೆದ ವಾರ ಎರಡು ಬಿಎಂಟಿಸಿ ಬಸ್ ಮಧ್ಯೆ ಸಿಲುಕಿ ವೈದ್ಯ ಹಾಗೂ ಆಟೊ ಚಾಲಕ ಮೃತಪಟ್ಟಿದ್ದರು.

‘ಹೊಸಕೆರೆಹಳ್ಳಿ ಕ್ರಾಸ್‌ನ 80 ಅಡಿ ರಸ್ತೆ ಕಡೆಯಿಂದ ಸೀತಾ ವೃತ್ತದ ಕಡೆಗೆ ಬರುತ್ತಿದ್ದ ಆಟೊಗೆ ಹಿಂಬದಿಯಿಂದ ಬಂದ ಬಿಎಂಟಿಸಿ ಬಸ್‌ವೊಂದು ಗುದ್ದಿತ್ತು. ಡಿಕ್ಕಿಯ ರಭಸಕ್ಕೆ ಮುಂದೆ ಚಲಿಸುತ್ತಿದ್ದ ಮತ್ತೊಂದು ಬಿಎಂಟಿಸಿ ಬಸ್‌ನ ಹಿಂಭಾಗಕ್ಕೆ ಆಟೊ ಡಿಕ್ಕಿ ಹೊಡೆದಿತ್ತು. ಎರಡೂ ಬಸ್‌ಗಳ ಮಧ್ಯೆ ಸಿಲುಕಿ ಆಟೊ ನಜ್ಜುಗುಜ್ಜಾಗಿ, ಆಟೊದಲ್ಲಿದ್ದ ಇಬ್ಬರು ಮೃತಪಟ್ಟಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ. ಎಚ್ಚರಿಕೆಯಿಂದ ಬಸ್ ಚಾಲನೆ ಮಾಡುವಂತೆ ಬಿಎಂಟಿಸಿ ಚಾಲಕರಿಗೆ ಸೂಚನೆ ನೀಡಲಾಗಿದೆ’ ಎಂದು ಸಂಚಾರ ಪೊಲೀಸ್ ಇಲಾಖೆಯ ಮೂಲಗಳು ತಿಳಿಸಿವೆ.

‘ಅತಿ ವೇಗದಿಂದ ದ್ವಿಚಕ್ರ ವಾಹನ ಚಲಾಯಿಸಿದ್ದರಿಂದ ಉರುಳಿ ಬಿದ್ದು, ಬೈಕ್ ಸವಾರರು ಮೃತಪಡುತ್ತಿದ್ದಾರೆ. ಬಹುತೇಕ ಪ್ರಕರಣಗಳಲ್ಲಿ ಸವಾರರು ಹೆಲ್ಮೆಟ್ ಧರಿಸದೇ ಬೈಕ್ ಚಲಾಯಿಸಿ ಜೀವ ಕಳೆದುಕೊಂಡಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಸಂಚಾರ ನಿಯಮ ಉಲ್ಲಂಘನೆ; ನಿತ್ಯ 30 ಸಾವಿರ ಪ್ರಕರಣ

ನಗರದ ಹಲವು ಕಡೆ ಕೃತಕ ಬುದ್ಧಿಮತ್ತೆ ಆಧರಿಸಿ ಟ್ರಾಫಿಕ್ ಸಿಗ್ನಲ್ ಅಳವಡಿಸಲಾಗಿದೆ. ತಂತ್ರಜ್ಞಾನವನ್ನು ಆಧರಿಸಿ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳನ್ನು ಪತ್ತೆ ಮಾಡಲಾಗುತ್ತಿದ್ದು, ಪ್ರತಿನಿತ್ಯ 30 ಸಾವಿರ ಪ್ರಕರಣಗಳು ಪತ್ತೆ ಆಗುತ್ತಿವೆ ಎಂದು ಸಂಚಾರ ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ಸಾಕುನಾಯಿ ಮರಿ ಕಸಿದುಕೊಂಡು ಆರೋಪಿಗಳು ಪರಾರಿ

ಬೆಂಗಳೂರು: ಕೈಯಲ್ಲಿದ್ದ ಸಾಕು ನಾಯಿಮರಿ ‘ರೀಚಿ’ಯನ್ನು ಅಪರಿಚಿತರು ಕಸಿದುಕೊಂಡು ಪರಾರಿ ಆಗಿದ್ದು, ಈ ಸಂಬಂಧ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಯನಗರ 9ನೇ ಬ್ಲಾಕ್‌ನ ನಿವಾಸಿ ಎಸ್. ಮಧುರಾ ಅವರು ದೂರು ನೀಡಿದ್ದಾರೆ.

‘ಮಾರ್ಚ್ 12ರಂದು ರಾತ್ರಿ 10.30ರ ಸುಮಾರಿಗೆ ಸಾಕು ನಾಯಿಮರಿಯನ್ನು ಕರೆದುಕೊಂಡು ಜಯನಗರದ ಶಕ್ತಿ ಮೆಡಿಕಲ್ ರಸ್ತೆಯಲ್ಲಿ ತೆರಳುತ್ತಿದ್ದರು. ಬೈಕ್‌ನಲ್ಲಿ ಬಂದ ಇಬ್ಬರು ಆರೋಪಿಗಳು ನಾಯಿಮರಿಯನ್ನು ಕಸಿದುಕೊಂಡು ಹೋಗಿದ್ದಾರೆ’ ಎಂದು ದೂರು ನೀಡಲಾಗಿದೆ.

‘ಇಬ್ಬರು ಹೆಲ್ಮೆಟ್ ಧರಿಸಿದ್ದರು. ಅಲ್ಲದೇ ಜಾಕೆಟ್ ಸಹ ಧರಿಸಿದ್ದರು. ಕಳ್ಳತನ ಆಗಿರುವ ಸಾಕು ನಾಯಿಮರಿಯ ಅಂದಾಜು ಬೆಲೆ ₹10 ಸಾವಿರ ಆಗಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಕಳ್ಳತನ ಆಗಿರುವ ರೀಚಿಯನ್ನು ಹುಡುಕಿಕೊಡಿ’ ಎಂದು ಕೋರಿದ್ದಾರೆ.

ಇಬ್ಬರು ವಿದ್ಯಾರ್ಥಿಗಳು 10 ದಿನಗಳಿಂದ ನಾಪತ್ತೆ

ಚಿಕ್ಕಮಗಳೂರು: ತೇಗೂರು ಸಮೀಪದ ಅಬ್ದುಲ್ ಕಲಾಂ ವಸತಿಶಾಲೆಯಿಂದ ಇಬ್ಬರು ಬಾಲಕರು ನಾಪತ್ತೆಯಾಗಿದ್ದಾರೆ.

ಬೆಂಗಳೂರಿನ ಒಬ್ಬ ವಿದ್ಯಾರ್ಥಿ ಹಾಗೂ ಬಾಳೆಹೊನ್ನೂರಿನ ಒಬ್ಬ ವಿದ್ಯಾರ್ಥಿ ವಸತಿನಿಲಯದಿಂದ ಮಾ.3 ರಂದು ನಾಪತ್ತೆಯಾಗಿದ್ದಾರೆ. ಇಬ್ಬರು ವಿದ್ಯಾರ್ಥಿಗಳು ಬಸ್ ನಿಲ್ದಾಣದಲ್ಲಿ ನಿಂತಿರುವುದು ಸಿಸಿಟಿವಿಯಲ್ಲಿ ಸೆರೆಯಾಗಿದೆ. ನಿಲಯ ಪಾಲಕ ಗಣೇಶ್ ಆಚಾರ್ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಪೊಲೀಸರು ಹುಡುಕಾಟ ನಡೆಸಿದ್ದಾರೆ.

‘10 ದಿನಗಳಿಂದ ವಿದ್ಯಾರ್ಥಿಗಳು ನಾಪತ್ತೆಯಾಗಿದ್ದು, ಇದಕ್ಕೆ ನಿಲಯದ ಪಾಲಕರೇ ಕಾರಣ. ಅವರ ವಿರುದ್ಧ ಕೂಡಲೇ ಕ್ರಮ ಕೈಗೊಂಡು ಮಕ್ಕಳನ್ನು ಹುಡುಕಿಕೊಡಬೇಕು’ ಎಂದು ಪಾಲಕರು ಒತ್ತಾಯಿಸಿದ್ದಾರೆ.

ಪಾರ್ಕಿಂಗ್ ವಿಷಯಕ್ಕೆ ಜಗಳ: ಸಂಶೋಧಕ ಸಾವು

ಚಂಡೀಗಢ (ಪಿಟಿಐ): ಪಾರ್ಕಿಂಗ್ ವಿಷಯವಾಗಿ ಜಗಳವಾಡಿ, ನೆರಮನೆಯ ವ್ಯಕ್ತಿ ನೆಲಕ್ಕೆ ದೂಡಿದ್ದರಿಂದ ಸಂಶೋಧಕರೊಬ್ಬರು ಮೊಹಾಲಿಯಲ್ಲಿ ಮೃತಪಟ್ಟಿದ್ದಾರೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಭಾರತೀಯ ವಿಜ್ಞಾನ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ (ಐಐಎಸ್‌ಇಆರ್)ಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಭಿಷೇಕ್ ಸ್ವರ್ಣಕಾರ್ (39) ಎಂಬುವವರು ಬೈಕ್ ನಿಲ್ಲಿಸಲು ಮುಂದಾದಾಗ, ಅವರ ನೆರೆಮನೆಯ ಮಾಂಟಿ (26) ಎಂಬಾತ ಆಕ್ಷೇಪ ತೆಗೆದ. ಇಬ್ಬರ ನಡುವೆ ವಾಗ್ವಾದ ನಡೆಯಿತು. ಆಗ ಮಾಂಟಿ, ಸ್ವರ್ಣಾಕರ್ ಅವರನ್ನು ನೆಲಕ್ಕೆ ದೂಡಿದ. ಆಮೇಲೆ ಅವರ ಮೇಲೆ ಹಲ್ಲೆ ನಡೆಸಿದ. ಜಮಾಯಿಸಿದ ಜನರು ನೆಲದ ಮೇಲೆ ಬಿದ್ದಿದ್ದ ಅಭಿಷೇಕ್ ಅವರನ್ನ ಮೇಲೆತ್ತಿದರು. ಕೆಲವೇ ಕ್ಷಣಗಳಲ್ಲಿ ಅವರು ಮತ್ತೆ ಕುಸಿದರು. ಆಸ್ಪತ್ರೆಗೆ ಕರೆದೊಯ್ದಾಗ, ಮೃತಪಟ್ಟಿರುವುದನ್ನು ವೈದ್ಯರು ದೃಢಪಡಿಸಿದರು. ಮಂಗಳವಾರ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದ ಸ್ವರ್ಣಾಕರ್ ಡಯಾಲಿಸಿಸ್‌ಗೆ ಒಳಗಾಗುತ್ತಿದ್ದರು. ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಆರೋಪಿಯು ತಲೆಮರೆಸಿಕೊಂಡಿದ್ದಾನೆ ಎಂದು ಹೇಳಿದ್ದಾರೆ. ಪ್ರಕರಣದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

ಮಹಿಳೆಯ ಮೇಲೆ ಪಾನ್ ಮಸಾಲ ಉಗಿದಿದ್ದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ತೆರಳುತ್ತಿದ್ದ ಮಹಿಳೆಯ ಮೇಲೆ ಪಾನ್ ಮಸಾಲ ಉಗಿದು ಪರಾರಿ ಆಗಿದ್ದ ಆರೋಪಿ ತಿಪ್ಪಸಂದ್ರದ ನಿವಾಸಿ ಹರೀಶ್‌ನನ್ನು ಇಂದಿರಾ ನಗರದ ಪೊಲೀಸರು ಬಂಧಿಸಿದ್ದಾರೆ.

ದೊಮ್ಮಲೂರಿನ ನಿವಾಸಿ ಅರ್ಚನಾ ಅವರು ತೆರಳುತ್ತಿದ್ದ ವೇಳೆ ಬೈಕ್‌ನಲ್ಲಿ ಬಂದಿದ್ದ ಆರೋಪಿ, ಪಾನ್ ಮಸಾಲ ಉಗಿದು ತೆರಳಿದ್ದ. ಫೆ.25ರಂದು ಘಟನೆ ನಡೆದಿತ್ತು. ಅರ್ಚನಾ ಅವರು ನೀಡಿದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿ ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ಹೇಳಿದರು.

ಬ್ಯಾಸ್ಕೆಟ್‌ಬಾಲ್ ಮಹಿಳಾ ಕೋಚ್ ಆತ್ಮಹತ್ಯೆ

ಅಪರಾಧ ಸುದ್ದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ ಮಕ್ಕಳಿಗೆ ಬ್ಯಾಸ್ಕೆಟ್‌ಬಾಲ್ ತರಬೇತಿ ನೀಡುತ್ತಿದ್ದ ಸೋನಿಯಾ ಆನಂದ್ (26) ಅವರು ತಮ್ಮ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಬಡಾವಣೆಯೊಂದರಲ್ಲಿ ಸೋನಿಯಾ ಅವರು ನೆಲಸಿದ್ದರು.

‘ಸೋನಿಯಾ ಅವರು ಬುಧವಾರ ಬೆಳಿಗ್ಗೆ ಉಪಾಹಾರ ಸೇವಿಸಿ ಮೊದಲ ಮಹಡಿಗೆ ತೆರಳಿ ಕೊಠಡಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೆ ಕಾರಣ ಗೊತ್ತಾಗಿಲ್ಲ. ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಅನಿಲ ಸೋರಿಕೆ: ಇಬ್ಬರಿಗೆ ಗಾಯ

ಬೆಂಗಳೂರು: ಬೈಯಪ್ಪನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಅಬ್ಬಯ್ಯರೆಡ್ಡಿ ಪಾಳ್ಯದ ಮನೆಯೊಂದರಲ್ಲಿ ಗುರುವಾರ ಮುಂಜಾನೆ ಸಿಲಿಂಡರ್‌ನಿಂದ ಅನಿಲ ಸೋರಿಕೆಯಾಗಿ ಸಂಭವಿಸಿದ ಬೆಂಕಿ ಅವಘಡದಿಂದ ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಅಬ್ಬಯ್ಯರೆಡ್ಡಿ ಪಾಳ್ಯದ ನಿವಾಸಿಗಳಾದ ಹನುಮಂತಪ್ಪ (70) ಹಾಗೂ ಮಂಜುನಾಥ್(34) ಗಾಯಗೊಂಡವರು. ಇಬ್ಬರನ್ನೂ ವಿಕ್ಟೋರಿಯಾ ಆಸ್ಪತ್ರೆಯ ಸುಟ್ಟಗಾಯ ವಿಭಾಗಕ್ಕೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಮನೆಯಲ್ಲಿ ಐದು ಮಂದಿ ವಾಸಿಸುತ್ತಿದ್ದರು. ಬುಧವಾರ ರಾತ್ರಿ ಎಲ್ಲರೂ ಮನೆಯಲ್ಲೇ ಊಟ ಮಾಡಿ ಮಲಗಿದ್ದರು. ಗುರುವಾರ ಬೆಳಿಗ್ಗೆ ಕೆಲಸಕ್ಕೆ ತೆರಳಲು ಮಂಜುನಾಥ್ ಅವರು ಬೇಗ ಎದ್ದಿದ್ದರು. ಅಡುಗೆ ಸಿಲಿಂಡರ್‌ನಿಂದ ಅನಿಲ ಸೋರಿಕೆ ಆಗಿದ್ದು, ಅವರ ಗಮನಕ್ಕೆ ಬಂದಿರಲಿಲ್ಲ. ಸ್ಟೌ ಆನ್ ಮಾಡಲು ಹೋದಾಗ ಬೆಂಕಿ ಹೊತ್ತಿಕೊಂಡಿದೆ. ಆಗ ಇಬ್ಬರು ಗಾಯಗೊಂಡಿದ್ದಾರೆ. ಮನೆಯಲ್ಲಿದ್ದ ಪೀಠೋಪಕರಣ ಹಾಗೂ ಬಟ್ಟೆಗಳು ಭಸ್ಮವಾಗಿವೆ ಎಂದು ಪೊಲೀಸರು ಹೇಳಿದರು.

ಬೈಯಪ್ಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ರಸ್ತೆ ಬಂದ್ ಮಾಡಿ ಪ್ರತಿಭಟನೆ, ಸ್ಥಳೀಯರ ಆಕ್ರೋಶ

ವಿದ್ಯುತ್ ಅವಘಡ: ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಆನಂದಪುರದಲ್ಲಿ ಗುರುವಾರ ಮುಂಜಾನೆ ಸಂಭವಿಸಿದ ವಿದ್ಯುತ್ ಅವಘಡದಲ್ಲಿ ಸೆಲ್ವಿ(58) ಎಂಬುವವರು ಮೃತಪಟ್ಟಿದ್ದಾರೆ.

ವಿನಾಯಕ ಚಿತ್ರಮಂದಿರ ಹಿಂಭಾಗದ ಆನಂದಪುರದ 1ನೇ ಕ್ರಾಸ್‌ನಲ್ಲಿ ಸೆಲ್ವಿ ಅವರು ನೆಲಸಿದ್ದರು. ಸೆಲ್ವಿ ಅವರ ಪುತ್ರ ಅಜಯ್ ನೀಡಿದ ದೂರು ಆಧರಿಸಿ ಚಾಮರಾಜಪೇಟೆ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ.

ಆನಂದಪುರದಲ್ಲಿ ಹಲವು ವರ್ಷಗಳಿಂದ ಸೆಲ್ವಿ ಅವರು ತಮ್ಮ ಕುಟುಂಬಸ್ಥರ ಜತೆಗೆ ವಾಸವಾಗಿದ್ದರು. ಇತ್ತೀಚೆಗೆ, ಸರ್ಕಾರದಿಂದ ಮನೆ ಮನೆಗೂ ಗಂಗೆ ಯೋಜನೆ ಅಡಿಯಲ್ಲಿ ಕಾವೇರಿ ನೀರು ಹರಿಸಲು ಪ್ರತಿ ಮನೆಗೂ ನೀರಿನ ಪೈಪ್ ಅಳವಡಿಕೆ ಕಾಮಗಾರಿ ನಡೆಯುತ್ತಿತ್ತು. ನೀರಿನ ಸಂಪರ್ಕ ಸಿಗದ ಕಾರಣ ಈ ಭಾಗದಲ್ಲಿ ಮೂರು ಅಥವಾ ನಾಲ್ಕು ಅಂತಸ್ತಿನ ಕಟ್ಟಡಕ್ಕೆ ನೀರು ಪಡೆಯಲು ನಿವಾಸಿಗಳು ಅಕ್ರಮವಾಗಿ ಪಂಪ್‌ಗಳನ್ನು ಬಳಸುತ್ತಿದ್ದರು. ಕಂಬದಿಂದ ಪಂಪ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡು ನೀರು ಪಡೆದುಕೊಳ್ಳುತ್ತಿದ್ದರು. ಗುರುವಾರ ಮುಂಜಾನೆ 4 ಗಂಟೆ ಸುಮಾರಿಗೆ ಎಚ್ಚರಗೊಂಡಿದ್ದ ಸೆಲ್ವಿ ಅವರು ಪಂಪ್ ಆನ್ ಮಾಡಲು ಬಂದಾಗ ವಿದ್ಯುತ್ ಸ್ಪರ್ಶಿಸಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂಬುದು ಗೊತ್ತಾಗಿದೆ.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬ ಸದಸ್ಯರಿಗೆ ಮೃತದೇಹ ಹಸ್ತಾಂತರಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆಯೇ ಆನಂದಪುರದ ನಿವಾಸಿಗಳು ಮೈಸೂರು ರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸಿದರು. ‘ಮೃತರ ಕುಟುಂಬಕ್ಕೆ ಪರಿಹಾರ ನೀಡಬೇಕು, ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು ಹಾಗೂ ಸಚಿವ ಜಮೀರ್ ಅಹಮದ್ ಅವರು ಸ್ಥಳಕ್ಕೆ ಬರಬೇಕು’ ಎಂದು ಆಗ್ರಹಿಸಿದರು.

ಆನಂದಪುರಕ್ಕೆ ಭೇಟಿ ನೀಡಿದ ಸಚಿವ ಜಮೀರ್ ಅಹಮದ್ ಅವರು ಸ್ಥಳೀಯರಿಂದ ಮಾಹಿತಿ ಪಡೆದುಕೊಂಡರು

ನಂತರ ಸಚಿವರು ಸ್ಥಳಕ್ಕೆ ಭೇಟಿ ನೀಡಿ ಪ್ರತಿಭಟನಕಾರರ ಮನವಿ ಆಲಿಸಿದರು. ಸಚಿವರನ್ನು ಪ್ರತಿಭಟನಕಾರರು ತರಾಟೆಗೆ ತೆಗೆದುಕೊಂಡರು.

‘ಪ್ರತಿ ಬಾರಿಯೂ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತೇನೆ ಎಂದು ಭರವಸೆ ನೀಡುತ್ತೀರಿ. ಆದರೆ, ನೀರಿನ ವ್ಯವಸ್ಥೆ ಮಾಡಿಲ್ಲ’ ಎಂದು ಆಕ್ರೋಶ ಹೊರಹಾಕಿದರು. ಪ್ರತಿಭಟನೆಯಿಂದ ಮೈಸೂರು ರಸ್ತೆಯಲ್ಲಿ ಕೆಲಕಾಲ ವಾಹನ ದಟ್ಟಣೆ ಉಂಟಾಗಿತ್ತು.

‘ಅಕ್ರಮ ಸಂಪರ್ಕದಿಂದ ಅನಾಹುತ’

‘ಅಕ್ರಮವಾಗಿ ಮೂರ್ನಾಲ್ಕು ಅಂತಸ್ತಿನ ಮನೆಕಟ್ಟಿಕೊಂಡು ನೀರು ಮೇಲೇರದ ಕಾರಣಕ್ಕೆ ಪಂಪ್‌ಗಳನ್ನು ಬಳಸಿದ್ದಾರೆ. ಕಂಬದಿಂದ ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡಿದ್ದಾರೆ. ಹದಿನೈದು ದಿನಗಳ ಹಿಂದಷ್ಟೇ ಸ್ಥಳಕ್ಕೆ ಬಂದಿದ್ದೆ. ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆಯದಂತೆ ಮನವಿ ಮಾಡಿದ್ದೆ. ಕಾವೇರಿ ನೀರು ಪೂರೈಸಲು ಕೆಲವು ದಿನಗಳ ಹಿಂದೆ ಭೂಮಿಪೂಜೆ ಸಹ ನೆರವೇರಿಸಲಾಗಿತ್ತು’ ಎಂದು ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು.

‘ಮೃತರ ಕುಟುಂಬಕ್ಕೆ ಪರಿಹಾರ ನೀಡಲಾಗುವುದು’ ಎಂದು ಸಚಿವರು ಸ್ಥಳೀಯರನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದರು.

ಸ್ಥಳೀಯರ ಆಕ್ರೋಶ ಹೆಚ್ಚಾದ ಮೇಲೆ ಅಲ್ಲಿಂದ ಸಚಿವರು ತೆರಳಿದರು. ಸ್ಥಳದಲ್ಲಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

ಈಜಿಪುರ ಮೇಲ್ಸೇತುವೆ: ಪೂರ್ಣಪ್ರಮಾಣದ ತಂಡ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಳು ವರ್ಷಗಳಿಂದ ನಿರ್ಮಾಣ ಹಂತದಲ್ಲೇ ಇರುವ ಈಜಿಪುರ ಮೇಲ್ಸೇತುವೆ ಕಾಮಗಾರಿಯನ್ನು ತ್ವರಿತವಾಗಿ ನಿರ್ವಹಿಸಲು, ಪ್ರತ್ಯೇಕ ಎಂಜಿನಿಯರ್ ತಂಡವನ್ನು ಬಿಬಿಎಂಪಿ ಮುಖ್ಯ ಆಯುಕ್ತರು ನಿಯೋಜಿಸಿದ್ದಾರೆ.

ಈಜಿಪುರ ಮೇಲ್ಸೇತುವೆ ಕಾಮಗಾರಿಯನ್ನು ಬಿಬಿಎಂಪಿಯ ಯೋಜನೆ–ಕೇಂದ್ರ ವಿಭಾಗದಿಂದ ನಿರ್ವಹಿಸಲಾಗುತ್ತಿತ್ತು. ಆದರೆ, ಯೋಜನೆಗೆ ಎಂಜಿನಿಯರ್‌ಗಳು ಸಹಕಾರ ನೀಡುತ್ತಿಲ್ಲ ಎಂದು ಸಚಿವ ರಾಮಲಿಂಗಾರೆಡ್ಡಿಯವರೂ ಹೇಳಿದ್ದರು. ಹೀಗಾಗಿ, ಕಾಮಗಾರಿ ಅನುಷ್ಠಾನಕ್ಕೆ ಪೂರ್ಣ ಪ್ರಮಾಣದ ತಂಡವನ್ನು ರಚಿಸಲಾಗಿದೆ.

ಬಿಬಿಎಂಪಿಯ ಗುಣ ನಿಯಂತ್ರಣ/ ಗುಣ ಭರವಸೆ ವಿಭಾಗದ ವತಿಯಿಂದ ಇನ್ನು ಮುಂದೆ ‘ಈಜಿಪುರ ಮೇಲ್ಸೇತುವೆ ಯೋಜನೆ’ ಕಾಮಗಾರಿಯನ್ನು ನಿರ್ವಹಿಸುವಂತೆ ಆದೇಶಿಸಲಾಗಿದೆ. ಈ ಕಾಮಗಾರಿ ಪೂರ್ಣಗೊಳ್ಳುವವರೆಗೂ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಜಿ. ರಾಘವೇಂದ್ರ ಪ್ರಸಾದ್ ಅವರ ಅಧೀನದಲ್ಲಿ ಪೂರ್ಣಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಎಂಜಿನಿಯರ್‌ಗಳನ್ನು ನಿಯೋಜಿಸಲಾಗಿದೆ.

ಯೋಜನೆ–ಕೇಂದ್ರ–1 ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಎನ್. ಚಂದ್ರಶೇಖರ್, ಟಿವಿಸಿಸಿ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಯೋಜನೆ–ಕೇಂದ್ರ–9ರ ಸಹಾಯಕ ಎಂಜಿನಿಯರ್ ಜೆ.ಎಲ್. ರಂಜಿತ್ ಅವರು, ‘ಈಜಿಪುರ ಮೇಲ್ಸೇತುವೆ ಯೋಜನೆ’ ಕಾಮಗಾರಿ ಪೂರ್ಣಗೊಳ್ಳುವವರೆಗೂ ರಾಘವೇಂದ್ರ ಪ್ರಸಾದ್ ಅವರ ಅಧೀನದಲ್ಲಿ ಕಾರ್ಯನಿರ್ವಹಿಸಬೇಕು. ಈ ತಂಡ ತ್ವರಿತವಾಗಿ ಈಜಿಪುರ ಮೇಲ್ಸೇತುವೆ ಅನುಷ್ಠಾನಗೊಳ್ಳಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಈಜಿಪುರ ಮೇಲ್ಸೇತುವೆ ಕಾಮಗಾರಿ –ಪ್ರಜಾವಾಣಿ ಚಿತ್ರ/ ವಿ.ಪುಷ್ಕರ್

ತಿದ್ದುಪಡಿಗಳೊಂದಿಗೆ ಜಿಬಿಎ ಮಸೂದೆ ಮರು ಅಂಗೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ಮಾಡಲಾದ ತಿದ್ದುಪಡಿಗಳೊಂದಿಗೆ ‘ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2025’ ಕ್ಕೆ ವಿಧಾನಸಭೆಯಲ್ಲಿ ಗುರುವಾರ ಮರು ಅಂಗೀಕಾರ ನೀಡಲಾಯಿತು.

ವಿಧಾನಸಭೆಯಲ್ಲಿ ಅಂಗೀಕಾರ ಪಡೆದ ಮಸೂದೆಯನ್ನು ವಿಧಾನ ಪರಿಷತ್‌ನಲ್ಲಿ ಮಂಡಿಸಲಾಗಿತ್ತು. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಕೈಗಾರಿಕಾ ಆಸ್ತಿಗಳಿಗೆ ಸಂಬಂಧಿಸಿದ ಕಟ್ಟಡ ನಕ್ಷೆ ಅನುಮೋದನೆಗೂ ಮುನ್ನ ಪ್ರಾಧಿಕಾರದ ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸುವ ಮತ್ತು ವಾರ್ಡ್ ಸಮಿತಿಗಳ ಏಳು ಸದಸ್ಯರನ್ನು ಚೀಟಿ ಎತ್ತುವ ಮೂಲಕ ಆಯ್ಕೆ ಮಾಡಲು ಅವಕಾಶ ಕಲ್ಪಿಸುವ ತಿದ್ದುಪಡಿಗಳೊಂದಿಗೆ ವಿಧಾನ ಪರಿಷತ್ ಬುಧವಾರ ಒಪ್ಪಿಗೆ ನೀಡಿತ್ತು.

ವಿಧಾನ ಪರಿಷತ್‌ನ ಅಂಗೀಕಾರ ಪಡೆದ ಸ್ವರೂಪದ ಮಸೂದೆಯನ್ನು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಗುರುವಾರ ಮಂಡಿಸಿದರು. ಧ್ವನಿಮತದ ಮೂಲಕ ಅಂಗೀಕಾರ ನೀಡಲಾಯಿತು.

ತಲೆಮರೆಸಿಕೊಂಡಿದ್ದ ಆರೋಪಿ ಬಂಧನ

ಅಭಿಷೇಕ್

ಚನ್ನಪಟ್ಟಣ: ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನ ಕಳ್ಳತನ ಮಾಡಿ ವಿಚಾರಣೆಗೆ ಹಾಜರಾಗದೆ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಅಭಿಷೇಕ್ ಬಂಧಿತ ಆರೋಪಿ. ಮದ್ದೂರು ತಾಲ್ಲೂಕಿನ ಸಿಎ ಕೆರೆ ಹೋಬಳಿ ಮುಟ್ಟನಹಳ್ಳಿ ನಿವಾಸಿ. ಚನ್ನಪಟ್ಟಣದ ವಿವಿಧ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2022ರಲ್ಲಿ ದ್ವಿಚಕ್ರ ವಾಹನ ಕಳ್ಳತನ ಆರೋಪದ ಮೇಲೆ ಬಂಧಿತನಾಗಿ, ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ.

ಕೋಮುಲ್ ಕ್ಷೇತ್ರ ಹಂಚಿಕೆ ಸಭೆಯಲ್ಲಿ ಗದ್ದಲ; ಹಲ್ಲೆ

‘ಕೈ’ ಶಾಸಕರ ಮುಂದುವರಿದ ಜಟಾಪಟಿ!

ಪ್ರಜಾವಾಣಿ ವಾರ್ತೆ

ಕೋಲಾರ: ಕೋಲಾರ ಜಿಲ್ಲಾ ಹಾಲು ಒಕ್ಕೂಟ (ಕೋಮುಲ್) ಹಾಗೂ ಡಿಸಿಸಿ ಬ್ಯಾಂಕ್ ಮೇಲಿನ ಹಿಡಿತದ ವಿಚಾರದಲ್ಲಿ ಜಿಲ್ಲಾ ಕಾಂಗ್ರೆಸ್ ಶಾಸಕರಲ್ಲೇ ಉಂಟಾಗಿರುವ ಬಣ ಜಗಳ ಮತ್ತೊಂದು ಸ್ವರೂಪ ಪಡೆದುಕೊಂಡಿದೆ.

ಹಾಲು ಒಕ್ಕೂಟದ ಚುನಾವಣೆಗೆ ಕ್ಷೇತ್ರ ಮರುವಿಂಗಡಣೆ ನಿಗದಿಪಡಿಸಲು ಹೈಕೋರ್ಟ್ ಸೂಚನೆಯಂತೆ ಗುರುವಾರ ನಗರ ಹೊರವಲಯದ ಕಲ್ಯಾಣ ಮಂಟಪದಲ್ಲಿ ನಡೆದ ಒಕ್ಕೂಟದ ವಿಶೇಷ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ‘ಕೈ’ ಶಾಸಕರಾದ ಮಾಲೂರಿನ ಕೆ.ವೈ.ನಂಜೇಗೌಡ ಬಣ ಹಾಗೂ ಬಂಗಾರಪೇಟೆಯ ಎಸ್.ಎನ್. ನಾರಾಯಣಸ್ವಾಮಿ ಬಣಗಳ ನಡುವೆ ಜಟಾಪಟಿ ನಡೆದಿದೆ.

‘ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ (ಎಂಡಿ) ಗೋಪಾಲಮೂರ್ತಿ ಮೇಲೆ ಶಾಸಕ ಹಲ್ಲೆ ನಡೆಸಿದ್ದಾರೆ’ ಎಂದು ನಂಜೇಗೌಡ, ಸ್ವಪಕ್ಷೀಯ ಶಾಸಕ ನಾರಾಯಣಸ್ವಾಮಿ ವಿರುದ್ಧವೇ ಆರೋಪಿಸಿದರು.

ಇದಕ್ಕೆ ತಿರುಗೇಟು ನೀಡಿದ ನಾರಾಯಣಸ್ವಾಮಿ, ‘ನಂಜೇಗೌಡ ಗೂಂಡಾ. ಗುಂಪು ಕಟ್ಟಿಕೊಂಡು ಬಂದಿದ್ದಾನೆ. ಸುಳ್ಳು ಸೃಷ್ಟಿಯಲ್ಲಿ ಎತ್ತಿದ ಕೈ. ಹಾಲು ಒಕ್ಕೂಟ ಹಾಳಾಗಿದೆ. ಹಗರಣ ಬಯಲಿಗೆಳೆಯುವೆ. ಮುಖ್ಯಮಂತ್ರಿ ಗಮನಕ್ಕೂ ತರುತ್ತೇನೆ. ಸದನದಲ್ಲೂ ಮಾತನಾಡುತ್ತೇನೆ. ನಂಜೇಗೌಡ ಪಟಾಲಮ್ಮ ಏನು ತಿಂದಿದೆಯೋ ಅದರ ಬಗ್ಗೆ ತನಿಖೆ ನಡೆಸುತ್ತೇನೆ. ಮುಂದೆ ನ್ಯಾಯಾಲಯಕ್ಕೆ ಹೋಗಿ ಬಂಡವಾಳ ಆಚೆ ತೆಗೆಯುತ್ತೇವೆ’ ಎಂದು ಎಂದು ವಾಗ್ದಾಳಿ ನಡೆಸಿದರು.

ಹಾಲು ಒಕ್ಕೂಟಕ್ಕೆ ಒಟ್ಟು 13 ಕ್ಷೇತ್ರಗಳನ್ನು ಮರು ವಿಂಗಡಣೆ ಮಾಡಲಾಗಿತ್ತು. ಇದಕ್ಕೆ ಶಾಸಕ ನಾರಾಯಣಸ್ವಾಮಿ ವಿರೋಧ ವ್ಯಕ್ತಪಡಿಸಿದ್ದರು. ಕೋಲಾರ ತಾಲ್ಲೂಕು ವ್ಯಾಪ್ತಿಯ ಹುತ್ತೂರು ಹೋಬಳಿಯನ್ನು ಬಂಗಾರಪೇಟೆ ಕ್ಷೇತ್ರಕ್ಕೆ ಸೇರಿಸಬೇಕು ಎಂಬುದು ಅವರ ಒತ್ತಾಯವಾಗಿತ್ತು.

ಚರ್ಚೆಗೆ ಅವಕಾಶ ನೀಡಿಲ್ಲವೆಂದು ಎಸ್.ಎನ್ .ನಾರಾಯಣಸ್ವಾಮಿ ಸೇರಿದಂತೆ ಹಲವರು ವೇದಿಕೆ ಮೇಲೇರಿದರು. ಅಲ್ಲದೇ, ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕ ಗೋಪಾಲಮೂರ್ತಿ ಅವರನ್ನು ತಳ್ಳಾಡಿದರು, ಕೆಲವರು ಹಲ್ಲೆ ಕೂಡ ನಡೆಸಿದರು. ಡಿವೈಎಸ್ಪಿ ಎಂ.ಎಚ್. ನಾಗ್ತೆ ನೇತೃತ್ವದಲ್ಲಿ ಮಧ್ಯ ಪ್ರವೇಶಿಸಿದ ಪೊಲೀಸರು ಗೋಪಾಲಮೂರ್ತಿ ಅವರನ್ನು ಕೊಠಡಿಗೆ ಕರೆದೊಯ್ದು ಬಾಗಿಲು ಹಾಕಿ ರಕ್ಷಣೆ ನೀಡಿದರು. ಮತ್ತೊಬ್ಬ ಅಧಿಕಾರಿ (ಮಾರುಕಟ್ಟೆ ವಿಭಾಗ) ಚೇತನ್ ಎಂಬುವರ ಮೇಲೂ ಹಲ್ಲೆ ನಡೆದಿದೆ.

ನಂಜೇಗೌಡ ಬಣದವರು, ‘ತಮಗೆ ಜಯ ಸಿಕ್ಕಿದೆ, ಶೇ 80ರಷ್ಟು ಸದಸ್ಯರು ತಮ್ಮ ಪರವಾಗಿದ್ದಾರೆ’ ಎಂದು ಜೈಕಾರ ಹಾಕಿದರೆ, ‘ಸಭೆ ಕಾನೂನು ಬಾಹಿರವಾಗಿ ನಡೆದಿದೆ, ಮೋಸ ನಡೆದಿದೆ. ನಮಗೆ ಮಾತನಾಡಲು ಬಿಟ್ಟಿಲ್ಲ, ನ್ಯಾಯಾಲಯದ ಆದೇಶ ಧಿಕ್ಕರಿಸಿದ್ದಾರೆ’ ಎಂದು ಎಸ್.ಎನ್.ನಾರಾಯಣಸ್ವಾಮಿ ಬಣದವರು ಧಿಕ್ಕಾರ ಕೂಗಿದರು. ಇದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಯಿತು.

ಈ ಗಲಾಟೆಯಲ್ಲಿ ಒಂದಿಷ್ಟು ಜೆಡಿಎಸ್, ಬಿಜೆಪಿ ಮುಖಂಡರು ನಂಜೇಗೌಡ ಪರವೂ, ಮತ್ತಷ್ಟು ಮುಖಂಡರು ನಾರಾಯಣಸ್ವಾಮಿ ಬೆಂಬಲಕ್ಕೆ ನಿಂತರು.

ಕೋಲಾರದಲ್ಲಿ ಗುರುವಾರ ನಡೆದ ಕೋಮುಲ್ ವಿಶೇಷ ಸಾಮಾನ್ಯ ಸಭೆಯಲ್ಲಿ ಒಕ್ಕೂಟದ ಆಡಳಿತಾಧಿಕಾರಿ ಹಾಗೂ ವ್ಯವಸ್ಥಾಪಕ ನಿರ್ದೇಶಕರ ನಡೆಯನ್ನು ಶಾಸಕ ಎಸ್‌.ಎನ್‌.ನಾರಾಯಣಸ್ವಾಮಿ ಪ್ರಶ್ನಿಸಿದರು

‘ಹಿಂದೂ ಧರ್ಮಕ್ಕೆ ಪ್ರಕೃತಿಯೇ ಮೂಲಾಧಾರ’

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ): ‘ನಮಗೆ ಜನ್ಮ ಕೊಟ್ಟ ತಂದೆ–ತಾಯಿ ಮತ್ತು ವಿದ್ಯೆ ಕಲಿಸಿದ ಗುರುಗಳು ದೇವರಿಗೆ ಸಮಾನರಾದವರು ಎಂಬುದನ್ನು ಸನಾತನ ಹಿಂದೂ ಧರ್ಮ ಸಾರಿ ಹೇಳುತ್ತದೆ’ ಎಂದು ಆದಿಚುಂಚನಗಿರಿ ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ಬಿ.ಜಿ.ಎಸ್ ಸಭಾಂಗಣದಲ್ಲಿ ಗುರುವಾರ ಆಯೋಜಿಸಿದ್ದ ‘ಸರ್ವಧರ್ಮ ಸಮ್ಮೇಳನ’ದಲ್ಲಿ ಹಿಂದೂ ಧರ್ಮದ ಕುರಿತ ಉಪನ್ಯಾಸ ನೀಡಿದರು.

‘ವಸುದೈವ ಕುಟುಂಬಕಂ’ ಎಂದರೆ ಜಗತ್ತು ಒಂದು ಕುಟುಂಬ, ವಿವಿಧ ಧರ್ಮಗಳ ಸಮನ್ವಯದಿಂದ ಎಲ್ಲರೂ ಶಾಂತಿಯುತ ಬದುಕು ನಡೆಸಬೇಕು ಎಂಬ ಆಶಯದಿಂದ ಬಾಲಗಂಗಾಧರನಾಥ ಸ್ವಾಮೀಜಿ ‘ಸರ್ವಧರ್ಮ ಸಮ್ಮೇಳನ’ ಆರಂಭಿಸಿದರು’ ಎಂದರು.

‘ಹಿಂದೂ ಧರ್ಮದಲ್ಲಿ ಆತ್ಮಕ್ಕೆ ಅತ್ಯಂತ ಶ್ರೇಷ್ಠವಾದ ಸ್ಥಾನವಿದೆ. ಹಿಂದೂ ಧರ್ಮ ಪ್ರಾರಂಭ ವಾಗಿದ್ದು ಪ್ರಕೃತಿಯಿಂದ. ಆ ನಿಟ್ಟಿನಲ್ಲಿ ನಮ್ಮ ಹಿಂದೂ ಧರ್ಮದ ಎಲ್ಲಾ ಆರಾಧನೆಗಳು ಪಂಚಭೂತಗಳಿಂದ ಆಗಿದೆ. ನಾವು ಮಾಡುವ ಆಚಾರ ವಿಚಾರಗಳನ್ನೇ ಧರ್ಮ ಎಂದು ಕರೆಯಲಾಗುತ್ತದೆ’ ಎಂದು ಪ್ರತಿಪಾದಿಸಿದರು.

ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮನಾಥ ಸ್ವಾಮೀಜಿ ಪ್ರಾಸ್ತಾವಿಕ ಭಾಷಣ ಮಾಡಿದರು. ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡಿದರು.

ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ನಡೆದ ಜಾತ್ರಾ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಸರ್ವಧರ್ಮ ಸಮ್ಮೇಳನವನ್ನು ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು. ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಪ್ರಸನ್ನನಾಥ ಸ್ವಾಮೀಜಿ, ರೆವರೆಂಡ್ ಫಾದರ್ ಸ್ಟ್ಯಾನ್ಲಿ ಡಿಸೋಜಾ, ರಾಜೇಂದ್ರ ಸುಪನ್ಯೋ, ಮಹಮದ್ ಸಾದ್ವಿಕ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ವಿದ್ಯುಚ್ಛಕ್ತಿ ಬಳಸಿ ಮೊದಲ ರೈಲು ಸಂಚರಿಸಿ ನೂರು ವರ್ಷ ತುಂಬಿದ ಸಂಭ್ರಮದಲ್ಲಿ ಕೆಎಸ್‌ಆರ್ ಬೆಂಗಳೂರು –ಮೈಸೂರು ರಾಜ್ಯ ರಾಣಿ ಎಕ್ಸ್‌ಪ್ರೆಸ್ ರೈಲನ್ನು ಮಹಿಳೆಯರೇ ಇತ್ತೀಚೆಗೆ ನಿರ್ವಹಿಸಿದ್ದರು

ಸಂಗ್ರಹ ಚಿತ್ರ

ಅಂಕಿ ಅಂಶಗಳು

130 ಬೆಂಗಳೂರು ವಿಭಾಗದ ಎಕ್ಸ್‌ಪ್ರೆಸ್ ರೈಲುಗಳು

55 ಬೆಂಗಳೂರು ವಿಭಾಗದ ಪ್ಯಾಸೆಂಜರ್ ರೈಲುಗಳು

95% ಮೈಸೂರು ವಿಭಾಗದ ವಿದ್ಯುತ್ ಟ್ರ್ಯಾಕ್ಷನ್ ಪ್ರಮಾಣ

90% ಹುಬ್ಬಳ್ಳಿ ವಿಭಾಗದ ವಿದ್ಯುತ್ ಟ್ರ್ಯಾಕ್ಷನ್ ಪ್ರಮಾಣ

ಬೆಂಗಳೂರು ವಿಭಾಗದಲ್ಲಿ ವಿದ್ಯುತ್‌ಚಾಲಿತ ಬಂಡಿಗಳಾಗಿ ಉಗಿಬಂಡಿ, ಡೀಸೆಲ್ ಬಂಡಿಗಳ ಪರಿವರ್ತನೆ

ರೈಲು ವಿದ್ಯುದೀಕರಣ: ಶೇ 100 ಸಾಧನೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ದೇಶದಲ್ಲಿ ವಿದ್ಯುಚ್ಛಕ್ತಿ ಬಳಸಿ ಮೊದಲ ರೈಲು ಸಂಚರಿಸಿ ನೂರು ವರ್ಷ ತುಂಬಿದ ಸಂಭ್ರಮದ ಹೊತ್ತಿಗೆ ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗವು ತನ್ನ ಎಲ್ಲ ರೈಲುಗಳ ವಿದ್ಯುದೀಕರಣಗೊಂಡಿರುವ ಹೆಗ್ಗಳಿಕೆಗೆ ಪಾತ್ರವಾಗಿದೆ.

ಆರಂಭದಲ್ಲಿ ಇದ್ದಿಲು, ಕಟ್ಟಿಗೆಗಳನ್ನು ಉರಿಸಿ ಅದರ ಉಗಿಯಿಂದ ಉತ್ಪಾದನೆಯಾಗುವ ಶಕ್ತಿಯಿಂದ ರೈಲು ಸಂಚರಿಸುತ್ತಿತ್ತು. ಬಳಿಕ ಡೀಸೆಲ್ ಎಂಜಿನ್‌ಗಳು ಬಂದವು. ಈಗ ಹಲವು ಮಾರ್ಗಗಳ ಉದ್ದಕ್ಕೂ (ಟ್ರ್ಯಾಕ್) ವಿದ್ಯುತ್ ತಂತಿಗಳನ್ನು ಅಳವಡಿಸಿದ್ದು, ಅವುಗಳ ಮೂಲಕ ರೈಲು ಸಂಚರಿಸುವ ತಂತ್ರಜ್ಞಾನ ಬಳಕೆಗೆ ಬಂದಿದೆ.

> **ಉಗಿ-ಚಾಲಿತ ಎಂಜಿನ್‌ಗಳಿಂದ ಆಧುನಿಕ, ಪರಿಸರಸ್ನೇಹಿ ವಿದ್ಯುದೀಕರಣ ವ್ಯವಸ್ಥೆಗೆ ಪರಿವರ್ತನೆಗೊಳ್ಳುವ ನಿಟ್ಟಿನಲ್ಲಿ ಬೆಂಗಳೂರು ವಲಯ ಮಹತ್ವದ ಮೈಲಿಗಲ್ಲು ಸಾಧಿಸಿದೆ.**
> **ಆಶುತೋಷ್ ಮಾಥುರ್**
> ಹಿರಿಯ ವಿಭಾಗೀಯ ರೈಲ್ವೆ ವ್ಯವಸ್ಥಾಪಕ, ಬೆಂಗಳೂರು

1925ರ ಫೆಬ್ರುವರಿ 3ರಂದು ಮೊದಲ ಬಾರಿಗೆ ಭಾರತೀಯ ರೈಲ್ವೆಯಲ್ಲಿ ವಿದ್ಯುತ್ ವ್ಯವಸ್ಥೆ ಅಳವಡಿಸಲಾಗಿತ್ತು. ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಲ್‌ನಿಂದ ಕುರ್ಲಾ ನಡುವೆ ಮೊದಲ ವಿದ್ಯುತ್‌ಚಾಲಿತ ರೈಲು ಸಂಚರಿಸಿತ್ತು. ಆನಂತರ ಒಂದೊಂದೇ ಟ್ರ್ಯಾಕ್ ವಿದ್ಯುದೀಕರಣಗೊಳ್ಳುತ್ತಾ ಬಂದಿತ್ತು.

ನೈರುತ್ಯ ರೈಲ್ವೆ ವಲಯದಲ್ಲಿ ಹುಬ್ಬಳ್ಳಿ, ಬೆಂಗಳೂರು, ಮೈಸೂರು ವಿಭಾಗಗಳಿವೆ. ಜೊತೆಗೆ ಕಲಬುರಗಿ ವಿಭಾಗದ ರಚನೆ ಪ್ರಕ್ರಿಯೆ ನಡೆಯುತ್ತಿದೆ. ಇವುಗಳಲ್ಲಿ ಬೆಂಗಳೂರು ವಲಯ ಮಾತ್ರ ಶೇ 100ರಷ್ಟು ವಿದ್ಯುತ್ ಟ್ರ್ಯಾಕ್ಷನ್ ಸಾಧಿಸಿದೆ.

'ಎ-1' ದರ್ಜೆಯ ಕೆಎಸ್‌ಆರ್ ಬೆಂಗಳೂರು, ಯಶವಂತಪುರ ಜಂಕ್ಷನ್ ಮತ್ತು ಎಸ್‌ಎಂವಿಟಿ ನಿಲ್ದಾಣಗಳು, 'ಎ' ದರ್ಜೆಯ ಬಂಗಾರಪೇಟೆ ಜಂಕ್ಷನ್, ಬೆಂಗಳೂರು ಕಂಟೋನ್ಮೆಂಟ್, ವೈಟ್‌ಫೀಲ್ಡ್, ಕೆಂಗೇರಿ, ಕೃಷ್ಣರಾಜಪುರ, ಕುಪ್ಪಂ, ಮಾಲೂರು, ಬಾಣಸವಾಡಿ, ಗೌರಿಬಿದನೂರು, ಯಲಹಂಕ ಜಂಕ್ಷನ್ ನಿಲ್ದಾಣಗಳು ಹಾಗೂ 'ಬಿ' ದರ್ಜೆಯ ಸತ್ಯ ಸಾಯಿ ಪ್ರಶಾಂತಿ ನಿಲಯ, ಧರ್ಮಪುರಿ ಮತ್ತು ಹೊಸೂರು ಸೇರಿ ಒಟ್ಟು 20 ನಿಲ್ದಾಣಗಳು ಬೆಂಗಳೂರು ವಲಯ ವ್ಯಾಪ್ತಿಯಲ್ಲಿವೆ. ಈ ನಿಲ್ದಾಣಗಳಿಂದ ಹೊರಡುವ ರೈಲುಗಳು ವಿದ್ಯುತ್ ಟ್ರ್ಯಾಕನ್‌ನಲ್ಲಿ ಸಂಚರಿಸುತ್ತವೆ.

'ವಿದ್ಯುತ್ ಬಳಸಿಕೊಂಡು ಚಲಿಸುವ ಎಂಜಿನ್‌ಗಳನ್ನು ಬೆಂಗಳೂರು ವಿಭಾಗದ ಎಲ್ಲ ರೈಲುಗಳು ಹೊಂದಿವೆ. ಜೊತೆಗೆ ಎಲ್ಲ ಎಂಜಿನ್‌ಗಳು ಡೀಸೆಲ್ ಮೂಲಕವೂ ಚಲಿಸುವ ವ್ಯವಸ್ಥೆಯನ್ನು ಹೊಂದಿವೆ. ಅಕಸ್ಮಿಕವಾಗಿ ಇಲ್ಲವೇ ಮಳೆ-ಗಾಳಿಗೆ ವಿದ್ಯುತ್ ಕೈ ಕೊಟ್ಟರೆ, ವಿದ್ಯುತ್ ಲೈನ್‌ಗಳು ಮುರಿದು ಬಿದ್ದರೆ ರೈಲು ಸೇವೆ ಸ್ಥಗಿತಗೊಳ್ಳಬಾರದು ಎಂಬ ಕಾರಣಕ್ಕೆ ಈ ವ್ಯವಸ್ಥೆ ಇದೆ' ಎಂದು ರೈಲ್ವೆ ತಾಂತ್ರಿಕ ಅಧಿಕಾರಿಗಳು ಮಾಹಿತಿ ನೀಡಿದರು.

ಸುರಕ್ಷಿತವಾಗಿ ಹೋಳಿ ಹಬ್ಬ ಆಚರಿಸುವಂತೆ ನೇತ್ರ, ಚರ್ಮರೋಗ ತಜ್ಞರ ಮನವಿ

ರಾಸಾಯನಿಕ ಬಣ್ಣಗಳಿಂದ ಕಣ್ಣಿಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಸಾಯನಿಕ ಮಿಶ್ರಿತ ಬಣ್ಣಗಳು ಕಣ್ಣಿಗೆ ಹಾಗೂ ಚರ್ಮಕ್ಕೆ ಹಾನಿ ಮಾಡುವ ಸಾಧ್ಯತೆ ಇರುತ್ತದೆ. ಆದ್ದರಿಂದ ಹೋಳಿ ಹಬ್ಬದ ಆಚರಣೆ ವೇಳೆ ನೈಸರ್ಗಿಕ ಬಣ್ಣಗಳನ್ನೇ ಬಳಸಬೇಕು' ಎಂದು ನೇತ್ರ ಹಾಗೂ ಚರ್ಮರೋಗ ತಜ್ಞರು ಮನವಿ ಮಾಡಿದ್ದಾರೆ.

ಶುಕ್ರವಾರ ನಡೆಯಲಿರುವ ಹೋಳಿ ಹಬ್ಬದ ಆಚರಣೆಗೆ ಹೋಟೆಲ್‌ಗಳು ಸೇರಿ ನಗರದ ವಿವಿಧೆಡೆ ಸಿದ್ಧತೆ ಮಾಡಿಕೊಳ್ಳಲಾಗಿದೆ. ತರಹೇವಾರಿ ಪಿಚಕಾರಿ ಹಾಗೂ ಬಣ್ಣಗಳ ಖರೀದಿ ಭರಾಟೆ ಹಬ್ಬದ ಮುನ್ನಾದಿನವಾದ ಗುರುವಾರ ಜೋರಾಗಿತ್ತು.

'ಬಣ್ಣ ಎರಚಿ ಸಂಭ್ರಮಿಸುವ ವೇಳೆ ಜನರು ತಮ್ಮ ಕಣ್ಣು, ಚರ್ಮ ರಕ್ಷಿಸಿಕೊಳ್ಳುವುದನ್ನು ನಿರ್ಲಕ್ಷಿಸುತ್ತಾರೆ. ಬಣ್ಣಗಳು ಕಣ್ಣುಗಳಿಗೆ ಚಿಮ್ಮಿದರೆ, ಬಣ್ಣಗಳಲ್ಲಿರುವ ಹಾನಿಕಾರಕ ರಾಸಾಯನಿಕಗಳು, ಲೋಹಗಳ ಕಣಗಳು ಮತ್ತು ವಿಷಕಾರಿ ವಸ್ತುಗಳು ಕಣ್ಣಿನ ಅಂಗಾಂಶವನ್ನು ಹಾನಿಗೊಳಿಸುವ ಸಂಭವವಿದೆ. ಕಣ್ಣಿನ ಉರಿಯೂತ, ಅಲರ್ಜಿ, ತಾತ್ಕಾಲಿಕ ಅಂಧತ್ವ ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಆದ್ದರಿಂದ ಹೂವುಗಳು, ತರಕಾರಿಗಳು ಮತ್ತು ಇತರ ನೈಸರ್ಗಿಕ ಮೂಲಗಳಿಂದ ತಯಾರಿಸಿದ ಬಣ್ಣಗಳನ್ನೇ ಬಳಸಬೇಕು. ಇವು ಚರ್ಮ ಮತ್ತು ಕಣ್ಣುಗಳಿಗೆ ಸುರಕ್ಷಿತವಾಗಿರುವ ಜತೆಗೆ ಪರಿಸರಸ್ನೇಹಿಯೂ ಹೌದು' ಎಂದು ವೈದ್ಯಕೀಯ ತಜ್ಞರು ತಿಳಿಸಿದ್ದಾರೆ.

'ವಾಟರ್ ಬಲೂನ್‌ಗಳಿಂದ ಮನರಂಜನೆ ಸಿಗುತ್ತದೆಯಾದರೂ ಅವುಗಳಿಂದ ಕಣ್ಣಿಗೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ, ಇವುಗಳಿಂದ ದೂರವಿರುವುದು ಉತ್ತಮ. ಈ ಸಮಯದಲ್ಲಿ ಕಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳುವುದು ತುಂಬಾ ಮುಖ್ಯ. ಕಣ್ಣು ಕೆಂಪಾಗುವಿಕೆ, ಉರಿ ಅಥವಾ ತುರಿಕೆ ಕಾಣಿಸಿಕೊಂಡರೆ ತಕ್ಷಣವೇ ವೈದ್ಯಕೀಯ ನೆರವನ್ನು ಪಡೆಯಬೇಕು. ಹಬ್ಬದ ಸಂಭ್ರಮದಲ್ಲಿ ಮುಳುಗುವುದಕ್ಕೂ ಮೊದಲು ನಮ್ಮ ಕಣ್ಣುಗಳ ರಕ್ಷಣೆಯನ್ನೂ ನೋಡಿಕೊಳ್ಳಬೇಕು' ಎಂದು ನಾರಾಯಣ ನೇತ್ರಾಲಯದ ಉಪಾಧ್ಯಕ್ಷ ಡಾ. ನರೇನ್ ಶೆಟ್ಟಿ ಕಿವಿಮಾತು ಹೇಳಿದ್ದಾರೆ.

ಹೋಳಿ ಹಬ್ಬದ ಮುನ್ನಾ ದಿನವಾದ ಗುರುವಾರ ಅವೆನ್ಯೂ ರಸ್ತೆಯಲ್ಲಿ ಬಣ್ಣ ಎರಚುವ ಪಿಚಕಾರಿ ಖರೀದಿ ನಡೆಸಿದ ನಾಗರಿಕರು –ಪ್ರಜಾವಾಣಿ ಚಿತ್ರ

> **ರಾಸಾಯನಿಕಯುಕ್ತ ಬಣ್ಣಗಳಿಂದ ಅಲರ್ಜಿ, ತುರಿಕೆ, ಅನುಭವ ಆಗುತ್ತದೆ. ಹೋಳಿ ಆಚರಣೆ ಬಳಿಕ ಆದಷ್ಟು ಬೇಗ ನೀರಿನಿಂದ ಚರ್ಮ ಸ್ವಚ್ಛಗೊಳಿಸಬೇಕು**
> **ಡಾ. ಗಿರೀಶ್ ಎಂ.ಎಸ್.,** ಚರ್ಮರೋಗ ತಜ್ಞ, ರಾಜಾಜಿನಗರದ ಇಎಸ್‌ಐ ಆಸ್ಪತ್ರೆ

> **ಹೋಳಿ ಆಚರಣೆ ವೇಳೆ ಕಣ್ಣುಗಳ ರಕ್ಷಣೆಗೆ ಆದ್ಯತೆ ನೀಡಬೇಕು. ಹಾನಿಕಾರಕ ಬಣ್ಣವು ಕಣ್ಣಿಗೆ ಸೋಂಕು ಉಂಟುಮಾಡಲಿದೆ. ಎಚ್ಚರ ತಪ್ಪಿದರೆ ದೃಷ್ಟಿಗೆ ದೋಷ**
> **ಡಾ. ರೋಹಿತ್ ಶೆಟ್ಟಿ** ನಾರಾಯಣ ನೇತ್ರಾಲಯದ ಅಧ್ಯಕ್ಷ

ನೇತ್ರ ತಜ್ಞರು ನೀಡಿದ ಸಲಹೆಗಳು

- ಬಣ್ಣಗಳಿಂದ ಕಣ್ಣಿಗೆ ಹಾನಿಯಾಗುವುದನ್ನು ತಪ್ಪಿಸಲು ರಕ್ಷಣಾತ್ಮಕ ಕನ್ನಡಕಗಳನ್ನು ಧರಿಸಿ
- ಬಣ್ಣ ಎರಚುವ ವೇಳೆ ಕಣ್ಣುಗಳನ್ನು ಮುಚ್ಚಿಕೊಳ್ಳಿ
- ಬಣ್ಣಗಳು ಕಣ್ಣಿನ ಒಳಕ್ಕೆ ಹೋಗುತ್ತಿದ್ದಂತೆ ನೀರಿನಿಂದ ಕಣ್ಣುಗಳನ್ನು ತೊಳೆದುಕೊಳ್ಳಿ
- ಬಣ್ಣ ಅಂಟಿಕೊಳ್ಳುವುದನ್ನು ತಪ್ಪಿಸಲು ಕಣ್ಣಿನ ಸುತ್ತಲೂ ಕೊಬ್ಬರಿ ಎಣ್ಣೆ ಹಚ್ಚಿಕೊಳ್ಳಿ
- ವಾಟರ್ ಬಲೂನ್‌ಗಳನ್ನು ಬಳಸಬೇಡಿ
- ಬಣ್ಣ ಕಣ್ಣಿಗೆ ಬಿದ್ದಲ್ಲಿ ಉಜ್ಜಬೇಡಿ
- ಕಣ್ಣಿಗೆ ಹಾನಿಯಾದಲ್ಲಿ ಕೂಡಲೇ ವೈದ್ಯರನ್ನು ಸಂಪರ್ಕಿಸಿ

ಚರ್ಮ ರೋಗ ತಜ್ಞರು ನೀಡಿದ ಸಲಹೆಗಳು

- ತ್ವಚೆ, ಕೈ–ಕಾಲುಗಳಿಗೆ ಅಗತ್ಯವಿರುವಷ್ಟು ಮಾಯಿಶ್ಚರೈಸರ್ ಕ್ರೀಮ್ ಮತ್ತು ಸನ್ ಕ್ರೀಮ್ ಬಳಸಿ
- ತಲೆ ಕೂದಲಿಗೆ ಎಣ್ಣೆಯನ್ನು ಹಚ್ಚಿ
- ತುಂಬು ತೋಳಿನ ಬಟ್ಟೆಯನ್ನು ಧರಿಸಿ
- ಸಿಂಥೆಟಿಕ್ ಬಣ್ಣವು ಕೂದಲಿನ ಬುಡ, ಉಗುರಿನ ಕೆಳಗೆ ಅಥವಾ ಕಿವಿ ಹಿಂದೆ ಉಳಿದರೆ ಚರ್ಮಕ್ಕೆ ಸಂಬಂಧಿಸಿದ ಸಮಸ್ಯೆ ಕಾಣಿಸಿಕೊಳ್ಳುವ ಸಾಧ್ಯತೆ ಇರಲಿದೆ

ಮನೆ, ರಸ್ತೆಗಳಲ್ಲೇ ಉಳಿದ ಕಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿ ಕಾಂಪ್ಯಾಕ್ಟರ್‌ಗಳಲ್ಲಿರುವ ತ್ಯಾಜ್ಯ ವಿಲೇವಾರಿ ಆಗದೇ ನಗರದ ಹಲವೆಡೆ ಮನೆ, ರಸ್ತೆಗಳಲ್ಲಿ ಕಸ ಉಳಿದುಕೊಂಡಿದೆ.

'ಅವೈಜ್ಞಾನಿಕ ತ್ಯಾಜ್ಯ ವಿಲೇವಾರಿಯಿಂದಾಗಿ ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿ ಸಮಸ್ಯೆ ಉಂಟಾಗಿದೆ. ಇಲ್ಲಿ ತ್ಯಾಜ್ಯ ವಿಲೇವಾರಿ ಬೇಡ' ಎಂದು ತ್ಯಾಜ್ಯ ತುಂಬಿದ ಸುಮಾರು 300 ಕಾಂಪ್ಯಾಕ್ಟರ್‌ಗಳನ್ನು ಕಣ್ಣೂರು ಗ್ರಾಮ ಪಂಚಾಯಿತಿ ಸದಸ್ಯರು ಮಂಗಳವಾರ ಬೆಳಿಗ್ಗೆಯಿಂದ ತಡೆ ಹಿಡಿದಿದ್ದಾರೆ.

ಕಾಂಪ್ಯಾಕ್ಟರ್‌ಗಳು ಬಾರದ ತ್ಯಾಜ್ಯ ತುಂಬಿರುವ ಆಟೊ ಟಿಪ್ಪರ್‌ಗಳು ನಗರದ ವಿವಿಧೆಡೆ ರಸ್ತೆಗಳಲ್ಲೇ ನಿಂತಿವೆ. ಹೀಗಾಗಿ, ಮನೆ ಮನೆಗಳಿಂದ ಗುರುವಾರ ತ್ಯಾಜ್ಯ ಸಂಗ್ರಹವಾಗಿಲ್ಲ. ಮನೆಗಳಲ್ಲಿ, ವಾಣಿಜ್ಯ ಪ್ರದೇಶಗಳಲ್ಲಿ ಹಸಿ–ಒಣ ತ್ಯಾಜ್ಯ ರಸ್ತೆಗಳಲ್ಲೇ ಉಳಿದಿದೆ.

ವಿಲೇವಾರಿಗೆ ವಿರೋಧ: 'ಅವೈಜ್ಞಾನಿಕವಾಗಿ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದ್ದು, ಅದು ನಿಲ್ಲುವವರೆಗೂ ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿ ಕಾಂಪ್ಯಾಕ್ಟರ್‌ಗಳಿಂದ ತ್ಯಾಜ್ಯ ವಿಲೇವಾರಿ ಮಾಡಲು ಬಿಡುವುದಿಲ್ಲ' ಎಂದು ಕಣ್ಣೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್. ಅಶೋಕ್ ತಿಳಿಸಿದರು.

ಬಸವರಾಜ ಮಾರುಕಟ್ಟೆ ಸಮೀಪ ಗುರುವಾರ ಬಿದ್ದಿದ್ದ ಕಸದ ರಾಶಿ ಪ್ರಜಾವಾಣಿ ಚಿತ್ರ

'ಮಂಗಳವಾರ ಬೆಳಿಗ್ಗೆಯಿಂದ ಕಾಂಪ್ಯಾಕ್ಟರ್‌ಗಳನ್ನು ತಡೆದಿದ್ದೇವೆ. ಜಿಲ್ಲಾ ಪಂಚಾಯಿತಿ ಸಿಇಒ ಅವರು ಅಧಿಕಾರಿಗಳೊಂದಿಗೆ ಗುರುವಾರ ಸಭೆ ನಡೆಸಿದ್ದಾರೆ. 19ರಂದು ಸ್ಥಳ ಪರಿಶೀಲನೆ ನಡೆಸುವುದಾಗಿ ಹೇಳಿದ್ದಾರೆ. ಅವರು ಬಂದು ಗ್ರಾಮಸ್ಥರ ಸಂಕಷ್ಟ ಕೇಳುವವರೆಗೆ ತ್ಯಾಜ್ಯ ವಿಲೇವಾರಿಗೆ ನಾವು ಅವಕಾಶ ಮಾಡಿಕೊಡುವುದಿಲ್ಲ' ಎಂದರು.

ಸಮಸ್ಯೆ ಇಲ್ಲ: 'ನಗರದಿಂದ ತ್ಯಾಜ್ಯ ವಿಲೇವಾರಿ ಆಗುತ್ತಿದೆ. ಸದ್ಯಕ್ಕೆ ಸಮಸ್ಯೆ ಆಗಿಲ್ಲ. ಕಾಂಪ್ಯಾಕ್ಟರ್‌ಗಳಲ್ಲಿರುವ ತ್ಯಾಜ್ಯವು ವಿಲೇವಾರಿ ಆಗುತ್ತಿದೆ' ಎಂದು ಬಿಎಸ್‌ಡಬ್ಲ್ಯುಎಂಎಲ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಲೋಕೇಶ್ ತಿಳಿಸಿದರು.

'19ಕ್ಕೆ ಪರಿಶೀಲನೆ'

'ಮಿಟ್ಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿ ತ್ಯಾಜ್ಯ ವಿಲೇವಾರಿಯಿಂದ ಆಗುತ್ತಿರುವ ಸಮಸ್ಯೆ ಬಗ್ಗೆ ಇದೇ 19ರಂದು ಸ್ಥಳ ಪರಿಶೀಲನೆ ನಡೆಯಲಿದೆ' ಎಂದು ಬೆಂಗಳೂರು ಜಿಲ್ಲಾ ಪಂಚಾಯಿತಿ ಸಿಇಒ ಲತಾ ಕುಮಾರಿ ತಿಳಿಸಿದರು.

ಕಣ್ಣೂರು ಗ್ರಾಮ ಪಂಚಾಯಿತಿ ಅಧಿಕಾರಿಗಳ ಜೊತೆ ಗುರುವಾರ ಚರ್ಚಿಸಿದ ಅವರು, ಮಿಟ್ಟಗಾನಹಳ್ಳಿಯಲ್ಲಿನ ಸಮಸ್ಯೆಯ ವಿವರ ಪಡೆದರು. ಬಿಎಸ್‌ಡಬ್ಲ್ಯುಎಂಎಲ್‌ನ ಎಂಜಿನಿಯರ್‌ಗಳೂ ಸಭೆಯಲ್ಲಿ ಭಾಗವಹಿಸಿದ್ದರು.

'ಸ್ಥಳ ಪರಿಶೀಲಿಸಿ, ಸಮಸ್ಯೆ ಅರಿತು ಮುಂದಿನ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ತಿಳಿಸಿದರು. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಕಣ್ಣೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಅಶೋಕ್ ಅವರು ಪತ್ರ ಬರೆದಿದ್ದು, 'ಅವೈಜ್ಞಾನಿಕ ತ್ಯಾಜ್ಯ ವಿಲೇವಾರಿ ಸ್ಥಗಿತಗೊಳಿಸಬೇಕು. ಸ್ಥಳೀಯರ ಆರೋಗ್ಯ ಕಾಪಾಡಬೇಕು' ಎಂದು ಕೋರಿದ್ದರು.

ರಿಚ್ಮಂಡ್ ವೃತ್ತದಿಂದ ಮಿಷನ್ ರಸ್ತೆಯುವರೆಗೆ ಸೌಂದರ್ಯೀಕರಣ

ಮೇಲ್ಸೇತುವೆ ಪಿಲ್ಲರ್‌ಗಳಿಗೆ ಹೊಸರೂಪ

ಬಣ್ಣಗಳಿಂದ ಆಕರ್ಷಕವಾಗಿರುವ ರಿಚ್ಮಂಡ್ ವೃತ್ತದ ಮೇಲ್ಸೇತುವೆಯ ಪಿಲ್ಲರ್‌ಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಚ್ಮಂಡ್ ವೃತ್ತದಿಂದ ಮಿಷನ್ ರಸ್ತೆಗೆ ಸಂಪರ್ಕ ಕಲ್ಪಿಸುವ ಮೇಲ್ಸೇತುವೆಯ ಕೆಳಭಾಗ ಹಾಗೂ ಪಿಲ್ಲರ್‌ಗಳಿಗೆ ಹೊಸರೂಪ ಬಂದಿದೆ.

ಎಂಎಐಎ ಸಂಸ್ಥೆಯು ಮೇಲ್ಸೇತುವೆಯ ಕೆಳಗಿನ ಸುಮಾರು 1,270 ಚದರ ಮೀಟರ್ ಸ್ಥಳವನ್ನು ಆಕರ್ಷಕವಾಗಿ ಪರಿವರ್ತಿಸಿದ್ದು, ಸ್ಥಳೀಯ ಸಸ್ಯಪ್ರಭೇದಗಳನ್ನು ಬೆಳೆಸಿದೆ.

'ನಗರದ ಜನನಿಬಿಡ ಜಂಕ್ಷನ್‌ಗಳಲ್ಲಿ ಒಂದಾಗಿರುವ ಈ ಮೇಲ್ಸೇತುವೆಯಡಿ ಸೌಂದರ್ಯೀಕರಣ ಕೆಲಸ ಸವಾಲಾಗಿತ್ತು. ಸೂರ್ಯರಶ್ಮಿಯ ಕೊರತೆಯ ಜೊತೆಗೆ ಮಣ್ಣೂ ಆಳವಾಗಿರಲಿಲ್ಲ. ವಾಹನದಟ್ಟಣೆಯಿಂದಾಗಿ ವಾಯುಮಾಲಿನ್ಯವೂ ಇತ್ತು. ಈ ಸವಾಲುಗಳ ಹೊರತಾಗಿಯೂ ಎಂಎಐಎ ಪ್ರಯತ್ನಗಳ ಮೂಲಕ ಸಸ್ಯಗಳನ್ನು ಬೆಳೆಸಲಾಗಿದೆ. ಮೇಲ್ಸೇತುವೆ ಸ್ತಂಭಗಳನ್ನೂ ಪರಿಸರಪೂರಕವಾಗಿ ಚಿತ್ರಿಸಲಾಗಿದೆ' ಎಂದು ಎಂಎಐಎ ಎಸ್ಟೇಟ್ಸ್‌ನ ಸ್ಥಾಪಕ ಮತ್ತು ಸಿಇಒ ಮಾಯಾಂಕ್ ರುಯಿಯಾ ತಿಳಿಸಿದ್ದಾರೆ.

'ರಿಚ್ಮಂಡ್ ವೃತ್ತದಲ್ಲಿ ಕೈಗೊಂಡಿರುವ ಕೆಲಸಗಳು ಸಮುದಾಯ ಆಧಾರಿತ, ಸುಸ್ಥಿರ ಜೀವನಕ್ಕೆ ಪೂರಕವಾಗಿವೆ. ನಮ್ಮ ಯೋಜನೆಗಳು ಪರಿಸರಸ್ನೇಹಿಯಾಗಿದ್ದು, ಜೀವನಗುಣಮಟ್ಟವನ್ನು ಶ್ರೀಮಂತಗೊಳಿಸುವ ರೀತಿಯಲ್ಲಿವೆ' ಎಂದರು.

ಸುಂಕ ನೀತಿ: ದೇಶೀಯ ರಫ್ತುದಾರರ ಹಿತರಕ್ಷಣೆಗೆ ಬದ್ಧ– ಗೋಯಲ್

ಪೀಯೂಷ್ ಗೋಯಲ್

ನವದೆಹಲಿ (ಪಿಟಿಐ): ಅಮೆರಿಕದ ಸುಂಕ ನೀತಿಯಿಂದ ತೊಂದರೆಗೆ ಸಿಲುಕುವ ದೇಶೀಯ ಚರ್ಮ ಮತ್ತು ಜವಳಿ ರಫ್ತುದಾರರ ಹಿತಕಾಯಲು ಸರ್ಕಾರ ಬದ್ಧವಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯವು ಗುರುವಾರ ಭರವಸೆ ನೀಡಿದೆ.

ಏ. 2ರಿಂದ ಅಮೆರಿಕದ ಅಧ್ಯಕ್ಷ ಟ್ರಂಪ್ ಅವರು, ಭಾರತದಿಂದ ರಫ್ತು ಮಾಡುವ ಉತ್ಪನ್ನಗಳ ಮೇಲೆ ಪ್ರತಿ ಸುಂಕ ಹೇರುವುದಾಗಿ ಘೋಷಿಸಿದ್ದಾರೆ. ಹಾಗಾಗಿ, ರಫ್ತು ದಾರರೊಟ್ಟಿಗೆ ನಡೆದ ವರ್ಚುವಲ್ ಸಭೆಯಲ್ಲಿ ಪಾಲ್ಗೊಂಡಿದ್ದ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು, ಟ್ರಂಪ್ ಸುಂಕ ನೀತಿಗೆ ಸಂಬಂಧಿಸಿದಂತೆ ಚರ್ಚಿಸಿದರು.

ದೇಶೀಯ ರಫ್ತುದಾರರ ಹಿತಕಾಯಲು ಸರ್ಕಾರ ಸಿದ್ಧವಿದೆ ಎಂದು ಸಚಿವರು ಭರವಸೆ ನೀಡಿದರು. ರಫ್ತು ಉತ್ತೇಜನ ಮಂಡಳಿಗಳು, ಕೈಗಾರಿಕಾ ಸಂಘಟನೆಯ ಪ್ರತಿನಿಧಿಗಳು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಭಾರತದ ರಫ್ತು ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸುವ ಬಗ್ಗೆ ಚರ್ಚಿಸಲಾಯಿತು.

'ಟ್ರಂಪ್ ಸುಂಕ ನೀತಿಯಿಂದ ಸೃಷ್ಟಿಯಾಗುವ ಸ್ಪರ್ಧಾತ್ಮಕತೆ ಎದುರಿಸಲು ರಫ್ತುದಾರರು ಸಜ್ಜಾಗಬೇಕಿದೆ. ಕೈಗಾರಿಕಾ ವಲಯದ ಮಧ್ಯಸ್ಥಗಾರರು ಜಾಗತಿಕ ಸವಾಲುಗಳನ್ನು ಎದುರಿಸಲಿದ್ದಾರೆ ಎಂಬ ಆಶಾವಾದ ಹೊಂದಿದ್ದೇವೆ. ದೇಶದ ರಫ್ತು ವಹಿವಾಟು ಹೆಚ್ಚಳಕ್ಕೆ ಪೂರಕವಾದ ಕಾರ್ಯತಂತ್ರ ರೂಪಿಸುವತ್ತ ನಾವು ಒತ್ತು ನೀಡಬೇಕಿದೆ' ಎಂದು ಗೋಯಲ್ 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

ಹುಬ್ಬಳ್ಳಿ ಫ್ಲೈಓವರ್: ಹೆಚ್ಚುವರಿ ₹51 ಕೋಟಿ ಅನುದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಹುಬ್ಬಳ್ಳಿಯ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದ ಬಳಿ ಮಂದಗತಿಯಲ್ಲಿ ಸಾಗಿರುವ ಫ್ಲೈ ಓವರ್ ಕಾಮಗಾರಿ ಪ್ರಗತಿ ಕುರಿತು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹಾಗೂ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಜಿಲ್ಲಾಡಳಿತದ ಅಧಿಕಾರಿಗಳೊಂದಿಗೆ ವಿಡಿಯೋ ಕಾನ್ಫರೆನ್ಸ್ ಸಭೆ ನಡೆಸಿದರು.

ನಗರದ ಹೃದಯ ಭಾಗದಲ್ಲಿ ನಿರ್ಮಿಸುತ್ತಿರುವ 3.61 ಕಿ.ಮೀ.ಯ ಎಲಿವೇಟೆಡ್ ರಸ್ತೆ ನಿರ್ಮಾಣಕ್ಕೆ ಕೇಂದ್ರ ಅಗತ್ಯ ಅನುದಾನ ನೀಡುತ್ತಿದ್ದರೂ ಕಾಮಗಾರಿ ವಿಳಂಬವಾಗಿದೆ ಎಂದು ಗಡ್ಕರಿ ಅಸಮಾಧಾನ ವ್ಯಕ್ತಪಡಿಸಿದರು.

ಕಾಮಗಾರಿ ಇನ್ನೂ ಅರ್ಧದಷ್ಟೂ ಪೂರ್ಣಗೊಂಡಿಲ್ಲ. ರಾಜ್ಯ ಸರ್ಕಾರ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ತೋರಿದ ವಿಳಂಬ ನೀತಿಯೇ ಕಾರಣ ಎಂದು ಸಚಿವರಿಬ್ಬರೂ ಕಿಡಿಕಾರಿದರು.

ಈ ಕಾಮಗಾರಿಗೆ ಆರಂಭದಲ್ಲಿ ₹196.99 ಕೋಟಿ ನಿಗದಿಪಡಿಸಲಾಗಿತ್ತು. ಬಳಿಕ ಯೋಜನಾ ವೆಚ್ಚ ₹298 ಕೋಟಿಗೆ ಏರಿತ್ತು. ಈಗ ₹51.49 ಕೋಟಿ ಹೆಚ್ಚುವರಿ ಅನುದಾನ ನೀಡಲು ಗಡ್ಕರಿ ಸಮ್ಮತಿಸಿದ್ದಾರೆ. ಹೆದ್ದಾರಿ ಸಚಿವಾಲಯದ ಮೂಲಕ ವಿಶೇಷ ಹಣಕಾಸು ನೆರವು ನೀಡುವುದಾಗಿ ಭರವಸೆ ನೀಡಿದರು. ಕೂಡಲೇ ಕಾಮಗಾರಿಗೆ ವೇಗ ನೀಡಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

PARAS

ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಅಮಿಟೆಡ್

LIC HFL LIC HOUSING FINANCE LTD

1ನೇ ಮಹಡಿ, ಜೀವನ್ ಮಂಗಲ್ ಕಟ್ಟಡ, ಹೇಯ್ಸ್ ರಸ್ತೆ, ಬೆಂಗಳೂರು –560025. ದೂ: 080–43003651

ಸ್ವಾಧೀನತೆ ಸೂಚನೆ

ಕೆಳಸಹಿದಾರರು, ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು, ಸೆಕ್ಯುರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆ್ಯಕ್ಟ್ 2002 ರ ಅನ್ವಯ ನಿಯಮ 9ನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ನೋಟೀಸಿನ ದಿನಾಂಕದಿಂದ 60 ದಿನಗಳ ಒಳಗೆ ನೋಟೀಸಿನಲ್ಲಿ ತಿಳಿಸಿರುವ ಕೆಳಗೆ ಸೂಚಿಸಿರುವ ಮೊತ್ತವನ್ನು ಪಾವತಿಸಲು ಕೆಳಕಂಡ ಸಾಲಗಾರರಿಗೆ ಕೆಳಗೆ ನಮೂದಿಸಿರುವ ದಿನಾಂಕದಂದು ತಗಾದೆ ಸೂಚನೆ ನೀಡಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ನಿಯಮ 9 ರಲ್ಲಿ ಪ್ರದತ್ತವಾದ ಅಧಿಕಾರದ ಅನ್ವಯ ಪ್ರಕರಣ 13(4)ರ ಆ್ಯಕ್ಟ್ ನಂತೆ ನಿಯಮ 9ನ್ನು ಓದಿಕೊಂಡಂತೆ ಈ ಕೆಳಗೆ ನಮೂದಿಸಿದ ದಿನಾಂಕದಂದು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದು ಈ ಮೂಲಕ ಸಾಲಗಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸಲಾಗುತ್ತಿದೆ.

ಸಾರ್ವಜನಿಕರು ಹಾಗೂ ನಿರ್ದಿಷ್ಟವಾಗಿ ಸಾಲಗಾರರು ಈ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, ಇವರಿಗೆ ಡಿಮ್ಯಾಂಡ್ ನೋಟೀಸಿನ ದಿನಾಂಕದಿಂದ ಸಂದಾಯವಾಗತಕ್ಕದ್ದು ಮೊಬಲಗು ಬಡ್ಡಿ ಪೀನಲ್ ಬಡ್ಡಿ, ಖರ್ಚು ಮತ್ತು ವೆಚ್ಚ ಇವುಗಳಿಗೆ ಋಣಬಾಧ್ಯವಾಗಿರುತ್ತದೆ.

ಸಾಲಗಾರರ ಗಮನಕ್ಕೆ ತರುವುದೇನೆಂದರೆ, ಭದ್ರತಾ ಆಸ್ತಿಗಳನ್ನು ಹಿಂಪಡೆಯುವ ಕಾಲಾವಕಾಶ ಕಾಯಿದೆಯ ಸೆಕ್ಷನ್ 13 (8) ರ ಅನ್ವಯ ಇರುತ್ತದೆ.

ಸಾಲಗಾರರ ಹೆಸರು ಮತ್ತು ಸಾಲದ ಸಂ., ಸ್ವಾಧೀನತೆ ಸ್ವರೂಪ ಮತ್ತು ದಿನಾಂಕ	ಡಿಮ್ಯಾಂಡ್ ನೋಟೀಸ್ ದಿನಾಂಕ	ನೋಟೀಸ್ ಮೊತ್ತ	ಸ್ಥಿರಾಸ್ತಿ ವಿವರಗಳು
ಶ್ರೀ ಕತ್ರೋತ್ ಗೌತಮ್ ರಾಜ್ ಸಾಲದ ಖಾತಾ ಸಂ. 411900015454 ಸಾಂಕೇತಿಕ ಸ್ವಾಧೀನತೆ ದಿನಾಂಕ : 12.03.2025	26.12.2024	ರೂ. 1,15,11,467.70	ಷೆಡ್ಯೂಲ್ "ಎ" ಆಸ್ತಿ : ವಸ್ತು ಸಂಖ್ಯೆ 1 : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ ಸೈಟ್ ನಂ. 73, ಬಿಬಿಎಂಪಿ ಖಾತಾ ನಂ. 198/73, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 80 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 50 ಅಡಿ, ಒಟ್ಟು ವಿಸ್ತೀರ್ಣ 4,000 ಚ.ಅಡಿ, ಸೈಟ್ ಸೈಟ್ ನಂ. 74, ಬಿಬಿಎಂಪಿ ಖಾತಾ ನಂ. 199/74, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 80 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 50 ಅಡಿ, ಒಟ್ಟು ವಿಸ್ತೀರ್ಣ 4,000 ಚ.ಅಡಿ, ಮತ್ತು ಸೈಟ್ ನಂ. 75, ಬಿಬಿಎಂಪಿ ಖಾತಾ ನಂ. 200/75, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 80 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 50 ಅಡಿ, ಒಟ್ಟು ವಿಸ್ತೀರ್ಣ 4,000ಚ.ಅಡಿ, , ಎಲ್ಲವೂ ಒಟ್ಟಾಗಿ 12,000ಚದರ ಅಡಿಯು ಪರಿವರ್ತಿತ ಸರ್ವೆ ನಂ. 84/3, 84/4, 84/5, 86/1, 86/3 ಮತ್ತು 83/8 ಕೃಷಿಯಿಂದ ಕೃಷಿಯೇತರ ವಾಸಯೋಗ್ಯ ಉದ್ದೇಶಕ್ಕಾಗಿ ಪರಿವರ್ತಿತವಾದ ಕಚೇರಿ ಆದೇಶ ಸಂ. ಬಿ.ಡಿಐಎಸ್.ಎಎಲ್‌ಎನ್. ಎಸ್‌ಆರ್(ಎಸ್)85/2000–01, ದಿನಾಂಕ 22.09.2000 ಮತ್ತು ಕಚೇರಿ ಆದೇಶ ಸಂ. ಬಿ.ಡಿಐಎಸ್. ಎಎಲ್‌ಎನ್. ಎಸ್‌ಆರ್ (ಎಸ್) 86/ 2000–01, ದಿನಾಂಕ 23.09.2000 ವಿಶೇಷ ಸಹಾಯಕ ಆಯುಕ್ತರು, ಬೆಂಗಳೂರು ಜಿಲ್ಲೆ ಇವರಿಂದ ನೀಡಲ್ಪಟ್ಟಿದ್ದು, ಕೆಂಬತ್ತಹಳ್ಳಿ ಗ್ರಾಮ. ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ನಂ. 76,77 ಮತ್ತು 79, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಸೈಟ್ ನಂ. 72. ವಸ್ತು ಸಂಖ್ಯೆ 2 : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಸೈಟ್ ನಂ. 72, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಯೋಜಿತ ಖಾತಾ ನಂ. 197/72, ವಿಸ್ತೀರ್ಣ; ಪೂರ್ವದಿಂದ ಪಶ್ಚಿಮಕ್ಕೆ: 80 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ:(23+31)/2 ಅಡಿ, ಒಟ್ಟು ವಿಸ್ತೀರ್ಣ 2160 ಚ.ಅಡಿಯು ಪರಿವರ್ತಿತ ಸರ್ವೆ ನಂ. 80, 84/3, 84/4 ಮತ್ತು 84/5ರಲ್ಲಿದ್ದು, ಕೃಷಿಯಿಂದ ಕೃಷಿಯೇತರ ವಾಸಯೋಗ್ಯ ಉದ್ದೇಶಕ್ಕಾಗಿ ಪರಿವರ್ತಿತವಾದ ಕಚೇರಿ ಆದೇಶ ಸಂ. ಬಿ.ಡಿಐಎಸ್.ಎಎಲ್‌ಎನ್. ಎಸ್‌ಆರ್(ಎಸ್)89/2000–01, ದಿನಾಂಕ 04.10.2000, ಕಚೇರಿ ಆದೇಶ ಸಂ. ಬಿ.ಡಿಐಎಸ್. ಎಎಲ್‌ಎನ್.ಎಸ್‌ಆರ್ (ಎಸ್) 85/2000–01, ದಿನಾಂಕ 22.09.2000 ಮತ್ತು ಕಚೇರಿ ಮೆಮರಾಂಡಮ್ ಸಂ. ಬಿ.ಡಿಐಎಸ್.ಎಎಲ್‌ಎನ್. ಎಸ್‌ಆರ್ (ಎಸ್) 86/ 2000–01 ದಿನಾಂಕ 23.09.2000, ವಿಶೇಷ ಸಹಾಯಕ ಆಯುಕ್ತರು, ಬೆಂಗಳೂರು ಜಿಲ್ಲೆ ಇವರಿಂದ ನೀಡಲ್ಪಟ್ಟಿದ್ದು, ಕೆಂಬತ್ತಹಳ್ಳಿ ಗ್ರಾಮ. ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ನಂ. 79, ಉತ್ತರಕ್ಕೆ: ಸೈಟ್ ನಂ. 73, ದಕ್ಷಿಣಕ್ಕೆ: ಖಾಸಗಿ ಆಸ್ತಿ. ಸಂಯೋಜಿತ ಷೆಡ್ಯೂಲ್ "ಎ" ಆಸ್ತಿ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಸೈಟ್ ನಂ. 72, 73, 74 ಮತ್ತು 75, ಪ್ರಸಕ್ತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಯೋಜಿತ ಖಾತಾ ನಂ. 197/72/ಸರ್ವೆ ನಂ. 84/5, ಒಟ್ಟು ವಿಸ್ತೀರ್ಣ 14160 ಚದರ ಅಡಿಯು ಪರಿವರ್ತಿತ ಸರ್ವೆ ನಂ. 80, 84/3, 84/4, 84/5, 86/1, 86/3 ಮತ್ತು 83/8 ಕೃಷಿಯಿಂದ ಕೃಷಿಯೇತರ ವಾಸಯೋಗ್ಯ ಉದ್ದೇಶಕ್ಕಾಗಿ ಪರಿವರ್ತಿತವಾದ ಕಚೇರಿ ಆದೇಶ ಸಂ.ಬಿ.ಡಿಐಎಸ್.ಎಎಲ್‌ಎನ್. ಎಸ್‌ಆರ್(ಎಸ್)89/2000–01, ದಿನಾಂಕ 04.10.2000, ಕಚೇರಿ ಆದೇಶ ಸಂ. ಬಿ.ಡಿಐಎಸ್. ಎಎಲ್‌ಎನ್. ಎಸ್‌ಆರ್ (ಎಸ್) 85/ 2000–01, ದಿನಾಂಕ 22.09.2000 ಮತ್ತು ಕಚೇರಿ ಮೆಮರಾಂಡಮ್ ಸಂ. ಬಿ.ಡಿಐಎಸ್.ಎಎಲ್‌ಎನ್. ಎಸ್‌ಆರ್ (ಎಸ್) 86/ 2000–01 ದಿನಾಂಕ 23.09.2000, ವಿಶೇಷ ಸಹಾಯಕ ಆಯುಕ್ತರು, ಬೆಂಗಳೂರು ಜಿಲ್ಲೆ ಇವರಿಂದ ನೀಡಲ್ಪಟ್ಟಿದ್ದು, ಕೆಂಬತ್ತಹಳ್ಳಿ ಗ್ರಾಮ. ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ನಂ. 76,77,78 ಮತ್ತು 79, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಾಸಗಿ ಆಸ್ತಿ. ಷೆಡ್ಯೂಲ್ "ಬಿ" ಆಸ್ತಿ : 505 ಚದರ ಅಡಿಗಳಷ್ಟು ಭಾಗ ಮಾಡಲಾಗದ ಹಿತಾಸಕ್ತಿ ಈ ಮೇಲೆ ಹೆಸರಿಸಿದ ಸಂಯುಕ್ತ ಷೆಡ್ಯೂಲ್ "ಎ" ಸ್ಥಿರಾಸ್ತಿಯಲ್ಲಿದೆ (ಅಂದರೆ ಬಿಲ್ಟಪ್ ಪ್ರದೇಶಕ್ಕೆ ಸಮನಾಂತರವಾಗಿರುವಂತಹುದು). ಷೆಡ್ಯೂಲ್ "ಸಿ" ಆಸ್ತಿ: ವಾಸಯೋಗ್ಯ ಅಪಾರ್ಟ್‌ಮೆಂಟ್/ಫ್ಲ್ಯಾಟ್ ನಂ. 201, ಎರಡನೇ ಮಹಡಿಯಲ್ಲಿದ್ದು, ವಿಸ್ತೀರ್ಣ 1390 ಚದರ ಅಡಿಗಳ ಸುಪರ್ ಬಿಲ್ಟಪ್ ಪ್ರದೇಶ, ಮೂರು ಬೆಡ್‌ರೂಮ್‌ಗಳು, ಜೊತೆಗೆ ಆರ್‌ಸಿಸಿ ಮೇಲ್ಛಾವಣಿ ಮತ್ತು ವಿಟ್ರಿಫೈಡ್ ನೆಲಹಾಸು ಜೊತೆಗೆ ಒಂದು ಕಾರು ನಿಲುಗಡೆಗೆ ಸ್ಥಳಾವಕಾಶವು ಸೇರಿದಂತೆ ಸಮನಾಂತರ ಪಾಲು ಇರುವ ಸಾಮಾನ್ಯ ಪ್ರದೇಶಗಳಾದ ಪ್ಯಾಸೇಜ್‌ಗಳು, ಸೌಲಭ್ಯಗಳು, ಲಾಬಿಗಳು, ಮೆಟ್ಟಿಲುಗಳು ಮತ್ತು ಲಿಫ್ಟ್‌ಗಳನ್ನು ಒಳಗೊಂಡಂತೆ ಸಂಯುಕ್ತ ಷೆಡ್ಯೂಲ್ "ಎ" ಆಸ್ತಿಯಲ್ಲಿ ನಿರ್ಮಿಸಲಾದ ಬಹುಮಹಡಿ ವಾಸಯೋಗ್ಯ ಕಟ್ಟಡವನ್ನು "ಆರ್ ಎನ್ ಸ್ಕ್ವೇರ್" ಎಂದು ಕರೆಯಲಾಗುತ್ತಿದೆ.
ಶ್ರೀ ಬಾಲಕೃಷ್ಣ ಗೋಗಿನೇನಿ ಸಾಲದ ಖಾತಾ ನಂ 411900015117 ಸಾಂಕೇತಿಕ ಸ್ವಾಧೀನತೆ ದಿನಾಂಕ : 12.03.2025	05.12.2024	ರೂ. 9536857.00	ಸಂಯೋಜಿತ ಷೆಡ್ಯೂಲ್ "ಎ" ಆಸ್ತಿ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಸೈಟ್ ನಂ. 72, 73, 74 ಮತ್ತು 75, ಪ್ರಸಕ್ತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯ ಸಂಯೋಜಿತ ಖಾತಾ ನಂ. 197/72/ಸರ್ವೆ ನಂ. 84/5, ಒಟ್ಟು ವಿಸ್ತೀರ್ಣ 14160 ಚದರ ಅಡಿಯು ಪರಿವರ್ತಿತ ಸರ್ವೆ ನಂ. 80, 84/3, 84/4, 84/5, 86/1, 86/3 ಮತ್ತು 83/8 ಕೃಷಿಯಿಂದ ಕೃಷಿಯೇತರ ವಾಸಯೋಗ್ಯ ಉದ್ದೇಶಕ್ಕಾಗಿ ಪರಿವರ್ತಿತವಾದ ಕಚೇರಿ ಆದೇಶ ಸಂ. ಬಿ.ಡಿಐಎಸ್.ಎಎಲ್‌ಎನ್.ಎಸ್‌ಆರ್(ಎಸ್)89/2000–01, ದಿನಾಂಕ 04.10.2000, ಕಚೇರಿ ಆದೇಶ ಸಂ. ಬಿ.ಡಿಐಎಸ್. ಎಎಲ್‌ಎನ್. ಎಸ್‌ಆರ್ (ಎಸ್) 85/ 2000–01, ದಿನಾಂಕ 22.09.2000 ಮತ್ತು ಕಚೇರಿ ಮೆಮರಾಂಡಮ್ ಸಂ. ಬಿ.ಡಿಐಎಸ್.ಎಎಲ್‌ಎನ್. ಎಸ್‌ಆರ್ (ಎಸ್) 86/ 2000–01 ದಿನಾಂಕ 23.09.2000, ವಿಶೇಷ ಸಹಾಯಕ ಆಯುಕ್ತರು, ಬೆಂಗಳೂರು ಜಿಲ್ಲೆ ಇವರಿಂದ ನೀಡಲ್ಪಟ್ಟಿದ್ದು, ಕೆಂಬತ್ತಹಳ್ಳಿ ಗ್ರಾಮ. ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ನಂ. 76,77,78 ಮತ್ತು 79, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಾಸಗಿ ಆಸ್ತಿ. ಷೆಡ್ಯೂಲ್ "ಬಿ" ಆಸ್ತಿ : 422 ಚದರ ಅಡಿಗಳಷ್ಟು ಭಾಗ ಮಾಡಲಾಗದ ಹಿತಾಸಕ್ತಿ ಈ ಮೇಲೆ ಹೆಸರಿಸಿದ ಸಂಯುಕ್ತ ಷೆಡ್ಯೂಲ್ "ಎ" ಸ್ಥಿರಾಸ್ತಿಯಲ್ಲಿದೆ (ಅಂದರೆ ಬಿಲ್ಟಪ್ ಪ್ರದೇಶಕ್ಕೆ ಸಮನಾಂತರವಾಗಿರುವಂತಹುದು). ಷೆಡ್ಯೂಲ್ "ಸಿ" ಆಸ್ತಿ: ವಾಸಯೋಗ್ಯ ಅಪಾರ್ಟ್‌ಮೆಂಟ್/ಫ್ಲ್ಯಾಟ್ ನಂ. 305, ಮೂರನೇ ಮಹಡಿಯಲ್ಲಿದ್ದು, ವಿಸ್ತೀರ್ಣ 1160 ಚದರ ಅಡಿಗಳ ಸುಪರ್ ಬಿಲ್ಟಪ್ ಪ್ರದೇಶ, ಎರಡು ಬೆಡ್‌ರೂಮ್‌ಗಳು, ಜೊತೆಗೆ ಆರ್‌ಸಿಸಿ ಮೇಲ್ಛಾವಣಿ ಮತ್ತು ವಿಟ್ರಿಫೈಡ್ ನೆಲಹಾಸು ಜೊತೆಗೆ ಒಂದು ಕಾರು ನಿಲುಗಡೆಗೆ ಸ್ಥಳಾವಕಾಶವು ಸೇರಿದಂತೆ ಸಮನಾಂತರ ಪಾಲು ಇರುವ ಸಾಮಾನ್ಯ ಪ್ರದೇಶಗಳಾದ ಪ್ಯಾಸೇಜ್‌ಗಳು, ಸೌಲಭ್ಯಗಳು, ಲಾಬಿಗಳು, ಮೆಟ್ಟಿಲುಗಳು ಮತ್ತು ಲಿಫ್ಟ್‌ಗಳನ್ನು ಒಳಗೊಂಡಂತೆ ಸಂಯುಕ್ತ ಷೆಡ್ಯೂಲ್ "ಎ" ಆಸ್ತಿಯಲ್ಲಿ ನಿರ್ಮಿಸಲಾದ ಬಹುಮಹಡಿ ವಾಸಯೋಗ್ಯ ಕಟ್ಟಡವನ್ನು "ಆರ್ ಎನ್ ಸ್ಕ್ವೇರ್" ಎಂದು ಕರೆಯಲಾಗುತ್ತಿದೆ.
ಶ್ರೀ ಬಾಲಕೃಷ್ಣ ಗೋಗಿನೇನಿ ಸಾಲದ ಖಾತಾ ನಂ 411900015116 ಸಾಂಕೇತಿಕ ಸ್ವಾಧೀನತೆ ದಿನಾಂಕ : 12.03.2025	07.12.2024	ರೂ. 8760611.00	ಸಂಯೋಜಿತ ಷೆಡ್ಯೂಲ್ "ಎ" ಆಸ್ತಿ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಸೈಟ್ ನಂ. 72, 73, 74 ಮತ್ತು 75, ಪ್ರಸಕ್ತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯ ಸಂಯೋಜಿತ ಖಾತಾ ನಂ. 197/72/ಸರ್ವೆ ನಂ. 84/5, ಒಟ್ಟು ವಿಸ್ತೀರ್ಣ 14160 ಚದರ ಅಡಿಯು ಪರಿವರ್ತಿತ ಸರ್ವೆ ನಂ. 80, 84/3, 84/4, 84/5, 86/1, 86/3 ಮತ್ತು 83/8 ಕೃಷಿಯಿಂದ ಕೃಷಿಯೇತರ ವಾಸಯೋಗ್ಯ ಉದ್ದೇಶಕ್ಕಾಗಿ ಪರಿವರ್ತಿತವಾದ ಕಚೇರಿ ಆದೇಶ ಸಂ. ಬಿ.ಡಿಐಎಸ್.ಎಎಲ್‌ಎನ್. ಎಸ್‌ಆರ್(ಎಸ್)89/2000–01, ದಿನಾಂಕ 04.10.2000, ಕಚೇರಿ ಆದೇಶ ಸಂ. ಬಿ.ಡಿಐಎಸ್. ಎಎಲ್‌ಎನ್. ಎಸ್‌ಆರ್ (ಎಸ್) 85/ 2000–01, ದಿನಾಂಕ 22.09.2000 ಮತ್ತು ಕಚೇರಿ ಮೆಮರಾಂಡಮ್ ಸಂ. ಬಿ.ಡಿಐಎಸ್.ಎಎಲ್‌ಎನ್. ಎಸ್‌ಆರ್ (ಎಸ್) 86/ 2000–01 ದಿನಾಂಕ 23.09.2000, ವಿಶೇಷ ಸಹಾಯಕ ಆಯುಕ್ತರು, ಬೆಂಗಳೂರು ಜಿಲ್ಲೆ ಇವರಿಂದ ನೀಡಲ್ಪಟ್ಟಿದ್ದು, ಕೆಂಬತ್ತಹಳ್ಳಿ ಗ್ರಾಮ. ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು ಇಲ್ಲಿದ್ದು, ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಪಶ್ಚಿಮಕ್ಕೆ: ಸೈಟ್ ನಂ. 76,77,78 ಮತ್ತು 79, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಖಾಸಗಿ ಆಸ್ತಿ. ಷೆಡ್ಯೂಲ್ "ಬಿ" ಆಸ್ತಿ : 403 ಚದರ ಅಡಿಗಳಷ್ಟು ಭಾಗ ಮಾಡಲಾಗದ ಹಿತಾಸಕ್ತಿ ಈ ಮೇಲೆ ಹೆಸರಿಸಿದ ಸಂಯುಕ್ತ ಷೆಡ್ಯೂಲ್ "ಎ" ಸ್ಥಿರಾಸ್ತಿಯಲ್ಲಿದೆ (ಅಂದರೆ ಬಿಲ್ಟಪ್ ಪ್ರದೇಶಕ್ಕೆ ಸಮನಾಂತರವಾಗಿರುವಂತಹುದು). ಷೆಡ್ಯೂಲ್ "ಸಿ" ಆಸ್ತಿ: ವಾಸಯೋಗ್ಯ ಅಪಾರ್ಟ್‌ಮೆಂಟ್/ಫ್ಲ್ಯಾಟ್ ನಂ. 203, ಎರಡನೇ ಮಹಡಿಯಲ್ಲಿದ್ದು, ವಿಸ್ತೀರ್ಣ 1110 ಚದರ ಅಡಿಗಳ ಸುಪರ್ ಬಿಲ್ಟಪ್ ಪ್ರದೇಶ, ಎರಡು ಬೆಡ್‌ರೂಮ್‌ಗಳು, ಜೊತೆಗೆ ಆರ್‌ಸಿಸಿ ಮೇಲ್ಛಾವಣಿ ಮತ್ತು ವಿಟ್ರಿಫೈಡ್ ನೆಲಹಾಸು ಜೊತೆಗೆ ಒಂದು ಕಾರು ನಿಲುಗಡೆಗೆ ಸ್ಥಳಾವಕಾಶವು ಸೇರಿದಂತೆ ಸಮನಾಂತರ ಪಾಲು ಇರುವ ಸಾಮಾನ್ಯ ಪ್ರದೇಶಗಳಾದ ಪ್ಯಾಸೇಜ್‌ಗಳು, ಸೌಲಭ್ಯಗಳು, ಲಾಬಿಗಳು, ಮೆಟ್ಟಿಲುಗಳು ಮತ್ತು ಲಿಫ್ಟ್‌ಗಳನ್ನು ಒಳಗೊಂಡಂತೆ ಸಂಯುಕ್ತ ಷೆಡ್ಯೂಲ್ "ಎ" ಆಸ್ತಿಯಲ್ಲಿ ನಿರ್ಮಿಸಲಾದ ಬಹುಮಹಡಿ ವಾಸಯೋಗ್ಯ ಕಟ್ಟಡವನ್ನು "ಆರ್ ಎನ್ ಸ್ಕ್ವೇರ್" ಎಂದು ಕರೆಯಲಾಗುತ್ತಿದೆ.
ಶ್ರೀ/ಶ್ರೀಮತಿ ವಿಜಯ ಕೃಷ್ಣ ಬೊಡ್ಡು ಮತ್ತುಶ್ರೀ/ಶ್ರೀಮತಿ ಧನಂಜಲಿ ಬೊಡ್ಡು ಸಾಲದ ಖಾತಾ ನಂ 411900007701 411900011384 ಸಾಂಕೇತಿಕ ಸ್ವಾಧೀನತೆ ದಿನಾಂಕ : 12.03.2025	20.12.2023	ರೂ. 10094192.00 1547009.00	ಷೆಡ್ಯೂಲ್ "ಎ" ಆಸ್ತಿ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಪರಿವರ್ತಿತ ಭೂಮಿಯ ಸರ್ವೆ ನಂ. 23 ವಿಸ್ತೀರ್ಣ 2 ಎಕರೆ 05 ಗುಂಟೆಗಳು, ಗುಬ್ಬಲಾಳು ಗ್ರಾಮ, ಉತ್ತಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು 9ಪರಿವರ್ತಿತ ಕಚೇರಿ ಮೆಮರಾಂಡಮ್ ಸಂ. ಬಿಡಿಐಎಸ್./ ಎಎಲ್‌ಎನ್/ಎಸ್‌ಆರ್/(ಎಸ್)744/2004–05,ದಿನಾಂಕ 04.04.2005) ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಬಿ.ಡಬ್ಲ್ಯು. ಎಸ್. ಎಸ್.ಬಿ. ರಸ್ತೆ, ಪಶ್ಚಿಮಕ್ಕೆ: ಡಾ. ಡಿ ಪ್ರೇಮಚಂದ್ರ ಸಾಗರ್ ಮತ್ತು ಇತರರಿಗೆ ಸೇರಿದ ಆಸ್ತಿ, ಉತ್ತರಕ್ಕೆ: ಬಿಡಿಎ ಯಿಂದ ರಚಿತವಾದ 80 ಅಡಿ ರಸ್ತೆ, ದಕ್ಷಿಣಕ್ಕೆ: ಮಾರಪ್ಪ ಬಿನ್ ಮುನಿಯಪ್ಪ ಮತ್ತು ಇತರರಿಗೆ ಸೇರಿದ ಖಾಸಗಿ ಆಸ್ತಿ. ಷೆಡ್ಯೂಲ್ "ಬಿ" ಆಸ್ತಿ: (ಖರೀದಿದಾರರಿಗೆ ಮಾರಾಟ ಮಾಡಲು ಒಪ್ಪಿರುವ ಆಸ್ತಿ) : ಭಾಗ ಮಾಡಲಾಗದ ಪಾಲು, ಹಕ್ಕು, ಟೈಟಲ್ ಮತ್ತು ಹಿತಾಸಕ್ತಿಗಳು ಷೆಡ್ಯೂಲ್ "ಎ" ಆಸ್ತಿಯಲ್ಲಿದ್ದು, ವಿಸ್ತೀರ್ಣ 483 ಚದರ ಅಡಿಗಳು. ಷೆಡ್ಯೂಲ್ "ಸಿ" ಆಸ್ತಿ : (ನಿರ್ಮಿಸಬೇಕಾಗಿರುವ ಅಪಾರ್ಟ್‌ಮೆಂಟ್ ವಿವರ) : ನಿರ್ಧರಿತ ಅಪಾರ್ಟ್ ಮೆಂಟ್ / ಫ್ಲ್ಯಾಟ್ ನ ಸಂಖ್ಯೆ ಎ–006, "ಎ" ಬ್ಲಾಕ್‌ನಲ್ಲಿದ್ದು, ನೆಲ ಮಹಡಿಯಲ್ಲಿರುವ ವಾಸಯೋಗ್ಯ ಅಪಾರ್ಟ್‌ಮೆಂಟ್ ಸಂಕೀರ್ಣವನ್ನು "ಲಿಬರ್ಟಿ ಸ್ಕ್ವೇರ್" ಎಂದು ಕರೆಯಲಾಗುತ್ತಿದ್ದು, ಸುಪರ್ ಬಿಲ್ಟಪ್ ಪ್ರದೇಶ 1455 ಚದರ ಅಡಿ (ಇದರಲ್ಲಿ ನೆಲಗಳು, ಸೀಲಿಂಗ್ ಮತ್ತು ಅಪಾರ್ಟ್‌ಮೆಂಟ್ ನಡುವಿನ ಗೋಡೆಗಳು ಮತ್ತು ಸಮನಾಂತರ ಪಾಲು ಇರುವ ಸಾಮಾನ್ಯ ಪ್ರದೇಶಗಳನ್ನು ಒಳಗೊಂಡಿದೆ) ಒಟ್ಟಾಗಿ ತಳಮಹಡಿಯಲ್ಲಿ ಒಂದು ಕಾರು ನಿಲುಗಡೆಗೆ ಸ್ಥಳಾವಕಾಶವನ್ನು ಹೊಂದಿದೆ.

ಸ್ಥಳ: ಬೆಂಗಳೂರು
ದಿನಾಂಕ: 14.03.2025

ಸಹಿ/– ಅಧಿಕೃತ ಅಧಿಕಾರಿ
ಎಲ್‌ಐಸಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಸಿನಿಮಾ ಪುರವಣಿ

ಮನದ ಕಡಲು

ರಾಶಿಕಾ ಶೆಟ್ಟಿ, ಸುಮುಖ

‘ಮುಂಗಾರು ಮಳೆ’ ಬಿಡುಗಡೆಯಾಗಿ 18 ವರ್ಷ ತುಂಬಿದೆ. ಯೋಗರಾಜ್ ಭಟ್ ನಿರ್ದೇಶನದ ಹೊಸ ಸಿನಿಮಾ ‘ಮನದ ಕಡಲು’ ಸಿನಿಮಾ ಮಾರ್ಚ್ 28 ರಂದು ಬಿಡುಗಡೆಯಾಗುತ್ತಿದ್ದು, ಮತ್ತೆ ಹೊಸಮುಖಗಳನ್ನು ಅವರು ತೆರೆಗೆ ಪರಿಚಯಿಸುತ್ತಿದ್ದಾರೆ. ಇಂತಹ ಹೊಸಮುಖಗಳಲ್ಲಿ ‘ಸುಮುಖ’ ಒಬ್ಬರಾಗಿದ್ದಾರೆ.

ರಂಗಭೂಮಿ ಖುಷಿ ಸಿನಿಮಾ ಕೃಷಿ

ಅಭಿಲಾಷ್ ಪಿ.ಎಸ್.

● ‘ಮನದ ಕಡಲು’ ದೊರೆತಿದ್ದು ಹೇಗೆ?

ಯೋಗರಾಜ್ ಭಟ್ ಅವರಿಗೆ ನನ್ನ ತಂದೆ–ತಾಯಿಯ ಪರಿಚಯವಿತ್ತು. ಹಲವು ವರ್ಷಗಳ ಹಿಂದೆ ನನ್ನನ್ನು ಅವರು ನೋಡಿದ್ದರು. ಈಗ ನಾನು ಇಷ್ಟು ದೊಡ್ಡವನಾಗಿದ್ದೇನೆ ಎಂದು ಅವರಿಗೆ ತಿಳಿದಿರಲಿಲ್ಲ. ಅವರು ‘ಮನದ ಕಡಲು’ ಆಡಿಷನ್ ಆರಂಭಿಸಿ ಹೊಸಮುಖ ಸಿಗದೇ ಪ್ರಾಜೆಕ್ಟ್ ಕೈಬಿಡುವ ಯೋಚನೆಯಲ್ಲಿದ್ದರು. ‘ಮುಂಗಾರು ಮಳೆ’ ರೀತಿ ಹೊಸಬರನ್ನೇ ಹಾಕಿಕೊಂಡು ಸಿನಿಮಾ ಮಾಡುವ ಇರಾದೆ ಅವರದ್ದು. ಇದೇ ಸಂದರ್ಭದಲ್ಲಿ ನನ್ನ ತಾಯಿ ಯಾವುದೋ ಕಾರಣಕ್ಕೆ ಯೋಗರಾಜ್ ಭಟ್ ಅವರಿಗೆ ಕರೆ ಮಾಡಿದ್ದರು. ಆಗ ನನ್ನ ನೆನಪು ಅವರಿಗೆ ಆಗಿ ಆಡಿಷನ್‌ಗೆ ಕರೆದಿದ್ದರು. ಹೀಗೆ ಸಿನಿಮಾಗೆ ಆಯ್ಕೆಯಾದೆ.

● ‘ಮುಂಗಾರು ಮಳೆ’ ನಿರ್ದೇಶಕ, ನಿರ್ಮಾಪಕರ ಸಿನಿಮಾ ಎಂದಾಗ ನಿರೀಕ್ಷೆ ಹೆಚ್ಚಿರುತ್ತದೆ. ಇದು ಹೊರೆಯಾಗಿತ್ತೇ?

ನನಗೆ ಮೊದಲ ಹೆಜ್ಜೆಯಿಂದಲೇ ಬಹಳ ಉತ್ಸಾಹವಿತ್ತು. ನನಗೆ ಸವಾಲುಗಳೆಂದರೆ ಬಹಳ ಇಷ್ಟ. ಹೀರೊ ಆಗುವುದು ಸುಲಭವಲ್ಲ, ಆ ದಾರಿಯಲ್ಲಿ ಹಲವು ಸವಾಲುಗಳಿರುತ್ತವೆ ಎಂಬ ಅರಿವು ನನಗಿತ್ತು. ಜೊತೆಗೆ ‘ಮುಂಗಾರು ಮಳೆ’ಯಂಥ ಹಿಟ್ ಸಿನಿಮಾ ನೀಡಿದ್ದ ನಿರ್ದೇಶಕ–ನಿರ್ಮಾಪಕರ ಸಿನಿಮಾ ಎಂದಾಗ ಜವಾಬ್ದಾರಿಯೂ ಹೆಚ್ಚು ಇರುತ್ತದೆ. ಆದರೆ ರಂಗಭೂಮಿಯಿಂದ ಬಂದ ನನಗೆ ಭಯ ಇರಲಿಲ್ಲ. ಭಿನ್ನವಾಗಿ ಪಾತ್ರವನ್ನು ನಿಭಾಯಿಸಬೇಕು ಎನ್ನುವ ತುಡಿತ ನನ್ನಲ್ಲಿತ್ತು. ಸಿನಿಮಾ ಚೌಕಟ್ಟಿನಲ್ಲಿದ್ದುಕೊಂಡೇ ಯೋಗರಾಜ್ ಭಟ್ ಅವರು ಇಂತಹ ಹೊಸತನವನ್ನು ಪ್ರೋತ್ಸಾಹಿಸುತ್ತಾರೆ. ಅವರ ಈ ಪ್ರೋತ್ಸಾಹ ಪಾತ್ರವನ್ನು ನಿಭಾಯಿಸಲು ಮತ್ತಷ್ಟು ಹುರುಪು ನೀಡಿತು. ಜೊತೆಗೆ ರಂಗಾಯಣ ರಘು, ದತ್ತಣ್ಣ ಅವರಂತಹ ಅನುಭವಿ ಕಲಾವಿದರ ಜೊತೆ ತೆರೆಹಂಚಿಕೊಳ್ಳುವ ಅವಕಾಶ ಸ್ಫೂರ್ತಿಯಾಗಿತ್ತು.

● ‘ಫಿಸಿಕ್ಸ್ ಟೀಚರ್’ ಅನುಭವ ಸಹಕಾರಿಯಾಯಿತೇ?

ಹೌದು. ನಾನು ಕ್ಯಾಮೆರಾ ಮುಂದೆ ನಿಂತಾಗ ಸುತ್ತಮುತ್ತ ಇದ್ದ ವಾತಾವರಣ ಹೊಸದೇನಾಗಿರಲಿಲ್ಲ. ನಿರ್ದೇಶಕರು ನಟನಿಂದ ಏನು ಬಯಸುತ್ತಾರೆ ಎನ್ನುವುದು ನನಗೆ ಮೊದಲೇ ತಿಳಿಯುತ್ತಿತ್ತು. ನಾನು ಈ ಪಯಣದಲ್ಲಿ ಕಲಿಯುತ್ತಾ ಹೆಜ್ಜೆ ಇಡುತ್ತಿದ್ದೇನೆ. ಇದೊಂದು ಕಠಿಣ ಸಂದರ್ಭ. ನಾನು ನಟನಾಗಬೇಕು ಎಂದು ನಿರ್ಧರಿಸಿದ ಸಂದರ್ಭದಲ್ಲಿ ಚಿತ್ರಮಂದಿರಗಳು ಜನರಿಂದ ತುಂಬಿರುತ್ತಿದ್ದವು. ಈಗ ಸ್ಥಿತಿ ಬದಲಾಗಿದೆ. ಜನರು ಚಿತ್ರಮಂದಿರಗಳತ್ತ ಬರುತ್ತಿಲ್ಲ. ಹೀಗಿರುವಾಗ ಎಚ್ಚರಿಕೆಯ ಹೆಜ್ಜೆ ಇಡಬೇಕಿದೆ.

● ನಿಮ್ಮ ಪಾತ್ರದ ಬಗ್ಗೆ...

ಚಿತ್ರದಲ್ಲಿ ನಾನು ಈಗಿನ ಜನರೇಷನ್ ಯುವಕ. ಅವನಿಗೆ ಒಂದು ನಿರ್ದಿಷ್ಟ ಗುರಿಯಿಲ್ಲ. ಎಂಬಿಬಿಎಸ್ ಓದುವ ಹುಡುಗನೀತ. ಆ ವ್ಯವಸ್ಥೆ ಆತನಿಗೆ ಗೊಂದಲಗಳನ್ನು ಉಂಟುಮಾಡಿದಾಗ ಆತ ಓದು ತೊರೆದು ಹೊಸ ಪಯಣಕ್ಕೆ ಸಜ್ಜಾಗುತ್ತಾನೆ. ಅದುವೇ ಸಿನಿಮಾ ಕಥೆ. ಭಾವನಾತ್ಮಕ ಪ್ರೇಮಕಥೆಯ ಜೊತೆಗೆ ಇದರಲ್ಲಿ ಹಾಸ್ಯವೂ ತುಂಬಿಕೊಂಡಿದೆ. ಟ್ರಾವೆಲ್ ಅಡ್ವೆಂಚರ್ ಲವ್‌ಸ್ಟೋರಿ ಜಾನರ್‌ನಲ್ಲಿ ಸಿನಿಮಾವಿದೆ. ತಾಂತ್ರಿಕವಾಗಿ ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ. ಮಹಾರಾಷ್ಟ್ರದ ಮುರುಡ್ ಜಂಜೀರ ಎಂಬ ಸಮುದ್ರದ ಮಧ್ಯದ ಕೋಟೆಯಲ್ಲಿ ಶೂಟಿಂಗ್ ಮಾಡಿದ ಅನುಭವ ವರ್ಣಿಸಲು ಸಾಧ್ಯವಿಲ್ಲ. ಈ ಪ್ರದೇಶವನ್ನು ಸಂತೋಷ್ ರೈ ಪಾತಾಜೆ ಕ್ಯಾಮೆರಾ ಮೂಲಕ ಕಾವ್ಯದಂತೆ ಸೆರೆಹಿಡಿದಿದ್ದಾರೆ. ಅದ್ಭುತವಾದ ಸಿನಿಮ್ಯಾಟಿಕ್ ಅನುಭವವನ್ನು ಈ ಸಿನಿಮಾ ನೀಡಲಿದೆ.

● ಮುಂದಿನ ಹೆಜ್ಜೆ...

ರಂಗಭೂಮಿ ನನಗೆ ಖುಷಿ ಕೊಡುವ ಜಾಗ. ಅಲ್ಲಿ ಕಿವಿಗೆ ನೇರವಾಗಿ ಕೇಳುವ ಚಪ್ಪಾಳೆಯ ಸದ್ದು ನೇರವಾಗಿ ಹೃದಯಕ್ಕೆ ತಲುಪುತ್ತದೆ. ರಂಗಭೂಮಿಯ ನಂಟು ಇದ್ದೇ ಇರುತ್ತದೆ. ಜೊತೆಗೆ ಸಿನಿಮಾಗಳನ್ನೂ ಮಾಡುತ್ತೇನೆ. ಒಂದು ಹೊಸ ಸಿನಿಮಾ ಒಪ್ಪಿಕೊಂಡಿದ್ದೇನೆ. ಅದು ‘ಮನದ ಕಡಲು’ ಸಿನಿಮಾ ಬಿಡುಗಡೆಯಾದ ಬೆನ್ನಲ್ಲೇ ಘೋಷಣೆಯಾಗಲಿದೆ. ❖

● ರಂಗಭೂಮಿ ಮತ್ತು ನಿಮ್ಮ ನಂಟು ಕುರಿತು...

ರಂಗಭೂಮಿಯಲ್ಲಿ ಗುರುತಿಸಿಕೊಂಡಿರುವ ಶಶಿಕುಮಾರ್ ಹಾಗೂ ನಂದಿತಾ ಅವರ ಮಗ ನಾನು. ಬೆಂಗಳೂರಿನಲ್ಲೇ ಜನಿಸಿದ ನಾನು ಐದನೇ ವಯಸ್ಸಿಗೆ ರಂಗಭೂಮಿ ವೇದಿಕೆ ಏರಿದೆ. ಅಭಿನಯ ತರಂಗ ಸೇರಿದಂತೆ ಹಲವು ತಂಡಗಳಲ್ಲಿ ನಾಟಕಗಳನ್ನು ಮಾಡಿದೆ. ನಟನಾಗಬೇಕು ಎಂಬ ಇಚ್ಛೆ ಮೊದಲೇ ಇದ್ದ ಕಾರಣ ದ್ವಿತೀಯ ಪಿ.ಯು.ಸಿ ಪೂರ್ಣಗೊಳಿಸಿದ ಬೆನ್ನಲ್ಲೇ ನಟನೆಯ ತರಬೇತಿಗಾಗಿ ಮುಂಬೈಗೆ ತೆರಳಿದೆ. ಅಲ್ಲಿ ಪೃಥ್ವಿ ಥಿಯೇಟರ್‌ನಲ್ಲಿ ಹಲವು ಖ್ಯಾತ ರಂಗಕರ್ಮಿಗಳ ನಾಟಕಗಳಲ್ಲಿ ಬಣ್ಣಹಚ್ಚಿದೆ. ಬಳಿಕ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ (ಎನ್‌ಎಸ್‌ಡಿ) ಶಿಕ್ಷಕರು ಮಾಡಿಸುತ್ತಿದ್ದ ನಾಟಕಗಳಲ್ಲಿ ನಟಿಸಿದೆ. ಜೀ ಚಾನೆಲ್‌ನವರು ಆರಂಭಿಸಿದ ಜೀ ಥಿಯೇಟರ್‌ನಲ್ಲಿ ಸ್ಟೇಜ್ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸಿದೆ. ಇದಾದ ಬಳಿಕ ನಾನೇ ‘ಫಿಸಿಕ್ಸ್ ಟೀಚರ್’ ಎಂಬ ಸಿನಿಮಾ ನಿರ್ದೇಶಿಸಿ, ನಟಿಸಿದೆ. ಕೋವಿಡ್ ಸಂದರ್ಭದಲ್ಲಿ ಇದು ಬಿಡುಗಡೆಯಾಗಿತ್ತು. ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಸೇರಿದಂತೆ ಹಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿತು. ಇದಾದ ಬಳಿಕ ಸಿನಿಮಾಗಳಲ್ಲಿ ನಟನೆಯ ಹುಡುಕಾಟ ಮುಂದುವರಿದಿತ್ತು. ಎರಡು ಸಿನಿಮಾ ಮಾತುಕತೆಗಳು ನಡೆದರೂ ಅದು ಮುಂದುವರಿಯಲಿಲ್ಲ.

ಇಂದು ಅಪ್ಪು ರೀ ರಿಲೀಸ್

ಪುನೀತ್‌ರಾಜ್‌ಕುಮಾರ್

ಪುನೀತ್ ರಾಜ್‌ಕುಮಾರ್ ಹೀರೊ ಆಗಿ ನಟಿಸಿದ ಮೊದಲ ಸಿನಿಮಾ ‘ಅಪ್ಪು’ ಮಾರ್ಚ್ 14 ರಂದು ಮರುಬಿಡುಗಡೆಯಾಗುತ್ತಿದೆ. 24 ವರ್ಷಗಳ ಬಳಿಕ, ಪುನೀತ್ ಅವರ 50ನೇ ಜನ್ಮದಿನದ ಹೊಸ್ತಿಲಲ್ಲಿ ಇದು ರೀ ರಿಲೀಸ್ ಆಗುತ್ತಿದೆ.

ಪಿಆರ್‌ಕೆ ಪ್ರೊಡಕ್ಷನ್ಸ್ ಸಿನಿಮಾವನ್ನು ರೀ ರಿಲೀಸ್ ಮಾಡುತ್ತಿದೆ. ಬೆಂಗಳೂರಿನಲ್ಲೇ 35ಕ್ಕೂ ಅಧಿಕ ಚಿತ್ರಮಂದಿರಗಳಲ್ಲಿ ಸಿನಿಮಾ ತೆರೆಕಾಣುತ್ತಿದೆ. ಈ ಸಿನಿಮಾವನ್ನು ಪುರಿ ಜಗನ್ನಾಥ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದರು. ಚಿತ್ರಕ್ಕೆ ಗುರುಕಿರಣ್ ಸಂಗೀತ ನೀಡಿದ್ದರು. ಶಿವರಾಜ್‌ಕುಮಾರ್ ಅವರೇ ‘ಅಪ್ಪು’ ಎಂಬ ಶೀರ್ಷಿಕೆ ನೀಡಿದ್ದರು. ಈ ಸಿನಿಮಾದ ಶತದಿನೋತ್ಸವದಲ್ಲಿ ನಟ ರಜನಿಕಾಂತ್ ಭಾಗವಹಿಸಿದ್ದರು. ‘ಪುನೀತ್ ರಾಜ್‌ಕುಮಾರ್ ಸಿಂಹದಮರಿ. ಈಗ ತಾನೇ ಎದ್ದಿದೆ, ಗರ್ಜನೆ ಆರಂಭಿಸಿದೆ’ ಎಂದು ಹೊಗಳಿದ್ದರು.

ಇನ್ನು ವಿಡಿಯೊ ಮುಖಾಂತರ ಮೊದಲನೇ ಸಿನಿಮಾದ ಅನುಭವ ಹಂಚಿಕೊಂಡಿರುವ ಚಿತ್ರದ ನಾಯಕಿ ರಕ್ಷಿತಾ, ‘ಮೊದಲ ಸಿನಿಮಾ ಎಲ್ಲಾ ಕಲಾವಿದರ ಜೀವನದಲ್ಲಿ ಬಹಳ ಸುಂದರವಾಗಿರುತ್ತದೆ. ಆ ಅನುಭವವೇ ಅದ್ಭುತ. ವಜ್ರೇಶ್ವರಿ ಕಂಬೈನ್ಸ್‌ನಲ್ಲಿ ನನ್ನ ಅಪ್ಪ–ಅಮ್ಮ ವೃತ್ತಿ ಆರಂಭಿಸಿದ್ದರು. ಪಾರ್ವತಮ್ಮ ರಾಜ್‌ಕುಮಾರ್ ಅವರು ನನಗೆ ದೊಡ್ಡ ಸ್ಫೂರ್ತಿ. ಪುನೀತ್ ಅವರ ಸಾಹಸ ದೃಶ್ಯಗಳು, ಡಾನ್ಸ್, ಡೈಲಾಗ್ ಎಲ್ಲವೂ ಸೂಪರ್. ಕನ್ನಡದಲ್ಲಿ ಪುನೀತ್ ಅವರಷ್ಟು ಚೆನ್ನಾಗಿ ಡಾನ್ಸ್ ಮಾಡಬಲ್ಲ ಹೀರೊ ಯಾರೂ ಇಲ್ಲ’ ಎಂದಿದ್ದಾರೆ. ❖

ಕಾಲಿವುಡ್‌ಗೆ ಮೇಘಾ ಹೆಜ್ಜೆ

ಮೇಘಾ ಶೆಟ್ಟಿ

ಕಿರುತೆರೆಯಲ್ಲಿ ‘ಜೊತೆ ಜೊತೆಯಲಿ’ ಧಾರಾವಾಹಿ ಮೂಲಕ ಗುರುತಿಸಿಕೊಂಡ ನಟಿ ಮೇಘಾ ಶೆಟ್ಟಿ ‘ತ್ರಿಬಲ್ ರೈಡಿಂಗ್’, ‘ದಿಲ್ ಪಸಂದ್’, ‘ಕೈವ’ ಸಿನಿಮಾಗಳ ಮೂಲಕ ಚಂದನವನದಲ್ಲಿ ಸದ್ದು ಮಾಡಿದವರು. ಇದೀಗ ಅವರು ಕಾಲಿವುಡ್‌ಗೆ ಹೆಜ್ಜೆ ಇಟ್ಟಿದ್ದಾರೆ.

ಎಂ.ಗುರು ನಿರ್ದೇಶನದ, ಧರ್ಮರಾಜ್ ನಿರ್ಮಾಣ ಮಾಡುತ್ತಿರುವ ‘ಕಾಲ್ಯೆಯನ್’ನಲ್ಲಿ ಮೇಘಾ ನಾಯಕಿಯಾಗಿ ನಟಿಸುತ್ತಿದ್ದಾರೆ. ಶಶಿಕುಮಾರ್ ಚಿತ್ರದ ನಾಯಕ. ಸತ್ಯರಾಜ್, ಭರತ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಈಗಾಗಲೇ ತಂಡ ಸೇರಿಕೊಂಡಿರುವ ಮೇಘಾ ಶೂಟಿಂಗ್‌ನಲ್ಲಿ ಭಾಗಿಯಾಗಿದ್ದಾರೆ. ಪ್ರಾಜೆಕ್ಟ್ ಕುರಿತು ಮಾತನಾಡಿದ ಅವರು, ‘ಮಾರ್ಚ್ 11ರಿಂದ ಚಿತ್ರೀಕರಣ ಆರಂಭವಾಗಿದೆ. ನನ್ನ ಈ ಹಿಂದಿನ ಎಲ್ಲಾ ಪ್ರಾಜೆಕ್ಟ್‌ಗಳ ಆಧಾರದ ಮೇಲೆ ಈ ಸಿನಿಮಾ ನನಗೆ ದೊರೆತಿದೆ. ಅತ್ಯುತ್ತಮ ಕಲಾವಿದರ ಜೊತೆ ತೆರೆಹಂಚಿಕೊಳ್ಳುವ ಅವಕಾಶ ಸಿಕ್ಕಿದೆ. ಇದೊಂದು ಹಳ್ಳಿಯ ಹಿನ್ನೆಲೆಯಲ್ಲಿ ನಡೆಯುವ ಕೌಟುಂಬಿಕ ಕಥೆಯಾಗಿದೆ. ನನಗೆ ಮೊದಲೇ ಸ್ಕ್ರಿಪ್ಟ್ ನೀಡಿದ್ದರು. ನನ್ನೊಳಗೆ ಆ ಪಾತ್ರವನ್ನು ಕಾಣುವಷ್ಟು ಸಿದ್ಧತೆ ಮಾಡಿಕೊಂಡಿದ್ದೇನೆ. ತಮಿಳಿನಲ್ಲಿ ನಾನೇ ಡಬ್ಬಿಂಗ್ ಮಾಡಬೇಕು ಎಂದುಕೊಂಡಿದ್ದೇನೆ’ ಎಂದರು.

ತಮ್ಮ ಕನ್ನಡ ಸಿನಿಮಾಗಳ ವಿವರ ನೀಡಿದ ಮೇಘಾ, ‘After ಆಪರೇಷನ್ ಲಂಡನ್ CAFE’ ಸಿನಿಮಾ ಬಿಡುಗಡೆಗೆ ಸಿದ್ಧವಿದೆ. ಇದು ಕನ್ನಡ ಸೇರಿದಂತೆ ಬೇರೆ ಭಾಷೆಗಳಲ್ಲಿ ಡಬ್ ಆಗಿ ರಿಲೀಸ್ ಆಗಲಿದೆ. ‘ಚೀತಾ’ ಸಿನಿಮಾದ ಒಂದು ಹಾಡು ಬಾಕಿ ಇದೆ. ‘ಗ್ರಾಮಾಯಣ’ ಸಿನಿಮಾದ ಶೂಟಿಂಗ್ ಇನ್ನೂ ಒಂದೂವರೆ ತಿಂಗಳು ಬಾಕಿ ಇದೆ’ ಎಂದರು. ❖

ತ್ರಿವೇಣಿ ಕೆಂಪೇಗೌಡ ಸರ್ಕಲ್
DOLBY DIGITAL 7.1 4K DIGITAL SCRABBLE 4ಆಟ

ವೀರೇಶ್ ಸಿನಿಮಾಸ್

ಸುಂಕದಕಟ್ಟೆ ಮೋಹನ್
ಗೊಲ್ಲರಹಟ್ಟಿ ವೆಂಕಟೇಶ್ವರ
ಜೆ.ಪಿ.ನಗರ ಸಿದ್ಧೇಶ್ವರ
ಸಂಜಯನಗರ ವೈಭವ್
ಕೊಡಿಗೇಹಳ್ಳಿ ರಾಜ್‌ಮುರಳಿ
PVR INOX: MALL OF ASIA | NEXUS | ORION | VAISHNAVI | REGALIA | MARKETCITY | AURA | VEGACITY | SPIRIT | UPTOWN | BHARTIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD
cinépolis: ETA | MEENAKSHI | ORION EAST | LULU | SHANTINIKETAN | SJR
GOPALAN CINEMAS: ARCH | INNOVATION | GRAND | SIGNATURE | LEGACY
ROCKLINE CINEMAS JALAHALLI
MIRAJ SUNKADAKATTE
CINEPHILE HSR LAYOUT
INNOVATIVE MULTIPLEX MARATHHALLI
KING CINEMAS SEEGEHALLI
NEW FANGLED M.G.ROAD
MOVIETIME R.R.NAGAR
VAISHNAVI VAIBHAVI UTHARAHALLI
Balaji Cinemas : Multiplex CHIKKALASANDRA
V CINEMAS RAMMURTHYNAGAR

ನೆಲಮಂಗಲ ರೂಪ
ತುಮಕೂರು PVR INOX
ಮೈಸೂರು ವುಡ್‌ಲ್ಯಾಂಡ್ಸ್
PVR INOX GARUDA | FORUM | SATYAM
DRC CINEMAS
VISION CINEMAS
ಮಂಡ್ಯ ಗುರುಶ್ರೀ
ಹಾಸನ ಎಸ್.ಬಿ.ಜಿ
ಶಿವಮೊಗ್ಗ ಮಲ್ಲಿಕಾರ್ಜುನ
Bharath Cinemas
ಚಿಕ್ಕಮಗಳೂರು ನಾಗಲಕ್ಷ್ಮಿ
ದಾವಣಗೆರೆ MOVIETIME
ಬಳ್ಳಾರಿ ನಟರಾಜಕಾಂಪ್ಲೆಕ್ಸ್
MOVIETIME
ಹೊಸಪೇಟೆ ಲಕ್ಷ್ಮಿ
ಹುಬ್ಬಳ್ಳಿ ರೂಪಂ
PVR INOX
cinépolis
ಧಾರವಾಡ ಪದ್ಮ
PVR INOX

ಬೆಳಗಾವಿ ಪ್ರಕಾಶ್
PVR INOX KAPEEL
ರಾಣಿಬೆನ್ನೂರು ಶಿವಶಕ್ತಿ
ಗದಗ ಕೃಷ್ಣ
ಹಾವೇರಿ ಮಾಘಾವಿ
ನಿಪ್ಪಾಣಿ MAGNUM CINEMAS
ಗುಲ್ಬರ್ಗ PVR INOX
MIRAJ
SHETTY'S MULTIPLEX
ರಾಯಚೂರು MIRAJ
ಬೀದರ್ ಸಪ್ನ
ಮಂಗಳೂರು PVR INOX
cinépolis
Bharath Cinemas
ಉಡುಪಿ Bharath Cinemas
ಮಣಿಪಾಲ PVR INOX
Bharath Cinemas
ಕುಂದಾಪುರ Bharath Cinemas
ಸುರತ್ಕಲ್ Cine GALAXY
ಪಡುಬಿದ್ರೆ Bharath Cinemas
ಪುತ್ತೂರು Bharath Cinemas

ಒಳಮೀಸಲು ಜಾರಿಗೆ ಒಮ್ಮತದ ಪಟ್ಟು

ಮುಖ್ಯಮಂತ್ರಿ ಭೇಟಿ ಮಾಡಿ ಚರ್ಚಿಸಲು ಎಡಗೈ– ಬಲಗೈ ಸಚಿವರು, ಶಾಸಕರ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿ ವಿಳಂಬ ಆಗುತ್ತಿದ್ದು, ಈ ವಿಚಾರದಲ್ಲಿ ಎಡಗೈ– ಬಲಗೈ ಎಂಬ ಅಪಸ್ವರ ಎತ್ತದೆ ಎಲ್ಲರೂ ಒಟ್ಟಾಗಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಚರ್ಚಿಸಲು ಪರಿಶಿಷ್ಟ ಸಮುದಾಯದ ಸಚಿವರು, ಶಾಸಕರು ನಿರ್ಧರಿಸಿದ್ದಾರೆ.

ಈ ಕುರಿತಂತೆ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರ ನೇತೃತ್ವದಲ್ಲಿ ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ನಿವಾಸದಲ್ಲಿ ಪರಿಶಿಷ್ಟ ಸಮುದಾಯದ ಸಚಿವರು, ಶಾಸಕರು ಮತ್ತು ಕೆಲವು ಮುಖಂಡರು ಗುರುವಾರ ಸಮಾಲೋಚನೆ ನಡೆಸಿದರು.

ಗೃಹ ಸಚಿವ ಜಿ. ಪರಮೇಶ್ವರ, ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ, ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ, ಶಾಸಕರಾದ ಪ್ರಸಾದ್ ಅಬ್ಬಯ್ಯ, ದರ್ಶನ್ ಧ್ರುವನಾರಾಯಣ, ಎನ್. ಶ್ರೀನಿವಾಸ, ವಿಧಾನ ಪರಿಷತ್ ಸದಸ್ಯ ಎಚ್.ಪಿ. ಸುಧಾಮ್ ದಾಸ್, ಡಾ.ಡಿ. ತಿಮ್ಮಯ್ಯ ಮುಂತಾದವರು ಸಭೆಯಲ್ಲಿ ಇದ್ದರು.

ಒಳ ಮೀಸಲಾತಿ ಕಲ್ಪಿಸುವ ಸಂಬಂಧ ಸೂಕ್ತ ಶಿಫಾರಸುಗಳೊಂದಿಗೆ ವರದಿ ಸಲ್ಲಿಸಲು ರಾಜ್ಯ ಸರ್ಕಾರದ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಅಧ್ಯಕ್ಷತೆಯಲ್ಲಿ ಏಕಸದಸ್ಯ ಆಯೋಗವನ್ನು ನವೆಂಬರ್ ತಿಂಗಳಿನಲ್ಲಿಯೇ ರಚಿಸಿದೆ. ಡಿಸೆಂಬರ್ ಮೊದಲ ವಾರದಲ್ಲಿ ಆಯೋಗಕ್ಕೆ ಹೊಣೆ ನಿಗದಿಪಡಿಸಲಾಗಿತ್ತು. ರಾಜ್ಯದಲ್ಲಿ ಲಭ್ಯವಿರುವ ದತ್ತಾಂಶ ಮತ್ತು 2011ರ ಜನಗಣತಿ ಆಧಾರದಲ್ಲಿ ಪರಿಶಿಷ್ಟ ಜಾತಿಗಳಲ್ಲಿ ವೈಜ್ಞಾನಿಕ ಮತ್ತು ತರ್ಕಬದ್ಧ ಒಳ ಮೀಸಲಾತಿ ನೀಡುವ ಕುರಿತು ಪರಿಶೀಲಿಸಿ ಆಯೋಗ ವರದಿ ನೀಡಬೇಕಿದೆ.

ವರದಿ ಬರುವವರೆಗೆ ಹೊಸ ನೇಮಕಾತಿ ಪ್ರಕ್ರಿಯೆಗಳು ಸ್ಥಗಿತಗೊಂಡಿದ್ದು, ಒಳ ಮೀಸಲಾತಿ ಜಾರಿಯಾದ ನಂತರ ಆರಂಭವಾಗಲಿದೆ. ಆದರೆ, ಆಯೋಗ ವರದಿ ಸಲ್ಲಿಸದೇ ಇರುವುದರಿಂದ ನೇಮಕಾತಿ ಪ್ರಕ್ರಿಯೆಗಳ ಮೇಲೆಯೂ ಪರಿಣಾಮ ಉಂಟಾಗಿದೆ. ಈ ಸಾಧಕ– ಬಾಧಕಗಳ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು.

ಒಳ ಮೀಸಲಾತಿ ವಿಚಾರವನ್ನು ಚುನಾವಣಾ ಪ್ರಣಾಳಿಕೆ ಹಾಗೂ ಸಮುದಾಯದ ಸಮಾವೇಶಗಳಲ್ಲಿಯೂ ಈ ಕುರಿತು ಭರವಸೆ ನೀಡಲಾಗಿದೆ. ತೆಲಂಗಾಣದಲ್ಲಿ ಒಳ ಮೀಸಲಾತಿ ಜಾರಿಗೆ ತಂದ ಮಾದರಿಯಲ್ಲಿ ರಾಜ್ಯದಲ್ಲಿಯೂ ಒಳ ಮೀಸಲಾತಿ ಜಾರಿಗೆ ಆದಷ್ಟು ಬೇಗ ಸರ್ಕಾರ ಮುಂದಾಗಬೇಕು. ರಾಜ್ಯದಲ್ಲಿ ಶೀಘ್ರದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯಲಿದೆ. ನಾಗಮೋಹನ್ ದಾಸ್ ನೇತೃತ್ವದ ಆಯೋಗದಿಂದ ಆದಷ್ಟು ಬೇಗ ವರದಿ ಪಡೆದುಕೊಂಡು ಒಳ ಮೀಸಲಾತಿ ಕಲ್ಪಿಸುವ ಪ್ರಕ್ರಿಯೆ ತ್ವರಿತಗೊಳಿಸುವಂತೆ ಮುಖ್ಯಮಂತ್ರಿ ಮೇಲೆ ಒತ್ತಡ ಹೇರಲು ಸಭೆಯಲ್ಲಿದ್ದ ಎಡಗೈ– ಬಲಗೈ ಎರಡೂ ವರ್ಗಗಳ ಸಚಿವರು, ಶಾಸಕರು ನಿರ್ಧರಿಸಿದರು.

ಒಳ ಮೀಸಲಾತಿ ಜಾರಿಗೊಳಿಸುವಂತೆ ಆಗ್ರಹ

ಸುಪ್ರೀಂ ಕೋರ್ಟ್ ಆದೇಶದಂತೆ ಸರ್ಕಾರದ ಬಳಿ ಇರುವ ದತ್ತಾಂಶಗಳನ್ನು ಪರಿಗಣಿಸಿ, ವಿಳಂಬ ನೀತಿ ಅನುಸರಿಸದೇ ಒಳ ಮೀಸಲಾತಿಯನ್ನು ಜಾರಿಗೊಳಿಸಬೇಕು ಎಂದು ಒಳ ಮೀಸಲಾತಿ ಜಾರಿಗಾಗಿ ಮಾದಿಗ ಸಮುದಾಯಗಳ ಸ್ವಾಭಿಮಾನದ ಒಕ್ಕೂಟ ಗುರುವಾರ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಲ್ ಇಂಡಿಯಾ ಬಹುಜನ ಸಮಾಜ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ, ದಲಿತ ಸಂಘರ್ಷ ಸಮಿತಿ ರಾಜ್ಯ ಘಟಕದ ಅಧ್ಯಕ್ಷ ಎನ್. ಮೂರ್ತಿ, ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಗುರುಮೂರ್ತಿ, 'ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಮತ್ತು ಒಳ ಮೀಸಲಾತಿ ವರ್ಗೀಕರಣದ ಶಿಫಾರಸುಗಳನ್ನು ಸಚಿವ ಸಂಪುಟದಲ್ಲಿ ಅಧಿಕೃತಗೊಳಿಸಬೇಕು. ಪರಿಶಿಷ್ಟ ಜಾತಿಗಳ ಮೀಸಲಾತಿ ಪ್ರಮಾಣವನ್ನು ಶೇಕಡ 17ರಷ್ಟು ಹೆಚ್ಚಿಸಿರುವುದರಿಂದ ಜನಸಂಖ್ಯೆಗೆ ಅನುಗುಣವಾಗಿ ಮಾದಿಗ ಮತ್ತು ಸಂಬಂಧಿತ ಜಾತಿಗಳಿಗೆ ಶೇ 7ರಷ್ಟು ಮೀಸಲಾತಿ ನಿಗದಿಪಡಿಸಬೇಕು' ಎಂದು ಒತ್ತಾಯಿಸಿದರು.

'ಒಳ ಮೀಸಲಾತಿ ಜಾರಿಯಾಗುವವರೆಗೂ 37 ಸಾವಿರ ಸರ್ಕಾರಿ ಹುದ್ದೆಗಳ ನೇಮಕಾತಿಯನ್ನು ತಡೆಹಿಡಿಯಬೇಕು. ನಿಜವಾದ 49 ಅಲೆಮಾರಿಗಳನ್ನು ಪ್ರತ್ಯೇಕವಾಗಿ ಗುರುತಿಸಿ, ಶೇ 1ಕ್ಕಿಂತ ಹೆಚ್ಚು ಒಳ ಮೀಸಲಾತಿಯನ್ನು ನಿಗದಿಪಡಿಸಬೇಕು. ಪ್ರತ್ಯೇಕ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಬೇಕು. ಅಲೆಮಾರಿ ಸಮುದಾಯಗಳಿಗೆ ನ್ಯಾಯ ಒದಗಿಸುವ ಉದ್ದೇಶದಿಂದ ಅಲೆಮಾರಿ ಆಯೋಗವನ್ನು ಪ್ರಾರಂಭಿಸಬೇಕು' ಎಂದು ಹೇಳಿದರು.

'ಬಜೆಟ್‌ನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಯ (ಟಿಎಸ್‌ಪಿ) ಅನುದಾನವನ್ನು ಜನಸಂಖ್ಯಾವಾರು ಹಂಚಿಕೆ ಮಾಡಬೇಕು. ಮಾದಿಗ, ಸಮಗಾರ, ಡೋಹರ, ಮಚಗಾರ ಜಾತಿಗಳ ಜನಸಂಖ್ಯೆಯ ಆಧಾರದ ಮೇಲೆ ಪ್ರತ್ಯೇಕವಾಗಿ ನಿಗಮ ಸ್ಥಾಪಿಸಿ, ತಲಾ ₹1 ಸಾವಿರ ಕೋಟಿ ಅನುದಾನ ಮೀಸಲಿಡಬೇಕು. ಈ ಅನುದಾನ ಆಯಾ ವರ್ಷವೇ ವೆಚ್ಚ ಮಾಡಲು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಒಳ ಮೀಸಲಾತಿ ಜಾರಿ ಮಾಡಿ, ಇಲ್ಲವೇ ಖುರ್ಚಿ ಖಾಲಿ ಮಾಡಿ ಎಂಬ ಘೋಷವಾಕ್ಯದಡಿ ಮಾರ್ಚ್ 19ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ತಿಳಿಸಿದರು.

ಜನ ಚಳವಳಿಗಳ ಬಜೆಟ್ ಅಧಿವೇಶನದಲ್ಲಿ ಆಗ್ರಹ
ಬಿಜೆಪಿ ತಂದಿದ್ದ ನೀತಿ ತಿರಸ್ಕರಿಸಿ

ಪ್ರಜಾವಾಣಿ ವಾರ್ತೆ

ಸಂಯುಕ್ತ ಹೋರಾಟ–ಕರ್ನಾಟಕ ಹಮ್ಮಿಕೊಂಡಿದ್ದ ಜನ ಚಳವಳಿಗಳ ಬಜೆಟ್ ಅಧಿವೇಶನದಲ್ಲಿ ಎಸ್. ವರಲಕ್ಷ್ಮೀ ಮಂಡಿಸಿದ ಜನಾಗ್ರಹವನ್ನು ಬಿ.ಆರ್. ಪಾಟೀಲ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಯಿತು. ಮಹಿಮ ಪಟೇಲ್, ಎಚ್.ಆರ್. ಬಸವರಾಜಪ್ಪ, ಕೆ.ವಿ. ಭಟ್, ಎಸ್.ಆರ್. ಹಿರೇಮಠ, ಬಡಗಲಪುರ ನಾಗೇಂದ್ರ, ಮಾವಳ್ಳಿ ಶಂಕರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ನುಡಿದಂತೆ ನಡೆಯುವ ಸರ್ಕಾರ ಎಂಬುದನ್ನು ಮಾತಿನಲ್ಲಿ ಹೇಳುವ ಬದಲು ಮಾಡಿ ತೋರಿಸಬೇಕಿದ್ದರೆ, ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದಾಗ ತಂದಿರುವ ಎಲ್ಲ ಜನವಿರೋಧಿ ನೀತಿಗಳನ್ನು ತಿರಸ್ಕರಿಸಬೇಕು ಎಂದು ಸಂಯುಕ್ತ ಹೋರಾಟ ಸಮಿತಿ ಆಗ್ರಹಿಸಿದೆ.

ಗುರುವಾರ ನಡೆದ ಜನ ಚಳವಳಿಗಳ ಬಜೆಟ್ ಅಧಿವೇಶನದ ಸಮಾರೋಪ ಸಮಾರಂಭದಲ್ಲಿ ಜನಾಗ್ರಹ ಘೋಷಣೆ ಮಾಡಲಾಯಿತು.

ಭೂ ಸುಧಾರಣಾ ಕಾಯ್ದೆ (ತಿದ್ದುಪಡಿ), ಎಪಿಎಂಸಿ, ಜಾನುವಾರು ಹತ್ಯೆ ನಿಷೇಧ, ಕೆಲಸದ ಅವಧಿ 8ರಿಂದ 12 ಗಂಟೆಗೆ ಏರಿಕೆ, ಮತಾಂತರ ನಿಷೇಧ ಕಾಯ್ದೆ, ಅಲ್ಪಸಂಖ್ಯಾತರಿಗೆ ಮೀಸಲಾತಿ ರದ್ದುಪಡಿಸುವ ತಿದ್ದುಪಡಿ ಕಾಯ್ದೆಗಳು, ಕೇಂದ್ರದ ವಿದ್ಯುತ್ ಖಾಸಗೀಕರಣ ಮಸೂದೆಗಳನ್ನು ರದ್ದು ಮಾಡಬೇಕು, ಕೇಂದ್ರ ಸರ್ಕಾರ ಕೈಗೊಂಡಿರುವ ಲೋಕಸಭಾ ಕ್ಷೇತ್ರದ ಮರು ವಿಂಗಡಣೆ ನೀತಿಗಳನ್ನು ಸಾರಾಸಗಟಾಗಿ ತಿರಸ್ಕರಿಸಬೇಕು ಎಂದು ಒತ್ತಾಯಿಸಲಾಯಿತು.

ರೈತರಿಗೆ ಬೆಂಬಲ ಬೆಲೆ ಒದಗಿಸಲು ಕನಿಷ್ಠ ಆವರ್ತ ನಿಧಿಗೆ ₹10 ಸಾವಿರ ಕೋಟಿ ಒದಗಿಸಬೇಕು. ಮೈಕ್ರೋಫೈನಾನ್ಸ್ ಕಂಪನಿಗಳ ಜಾಲದಿಂದ ಬಡಜನರನ್ನು ಪಾರು ಮಾಡಲು ಸಾಂಸ್ಥಿಕ ಸಾಲ ಹೆಚ್ಚಿಸಬೇಕು. ಸರಳ ವಿಧಾನದಲ್ಲಿ ಒದಗಿಸಬೇಕು. ಕೃಷಿಗೆ, ಗ್ರಾಮೀಣಾಭಿವೃದ್ಧಿಗೆ ಹಾಗೂ ನೀರಾವರಿಗೆ ಅನುದಾನವನ್ನು ಹೆಚ್ಚಿಸಬೇಕು. ಸಾರ್ವಜನಿಕ ಸ್ವತ್ತಾದ ಭೂಮಿ ಬಂಡವಾಳಿಗರ ಪಾಲಾಗುವುದನ್ನು ತಡೆಯಬೇಕು. ಬಲವಂತದ ಭೂ ಸ್ವಾಧೀನ ನಿಲ್ಲಿಸಬೇಕು. ಬಗರ್ ಹುಕುಂ ರೈತರಿಗೆ ತ್ವರಿತ ಭೂ ಹಂಚಿಕೆಯ ತೀರ್ಮಾನ ತೆಗೆದುಕೊಳ್ಳಬೇಕು. ಪರಿಶಿಷ್ಟ ಜಾತಿಗಳ ಮೀಸಲು ಹಣವನ್ನು ಅನ್ಯ ಉದ್ದೇಶಗಳಿಗೆ ಬಳಸಬಾರದು ಎಂದು ಆಗ್ರಹಿಸಲಾಯಿತು.

ಖಾಸಗಿ ಕಾಲೇಜುಗಳಲ್ಲಿ ಓದುತ್ತಿರುವವರಿಗೆ ವಿದ್ಯಾರ್ಥಿವೇತನ, ಹಾಸ್ಟೆಲ್ ಸೌಲಭ್ಯ ನಿಲ್ಲಿಸಿರುವ ತೀರ್ಮಾನ ಹಿಂತೆಗೆದುಕೊಳ್ಳಬೇಕು. ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸಲು ಕಾಯ್ದೆ ರೂಪಿಸಬೇಕು. ಎಲ್ಲ ಬಗೆಯ ದುಡಿಯುವ ಜನರಿಗೆ ಕನಿಷ್ಠ ವೇತನ ದರ ಜಾರಿ ಮಾಡಬೇಕು. ಜಾತಿ ದೌರ್ಜನ್ಯ, ಕೋಮು ಪ್ರಚೋದನೆ, ಅತ್ಯಾಚಾರ, ಹತ್ಯೆಗಳನ್ನು ತಡೆಯಲು ಸಮಗ್ರ ಯೋಜನೆ ರೂಪಿಸಬೇಕು. ದಲಿತರ ಮೇಲೆ ದೌರ್ಜನ್ಯ ನಡೆಸುವ, ಷಡ್ಯಂತ್ರ ರೂಪಿಸುವವರ ಮೇಲೆ ಕಠಿಣ ಕ್ರಮ ಕೈಗೊಳ್ಳುವ ವಿಶೇಷ ಕಾಯ್ದೆ ಜಾರಿಗೆ ತರಬೇಕು. ಶಿಕ್ಷಣ ನೀತಿಗೆ ಸಂಬಂಧಿಸಿ ದ್ವಂದ್ವ ಕೈಬಿಡಬೇಕು ಎಂದು ಒತ್ತಾಯಿಸಲಾಯಿತು.

ಕೇಂದ್ರದ ಹಿಂಬಾಗಿಲ ಯತ್ನವನ್ನು ವಿರೋಧಿಸಿ

ರೈತರ ಪ್ರತಿಭಟನೆಗೆ ಮಣಿದು ಮೂರು ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ಕೇಂದ್ರ ಸರ್ಕಾರ ಹಿಂಪಡೆದಿತ್ತು. ಈಗ ಅವುಗಳನ್ನು ಹಿಂಬಾಗಿಲಿನಿಂದ ತರಲು ಕೃಷಿ ಉತ್ಪನ್ನಗಳ ಮಾರುಕಟ್ಟೆ ರಾಷ್ಟ್ರೀಯ ಚೌಕಟ್ಟು ನೀತಿಯನ್ನು ಮುಂದಿಟ್ಟಿದೆ. ಕಾರ್ಮಿಕರ ರಕ್ಷಣೆಗೆ ಇದ್ದ ಕಾಯ್ದೆಗಳನ್ನು ರದ್ದು ಮಾಡಿ ನಾಲ್ಕು ಸಂಹಿತೆಗಳನ್ನು ಜಾರಿಗೆ ತರುತ್ತಿದೆ. ಇವುಗಳನ್ನು ತಿರಸ್ಕರಿಸುವ ತೀರ್ಮಾನವನ್ನು ರಾಜ್ಯ ಸರ್ಕಾರ ಕೈಗೊಳ್ಳಬೇಕು ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು.

100 ಎಕರೆ ಅರಣ್ಯ ಪ್ರದೇಶ ನಾಶ

ಹಾವನೂರು: ಭೂಮಿ ಒತ್ತುವರಿಗಾಗಿ ಕೃತ್ಯ • ಮಣ್ಣು ಗಣಿಗಾರಿಕೆಗೆ ಸಂಚು

• ದುರಗಪ್ಪ.ಪಿ.ಕೆಂಗನಿಂಗಪ್ಪನವರ

ಗುತ್ತಲ (ಹಾವೇರಿ): ಇಲ್ಲಿಯ ಹಾವನೂರು ಗ್ರಾಮಕ್ಕೆ ಹೊಂದಿಕೊಂಡ 100 ಎಕರೆ ಅರಣ್ಯ ಪ್ರದೇಶದಲ್ಲಿದ್ದ ಗಿಡ, ಮರಗಳನ್ನು ಕಡಿದು ನಾಶಪಡಿಸಲಾಗಿದ್ದು, ಇದಕ್ಕೆ ಪರಿಸರವಾದಿಗಳು, ಕುರಿಗಾಹಿಗಳಿಂದ ಆಕ್ರೋಶ ವ್ಯಕ್ತವಾಗಿದೆ.

ಗುತ್ತಲ, ಹರಳಹಳ್ಳಿ ಮತ್ತು ಹಾವನೂರ ಗ್ರಾಮಗಳ ನಡುವಿನ ಸರ್ವೆ ನಂಬರ್ 410, 411ರಲ್ಲಿ 200 ಎಕರೆ ಅರಣ್ಯ ಪ್ರದೇಶವಿದೆ. ಈ ಪ್ರದೇಶದಲ್ಲಿ ನೂರಾರು ಮರಗಳಿದ್ದು, ಇವುಗಳನ್ನು ರಾತ್ರೋರಾತ್ರಿ ಕಡಿದು ಹಾಕಲಾಗಿದೆ.

ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡ ಜಮೀನಿನಲ್ಲಿ ಕೆಲ ಸ್ಥಳೀಯರು ಹಲವು ವರ್ಷಗಳಿಂದ ಉಳುಮೆ ಮಾಡುತ್ತಿದ್ದು, ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿಕೊಳ್ಳಲು ಹೀಗೆ ಕೃತ್ಯವೆಸಗಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ.

ಮರಗಳನ್ನು ಕಡಿದಿರುವ ಜಾಗ

'ಹರಳಹಳ್ಳಿ ಮತ್ತು ಹಾವನೂರ ಗ್ರಾಮಗಳ ಕೆಲವರು, ಅರಣ್ಯ ಭೂಮಿಯನ್ನು ಕಬಳಿಸಲು ಕೃತ್ಯ ಎಸಗಿದ್ದಾರೆ. 200 ಎಕರೆ ಪ್ರದೇಶದಲ್ಲಿ 100 ಎಕರೆ ಪ್ರದೇಶದಲ್ಲಿದ್ದ ಮರಗಳು ಮಾಯವಾಗಿವೆ. ಅರಣ್ಯ ನಾಶ ಮಾಡಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಸ್ಥಳೀಯ ಪರಿಸರವಾದಿಗಳು ಒತ್ತಾಯಿಸಿದರು.

'ಈ ಅರಣ್ಯದಲ್ಲಿ ಸಾವಿರಾರು ಸಂಖ್ಯೆಯಲ್ಲಿ ನವಿಲುಗಳಿವೆ. ಅರಣ್ಯ ನಾಶದಿಂದ ಅವುಗಳ ಆವಾಸ ಸ್ಥಾನಕ್ಕೆ ಧಕ್ಕೆಯಾಗಿದೆ. ಕುರಿಗಳು, ಜಾನುವಾರುಗಳನ್ನು ಮೇಯಿಸುವುದು ಕಷ್ಟ' ಎಂದು ಕುರಿಗಾಹಿಗಳು ಅಳಲು ತೋಡಿಕೊಂಡರು.

ಮಣ್ಣು ಗಣಿಗಾರಿಕೆ: 'ಅಧಿಕಾರಿಗಳ ನಿರ್ಲಕ್ಷ್ಯದಿಂದ ಅರಣ್ಯ ಭೂಮಿಯಲ್ಲಿ ಉಳುಮೆ ನಡೆದಿದೆ. ರಾತ್ರಿ ವೇಳೆ ಮಣ್ಣು ಗಣಿಗಾರಿಕೆ ನಡೆಯುತ್ತಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಮಣ್ಣು ಗಣಿಗಾರಿಕೆ ನಿಲ್ಲಿಸಿ ಅರಣ್ಯ ಭೂಮಿ ರಕ್ಷಿಸಬೇಕು' ಎಂದು ಅಗಡಿ ಅಕ್ಕಿಮಠದ ಗುರುಲಿಂಗ ಸ್ವಾಮೀಜಿ ಅವರು ತಿಳಿಸಿದರು.

> **ಅರಣ್ಯವನ್ನು ನಾಶ ಮಾಡಿದ ಬಗ್ಗೆ ಅಧಿಕಾರಿಗಳ ಮೂಲಕ ವರದಿ ಪಡೆದು ಪರಿಶೀಲಿಸಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು**
> **ಈಶ್ವರ ಖಂಡ್ರೆ,** ಅರಣ್ಯ ಸಚಿವ

ಛತ್ತೀಸಗಢ: 17 ನಕ್ಸಲರ ಶರಣಾಗತಿ

ಬಿಜಾಪುರ (ಛತ್ತೀಸಗಢ) (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ದಂಪತಿ ಸೇರಿದಂತೆ 17 ನಕ್ಸಲರು ಪೊಲೀಸರಿಗೆ ಗುರುವಾರ ಶರಣಾಗಿದ್ದಾರೆ.

ಈ ಪೈಕಿ 9 ನಕ್ಸಲರ ಸುಳಿವು ನೀಡಿದವರಿಗೆ ನಗದು ಬಹುಮಾನವನ್ನು ಘೋಷಿಸಲಾಗಿತ್ತು ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಒಳ ಮೀಸಲಾತಿ ಪಾದಯಾತ್ರೆ
ನಾಲ್ವರು ಅಸ್ವಸ್ಥ: ಆಸ್ಪತ್ರೆಗೆ ದಾಖಲು

ಪ್ರಜಾವಾಣಿ ವಾರ್ತೆ

ಶಿರಾ (ತುಮಕೂರು): ಒಳ ಮೀಸಲಾತಿಗೆ ಜಾರಿಗೆ ಒತ್ತಾಯಿಸಿ ಬೆಂಗಳೂರಿಗೆ ಹೊರಟಿರುವ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ನಾಲ್ವರು ಗುರುವಾರ ಬಿಸಿಲಿನ ಝಳದಿಂದ ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಹರಿಹರ ಸಮೀಪ ಪ್ರೊ.ಬಿ.ಕೃಷ್ಣಪ್ಪ ಸಮಾಧಿಯಿಂದ ಆರಂಭವಾಗಿರುವ ಪಾದಯಾತ್ರೆ ಗುರುವಾರ ಹಿರಿಯೂರು ತಾಲ್ಲೂಕಿನಿಂದ ಶಿರಾ ತಾಲ್ಲೂಕಿಗೆ ಆಗಮಿಸಿತು.

ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಕಾರ್ಯಕರ್ತ ನೆಲಮಂಗಲದ ನಾಗರಾಜು, ಬಿಸಿಲಿನ ಬೇಗೆಯಿಂದ ಸುಸ್ತಾದ ಕಾರಣ ಅವರನ್ನು ತಕ್ಷಣ ಶಿರಾ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಯಿತು.

ಅವರ ಜತೆ ಇದ್ದ ಚಿಕ್ಕಮಗಳೂರಿನ ತಿಪ್ಪೇಶ್, ಹೊಸಪೇಟೆ ಹನುಮೇಶ್ ಹಾಗೂ ಗದಗ ಬಸವರಾಜು ದೊಡ್ಡಮನಿ ಕೂಡ ಬಿಸಿಲಿನ ಬೇಗೆಗೆ ಸುಸ್ತಾದ ಕಾರಣ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ನೀಡಲಾಗಿದೆ. ಚಿಕಿತ್ಸೆ ನಂತರ ನಾಲ್ವರೂ ಚೇತರಿಸಿಕೊಂಡಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

TAMILNADU NEWSPRINT AND PAPERS LIMITED
Kagithapuram - 639 136. Karur Dist. Tamil Nadu.
Email : purchase.wood@tnpl.co.in

NOTICE INVITING TENDER

Tender No.	Material Description	Due date
242513 007061	Procurement of Debarked Acacia pulpwood from open market sources of Karnataka to TNPL Unit-1 at Kagithapuram.	29.03.2025

Corrigendum if any will be issued in TNPL Website only. Detailed Terms & conditions are available in tender document at our website: www.tnpl.com.
DIPR/1019/Tender/2025 *TNPL - Maker of bagasse based eco-friendly Paper*

GOVERNMENT OF KARNATAKA
KARNATAKA MEDICAL COLLEGE AND RESEARCH INSTITUTE, HUBBALLI
Phone No : 0836-2373348, Fax : 0836-2373724
Ref No:KMCRI/GNL(2)/2024-25/15 Date: 13.03.2025
TENDER NOTIFICATION FOR SUPPLY OF MEDICAL JOURNALS FOR THE YEAR-2025
Karnataka Medical College and Research Institute, Hubballi, invites E-Tender for supply of medical journals. Terms, Conditions and detailed other information can be downloaded through website: **http://kppp.karnataka.gov.in** from **15.03.2025** tenders should be submitted through Karnataka state e-procurement portal before **24.03.2025 within 5.00 P.M** and tenders will be opened as per e-procurement portal norms. E-procurement information may be obtained through Helpline Library information Phone No.**0836-2951108 / 959195110.**
Sd/- (Director)
Karnataka Medical College and Research Institute, Hubballi

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಬೃ.ನೀ.ಕಾ, ಮಹದೇವಪುರ ವಲಯ, ಬೃಬೆಂಮಪಾಲಿಕೆ, 9ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, ಜಯನಗರ 4ನೇ ಬ್ಲಾಕ್, ಬೆಂಗಳೂರು – 560 011.
ಸಂಖ್ಯೆ:ಕಾಪಾಅ/ಬೃನೀಕಾ/ಮ.ಪುರ/ತಿದ್ದುಪಡಿ–5–1/2024–25 ದಿನಾಂಕ:13.03.2025
ತಿದ್ದುಪಡಿ–1 (ದ್ವಿಲಕೋಟೆ ಪದ್ದತಿ)
(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಉಲ್ಲೇಖ: ಈ ಕಚೇರಿ ಪ್ರಕಟಣೆ ಸಂಖ್ಯೆ: ಕಾಪಾಅ/ಬೃ.ನೀ.ಕಾ/ಮಪುರ/ಟೆಂಡರ್/05/2024–25, ದಿನಾಂಕ: 03.03.2025
ಮೇಲ್ಕಂಡ ಉಲ್ಲೇಖಿತ ಟೆಂಡರಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದಾಗಿ ಸದರಿ ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡಂತೆ ಓದಿಕೊಳ್ಳುವುದು.
ಹೊಸ ಟೆಂಡರ್ ವೇಳಾಪಟ್ಟಿಯು ಈ ಕೆಳಕಂಡಂತಿರುತ್ತದೆ.

ಟೆಂಡರ್ ವೇಳಾಪಟ್ಟಿ	ಮಾರ್ಪಾಡಾದ ದಿನಾಂಕಗಳು
(1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ	05.03.2025
(2) ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ	04.04.2025ರ ಸಂಜೆ 4:00 ಗಂಟೆಗೆ
(3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	05.04.2025ರ ಸಂಜೆ 4:30 ಗಂಟೆಗೆ
(4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	07.04.2025

ಪ್ರಕಟಣೆಯ ಇತರೆ ಎಲ್ಲಾ ಷರತ್ತು ಮತ್ತು ನಿಬಂಧನೆಗಳು ಮೂಲದಂತೆಯೇ ಇರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು, ಬೃ.ನೀ.ಕಾ, ಮಹದೇವಪುರ ವಲಯ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, SWD, ಬೊಮ್ಮನಹಳ್ಳಿ ವಲಯ, 9ನೇ ಮಹಡಿ, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್, 4ನೇ ಬ್ಲಾಕ್, ಜಯನಗರ, ಬೆಂಗಳೂರು–11
ಸಂಖ್ಯೆ:ಕಾಪಾಅ/SWD/ಬೊ/ತಿದ್ದುಪಡಿ-1/01/2024-25 ದಿನಾಂಕ: 13-03-2025
ತಿದ್ದುಪಡಿ–01 (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್ **https://kppp.karnataka.gov.in** ಮೂಲಕ ಮಾತ್ರ.
ಉಲ್ಲೇಖ: ಈ ಕಚೇರಿ ಪ್ರಕಟಣೆ ಸಂಖ್ಯೆ:ಕಾಪಾಅ/SWD/ಬೊ/ಟೆಂಡರ್-1/01/2024-25, ದಿನಾಂಕ: 03-03-2025
ಮೇಲ್ಕಂಡ ಉಲ್ಲೇಖಿತ ಟೆಂಡರಿಗೆ ಸಂಬಂಧಿಸಿದಂತೆ ತಾಂತ್ರಿಕ ಕಾರಣಗಳಿಂದಾಗಿ ಸದರಿ ಟೆಂಡರ್ ಪ್ರಕಟಣೆಯನ್ನು ಈ ಕೆಳಕಂಡಂತೆ ಓದಿಕೊಳ್ಳುವುದು. ಪರಿಷ್ಕೃತ ಟೆಂಡರ್ ವೇಳಾಪಟ್ಟಿಯು ಈ ಕೆಳಕಂಡಂತಿರುತ್ತದೆ.

	ಟೆಂಡರ್‌ನ ಕಾರ್ಯಸೂಚಿ	ಪರಿಷ್ಕೃತ ದಿನಾಂಕಗಳು
1.	ಟೆಂಡರ್ ಡಾಕ್ಯುಮೆಂಟ್‌ಗಳನ್ನು (ಜೆಓಕೆ) ಕೆಪಿಪಿ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ	06.03.2025
2.	ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:	04-04-2025ರ ಸಂಜೆ 4:00 ಗಂಟೆಗೆ
3.	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:	05-04-2025ರ ಸಂಜೆ 4:30 ಗಂಟೆಗೆ
4.	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	07-04-2025

ಟೆಂಡರ್‌ನ ಉಳಿದ ನಿಯಮಗಳು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.
ಸಹಿ/- ಕಾರ್ಯಪಾಲಕ ಅಭಿಯಂತರರು, SWD, ಬೊಮ್ಮನಹಳ್ಳಿ ವಲಯ, ಬೃಬೆಂಮಪಾ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ.16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560 052. ದೂರವಾಣಿ: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್ : https://kerc.karnataka.gov.in
ಸಂಖ್ಯೆ: ಕವಿನಿಆ/ಕೆಇಜಿಸಿ/ಕೆಡಿಸಿ/2024–25/1687 ದಿನಾಂಕ: 13.03.2025
ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ
ವಿಷಯ: ಕರಡು–ಕರ್ನಾಟಕ ವಿದ್ಯುಚ್ಛಕ್ತಿ ಗ್ರಿಡ್ (ಜಾಲ) ಸಂಹಿತೆ ಮತ್ತು ವಿತರಣಾ ಸಂಹಿತೆ 2024.
ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ಕರಡು ವಿನಿಮಯಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 23.01.2025 ರಂದು ಪ್ರಕಟಗೊಳಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲ ತಾಣ **https://kerc.karnataka.gov.in** ದಲ್ಲಿ ಸದರಿ ಕರಡನ್ನು ಲಭ್ಯವಿರಿಸಲಾಗಿದೆ.
ಆಯೋಗವು **ದಿನಾಂಕ: 01.04.2025 ರಂದು ಮಧ್ಯಾಹ್ನ 3.00 ಗಂಟೆಗೆ** ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಿದ್ದು, ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.
ವಾಸಾಸಂಇ/ಉನಿ-ಸಿ.ಪಿ/5638/ಕೆಎಸ್‌ಎಂಸಿಎ/2024–25 ಸಹಿ/– ಕಾರ್ಯದರ್ಶಿ

ನಗರಸಭಾ ಕಾರ್ಯಾಲಯ ಹೊಸಪೇಟೆ.
No: CMC HPT/15th finance/2024-25 Dated: 12-03-2025
ಟೆಂಡರಿಗಾಗಿ ಆಹ್ವಾನ (ಐ.ಎಫ್.ಟಿ.) ಟೆಂಡರ್ ಪ್ರಕಟಣೆ (ಇ–ಪ್ರೋಕ್ಯೂರಮೆಂಟ್ ಮುಖಾಂತರ)
2024–25ನೇ ಸಾಲಿನ 15ನೇ ಹಣಕಾಸು ಅನುದಾನದ ನಿಧಿಯಿಂದ ಈ ಕೆಳಗಿನ ಕೆಲಸಕ್ಕಾಗಿ ಸ್ಟ್ಯಾಂಡರ್ಡ್‌ಟೆಂಡರ್ ಡಾಕ್ಯುಮೆಂಟ್ ನಿಯಮಾವಳಿಯಂತೆ ಇ–ಪ್ರೋಕ್ಯೂರಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು **www.kppp.karnataka.govt.in** ವೆಬ್‌ಸೈಟ್ ಮೂಲಕ ಪಡೆದುಕೊಂಡು, ಸದರಿ ಇ–ಪ್ರೋಕ್ಯೂರಮೆಂಟಿನ ಷರತ್ತಿಗೊಳಪಟ್ಟು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು. 1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ:19–03–2025 ಸಂಜೆ 5.00 ಗಂಟೆ ವರೆಗೆ** (2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:20–03–2025 ಸಂಜೆ 5.00 ಗಂಟೆ ನಂತರ**(3) ಆರ್ಥಿಕ ಬಿಡ್ ತೆರೆಯುವ ಸ್ಥಳ ಹಾಗೂ **ದಿನಾಂಕ:21–03–2025 ನಗರಸಭೆ, ಹೊಸಪೇಟೆ. 1) DMA/2024-25/OW/WORK_INDENT_ 30481/CALL-3** ಕಾಯ್ದಿರಿಸಿದ ಮೊತ್ತ ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 70.00 ಲಕ್ಷ, ಟೆಂಡರ್ ಪ್ರೋಸೆಸ್ಸಿಂಗ್ ಫೀಹೆಚ್ಚಿನ ಮಾಹಿತಿಗಾಗಿ ಷರತ್ತು ಮತ್ತು ನಿಬಂಧನೆಗಳಿಗೆ ನಗರಸಭೆ ಕಾರ್ಯಾಲಯ ಹೊಸಪೇಟೆ ಕಛೇರಿ ಕೆಲಸದಂದು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/–ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಹೊಸಪೇಟೆ ಸಹಿ/–ಪೌರಾಯುಕ್ತರು, ನಗರಸಭೆ ಹೊಸಪೇಟೆ
ವಾ.ಸಾ.ಸಂ.ಇ/ವಿಜಯನಗರ/2024–25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/591

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು 560079
ದೂರವಾಣಿ ಸಂಖ್ಯೆ: +91–80–29619801 ಇ–ಮೇಲ್: md.ksmscl@gmail.com
No: KSMSCL/DRUGS/RETND/NVHCP/HEPATITIS-B/38/2024-25 Date: 13.03.2025
ಟೆಂಡರ್ ಪ್ರಕಟಣೆ
ಉಲ್ಲೇಖ: 1. ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ : KSMSCL/DRUGS/RETND/NVHCP/HEPATITIS-B/38/2024-25 (IND0215)
ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.
""NVHCP-NHM ಕಾರ್ಯಕ್ರಮದಡಿಯಲ್ಲಿ Hepatitis B Vaccine ಗಳನ್ನು ಖರೀದಿಸಿ ಪೂರೈಸಲು ಮರು ಟೆಂಡರ್ ಕರೆಯುವ ಬಗ್ಗೆ".
ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https://kppp.karnataka.gov.in ನಲ್ಲಿ ದಿನಾಂಕ 13.03.2025 ರಿಂದ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು
ವಾಸಾಸಂಇ/ವಾ.ಪ್ರ/5633/ಎಸ್‌ಎಸ್‌ಸಿ/2024–25

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ ಬೆಂಗಳೂರು–27
ಸಂಖ್ಯೆ: ಬೆಂಮಸಾಸಂಸ್ಥೆ/ಕೇಕ/ಉ&ಖನಿ/15/2024–25 ದಿನಾಂಕ: 13.03.2025
ಟೆಂಡರ್ ಆಹ್ವಾನ ಪ್ರಕಟಣೆ
ಬೆ.ಮ.ಸಾ.ಸಂಸ್ಥೆಗೆ ಈ ಕೆಳಗೆ ನಮೂದಿಸಿರುವ ಬಿಡಿಭಾಗಗಳನ್ನು ಪಡೆಯಲು KPP Portal ನ ಮೂಲಕ ಟೆಂಡರ್‌ನ್ನು ಆಹ್ವಾನಿಸಿದ್ದು, ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ವಿವರ	ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಬಿಡ್‌ನ್ನು ಸಲ್ಲಿಸಲು ಕೊನೆ ದಿನಾಂಕ
		ಅಲ್ಪಾವಧಿ ಟೆಂಡರ್	
1	BMTC/2024-25/SE0730/CALL-2	ಬಿಎಂಟಿಸಿಗೆ ಬಾಡಿಗೆ ಆಧಾರದ ಮೇಲೆ ಸಮಗ್ರ ಟಿಕೆಟಿಂಗ್ ಪರಿಹಾರದೊಂದಿಗೆ ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟಿಂಗ್ ಯಂತ್ರಗಳ ಪೂರೈಕೆ, ನಿಯೋಜನೆ ಮತ್ತು ನಿರ್ವಹಣೆಗಾಗಿ ತಂತ್ರಜ್ಞಾನ ಪರಿಹಾರ ಒದಗಿಸುವವರ ಆಯ್ಕೆ	21-03-2025 at 11.30Hrs
		ನಿಯಮಿತ ಟೆಂಡರ್	
2	BMTC/2024-25/IND0171	ERW GI ಸ್ಕ್ವೇರ್ ಟ್ಯೂಬ್‌ಗಳು/ರೌಂಡ್ ಪೈಪ್‌ಗಳ ಖರೀದಿ ಬಗ್ಗೆ.	28-03-2025 at 17.00Hrs
3	BMTC/2024-25/IND0162/CALL-2	ಪಾಲಿಯುರೆಥೇನ್ ಸೀಲೆಂಟ್ ಖರೀದಿ ಬಗ್ಗೆ	28-03-2025 at 17.00Hrs
4	BMTC/2024-25/IND0146/CALL-2	ಟೈ ರಾಡ್, ಡ್ರ್ಯಾಗ್ ಲಿಂಕ್ ರಿಪೇರ್ ಕಿಟ್‌ಗಳ ಖರೀದಿ ಬಗ್ಗೆ.	28-03-2025 at 17:00Hrs
5	BMTC/2024-25/IND0172	ವೀಲ್ ಬೋಲ್ಟ್ ಮತ್ತು ನಟ್ಸ್‌ಗಳ ಖರೀದಿ ಬಗ್ಗೆ.	28-03-2025 at 17:00Hrs
6	BMTC/2024-25/IND0150/CALL-2	ಪಿಸ್ಟನ್ ಅಸೆಂಬ್ಲಿ ಮತ್ತು ರಿಂಗ್ ಸೆಟ್‌ಗಳ ಖರೀದಿ ಬಗ್ಗೆ.	28-03-2025 at 17.00Hrs
7	BMTC/2024-25/IND0173	ಕೋಲ್ಡ್ ಅಪ್ಲೈಡ್ ಸೆಲ್ಫ್ ಅಡೇಸಿವ್ ಪಾಲಿಮರ್ ಮಾಡಿಫೈಡ್ ಬಿಟ್ಯೂಮಿನಸ್ ಕಾಂಪೋಸಿಟ್ ಮೆಂಬ್ರೇನ್ ವಿತ್ ಅಲ್ಯೂಮಿನಿಯಂ ಪಾಯ್ಲ್ ಅಟ್ ದಾ ಟಾಪ್ (ಪ್ಲಾಸ್ಟಿಕ್ ಫೆಲ್ಟ್) ಗಳ ಖರೀದಿ ಬಗ್ಗೆ.	28-03-2025 at 17:00Hrs
8	BMTC/2024-25/IND0159/CALL-2	ವಿವಿಧ ಮಾದರಿಯ ರಿಯರ್ ವ್ಯೂ ಮತ್ತು ಇತರೆ ಸೈಡ್ ವ್ಯೂ ಮಿರರ್‌ಗಳ ಖರೀದಿ ಬಗ್ಗೆ.	28-03-2025 at 17.00Hrs
9	BMTC/2024-25/IND0100/CALL-2	ಇಂಜಿನ್ ವಾಲ್ವ್, ಗೈಡ್ಸ್ ಮತ್ತು ಇನ್ಸರ್ಟ್‌ಗಳ ಖರೀದಿ ಬಗ್ಗೆ.	28-03-2025 at 17.00Hrs
10	BMTC/2024-25/IND0174	ಆಟೋಮೋಟಿವ್ ಗ್ಲಾಸ್‌ಗಳ ಖರೀದಿ ಬಗ್ಗೆ.	15-04-2025 at 17.00Hrs
11	BMTC/2024-25/IND0175	ವಿನೈಲ್ ಫ್ಲೋರಿಂಗ್ ಮ್ಯಾಟ್‌ಗಳ ಖರೀದಿ ಬಗ್ಗೆ.	28-03-2025 at 17.00Hrs
12	BMTC/2024-25/IND0069/CALL-2	ಕಂಡಕ್ಟರ್ ಲೆದರ್ ಕ್ಯಾಶ್ ಬ್ಯಾಗ್‌ಗಳ ಖರೀದಿ ಬಗ್ಗೆ	28-03-2025 at 17.00Hrs
13	BMTC/2024-25/IND097/ CALL-3	PCTR ಮತ್ತು ಸಂಬಂಧಿತ ವಸ್ತುಗಳ ಖರೀದಿ ಬಗ್ಗೆ.	15-04-2025 at 17.00Hrs
		ತಿದ್ದುಪಡಿ: KPP- ಪೋರ್ಟಲ್‌ನಲ್ಲಿ ಈ ಕೆಳಕಂಡ ಟೆಂಡರ್‌ಗಳಿಗೆ ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯವನ್ನು ಕೆಳಕಂಡಂತೆ ವಿಸ್ತರಿಸಲಾಗಿದೆ.	
14	BMTC/2024-25/IND0164	ಹೆಡ್ ಲ್ಯಾಂಪ್ ಅಸೆಂಬ್ಲಿ ಮತ್ತು ಬಿಡಿಭಾಗಗಳ ಖರೀದಿ ಬಗ್ಗೆ	28-03-2025 at 17.00Hrs

ಈ ಮೇಲಿನ ಟೆಂಡರ್‌ಗಳಿಗೆ ಸಂಬಂದಿಸಿದ ವಿವರಗಳನ್ನು https://kppp.karanataka.gov.in ನಿಂದ ಪಡೆಯಬಹುದು.
ಮುಂದುವರೆದು, ಸಾಮಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕದಲ್ಲಿ ಯಾವುದೇ ಸೇರ್ಪಡೆ / ತಿದ್ದುಪಡಿ ಇದ್ದಲ್ಲಿ kpp-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಗೊಳಿಸಲಾಗುವುದು.
ಸೂಚನೆ: ಆಸಕ್ತಿಯುಳ್ಳ ಬಿಡ್ದುದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಅಥವಾ ದೂರವಾಣಿ ಸಂಖ್ಯೆ: 080–22230960/22234115 ಗೆ ಕರೆಮಾಡಿ/ support@eprochelpdesk.com, ಇ–ಮೇಲ್ ಮಾಡಿ ಮಾಹಿತಿ ಪಡೆಯಬಹುದಾಗಿರುತ್ತದೆ.
ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2024–25/5999 ದಿನಾಂಕ: 12/03/2025
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (Call-1 & Call-2)
ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2024–25 ನೇ ಸಾಲಿನ ಲೆಕ್ಕ ಶೀರ್ಷಿಕೆ 5054–ಜಿಮುರ ಸುಧಾರಣೆ ಅಡಿ 5 ಕಾಮಗಾರಿಗಳು, ಹಾಗೂ 5054–ಜಿಲ್ಲಾ ಮುಖ್ಯ ರಸ್ತೆ ನವೀಕರಣ, ಹೀಗೆ ಒಟ್ಟು 6 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಟ ಮೊತ್ತ ರೂ. 60.00 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 240.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್/ಮರುಟೆಂಡರ್ ಆಹ್ವಾನಿಸಲಾಗಿದೆ.
ಕ್ರ.ಸಂ. 1 ಮತ್ತು 3 ರಿಂದ 6 ರಲ್ಲಿನ ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:24–03–2025 ರಂದು (11.00 ಗಂಟೆಗೆ), 2)ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:25–03–2025 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:27–03–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):29–03–2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕ್ರ.ಸಂ. 2 ರಲ್ಲಿನ ಕಾಮಗಾರಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:26–03–2025 ರಂದು (11.00 ಗಂಟೆಗೆ), 2)ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:27–03–2025 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 29–03–2025 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):01–04–2025 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ",6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1909/KSMCA/2024-25

ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆಗಳ ಇಲಾಖೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು
ಅತ್ಯಧಿಕ ತೆರಿಗೆ ಪಾವತಿದಾರರ ವಿಭಾಗ, 4ನೇ ಮಹಡಿ, ಟಿ.ಟಿ.ಎಂ.ಸಿ., ಬಿ.ಎಂ.ಟಿ.ಸಿ. ಕಟ್ಟಡ ಯಶವಂತಪುರ, ಬೆಂಗಳೂರು–560 022
ದೂ.ಸಂ:080–23470479 ಇ–ಮೇಲ್: jcct-ltu@ctd.ka.gov.in
ಸಂ:ವಾತೆಜಂಆ(ಅ.ತೆ.ಪಾ.ವಿ)/ವಾವಿ/ಸಿಆರ್–02/2024–25 ದಿನಾಂಕ:13.03.2025
ಟೆಂಡರ್ ಅಧಿಸೂಚನೆ
ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, ಅತ್ಯಧಿಕ ತೆರಿಗೆ ಪಾವತಿದಾರರ ವಿಭಾಗ, ಯಶವಂತಪುರ, ಬೆಂಗಳೂರು ಇವರ ವಿಭಾಗದ ಕಛೇರಿ ಕರ್ತವ್ಯ ನಿರ್ವಹಣೆಗಾಗಿ ಹೊರಗುತ್ತಿಗೆ ಆಧಾರದ ಮೇಲೆ 06 ಖಾಸಗಿ ವಾಹನಗಳನ್ನು (ಹಳದಿ ಬೋರ್ಡ್ ಹೊಂದಿರುವ 2018 ಮತ್ತು ನಂತರದ ವರ್ಷದಲ್ಲಿ ತಯಾರಾದ ವಾಹನಗಳು) ಸರಬರಾಜು ಮಾಡಲು ಟ್ರಾವೆಲ್ ಏಜೆನ್ಸಿ ಅಥವಾ ಮಾಲೀಕರೇ ಚಾಲಕರಾಗಿರುವವರಿಂದ ಮೊಹರಾದ ಲಕೋಟೆಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರಂತೆ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ಈ ಬಗ್ಗೆ ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಮತ್ತು ಅಧಿಸೂಚನೆಯನ್ನು ಈ ಕಛೇರಿಯ ನೋಟಿಸ್ ಬೋರ್ಡಿನಲ್ಲಿ ಪ್ರಕಟಿಸಲಾಗಿದೆ. ಅರ್ಜಿಯನ್ನು ಮೊಹರಾದ ಲಕೋಟೆಗಳಲ್ಲಿ ಸಲ್ಲಿಸಲು ಅಂತಿಮ **ದಿನಾಂಕ:20.03.2025.**
ಹೆಚ್ಚಿನ ವಿವರಗಳಿಗಾಗಿ ವಾಹನ ಶಾಖೆ ಅಥವಾ ವಾಣಿಜ್ಯ ತೆರಿಗೆಗಳ ಸಹಾಯಕ ಆಯುಕ್ತರು (ಕೇಂ.ಕ), ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, ಅತ್ಯಧಿಕ ತೆರಿಗೆ ಪಾವತಿದಾರರ ವಿಭಾಗ, ಯಶವಂತಪುರ, ಬೆಂಗಳೂರು ಇವರ ಕಛೇರಿಯಲ್ಲಿನ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/– ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು, ಅತ್ಯಧಿಕ ತೆರಿಗೆ ಪಾವತಿದಾರರ ವಿಭಾಗ, ಬೆಂಗಳೂರು

ಕರ್ನಾಟಕ ಸರ್ಕಾರ
ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಮಹಾತ್ಮಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ, ಬೆಂಗಳೂರು–22
ಇ–ಮೇಲ್: apmcbangalore22@gmail.com ದೂ: 23472850/23371695
ಸಂ: ಕೃಉಮಾಸ/ಬೆಂ/ಅಭಿವೃದ್ಧಿ/4888/2024–25 ದಿನಾಂಕ: 12.03.2025
ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2024–25ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಮಂಜೂರಾಗಿರುವ ದಾಸನಪುರ ಉಪಮಾರುಕಟ್ಟೆ ಪ್ರಾಂಗಣದ ಆರ್ಚ್‌ಗೆ ನಾಮಫಲಕ ದುರಸ್ತಿ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಐಟಂವಾರು ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಷರತ್ತು–ವ–ನಿಬಂಧನೆಗಳು ಮತ್ತು ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ವೆಬ್‌ಸೈಟ್ http://kppp.karnataka.gov.inನಲ್ಲಿ ಪಡೆಯತಕ್ಕದ್ದು.

ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ) ಜಿ.ಎಸ್.ಟಿ. ಹೊರತುಪಡಿಸಿ	ಇ.ಎಂ.ಡಿ (ರೂ.)	ಅರ್ಹತೆ
ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2024–25ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿ ಮಂಜೂರಾಗಿರುವ ದಾಸನಪುರ ಉಪಮಾರುಕಟ್ಟೆ ಪ್ರಾಂಗಣದ ಆರ್ಚ್‌ಗೆ ನಾಮಫಲಕ ದುರಸ್ತಿ ಕಾಮಗಾರಿ I No:APMC/2024-25/BD/WORK_INDENT480	6,01,361/–	15,100/–	ಲೋಕೋಪಯೋಗಿ ಇಲಾಖೆ ನೊಂದಾಯಿತ ಕೆಡಬ್ಲ್ಯೂ–01 ರಂತೆ

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 28.03.2025 ಸಂಜೆ 5.30 ಗಂಟೆವರೆಗೆ
ಸಹಿ/– ಕಾರ್ಯದರ್ಶಿ
ವಾಸಾಸಂಇ/ವಾ.ಪ್ರ/5646/ಎಸ್‌ಎಸ್‌ಸಿ/2024–25

ದುಬೈ ವಿಮಾನ ನಿಲ್ದಾಣದಲ್ಲಿ ನಟಿಗೆ ಚಿನ್ನದ ಬಿಸ್ಕತ್ ನೀಡಿದ್ದ ವ್ಯಕ್ತಿ: ಕೋರ್ಟ್‌ಗೆ ಡಿಆರ್‌ಐ ಮಾಹಿತಿ

ಬಚ್ಚಿಟ್ಟು ತರಲು ಯೂಟ್ಯೂಬ್ ನೋಡಿದ್ದ ರನ್ಯಾ

● ಕೆ.ಎಸ್.ಸುನಿಲ್

ಬೆಂಗಳೂರು: 'ದುಬೈನಿಂದ ಚಿನ್ನವನ್ನು ಕಳ್ಳಸಾಗಣೆ ಮಾಡಿದ್ದು ಇದೇ ಮೊದಲು. ಈ ಹಿಂದೆ ಇಂತಹ ಕೃತ್ಯದಲ್ಲಿ ಭಾಗಿಯಾಗಿಲ್ಲ. ಚಿನ್ನವನ್ನು ಕದ್ದುಮುಚ್ಚಿ ತರುವುದು ಹೇಗೆ ಎಂಬುದನ್ನು ಯೂಟ್ಯೂಬ್ ವಿಡಿಯೊ ನೋಡಿ ಕಲಿತೆ' ಎಂದು ನಟಿ ರನ್ಯಾ ರಾವ್ ಅವರು ವಿಚಾರಣೆ ವೇಳೆ ತಿಳಿಸಿದ್ದಾರೆ.

'ಎರಡು ವಾರಗಳಿಂದ ವಿದೇಶಿ ಸಂಖ್ಯೆಗಳಿಂದ ಅಪರಿಚಿತ ಕರೆಗಳು ಬರುತ್ತಿದ್ದವು. ಖಾಸಗಿತನ ಕಾಪಾಡಿಕೊಳ್ಳುವ ಉದ್ದೇಶದಿಂದ ಈ ವಿಷಯದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲಿಲ್ಲ. ಮಾರ್ಚ್ 1ರಂದು ಕರೆ ಮಾಡಿದ ವ್ಯಕ್ತಿಯಿಂದ ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 3ರ ಗೇಟ್ 'ಎ'ನಿಂದ ಚಿನ್ನ ಸಂಗ್ರಹಿಸಿ, ಬೆಂಗಳೂರಿಗೆ ತಲುಪಿಸುವಂತೆ ಸೂಚನೆ ಬಂತು' ಎಂದು ನಟಿ ಹೇಳಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಡಿಆರ್‌ಐ ಅಧಿಕಾರಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ. ಚಿನ್ನ ಕಳ್ಳಸಾಗಣೆ ಕುರಿತು ನಟಿ ಅಧಿಕಾರಿಗಳಿಗೆ ನೀಡಿರುವ ಮಾಹಿತಿಯನ್ನು ವರದಿಯಲ್ಲಿ ಉಲ್ಲೇಖಿಸಲಾಗಿದೆ.

'ಕರೆ ಮಾಡಿದ ವ್ಯಕ್ತಿ ಯಾರು ಎಂಬುದು ಸ್ಪಷ್ಟವಾಗಿ ಗೊತ್ತಿಲ್ಲ. ಆತ ಅಮೆರಿಕನ್–ಆಫ್ರಿಕನ್ ಶೈಲಿಯಲ್ಲಿ ಮಾತನಾಡುತ್ತಿದ್ದ. ಆರು ಅಡಿಗೂ ಎತ್ತರದ ಶ್ವೇತ ವಸ್ತ್ರಧಾರಿ ವ್ಯಕ್ತಿ ದುಬೈ ವಿಮಾನ ನಿಲ್ದಾಣದಲ್ಲಿ 17 ಚಿನ್ನದ ಬಿಸ್ಕತ್ ಇರುವ ಎರಡು ಬಾಕ್ಸ್ ನೀಡಿದ. ಇದನ್ನು ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣದಿಂದ ಹೊರಗೆ ಹೋದ ಮೇಲೆ ಸರ್ವಿಸ್ ರಸ್ತೆಯಲ್ಲಿ ನಿಂತಿರುವ ಆಟೊದಲ್ಲಿರುವ ವ್ಯಕ್ತಿಗೆ ನೀಡುವಂತೆ ಹೇಳಿ ಹೊರಟು ಹೋದ. ಆದರೆ ಆಟೊ ನೋಂದಣಿ ಸಂಖ್ಯೆ ನೀಡಿರಲಿಲ್ಲ. ನನಗೆ ಅಪರಿಚಿತ ವ್ಯಕ್ತಿಯಿಂದ ಚಿನ್ನ ಸಂಗ್ರಹಿಸಿ, ಮತ್ತೊಬ್ಬರಿಗೆ ತಲುಪಿಸುವಂತೆ ಸೂಚನೆ ನೀಡಲಾಗಿತ್ತು' ಎಂದು ರನ್ಯಾ ರಾವ್ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

'ನಾನು ಶೌಚಾಲಯಕ್ಕೆ ತೆರಳಿ, ಚಿನ್ನದ ಬಿಸ್ಕತ್‌ಗಳನ್ನು ದೇಹದ ಸುತ್ತ, ಶೂ ಮತ್ತು ಜೀನ್ಸ್ ಪಾಕೆಟ್‌ನಲ್ಲಿ ಇರಿಸಿಕೊಂಡೆ. ಚಿನ್ನವನ್ನು ಹೇಗೆ ಹೊರಗೆ ತೆಗೆದುಕೊಂಡು ಹೋಗಬೇಕು ಎಂಬುದನ್ನು ಯೂಟ್ಯೂಬ್ ವಿಡಿಯೊ ನೋಡಿ ಕಲಿತೆ' ಎಂದೂ ವಿವರಿಸಿದ್ದಾರೆ.

'ದುಬೈನಿಂದ ಬೆಂಗಳೂರಿಗೆ ಚಿನ್ನವನ್ನು ಕಳ್ಳಸಾಗಣೆ ಮಾಡಿದ್ದು ಇದೇ ಮೊದಲು. ಈ ಮೊದಲು ದುಬೈನಿಂದ ಚಿನ್ನವನ್ನು ತಂದಿಲ್ಲ ಅಥವಾ ಖರೀದಿಸಿಲ್ಲ' ಎಂದು ಅಧಿಕಾರಿಗಳ ಪ್ರಶ್ನೆಗೆ ಉತ್ತರಿಸಿದ್ದಾರೆ.

'ನಾನು ರಿಯಲ್ ಎಸ್ಟೇಟ್ ಮತ್ತು ಛಾಯಾಗ್ರಹಣದ ಕೆಲಸಕ್ಕಾಗಿ ವಿದೇಶ ಪ್ರವಾಸ ಕೈಗೊಳ್ಳುತ್ತಿದ್ದೆ. ಯುರೋಪ್, ಅಮೆರಿಕ, ಆಫ್ರಿಕಾ ಮತ್ತು ಪಶ್ಚಿಮ ಏಷ್ಯಾಕ್ಕೆ ಹಲವಾರು ಸಂದರ್ಭಗಳಲ್ಲಿ ಪ್ರಯಾಣಿಸಿದ್ದೇನೆ' ಎಂದು ಮಾಹಿತಿ ನೀಡಿದ್ದಾರೆ.

ಚಿನ್ನ ಸಾಗಣೆಗೆ ಪೂರ್ವ ತಯಾರಿ

ವಿಮಾನ ನಿಲ್ದಾಣದಲ್ಲಿ ಕತ್ತರಿ ತೆಗೆದುಕೊಂಡು ಹೋದರೆ ಸಿಕ್ಕಿಬೀಳಬಹುದೆಂಬ ಕಾರಣಕ್ಕೆ ಬೆಂಗಳೂರು ವಿಮಾನ ನಿಲ್ದಾಣದ ಅರ್ಧ ಕಿಲೋ ಮೀಟರ್ ದೂರದಲ್ಲಿರುವ ಸ್ಟೇಷನರಿ ಅಂಗಡಿಯಲ್ಲಿ ನಟಿ ರನ್ಯಾ ಅವರು ಕ್ರೇಪ್ ಬ್ಯಾಂಡೇಜ್ ಖರೀದಿಸಿದ್ದರು. ವಿಮಾನ ನಿಲ್ದಾಣ ಪ್ರವೇಶಿಸುವ ಮೊದಲೇ ಅದನ್ನು ತುಂಡು ತುಂಡಾಗಿ ಕತ್ತರಿಸಿ ಬ್ಯಾಗ್‌ನಲ್ಲಿ ಇಟ್ಟುಕೊಂಡು ಹೋಗಿದ್ದರು. ಚಿನ್ನ ಸಾಗಣೆಗೆ ಪೂರ್ವ ತಯಾರಿ ಮಾಡಿಕೊಂಡಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿದೆ.

ರನ್ಯಾ ರಾವ್

'ಸರ್ಕಾರದಿಂದ ಯಾರದ್ದೋ ರಕ್ಷಣೆ'

ಹುಬ್ಬಳ್ಳಿ: 'ಚಿನ್ನ ಕಳ್ಳಸಾಗಣೆಗೆ ಸಂಬಂಧಿಸಿದ ರನ್ಯಾ ರಾವ್ ಪ್ರಕರಣವನ್ನು ಸಮರ್ಪಕವಾಗಿ ನಿಭಾಯಿಸದ ರಾಜ್ಯ ಸರ್ಕಾರ ಯಾರನ್ನೋ ರಕ್ಷಿಸಲು ಯತ್ನಿಸುತ್ತಿದೆ ಎಂಬಂತೆ ತೋರುತ್ತದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆರೋಪಿಸಿದರು.

'ಪ್ರಕರಣದಲ್ಲಿ ರಾಜಕಾರಣಿಗಳು, ಸಚಿವರು ಭಾಗಿಯಾದ ಬಗ್ಗೆ ವರದಿಗಳಿದ್ದು, ಇದು ದೇಶದ್ರೋಹದ ಕೆಲಸ. ಚಿನ್ನ ಎಲ್ಲಿಂದ ಬಂದು, ಎಲ್ಲಿಗೆ ಹೋಗುತ್ತದೆ ಎಂಬುದು ಯಾರಿಗೂ ಗೊತ್ತಿಲ್ಲ. ಹಣ ದೇಶವಿರೋಧಿ ಕೃತ್ಯಗಳಿಗೆ ಅಥವಾ ನಕ್ಸಲ್ ಚಟುವಟಿಕೆಗೆ ಹೋಗುತ್ತಿತ್ತಾ ಎಂಬುದು ಕೂಡ ಸ್ಪಷ್ಟವಿಲ್ಲ' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

'ಪ್ರಕರಣವನ್ನು ಸಿಐಡಿ ತನಿಖೆಗೆ ಕೊಡಲಾಗಿದೆಯೇ ಅಥವಾ ಇಲ್ಲವೇ ಎಂಬುದು ಕೂಡ ಸ್ಪಷ್ಟವಿಲ್ಲ. ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ, ನಿಷ್ಪಕ್ಷಪಾತ ತನಿಖೆ ನಡೆಸಬೇಕು' ಎಂದರು.

'ನಾನೇ ಸಿಎಂ' ಎನ್ನುವ ಸಿದ್ದರಾಮಯ್ಯ ಅವರ ಹೇಳಿಕೆ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, 'ನಾನೇ ಇರ್ತಿನಿ ಎನ್ನುವುದೇ ದೊಡ್ಡ ವಿಷಯ. ಡಿ.ಕೆ ಶಿವಕುಮಾರ್ ಮತ್ತು ಅವರ ಬೆಂಬಲಿಗರು ಇದನ್ನು ಹೇಳಬೇಕು. ನೀವೇ ಇರಬೇಕು ಎನ್ನುವುದು ನಮ್ಮ ಆಶಯ. ಚೆನ್ನಾಗಿ ಕೆಲಸ ಮಾಡಿ, ಲೂಟಿ ಮಾಡಬೇಡಿ' ಎಂದರು.

ಪ್ರಲ್ಹಾದ ಜೋಶಿ

ಜಾತಿ ಹೆಸರಲ್ಲಿ ಸಭೆ ಬೇಡ ಯಡಿಯೂರಪ್ಪ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾತಿ ಮತ್ತು ಸಮುದಾಯದ ಹೆಸರಿನಲ್ಲಿ ಸಭೆ–ಸಮಾವೇಶಗಳನ್ನು ನಡೆಸಬಾರದು ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರಿಗೆ ಸೂಚನೆ ನೀಡಿದ್ದಾರೆ.

ರೇಣುಕಾಚಾರ್ಯ ಅವರನ್ನು ತಮ್ಮ ಮನೆಗೆ ಬುಧವಾರ ರಾತ್ರಿ ಕರೆಸಿಕೊಂಡಿದ್ದ ಯಡಿಯೂರಪ್ಪ ಅವರು, 'ಯಾವುದೇ ಸಭೆ–ಸಮಾವೇಶ ನಡೆಸಿ ಗೊಂದಲ ಸೃಷ್ಟಿಸುವುದು ಬೇಡ. ಏನೇ ಇದ್ದರೂ ಪಕ್ಷದ ಚೌಕಟ್ಟಿನಲ್ಲಿ ಮಾತುಕತೆ ಮಾಡಿ ಪರಿಹಾರ ಕಂಡುಕೊಳ್ಳಬೇಕು' ಎಂದು ಹೇಳಿದರು.

ಇದೇ ವೇಳೆ ಯಡಿಯೂರಪ್ಪ ಅವರು ಬಿ.ವೈ.ವಿಜಯೇಂದ್ರ ಅವರನ್ನು ಕರೆಸಿಕೊಂಡು, ಇಂತಹ ಚಟುವಟಿಕೆಗಳಿಗೆ ಅವಕಾಶ ನೀಡಬಾರದೆಂದು ಸೂಚಿಸಿದ್ದಾಗಿ ಮೂಲಗಳು ತಿಳಿಸಿವೆ.

ಯತ್ನಾಳ ನಮ್ಮ ಮುಖಂಡರು: ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ರೇಣುಕಾಚಾರ್ಯ, 'ಯತ್ನಾಳ ನಮ್ಮ ಸಮುದಾಯದ ಮುಖಂಡರು. ಹಿಂದೆ ಕೆಲವರು ನನ್ನನ್ನು ಅಸ್ತ್ರವಾಗಿ ಬಳಸಿಕೊಂಡಂತೆ ಯತ್ನಾಳ ಅವರನ್ನೂ ಬಳಸಿಕೊಳ್ಳಬಹುದು. ಆದ್ದರಿಂದ ಎಚ್ಚರಿಕೆಯಿಂದ ಇರುವಂತೆ ಅವರಿಗೆ ಮನವಿ ಮಾಡುತ್ತೇನೆ' ಎಂದು ಹೇಳಿದರು.

'ಯತ್ನಾಳ ಅವರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ಅವರನ್ನು ಎತ್ತಿಕಟ್ಟುವ ಕೆಲಸ ಮಾಡಲಾಗುತ್ತಿದೆ. ನಿಮ್ಮನ್ನು ನನ್ನಂತೆ ಬಲಿಪಶು ಮಾಡಬಹುದು. ನಾನು ಆತ್ಮಾವಲೋಕನ ಮಾಡಿಕೊಂಡು, ಯಾರ ದಾಳವೂ ಆಗದೇ ಈಗ ಯಡಿಯೂರಪ್ಪ ಅವರ ಜತೆ ಗಟ್ಟಿಯಾಗಿ ನಿಂತಿದ್ದೇನೆ' ಎಂದರು.

'ಹಾಗೆಂದು ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ರಾಜೀಯೂ ಇಲ್ಲ. ಸಮುದಾಯದ ಸಂಘಟನೆ ಮಾಡುವ ಕೆಲಸ ಮುಂದುವರಿಸುತ್ತೇನೆ. ಯತ್ನಾಳ ಅವರು ಸೇರಿ ಯಾರು ಬೇಕಾದರೂ ನಮ್ಮ ಜತೆ ಬರಬಹುದು. ಒಳಪಂಗಡ ಮತ್ತಿತರ ಹೆಸರಿನಲ್ಲಿ ನಮ್ಮ ಸಮಾಜ ಒಡೆಯುವ ಕೆಲಸ ನಡೆಯುತ್ತಿದೆ. ನಮ್ಮ ನಮ್ಮಲ್ಲಿ ಸಂಘರ್ಷ ಬೇಡ, ಒಗಟ್ಟಾಗಿ ಎಲ್ಲರೂ ಮುನ್ನಡೆಯಬೇಕು. ಆಗ ಸಮುದಾಯ ಬಲಿಷ್ಠವಾಗುತ್ತದೆ' ಎಂದು ರೇಣುಕಾಚಾರ್ಯ ಹೇಳಿದರು.

ಚಿನ್ನ: ತನಿಖೆಗೆ ಧುಮುಕಿದ ಇ.ಡಿ

ಒಂದನೇ ಪುಟದಿಂದ...

ಇದೇ ಜನವರಿಯಿಂದ ಈವರೆಗೆ ಮುಂಬೈನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ದುಬೈನಿಂದ ಭಾರಿ ಪ್ರಮಾಣದ ಕಳ್ಳಸಾಗಣೆಯ ಚಿನ್ನ ತಂದ ಪ್ರಕರಣಗಳಲ್ಲಿ ರನ್ಯಾ ರಾವ್ ಸೇರಿ ಒಟ್ಟು ನಾಲ್ವರನ್ನು ಡಿಆರ್‌ಐ ಬಂಧಿಸಿದೆ.

ನಾಲ್ಕೂ ಪ್ರಕರಣಗಳಿಂದ ಒಟ್ಟು 38.98 ಕೆ.ಜಿ.ಯಷ್ಟು ಚಿನ್ನವನ್ನು ವಶಕ್ಕೆ ಪಡೆದಿದೆ.

'ಈ ಪ್ರಕರಣಗಳಲ್ಲಿ ಕೇಂದ್ರ ಸರ್ಕಾರದ ಅಧಿಕಾರಿಗಳು ಭಾಗಿಯಾಗಿರುವ ಶಂಕೆಯಿದೆ. ಈ ಬಗ್ಗೆ ತನಿಖೆ ನಡೆಸಲು ಸಹಕಾರ ನೀಡಿ' ಎಂದು ಡಿಆರ್‌ಐ, ಸಿಬಿಐಗೆ ಪತ್ರ ಬರೆದಿತ್ತು. ಸಿಬಿಐ ಈ ದಿಕ್ಕಿನಲ್ಲಿ ತನಿಖೆ ಆರಂಭಿಸಿದೆ. ಮುಂಬೈ ಮತ್ತು ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಸ್ಟಮ್ಸ್ ಅಧಿಕಾರಿಗಳಿಗೆ ಸಮನ್ಸ್ ನೀಡಿ, ವಿಚಾರಣೆ ನಡೆಸಿದೆ.

'ಕಸ್ಟಮ್ಸ್ ಅಧಿಕಾರಿಗಳ ನೆರವು ಇಲ್ಲದೆ ಇಷ್ಟು ದೊಡ್ಡಮಟ್ಟದ ಕಳ್ಳಸಾಗಣೆ ಸಾಧ್ಯವಿಲ್ಲ. 2024ರಲ್ಲಿ ಪತ್ತೆಯಾಗಿದ್ದ ಪ್ರಕರಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ನೇರವಾಗಿ ಭಾಗಿಯಾಗಿದ್ದರು. ಅವರೀಗ ನ್ಯಾಯಾಂಗ ಬಂಧನದಲ್ಲಿದ್ದಾರೆ. ಆನಂತರ ಮುಂಬೈ ವಿಮಾನ ನಿಲ್ದಾಣದಲ್ಲಿ ನಿಯೋಜಿತರಾದ ಇತರ ಕಸ್ಟಮ್ಸ್ ಅಧಿಕಾರಿಗಳು ಚಿನ್ನ ಕಳ್ಳಸಾಗಣೆಗೆ ನೆರವು ನೀಡಿರುವ ಬಗ್ಗೆ ಸುಳಿವು ದೊರೆತಿದೆ' ಎಂದು ಮೂಲಗಳು ತಿಳಿಸಿವೆ.

'ಬೆಂಗಳೂರು ವಿಮಾನ ನಿಲ್ದಾಣದಲ್ಲಿನ ಕಸ್ಟಮ್ಸ್ ಅಧಿಕಾರಿಗಳೂ ಇದೇ ರೀತಿ ನೆರವು ನೀಡಿರುವ ಶಂಕೆ ಇದೆ. ಇವರು ಕಳ್ಳಸಾಗಣೆ ಜಾಲದ ಭಾಗವಾಗಿದ್ದಾರೆಯೇ ಎಂಬ ದಿಕ್ಕಿನಲ್ಲಿ ತನಿಖೆ ನಡೆಸಲಾಗುತ್ತಿದೆ' ಎಂದಿವೆ.

'ಜತೆಗೆ ಭಾರತದ ಕೆಲವು ರಾಜತಾಂತ್ರಿಕ ಅಧಿಕಾರಿಗಳು, ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದೇಶಿ ರಾಜತಾಂತ್ರಿಕ ಕಚೇರಿಗಳ ಸಿಬ್ಬಂದಿಯೂ ಇದರಲ್ಲಿ ಭಾಗಿಯಾಗಿರುವ ಶಂಕೆಯಿದೆ. ದುಬೈ ಮತ್ತು ಅಬುಧಾಬಿಗೆ ಪದೇ ಪದೇ ಒಂದೆರಡು ದಿನಗಳ ಕಿರು ಪ್ರವಾಸ ಕೈಗೊಂಡ ಅಧಿಕಾರಿ–ಸಿಬ್ಬಂದಿಯ ಪ್ರವಾಸದ ವಿವರ ಕಲೆ ಹಾಕಲಾಗುತ್ತಿದೆ' ಎಂದು ಮಾಹಿತಿ ನೀಡಿವೆ.

ಸಿಬಿಐ ದಾಖಲಿಸಿದ್ದ ಎಫ್‌ಐಆರ್ ಆಧಾರದಲ್ಲಿ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ ಅಧಿಕಾರಿಗಳು ಮತ್ತೊಂದು ದಿಕ್ಕಿನಲ್ಲಿ ತನಿಖೆ ಆರಂಭಿಸಿದ್ದಾರೆ. ಮುಂಬೈ ಮತ್ತು ಬೆಂಗಳೂರಿನಲ್ಲಿನ ಕಸ್ಟಮ್ಸ್ ಅಧಿಕಾರಿಗಳು, ಬಂಧಿತ ಆರೋಪಿಗಳು, ಶಂಕಿತರು, ಉದ್ಯಮಿಗಳು, ಚಿನ್ನಾಭರಣ ವ್ಯಾಪಾರಿಗಳ ಮನೆ ಮತ್ತು ಕಚೇರಿಗಳಲ್ಲಿ ಗುರುವಾರ ಶೋಧ ನಡೆಸಿದ್ದಾರೆ.

'ಕಳ್ಳಸಾಗಣೆ ಮಾಡಿದ ಚಿನ್ನವನ್ನು ಹೇಗೆ ವಿತರಣೆ ಮಾಡಲಾಗಿದೆ ಮತ್ತು ಅದನ್ನು ಸಕ್ರಮಗೊಳಿಸಿಕೊಂಡ ಬಗೆ, ಕಳ್ಳಸಾಗಣೆಯಲ್ಲಿ ಭಾಗಿಯಾದ ವ್ಯಕ್ತಿಗಳು ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ ಹಣ ಹೇಗೆ ಸಂದಾಯವಾಗಿದೆ ಎಂಬುದನ್ನೂ ಪರಿಶೀಲಿಸಲಾಗುತ್ತಿದೆ. ಹವಾಲಾ ಜಾಲವನ್ನೂ ಇದಕ್ಕೆ ಬಳಸಿಕೊಂಡಿರುವ ಸುಳಿವು ದೊರೆತಿದ್ದು, ಈ ಸಂಬಂಧವೂ ತನಿಖೆ ನಡೆಸಲಾಗುತ್ತಿದೆ' ಎಂದು ಇ.ಡಿ ಮೂಲಗಳು ತಿಳಿಸಿವೆ.

ತನಿಖೆ ಮುಂದುವರಿಸಿರುವ ಡಿಆರ್‌ಐ ಅಧಿಕಾರಿಗಳು ರನ್ಯಾ ರಾವ್ ಈವರೆಗೆ ಎಷ್ಟು ಚಿನ್ನ ಕಳ್ಳಸಾಗಣೆ ಮಾಡಿದ್ದಾರೆ ಎಂಬುದರ ಪರಿಶೀಲನೆ ನಡೆಸುತ್ತಿದ್ದಾರೆ. ರನ್ಯಾ ರಾವ್, ತರುಣ್ ರಾಜು, ಕಸ್ಟಮ್ಸ್ ಅಧಿಕಾರಿಗಳ ಮನೆಗಳಲ್ಲಿ ಡಿಆರ್‌ಐ ಅಧಿಕಾರಿಗಳು ಶೋಧ ಮುಂದುವರೆಸಿದ್ದಾರೆ. ಇ.ಡಿ ಸಹ ಈ ಸ್ಥಳಗಳಲ್ಲಿ ಶೋಧ ನಡೆಸುತ್ತಿದೆ.

ಡಿಆರ್‌ಐ ಶೋಧದಲ್ಲಿ ಪತ್ತೆಯಾಗಿದ್ದೇನು?

ಒಂದನೇ ಪುಟದಿಂದ...

- ಆಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜತಿನ್ ವಾಸವಿರುವ ಪ್ರೆಸ್ಟೀಜ್ ಅಕ್ರೊಪೊಸ್ ಫ್ಲ್ಯಾಟ್ ಸೇರಿದಂತೆ 9 ಕಡೆಗಳಲ್ಲಿ ಡಿಆರ್‌ಐ ತಂಡ ಗುರುವಾರ ಶೋಧ ನಡೆಸಿದೆ. ಈ ವೇಳೆ ಹಣಕಾಸು ವಹಿವಾಟು ಕುರಿತ ದಾಖಲೆಗಳ ಪರಿಶೀಲನೆ ಕಾರ್ಯವನ್ನು ತಡರಾತ್ರಿವರೆಗೂ ಅಧಿಕಾರಿಗಳು ನಡೆಸಿದ್ದಾರೆ.
- ಮದುವೆಗೂ ಮುನ್ನ ಹಾಗೂ ನಂತರ ರನ್ಯಾ–ಜತಿನ್ ಕೈಗೊಂಡಿದ್ದ ಪ್ರವಾಸ ಹಾಗೂ ಯಾರ ಜತೆ ನಂಟು ಹೊಂದಿದ್ದರು ಎಂಬುದರ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ. ದಂಪತಿಯ ಮೊಬೈಲ್ ಕರೆಗಳ ವಿಶ್ಲೇಷಣೆ ನಡೆಯುತ್ತಿದೆ.
- ಈ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆ ಆಗಿರುವುದು ಮೇಲ್ನೋಟಕ್ಕೆ ದೃಢಪಟ್ಟಿದೆ. ಹವಾಲಾ ದಂಧೆ ಮೂಲಕ ಭಾರತದಿಂದ ಹಣ ದುಬೈ ತಲುಪಿ, ಬಳಿಕ ಚಿನ್ನದ ಗಟ್ಟಿ ರೂಪದಲ್ಲಿ ಬೆಂಗಳೂರಿಗೆ ವಾಪಸ್ ಬರುತ್ತಿತ್ತು ಎಂಬುದು ಪತ್ತೆಯಾಗಿದೆ.

ರಜೆ ಮೇಲೆ ತೆರಳಿದ ರಾಮಚಂದ್ರ ರಾವ್

ಒಂದನೇ ಪುಟದಿಂದ...

ಚಿನ್ನ ಕಳ್ಳಸಾಗಣೆ ಮಾಡುತ್ತಿದ್ದ ರನ್ಯಾ ರಾವ್ ಅವರು ಮಲತಂದೆ ಡಿಜಿಪಿ ರಾಮಚಂದ್ರ ರಾವ್ ಅವರ ಹೆಸರು ಬಳಸಿಕೊಂಡು ವಿಮಾನ ನಿಲ್ದಾಣದಿಂದ ಹೊರಕ್ಕೆ ಬರುತ್ತಿದ್ದರು ಎಂಬ ಆರೋಪವಿದೆ. ಡಿಜಿಪಿ ಪಾತ್ರದ ಕುರಿತು ತನಿಖೆ ನಡೆಸಲು ನೇಮಿಸಿರುವ ಕೈಗಾರಿಕೆ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ನೇತೃತ್ವದ ಸಮಿತಿ ವಿಚಾರಣೆಗೆ ನೋಟಿಸ್ ನೀಡುವ ಮುನ್ನವೇ ರಾವ್, ರಜೆ ಮೇಲೆ ತೆರಳಿದ್ದಾರೆ.

ಗೃಹ ಇಲಾಖೆಯು ಡಿಜಿಪಿ ಅವರನ್ನು ಕಡ್ಡಾಯ ರಜೆ ಮೇಲೆ ಕಳುಹಿಸಲು ಆದೇಶ ಹೊರಡಿಸುವುದಕ್ಕಾಗಿ ತಯಾರಿ ನಡೆಸಿತ್ತು. ಈ ನಡುವೆಯೇ ರಾವ್ ರಜೆ ಮೇಲೆ ತೆರಳಿದ್ದಾರೆ.

ಸುದ್ದಿ 2 ನಿಮಿಷ

ಗೃಹಿಣಿಗೆ ಕಿರುಕುಳ: ಗ್ರಾ.ಪಂ ಸದಸ್ಯನ ವಿರುದ್ಧ ಎಫ್‌ಐಆರ್

ಕಲಬುರಗಿ: ವಸತಿ ಯೋಜನೆಯಡಿ ಮನೆ ಮಂಜೂರು ಮಾಡಲು ಲೈಂಗಿಕ ಕ್ರಿಯೆಗೆ ಸಹಕರಿಸುವಂತೆ ಕಿರುಕುಳ ನೀಡಿದ ಆರೋಪದಡಿ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರ ವಿರುದ್ಧ ಕಮಲಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೃಹಿಣಿ ನೀಡಿದ ದೂರಿನ ಮೇರೆಗೆ ಮರಗುತ್ತಿ ಗ್ರಾಮ ಪಂಚಾಯಿತಿ ಸದಸ್ಯ ನೀಲಕಂಠ ರಾಠೋಡ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಈತನ ವಿರುದ್ಧ ಚಿಂಚೋಳಿ ಪೊಲೀಸ್ ಠಾಣೆಯಲ್ಲಿ 2019ರಲ್ಲಿ ಅತ್ಯಾಚಾರ ಪ್ರಕರಣವೊಂದು ದಾಖಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

'ಈಚೆಗೆ ನಡೆದ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ನೀಲಕಂಠ ಸದಸ್ಯನಾಗಿದ್ದ. ಆ ಬಳಿಕ ಗೃಹಿಣಿಯ ಮನೆಗೆ ಬಂದು, ಮನೆ ಮಂಜೂರು ಮಾಡಿಸುವುದಾಗಿ ಆಶ್ವಾಸನೆ ಕೊಟ್ಟು, ಫೋನ್ ನಂಬರ್ ಪಡೆದ. ಗೃಹಿಣಿಗೆ ಫೋನ್ ಕರೆ ಮಾಡಿ, ಲೈಂಗಿಕ ಕ್ರಿಯೆಗೆ ಒಪ್ಪಿಕೊಳ್ಳುವಂತೆ ಪೀಡಿಸುತ್ತಿದ್ದ. ಮಗಳನ್ನೂ ಕಳುಹಿಸುವಂತೆ ಒತ್ತಾಯಿಸಿದ್ದ ಎಂದು ಆರೋಪಿಸಿ ಸಂತ್ರಸ್ತೆ ದೂರು ಕೊಟ್ಟಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

₹30 ಸಾವಿರಕ್ಕೆ ಬೇಡಿಕೆ: 'ನೀಲಕಂಠ ತಾನಾಗಿಯೇ ಗೃಹಿಣಿಯ ಮನೆಗೆ ಬಂದು ಸರ್ಕಾರದಿಂದ ಮನೆ ಮಂಜೂರಾತಿಗೆ ₹30 ಸಾವಿರಕ್ಕೆ ಬೇಡಿಕೆ ಇರಿಸಿದ್ದ. ಮುಂಬೈಗೆ ಹೋಗಿ ದುಡಿದು ತಂದು ಕೊಡುವುದಾಗಿ ಸಂತ್ರಸ್ತೆಯು ಗಂಡನೊಂದಿಗೆ ವಲಸೆ ಹೋಗಿದ್ದರು. ಹಣ ಕೇಳುವ ನೆಪ ಮಾಡಿಕೊಂಡು ಫೋನ್ ಮಾಡುತ್ತಿದ್ದ ನೀಲಕಂಠ, ತನಗೆ ಹಣ ಕೊಡುವುದು ಬೇಡ, ತನ್ನ ಜತೆಗೆ ಬಂದು ಸಹಕರಿಸುವಂತೆ ಪೀಡಿಸಿದ್ದ' ಎಂದು ಸಂತ್ರಸ್ತೆಯ ಕುಟುಂಬದ ಸದಸ್ಯರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ನಿವೃತ್ತ ಪಿಡಿಒ ಬಂಧನ

ಸೋಮವಾರಪೇಟೆ (ಕೊಡಗು ಜಿಲ್ಲೆ): 'ಸಿಬ್ಬಂದಿ ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ' ಎಂದು ದೂರು ನೀಡಿದ್ದ ತಾಲ್ಲೂಕಿನ ಐಗೂರು ಗ್ರಾಮ ಪಂಚಾಯಿತಿಯ ಹಿಂದಿನ ಅಭಿವೃದ್ಧಿ ಅಧಿಕಾರಿ ಬಾಲಕೃಷ್ಣ ಅವರೇ ಹಣ ದುರ್ಬಳಕೆ ಮಾಡಿಕೊಂಡ ಆರೋಪದ ಮೇರೆಗೆ ಅವರನ್ನು ಪೊಲೀಸರು ಬಂಧಿಸಿದ್ದಾರೆ.

'ಪಂಚಾಯಿತಿಯ ಡೇಟಾ ಎಂಟ್ರಿ ಆಪರೇಟರ್ ಸರಿತಾ ಅವರು 2021–22ರ ಸಾಲಿನಿಂದ 2024ರವರೆಗೆ ಒಟ್ಟು ₹ 16.41 ಲಕ್ಷ ಹಣವನ್ನು ತಮ್ಮ ವೈಯಕ್ತಿಕ ಖಾತೆಗೆ ವರ್ಗಾವಣೆ ಮಾಡಿಕೊಂಡಿದ್ದಾರೆ' ಎಂದು ಆರೋಪಿಸಿ ಅಧಿಕಾರಿಯು ಪೊಲೀಸರಿಗೆ ದೂರು ನೀಡಿದ್ದರು.

'ದೂರಿನ ಅನ್ವಯ ವಿಚಾರಣೆ ನಡೆಸಿದಾಗ ಹಣ ವರ್ಗಾವಣೆ ಮತ್ತು ದುರುಪಯೋಗ ಪ್ರಕರಣದಲ್ಲಿ ಈ ಅಧಿಕಾರಿಯೂ ಭಾಗಿಯಾಗಿದ್ದಾರೆ ಎಂಬುದು ತಿಳಿದು ಬಂದಿತ್ತು. ಹೀಗಾಗಿ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ನೈರ್ಮಲ್ಯ ನಿರೀಕ್ಷಕನ ಮೇಲೆ ಹಲ್ಲೆ: ದೂರು

ಜೇವರ್ಗಿ (ಕಲಬುರಗಿ ಜಿಲ್ಲೆ): ಇಲ್ಲಿನ ಪುರಸಭೆಯ ನೈರ್ಮಲ್ಯ ನಿರೀಕ್ಷಕನ ಮೇಲೆ ಹಲ್ಲೆ ಮಾಡಿ, ಜೀವಬೆದರಿಕೆ ಹಾಕಿದ ಆರೋಪದಡಿ ಸಿಪಿಐ ಜಿಲ್ಲಾ ಕಾರ್ಯದರ್ಶಿ ಸೇರಿ ಇಬ್ಬರ ವಿರುದ್ಧ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಗುರುವಾರ ಪ್ರಕರಣ ದಾಖಲಾಗಿದೆ.

ಹಲ್ಲೆಗೆ ಒಳಗಾದ ನೈರ್ಮಲ್ಯ ನಿರೀಕ್ಷಕ ರಾಜಶೇಖರಯ್ಯ ಹಿರೇಮಠ ಅವರು ನೀಡಿದ ದೂರಿನ ಅನ್ವಯ ಸಿಪಿಐ ಜಿಲ್ಲಾ ಕಾರ್ಯದರ್ಶಿ ಮಹೇಶ ಕುಮಾರ್ ರಾಠೋಡ, ಗೌಸುದ್ದೀನ್ ಗಂವ್ಹಾರ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೂರು ದಾಖಲಿಸುವ ಹಕ್ಕು ಆಯೋಗಕ್ಕೆ ಮಾತ್ರ

ಚುನಾವಣಾ ಪ್ರಮಾಣ ಪತ್ರದಲ್ಲಿ ಮಾಹಿತಿ ಮರೆಮಾಚಿದ ಆರೋಪದಲ್ಲಿ ಹೈಕೋರ್ಟ್ ತೀರ್ಪು

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಚುನಾವಣಾ ಪ್ರಮಾಣ ಪತ್ರದಲ್ಲಿ ಅಭ್ಯರ್ಥಿಗಳು ಸುಳ್ಳು ಮಾಹಿತಿ ನೀಡಿದ್ದರೆ ಅಥವಾ ಮಾಹಿತಿ ಮರೆಮಾಚಿದ್ದಾರೆ ಎಂಬ ಆರೋಪ ಏನಾದರೂ ಇದ್ದರೆ ಇದಕ್ಕೆ ಸಂಬಂಧಿಸಿದಂತೆ ದೂರು ದಾಖಲಿಸುವ ಹಕ್ಕು ಚುನಾವಣಾ ಆಯೋಗಕ್ಕೆ ಇರುತ್ತದೆಯೇ ಹೊರತು ಖಾಸಗಿ ವ್ಯಕ್ತಿಗಳಿಗೆ ಅಲ್ಲ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

'ಕಳೆದ ವಿಧಾನಸಭೆ ಚುನಾವಣೆಯ ವೇಳೆ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಸುಳ್ಳು ಮಾಹಿತಿ ನೀಡಲಾಗಿದೆ ಮತ್ತು ನಾಮಪತ್ರದಲ್ಲಿನ ಕೆಲ ಕಾಲಂಗಳನ್ನು ಭರ್ತಿ ಮಾಡಿಲ್ಲ ಎಂಬ ಆರೋಪದಡಿ ಕೆಲ ವ್ಯಕ್ತಿಗಳು ನಮ್ಮ ವಿರುದ್ಧ ದಾಖಲಿಸಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು' ಎಂದು ಕೋರಿ ಮಹದೇವಪುರ ವಿಧಾನಸಭಾ ಕ್ಷೇತ್ರದ ಶಾಸಕಿ ಮಂಜುಳಾ ಲಿಂಬಾವಳಿ ಮತ್ತು ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಶೈಲೇಂದ್ರ ಬೆಲ್ದಾಳೆ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ರಿಟ್ ಅರ್ಜಿಗಳನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಕ್ರಿಮಿನಲ್ ದೂರು ದಾಖಲಿಸುವ ಹಕ್ಕು ಖಾಸಗಿ ವ್ಯಕ್ತಿಗಳಿಗೆ ಇರುವುದಿಲ್ಲ. ಅವರೇನಿದ್ದರೂ ಚುನಾವಣಾ ಅರ್ಜಿ ದಾಖಲಿಸಬಹುದಷ್ಟೇ' ಎಂದು ಅರ್ಜಿದಾರರ ವಿರುದ್ಧದ ಪ್ರಕರಣಗಳನ್ನು ರದ್ದುಪಡಿಸಿದೆ.

'ಜನಪ್ರತಿನಿಧಿ ಕಾಯ್ದೆ–1951ರ ಕಲಂ 125ಎ ಅಡಿಯಲ್ಲಿ ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಏನಾದರೂ ಸುಳ್ಳು ಮಾಹಿತಿ ಇದ್ದರೆ ಅಥವಾ ಅಭ್ಯರ್ಥಿಯು ಮಾಹಿತಿಯನ್ನು ಮರೆಮಾಚಿದ್ದರೆ, ಅಂತಹ ಸಂದರ್ಭದಲ್ಲಿ ಚುನಾವಣಾ ಆಯೋಗ ಮಾತ್ರವೇ ದೂರು ದಾಖಲಿಸಬೇಕಾಗುತ್ತದೆ. ಅದು ಆಯೋಗದ ಕರ್ತವ್ಯವೂ ಆಗಿರುತ್ತದೆ' ಎಂದು ನ್ಯಾಯಪೀಠ ತಿಳಿಸಿದೆ.

ಅರ್ಜಿದಾರರ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ (42ನೇ ಎಸಿಎಂಎಂ ಕೋರ್ಟ್) ವಿಚಾರಣೆಯನ್ನು ರದ್ದುಪಡಿಸಿರುವ ನ್ಯಾಯಪೀಠ, 'ಮಂಜುಳಾ ವಿರುದ್ಧ ದೂರು ನೀಡಿರುವ ನಲ್ಲೂರಹಳ್ಳಿ ನಾಗೇಶ್ ಮತ್ತು ಶೈಲೇಂದ್ರ ಬೆಲ್ದಾಳೆ ವಿರುದ್ಧ ದೂರು ಸಲ್ಲಿಸಿರುವ ರಾಜಕುಮಾರ್ ಮಡಕಿ ಕಾನೂನಿನಲ್ಲಿ ಲಭ್ಯವಿರುವ ಪರಿಹಾರ ಪಡೆಯಲು ಮುಕ್ತರಾಗಿದ್ದಾರೆ' ಎಂದು ತೀರ್ಪಿನಲ್ಲಿ ವಿವರಿಸಿದೆ.

ಕೆಪಿಎಸ್‌ಸಿ: ತೀರ್ಪು ಕಾಯ್ದಿರಿಸಿದ ಕೆಎಟಿ

2023-24ನೇ ಸಾಲಿನ ಗ್ರೂಪ್ 'ಎ' ಮತ್ತು 'ಬಿ' ವೃಂದದ 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಪರೀಕ್ಷೆಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) 2024ರ ಡಿಸೆಂಬರ್ 29ರಂದು ನಡೆಸಿದ ಪೂರ್ವಭಾವಿ ಮರು ಪರೀಕ್ಷೆಯ ಪ್ರಶ್ನೆ ಪತ್ರಿಕೆ ಅನುವಾದದಲ್ಲಿ ಲೋಪಗಳಾಗಿವೆ ಎಂಬ ಕಾರಣದಿಂದ ಪರೀಕ್ಷೆ ರದ್ದುಗೊಳಿಸಿ, ಹೊಸದಾಗಿ ಪರೀಕ್ಷೆ ನಡೆಸಬೇಕೆಂದು ಕೋರಲಾಗಿದ್ದ ಅರ್ಜಿಗಳ ಮೇಲಿನ ವಿಚಾರಣೆಯನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಪೂರ್ಣಗೊಳಿಸಿದ್ದು ತೀರ್ಪು ಕಾಯ್ದಿರಿಸಿದೆ.

ಈ ಸಂಬಂಧ ಪವಿತ್ರಾ ಮತ್ತಿತರ ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಜಿಗಳನ್ನು ನ್ಯಾಯಾಂಗ ಸದಸ್ಯ ಎಸ್.ವೈ.ವಟವಟಿ ಮತ್ತು ಆಡಳಿತ ಸದಸ್ಯೆ ಅಮಿತಾ ಪ್ರಸಾದ್ ಅವರಿದ್ದ ದ್ವಿಸದಸ್ಯ ಪೀಠ ಗುರುವಾರ ವಿಚಾರಣೆ ನಡೆಸಿತು.

'ಪ್ರಶ್ನೆಗಳಲ್ಲಿ ಆಗಿದ್ದ ಲೋಪಗಳನ್ನು ಪರಿಶೀಲಿಸಲು ರಚಿಸಲಾಗಿದ್ದ ತಜ್ಞರ ಸಮಿತಿಯ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿ' ಎಂದು ಕೆಪಿಎಸ್‌ಸಿಗೆ ನಿರ್ದೇಶಿಸಿದ ಪೀಠವು, ಮುಖ್ಯ ಪರೀಕ್ಷೆಯ ವೇಳಾಪಟ್ಟಿಯನ್ನು ಅಮಾನತ್ತಿನಲ್ಲಿರಿಸಿ ಈ ಮೊದಲು ನೀಡಿದ್ದ ಮಧ್ಯಂತರ ಆದೇಶವನ್ನು ಮುಂದುವರಿಸಿ ಆದೇಶಿಸಿತು.

'ಕಪ್ಪು ಕೋಟು ಬೇಕಿಲ್ಲ'

ಪ್ರಸಕ್ತ ಸಾಲಿನ ಬೇಸಿಗೆ ಋತುಮಾನ ಮುಗಿಯುವ ತನಕ ಅಂದರೆ ಇದೇ 15ರಿಂದ ಮೇ 31ರವರೆಗೆ ರಾಜ್ಯದ ಜಿಲ್ಲಾ ಮತ್ತು ವಿಚಾರಣಾ ನ್ಯಾಯಾಲಯಗಳಲ್ಲಿ ಕೋರ್ಟ್ ಕಲಾಪಕ್ಕೆ ಹಾಜರಾಗುವ ವೇಳೆ ವಕೀಲರು ಕಪ್ಪು ಕೋಟ್ ಧರಿಸುವುದಕ್ಕೆ ಹೈಕೋರ್ಟ್ ವಿನಾಯಿತಿ ನೀಡಿದೆ.

'ಮಾರ್ಚ್ 15ರಿಂದ ಮೇ 31ರವರೆಗೆ ಜಿಲ್ಲಾ ಮತ್ತು ವಿಚಾರಣಾ ನ್ಯಾಯಾಯಗಳ ಕಲಾಪಕ್ಕೆ ಹಾಜರಾಗುವ ವೇಳೆ ವಕೀಲರು ಕಪ್ಪು ಕೋಟ್ ಧರಿಸಲು ವಿನಾಯಿತಿ ನೀಡಲಾಗಿದೆ. ಆದರೆ, ಈ ವಿನಾಯಿತಿ ಶ್ವೇತ ವರ್ಣದ ಶರ್ಟ್ ಮತ್ತು ನೆಕ್ ಬ್ಯಾಂಡ್ (ಕುತ್ತಿಗೆಗೆ ಕಟ್ಟಿಕೊಳ್ಳುವ ಬಿಳಿ ಟೈ) ಧರಿಸುವುದಕ್ಕೆ ಅನ್ವಯಿಸುವುದಿಲ್ಲ' ಎಂದು ಮುಖ್ಯ ನ್ಯಾಯಮೂರ್ತಿಗಳ ಆದೇಶದಲ್ಲಿ ವಿವರಿಸಲಾಗಿದೆ.

ರಥೋತ್ಸವ ಲಕ್ಷ್ಮಿನರಸಿಂಹಸ್ವಾಮಿಯ ಬ್ರಹ್ಮರಥೋತ್ಸವವು ಅಪಾರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ ಹೊರಕೆರೆ ದೇವರಪುರದಲ್ಲಿ ಗುರುವಾರ ನಡೆಯಿತು

'ಸ್ಟಾಲಿನ್ ಸಭೆಗೆ ಶಿವಕುಮಾರ್ ಭಾಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನಸಂಖ್ಯೆ ಆಧರಿಸಿ ವಿಧಾನಸಭೆ ಹಾಗೂ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ವಿರೋಧಿಸಿ ತಮಿಳುನಾಡಿನಲ್ಲಿ ಮಾರ್ಚ್ 22ರಂದು ನಡೆಯಲಿರುವ ಸಭೆಗೆ ನಮ್ಮ ಬೆಂಬಲವಿದೆ. ಒಕ್ಕೂಟ ತತ್ವ ಹಾಗೂ ರಾಜ್ಯಗಳ ಅಧಿಕಾರ ರಕ್ಷಣೆಗೆ ನಾವೂ ಬದ್ಧ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದ್ದಾರೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರಿಗೆ ಗುರುವಾರ ಪತ್ರ ಬರೆದಿರುವ ಸಿದ್ದರಾಮಯ್ಯ ಅವರು, 'ರಾಜ್ಯಗಳ ಸ್ವಾಯತ್ತೆ ಹಾಗೂ ಕ್ಷೇತ್ರಗಳ ಪುನರ್ ವಿಂಗಡನೆಗೆ ಸಂಬಂಧಿಸಿದಂತೆ ಸಭೆ ಆಯೋಜಿಸಿರುವ ತಮ್ಮ ಪತ್ರ ನನಗೆ ತಲುಪಿದೆ. ಇಂತಹ ವಿಷಯಗಳ ಕುರಿತು ಸಮಾನ ಮನಸ್ಕ ರಾಜ್ಯಗಳು ಚರ್ಚೆ ನಡೆಸುವ ಅಗತ್ಯವಿದೆ. ಈ ಸಭೆಯಲ್ಲಿ ಭಾಗಿಯಾಗುವಂತೆ ಶಿವಕುಮಾರ್ ಅವರಿಗೆ ಮನವಿ ಮಾಡಿದ್ದೇನೆ' ಎಂದು ತಿಳಿಸಿದ್ದಾರೆ.

ಅಕಾಲ ಕಾಮನ ಸುಡುವುದೇ ಹಬ್ಬ

● ಎಸ್. ಸೂರ್ಯಪ್ರಕಾಶ ಪಂಡಿತ್

ನಮ್ಮ ಶರೀರಕ್ಕೆ ಕಲ್ಮಷಗಳು ಸೇರುತ್ತಲೇ ಇರುತ್ತವೆ. ದೇಹವು ಆರೋಗ್ಯವಾಗಿರಬೇಕಾದರೆ ಈ ಕಲ್ಮಷಗಳು ಶರೀರದಿಂದ ಹೊರಹೋಗುತ್ತಲೂ ಇರಬೇಕು. ಹೀಗೆಯೇ ಮನಸ್ಸಿಗೂ ಕಲ್ಮಷಗಳು ಅಂಟುತ್ತಲೇ ಇರುತ್ತವೆ. ಅವನ್ನೂ ನಾವು ಹೊರಹಾಕುತ್ತಲೇ ಇರಬೇಕು; ಇಲ್ಲವಾದಲ್ಲಿ ನಮ್ಮ ಒಟ್ಟು ಆರೋಗ್ಯವೇ ಕೆಡುತ್ತದೆ. ಶರೀರ ಮತ್ತು ಮನಸ್ಸಿಗೆ ಬೇಕಾದವುಗಳ ಜೊತೆ ಜೊತೆಗೇ ಬೇಡುವಾದುವು ಕೂಡ ಸೇರಿಕೊಳ್ಳುವುದು ಸಹಜ ಪ್ರಕ್ರಿಯೆ. ಹೀಗಾಗಿ ಕಲ್ಮಷಗಳಿಂದ ಪೂರ್ಣ ಮುಕ್ತಿ ಎನ್ನುವುದು ನಮಗೆ ಸಾಧ್ಯವಾಗದು. ಆದರೆ ಅವುಗಳಿಂದ ಒದಗುವ ಅಡ್ಡಪರಿಣಾಮಗಳಿಂದ ತಪ್ಪಿಸಿಕೊಳ್ಳಬಹುದು. ಪರಂಪರೆ ಇಂಥ ವಿವೇಕವನ್ನು ಹಲವು ವಿಧಿ–ವಿಧಾನಗಳ ಮೂಲಕ ಒದಗಿಸುತ್ತಿರುತ್ತದೆ.

'ಕಾಮ'ದಿಂದ ಬಿಡುಗಡೆಯನ್ನು ಸಾಧಿಸುವುದು ಸುಲಭವೂ ಅಲ್ಲ; ಸಾಧುವೂ ಅಲ್ಲ. ಕಾಮ ಎಂದರೆ ದೈಹಿಕ ಕಾಮನೆಗಳೂ ಹೌದು, ಮಾನಸಿಕ ಕಾಮನೆಗಳೂ ಹೌದು. ನಮ್ಮಲ್ಲಿ ಹುಟ್ಟಿಕೊಳ್ಳುವ ಎಲ್ಲ ಬಗೆಯ ಬಯಕೆಗಳೂ 'ಕಾಮ'ದ ವ್ಯಾಪ್ತಿಗೇ ಬರುತ್ತವೆ. ಕಾಮವೇ ಇಲ್ಲದಿದ್ದರೆ ನಮ್ಮ ಯಾರ ಹುಟ್ಟೂ ಇರುತ್ತಿರಲಿಲ್ಲ, ಜೀವನವೂ ಇರುತ್ತಿರಲಿಲ್ಲ. ಆದರೆ ನಮ್ಮ ಅಸ್ತಿತ್ವದೊಂದಿಗೇ ಬೆಸೆದುಕೊಂಡಿರುವ ಕಾಮದೊಂದಿಗಿನ ವ್ಯವಹಾರ ಸುಲಭವಲ್ಲ! ಸಹಜವೇ ಆಗಿರುವ ಕಾಮವು ಸ್ವಲ್ಪ ಹದಮೀರಿದರೂ ವಿಕೃತವಾಗಿಬಿಡುತ್ತದೆ. ಇದನ್ನೇ ಪರಂಪರೆ ಸೊಗಸಾಗಿ ನಿರೂಪಿಸಿತು. ಕಾಮದ ಸಂಚಾರಕ್ಕೆ ಎರಡು ಮುಖಗಳು: ಸಹಜವೂ ಅನಿವಾರ್ಯವೂ ಆದುದು ಒಂದು; ಇದು ಸುಂದರ; ಇದೇ ಪುರುಷಾರ್ಥ; ಇದು ಜೀವನವನ್ನು ನಡೆಸಬಲ್ಲ ಶಕ್ತಿ. ಅಸಹಜವೂ ಅಪಾಯಕಾರಿಯೂ ಆದುದು; ಇದು ವಿಕೃತ; ಇದೇ ಅರಿಷಡ್ವರ್ಗಗಳಲ್ಲಿ ಪ್ರಮುಖವಾದುದು; ಇದು ಜೀವನವನ್ನು ಅಪಾಯಕ್ಕೆ ಒಡ್ಡುವ ಶತ್ರು.

ನಮ್ಮ ಎಲ್ಲ ಬಯಕೆಗಳ ವಿಗ್ರಹವಾಗಿ 'ಕಾಮ' ಎಂಬ ದೈವವನ್ನು ಪರಂಪರೆ ಸೃಷ್ಟಿಸಿದೆ. ಇವನ ಚೇಷ್ಟೆಗಳಿಗೆ ತಕ್ಕಂತೆ ಇವನಿಗೆ ಹಲವು ಹೆಸರುಗಳು. ಅವನು ಮನಸಿಜ; ಅವನ ಹುಟ್ಟಿನ ತಾಣ ನಮ್ಮ ಮನಸ್ಸೇ. ಅವನು ಅನಂಗನೂ ಹೌದು; ಎಂದರೆ ಶರೀರದ ಅಂಗಗಳನ್ನು ಕಳೆದುಕೊಂಡವನು. ಕಾಮನ ಈ ಎರಡು ನಿಲುವುಗಳಿಗೂ ಕಾಮನ ಹುಣ್ಣಿಮೆಗೂ ಪ್ರತ್ಯಕ್ಷ ಸಂಬಂಧವಿದೆ.

ಶಿವನು ತಪಸ್ಸಿಗೆ ಕುಳಿತಿದ್ದಾನೆ. ಆದರೆ ಅವನ ಈ ತಪಸ್ಸಿಗೆ ಯಾವುದೇ ಕಾಮನೆಯ ಉದ್ದೇಶ ಇಲ್ಲ; ಎಲ್ಲರ ತಪಸ್ಸುಗಳಿಗೆ ಕಾರಣವಾಗಿರುವ ಕಾಮನೆಗಳನ್ನು ಪೂರೈಸಬಲ್ಲ, ಎಂದರೆ ಎಲ್ಲರ ಎಲ್ಲ ಫಲಗಳ ಒಡೆಯ ಅವನು. ಇಂಥ ಶಿವನನ್ನು ತನ್ನತ್ತ ಸೆಳೆದುಕೊಳ್ಳುವ ಹುನ್ನಾರ ಮಾಡುತ್ತಾನೆ, ಮನ್ಮಥ. ಶಿವನ ಮನಸ್ಸಿನಲ್ಲಿ ಹುಟ್ಟುವ ತವಕ ಕಾಮನದ್ದು! ಅದಕ್ಕೆ ಅವನಿಂದ ಅಕಾಲದ ಸಿದ್ಧತೆ ಬೇರೆ!! ಆಗ ಅಕಾಲದ ವಸಂತನನ್ನು ಸೃಷ್ಟಿಸುವ ದೇವತೆಗಳು, ಕಾಮಕ್ಕೆ ವಿಮುಖನಾದ 'ಸಂತ'ನಲ್ಲಿ ಕಾಮವಿಕಾರದ ಬೀಜವನ್ನು ಬಿತ್ತುವ ಸಾಹಸಕ್ಕೆ ಮುಂದಾಗುತ್ತಾರೆ. ದೇಶ–ಕಾಲಗಳ ಔಚಿತ್ಯವನ್ನೇ ಅವರು ಮರೆತುಬಿಟ್ಟರು. ಅಕಾಲದಲ್ಲಿ ತೋರಿಕೊಂಡ ಕಾಮನನ್ನು ಶಿವನು ಕ್ಷಣಾರ್ಧದಲ್ಲಿ ಭಸ್ಮಮಾಡಿಬಿಟ್ಟ. ಕಾಮ ಈಗ 'ಅನಂಗ'ನಾದ. ಆದರೆ 'ಕಾಮ' ಇಲ್ಲದೆ ಜಗತ್ತು ಇರುವುದಾದರೂ ಹೇಗೆ? ಶಿವನಿಗೆ ಇದು ಗೊತ್ತಿಲ್ಲವೆ? ಅವನೇ ಅಲ್ಲವೆ ಈ ಸೃಷ್ಟಿಗೆ ಪ್ರಭು! ಕಾಮನಿಗೆ ಮರುಹುಟ್ಟನ್ನು ಕರುಣಿಸಿದ.

ಸಕಾಲದ ಕಾಮ ಪೂಜ್ಯ; ಅಕಾಲದ ಕಾಮ ತ್ಯಾಜ್ಯ. ಪ್ರಕೃತಿಯಿಂದ ಪ್ರಣಯ; ಆದರೆ ಸಂಸ್ಕೃತಿಯಿಂದ ದಾಂಪತ್ಯ. ಇಂಥ ದಾಂಪತ್ಯಕ್ಕೆ ಶಿವಶಕ್ತಿಯ ಸೊಗಸಿದೆ – ಎಂಬ ಅರಿವಿನ ಬೆಳಕನ್ನು ಕೊಡುತ್ತಿದೆ, ಹೋಳಿಹುಣ್ಣಿಮೆಯ ಕಾಮದಹನ. ❖

16ರಿಂದ ಕಪ್ಪುಪಟ್ಟಿ ಧರಿಸಿ ಅಸಹಕಾರ ಚಳವಳಿ: ಪಶುವೈದ್ಯಕೀಯ ಪರೀಕ್ಷಕರ ಎಚ್ಚರಿಕೆ

7 ವರ್ಷಗಳಿಂದ ಕ್ರಮಬದ್ಧವಾಗದ ಮುಂಬಡ್ತಿ!

● ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ 533 ನೌಕರರಿಗೆ ಹಿರಿಯ ಪಶು ವೈದ್ಯಕೀಯ ಪರೀಕ್ಷಕರ ಹುದ್ದೆಗೆ ಮುಂಬಡ್ತಿ ನೀಡಿದ್ದರೂ, ಪ್ರಕ್ರಿಯೆಯು 7 ವರ್ಷಗಳಿಂದ ಕ್ರಮಬದ್ಧಗೊಳ್ಳದೆ ನನೆಗುದಿಗೆ ಬಿದ್ದಿದೆ.

2018ರಲ್ಲಿ ಮುಂಬಡ್ತಿ ನೀಡಿದ್ದು, 256 ನೌಕರರು ನಿಯುಕ್ತಿಗೊಳಿಸಿದ ಸ್ಥಳದಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದರು. ಆದರೆ, 'ಕೆಲವು ನ್ಯೂನತೆಗಳಿವೆ' ಎಂದು ರಾಜ್ಯ ಸರ್ಕಾರ 2019ರಂದು ಮುಂಬಡ್ತಿ ಆದೇಶ ರದ್ದುಪಡಿಸಿತ್ತು.

ಬಾಧಿತ ನೌಕರರು ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯಿಂದ (ಕೆ.ಎಸ್.ಎ.ಟಿ) ತಡೆಯಾಜ್ಞೆ ತಂದರು. 'ನ್ಯೂನತೆಗಳನ್ನು ಎರಡು ತಿಂಗಳಲ್ಲಿ ಸರಿಪಡಿಸಿ, ಅಂತಿಮ ಜ್ಯೇಷ್ಠತಾ ಪಟ್ಟಿ ಹೊರಡಿಸಿ ಕ್ರಮಬದ್ಧಗೊಳಿಸಬೇಕು' ಎಂದು ನ್ಯಾಯಮಂಡಳಿ ಆದೇಶಿಸಿತ್ತು.

ಅದರಂತೆ, 2021ರಲ್ಲಿ 177 ನೌಕರರು ಬಡ್ತಿ ಪಡೆದ ಹುದ್ದೆಗೆ ಸೇರ್ಪಡೆಗೊಂಡರು. ಉಳಿದ 100 ನೌಕರರಿಗೆ ಆ ಹುದ್ದೆ ಸಿಕ್ಕಿಲ್ಲ. ಅವರಲ್ಲಿ ಕೆಲವರು ನಿವೃತ್ತಿ ಹೊಂದಿದ್ದು, ಕೆಲವರು ಮೃತಪಟ್ಟಿದ್ದಾರೆ.

ಜ್ಯೇಷ್ಠತಾ ಪಟ್ಟಿಯಲ್ಲಿ ಹೆಸರಿಲ್ಲ: 'ಕೆ.ಎಸ್.ಎ.ಟಿ ಆದೇಶದ ಮೇರೆಗೆ, 2024ರಲ್ಲಿ ಪಶು ವೈದ್ಯಕೀಯ ಪರೀಕ್ಷಕರ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಇಲಾಖೆ ಪ್ರಕಟಿಸಿತ್ತು. ಆದರೆ, ಮುಂಬಡ್ತಿಯನ್ನು ಕ್ರಮಬದ್ಧಗೊಳಿಸಲಿಲ್ಲ. ನಂತರ ಪ್ರಕಟಗೊಂಡ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಜ್ಯೇಷ್ಠತಾ ಪಟ್ಟಿಯಲ್ಲೂ ನೌಕರರನ್ನು ಸೇರಿಸಲಿಲ್ಲ. ಇದನ್ನು ಸರಿಪಡಿಸಲು ಹಲವು ಬಾರಿ ಕೋರಿದರೂ ಕ್ರಮ ಕೈಗೊಂಡಿಲ್ಲ' ಎಂದು ರಾಜ್ಯ ಪಶುವೈದ್ಯಕೀಯ ಪರೀಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಜಿ. ಮಹಾಗಾಂವ ದೂರಿದ್ದಾರೆ.

'533ರಲ್ಲಿ 433 ನೌಕರರು ಬಡ್ತಿ ಪಡೆದ ಹಿರಿಯ ಪಶುವೈದ್ಯಕೀಯ ಪರೀಕ್ಷಕರ ಹುದ್ದೆಯ ಸಂಬಳ ಮತ್ತು ಭತ್ಯೆ ಪಡೆಯುತ್ತಿದ್ದಾರೆ. ಆದರೆ, ಬಡ್ತಿ ಕ್ರಮಬದ್ಧಗೊಳ್ಳದೆ, 'ಜಾನುವಾರು ಅಧಿಕಾರಿ' ಹುದ್ದೆಗೆ ಬಡ್ತಿ ಪಡೆಯಲಾಗದೆ, ನಿವೃತ್ತಿಯಾಗಬೇಕಾಗಿದೆ. ಮುಂಬಡ್ತಿ ಚರ್ಚೆ ಹಂತದಲ್ಲೇ ಉಳಿದಿದ್ದು, ಆಯುಕ್ತರು ಸ್ಪಂದಿಸುತ್ತಿಲ್ಲ' ಎಂದು ಸಂಘದ ಪದಾಧಿಕಾರಿಗಳು ಸಮಸ್ಯೆ ತೋಡಿಕೊಂಡರು.

ಮುಖ್ಯಾಂಶಗಳು

- 533 ನೌಕರರ ಭವಿಷ್ಯ ಡೋಲಾಯಮಾನ
- ಮನವಿಗೆ ಸ್ಪಂದಿಸದ ಇಲಾಖೆ ಆಯುಕ್ತರು: ಆರೋಪ
- ಮುಂಬಡ್ತಿ ಕ್ರಮಬದ್ಧತೆಗೆ ಮಾರ್ಚ್ 15ರ ಗಡುವು

ಅಸಹಕಾರ ಚಳವಳಿ ನಡೆಸುವ ಬಗ್ಗೆ ಲಿಖಿತವಾಗಿ ಯಾರೂ ಮಾಹಿತಿ ನೀಡಿಲ್ಲ. ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಶ್ರೀರೂಪಾ
ಆಯುಕ್ತರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ

'ಗಣತಿ ಮಾಡೆವು, ಲಸಿಕೆ ಕೊಡೆವು'

'ಮುಂಬಡ್ತಿಯನ್ನು ಕ್ರಮಬದ್ಧಗೊಳಿಸಿ ಮಾರ್ಚ್ 15ರೊಳಗೆ ಆದೇಶ ಹೊರಡಿಸದಿದ್ದರೆ, ಜಾನುವಾರು ಗಣತಿ, ಲಸಿಕಾ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸುತ್ತೇವೆ. ಇಲಾಖೆಯ ಕಾರ್ಯಕ್ರಮಗಳಲ್ಲಿ ಕಪ್ಪು ಪಟ್ಟಿ ಧರಿಸಿ, ಅಸಹಕಾರ ಚಳವಳಿ ಆರಂಭಿಸುತ್ತೇವೆ' ಎಂದು ಕರ್ನಾಟಕ ರಾಜ್ಯ ಪಶುವೈದ್ಯಕೀಯ ಪರೀಕ್ಷಕರ ಸಂಘದ ಅಧ್ಯಕ್ಷ ಎಚ್.ಪಾಂಡುರಂಗ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಬಿಜೆಪಿ ಹುನ್ನಾರ ಒಟ್ಟಾಗಿ ಎದುರಿಸುತ್ತೇವೆ: ರೇವಂತ್ ರೆಡ್ಡಿ ● ಚೆನ್ನೈ ಸಭೆಗೆ ಬರಲು ತಾತ್ವಿಕ ಒಪ್ಪಿಗೆ

‘ದಕ್ಷಿಣದ ವಿರುದ್ಧ ಕೇಂದ್ರ ಪಿತೂರಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಕ್ಷೇತ್ರ ಪುನರ್‌ವಿಂಗಡಣೆ ಹೆಸರಲ್ಲಿ ದಕ್ಷಿಣ ರಾಜ್ಯಗಳ ವಿರುದ್ಧ ಪಿತೂರಿ ನಡೆಸುತ್ತಿದೆ’ ಎಂದು ತೆಲಂಗಾಣ ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಬಿಜೆಪಿ ವಿರುದ್ಧ ಹರಿಹಾಯ್ದರು.

ರೇವಂತ್ ರೆಡ್ಡಿ

ದೆಹಲಿಯಲ್ಲಿ ಡಿಎಂಕೆ ನಿಯೋಗ ತಮ್ಮನ್ನು ಭೇಟಿಯಾದ ಬಳಿಕ ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕೇಂದ್ರದ ಈ ಪಿತೂರಿಯನ್ನು ಎದುರಿಸಲು ಕ್ರಿಯಾ ಯೋಜನೆ ಸಿದ್ಧಪಡಿಸಲಾಗುತ್ತಿದೆ’ ಎಂದು ತಿಳಿಸಿದರು.

‘ಇದು ಕ್ಷೇತ್ರಗಳ ಪುನರ್‌ವಿಂಗಡಣೆ ಅಲ್ಲ. ಬದಲಿಗೆ ದಕ್ಷಿಣ ರಾಜ್ಯಗಳನ್ನು ಮಿತಿಗೊಳಿಸುವ ಮತ್ತು ದಕ್ಷಿಣದ ಪ್ರಾತಿನಿಧ್ಯವನ್ನು ಕಡಿಮೆ ಮಾಡುವ ಹುನ್ನಾರ’ ಎಂದು ಕಿಡಿಕಾರಿದರು.

‘ದೇಶಕ್ಕೆ ಹೆಚ್ಚು ತೆರಿಗೆ ಪಾವತಿಸುತ್ತಿರುವುದು ದಕ್ಷಿಣ ರಾಜ್ಯಗಳು. ವಾಣಿಜ್ಯ, ವ್ಯಾಪಾರ ಚಟುವಟಿಕೆಗಳು ನಮ್ಮಲ್ಲಿಯೇ ಹೆಚ್ಚಿವೆ. ದೇಶಕ್ಕೆ ನಾವು ಎಲ್ಲವನ್ನೂ ನೀಡುತ್ತಿದ್ದೇವೆ. ಹೀಗಿರುವಾಗ ನಮ್ಮ ವಿರುದ್ಧ ಪಿತೂರಿ ನಡೆಸುವುದನ್ನು ಸಹಿಸುವುದಿಲ್ಲ’ ಎಂದು ಹೇಳಿದರು.

‘ಬಿಜೆಪಿಯು ಕೇರಳ, ತಮಿಳು ನಾಡು, ತೆಲಂಗಾಣ, ಆಂಧ್ರ ಪ್ರದೇಶದಲ್ಲಿ ಸೋತಿದೆ. ಕರ್ನಾಟಕದಲ್ಲೂ ಸೋತಿದೆ. ದಕ್ಷಿಣದಲ್ಲಿ ಗಣನೀಯ ಪ್ರಾತಿನಿಧ್ಯ ಹೊಂದಿಲ್ಲದ ಕಾರಣಕ್ಕೆ ಬಿಜೆಪಿ ಈ ರೀತಿಯ ಪ್ರಯತ್ನಕ್ಕೆಲ್ಲ ಕೈಹಾಕಿದೆ. ಇದರ ವಿರುದ್ಧ ನಾವು ಒಟ್ಟಾಗಿ ಹೋರಾಡುತ್ತೇವೆ’ ಎಂದು ಅವರು ಪ್ರತಿಪಾದಿಸಿದರು.

ಆಹ್ವಾನ ಒಪ್ಪಿದ ರೆಡ್ಡಿ: ಕ್ಷೇತ್ರಗಳ ಪುನರ್ ವಿಂಗಡಣೆಯಿಂದ ಬಾಧಿತವಾಗಬಹುದಾದ ರಾಜ್ಯಗಳ ಮುಖ್ಯಮಂತ್ರಿಗಳು ಸೇರಿದಂತೆ ಪ್ರಮುಖ ನಾಯಕರ ಸಭೆಯಲ್ಲಿ ಭಾಗವಹಿಸಲು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ನೀಡಿರುವ ಆಹ್ವಾನಕ್ಕೆ ರೇವಂತ್ ರೆಡ್ಡಿ ಅವರು ತಾತ್ವಿಕವಾಗಿ ಒಪ್ಪಿಗೆ ಸೂಚಿಸಿದರು.

‘ಇದೇ 22ರಂದು ಚೆನ್ನೈನಲ್ಲಿ ನಡೆಯಲಿರುವ ಸಭೆಯಲ್ಲಿ ಭಾಗವಹಿಸಲು ತಾತ್ವಿಕವಾಗಿ ನಾನು ಒಪ್ಪಿದ್ದೇನೆ. ಆದರೆ, ಈ ಕುರಿತು ಪಕ್ಷದ ಕೇಂದ್ರ ನಾಯಕರ ಜತೆ ಚರ್ಚಿಸಿ, ಅನುಮತಿ ಪಡೆಯಬೇಕಿದೆ’ ಎಂದು ಹೇಳಿದರು.

ಸ್ಟಾಲಿನ್ ಅವರ ಆಹ್ವಾನಪತ್ರವನ್ನು ಡಿಎಂಕೆ ಸಂಸದೆ ಕನಿಮೋಳಿ ನೇತೃತ್ವದ ನಿಯೋಗ ರೆಡ್ಡಿ ಅವರಿಗೆ ಈ ವೇಳೆ ಹಸ್ತಾಂತರಿಸಿತು.

ಸ್ಟಾಲಿನ್ ನಾಯಕತ್ವಕ್ಕೆ ಒಪ್ಪಿಗೆ: ಕ್ಷೇತ್ರ ಪುನರ್‌ವಿಂಗಡಣೆ ವಿಷಯ ಕುರಿತು ಸ್ಟಾಲಿನ್ ಅವರ ನಾಯಕತ್ವದ ಹೋರಾಟಕ್ಕೆ ತಮ್ಮ ಪೂರ್ಣ ಬೆಂಬಲ ಇದೆ ಎಂದು ರೆಡ್ಡಿ ಹೇಳಿದರು.

ಈ ಸಂಬಂಧ ಜಂಟಿ ಕ್ರಿಯಾ ಸಮಿತಿ ರಚಿಸಲು ಸ್ಟಾಲಿನ್ ಅವರು ಕಳೆದ ತಿಂಗಳು ಪಶ್ಚಿಮ ಬಂಗಾಳ, ಪಂಜಾಬ್ ಸೇರಿದಂತೆ ಹಲವು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದರು.

ತೆಲಂಗಾಣ: ಸರ್ವ ಪಕ್ಷ ಸಭೆ

ಹೈದರಾಬಾದ್: ಉದ್ದೇಶಿತ ಕ್ಷೇತ್ರ ಪುನರ್‌ವಿಂಡಣೆಯಿಂದ ತೆಲಂಗಾಣ ರಾಜ್ಯದ ಲೋಕಸಭಾ ಕ್ಷೇತ್ರಗಳ ಮೇಲೆ ಬೀರಬಹುದಾದ ಸಂಭವನೀಯ ಪರಿಣಾಮಗಳ ಕುರಿತು ಚರ್ಚಿಸಲು ತೆಲಂಗಾಣ ರಾಜ್ಯ ಸರ್ಕಾರ ಸರ್ವ ಪಕ್ಷಗಳ ಸಭೆ ಕರೆಯಲು ನಿರ್ಧರಿಸಿದೆ.

ಎಲ್ಲ ರಾಜಕೀಯ ಪಕ್ಷಗಳಿಗೂ ಸಭೆಗೆ ಬರುವಂತೆ ಆಹ್ವಾನ ನೀಡಲಾಗುವುದು ಎಂದು ಉಪ ಮುಖ್ಯಮಂತ್ರಿ ಭಟ್ಟಿ ವಿಕ್ರಮಾರ್ಕ ತಿಳಿಸಿದ್ದಾರೆ.

ತಮಿಳುನಾಡಿನಲ್ಲಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ನೇತೃತ್ವದಲ್ಲಿ ಡಿಎಂಕೆ ಸರ್ಕಾರವು ಇತ್ತೀಚೆಗೆ ಸರ್ವ ಪಕ್ಷ ಸಭೆ ಕರೆದು ಈ ಕುರಿತು ಚರ್ಚಿಸಿತ್ತು.

ಹಿಂದಿ: ಪಿಚೈ ಅವರನ್ನು ಎಳೆತಂದ ರಾಜಕಾರಣಿಗಳು

ಚೆನ್ನೈ: ಗೂಗಲ್ ಸಿಇಒ ಸುಂದರ್ ಪಿಚೈ ಅವರು ಶಾಲೆಯಲ್ಲಿ ಹಿಂದಿ ಕಲಿತಿದ್ದಾರೊ, ಇಲ್ಲವೊ ಎಂಬ ಕುರಿತ ಚರ್ಚೆ ತಮಿಳುನಾಡಿನಲ್ಲಿ ಆರಂಭವಾಗಿದ್ದು, ಈ ಮೂಲಕ ರಾಜಕಾರಣಿಗಳು ಅವರನ್ನು ತ್ರಿಭಾಷಾ ಸೂತ್ರದ ವಿವಾದಕ್ಕೆ ಎಳೆದು ತಂದಿದ್ದಾರೆ.

ಸುಂದರ್ ಪಿಚೈ

ತಮಿಳುನಾಡಿನವರಾದ ಸುಂದರ್ ಪಿಚೈ ಅವರು ಅವರು, ಜವಾಹರ ವಿದ್ಯಾಲಯ ಮತ್ತು ವನ ವಾನಿ ಮೆಟ್ರಿಕ್ಯುಲೇಷನ್ ಹೈಯರ್ ಸೆಕೆಂಡರಿ ಸ್ಕೂಲ್‌ನಲ್ಲಿ ಶಾಲಾ ಶಿಕ್ಷಣ ಪೂರೈಸಿದ್ದು, ಖರಗ್‌ಪುರ ಐಐಟಿಯಲ್ಲಿ ಎಂಜಿನಿಯರಿಂಗ್ ವ್ಯಾಸಂಗ ಮಾಡಿದ್ದಾರೆ.

ಪಿಚೈ ಅವರ ಮಾತೃಭಾಷೆ ತಮಿಳು ಆಗಿದ್ದು, ಭಾಷೆಯ ಮೇಲೆ ಪ್ರೌಢಿಮೆಯನ್ನೂ ಹೊಂದಿದ್ದಾರೆ. ಪಿಚೈ ಅವರ ಕುರಿತು ತಮಿಳುನಾಡಿನ ಮಾಹಿತಿ ತಂತ್ರಜ್ಞಾನ ಸಚಿವ ಪಳನಿವೇಲ್ ತ್ಯಾಗರಾಜನ್ ಅವರು, ‘ಹಿಂದಿ ತಿಳಿಯದಿರುವುದು ಗೂಗಲ್ ಸಿಇಒ ಅವರ ಯಶಸ್ವಿ ವೃತ್ತಿಜೀವನಕ್ಕೆ ಏನಾದರೂ ಅಡ್ಡಿಯಾಗಿದೆಯೇ’ ಎಂದು ಬುಧವಾರ ಪ್ರಶ್ನಿಸಿದ್ದರು.

‘ತ್ರಿಭಾಷಾ ಸೂತ್ರ ವಿಫಲವಾಗಿರುವಾಗ, ದ್ವಿಭಾಷಾ ಸೂತ್ರವನ್ನು ಬದಲಿಸಿ ಅದನ್ನು ತರುವುದರಲ್ಲಿ ಅರ್ಥವಿಲ್ಲ’ ಎಂದು ಪ್ರತಿಪಾದಿಸಿದ್ದರು.

ವಿಡಿಯೊ ಪೋಸ್ಟ್ ಮಾಡಿದ ಬಿಜೆಪಿ: ‘ಹಿಂದಿಯನ್ನು ಶಾಲಾ ದಿನಗಳಲ್ಲಿ ನಾನು ಕಲಿತಿದ್ದೇನೆ’ ಎಂದು ಹೇಳುವ ಪಿಚೈ ಅವರ ವಿಡಿಯೊವೊಂದನ್ನು ಬಿಜೆಪಿ ನಾಯಕರು ಹಂಚಿಕೊಂಡಿದ್ದಾರೆ. ‘ರಾಜ್ಯದ ಖಾಸಗಿ ಶಾಲೆಗಳು 1980ರಲ್ಲೂ ತ್ರಿಭಾಷಾ ಸೂತ್ರ ಅನುಸರಿಸುತ್ತಿದ್ದವು ಎಂಬುದು ಇದರಿಂದ ಗೊತ್ತಾಗುತ್ತದೆ’ ಎಂದು ಬಿಜೆಪಿ ಮುಖಂಡರು ಹೇಳಿದ್ದಾರೆ.

‘ಚೆನ್ನೈನಿಂದ ಬಂದಿರುವ ನಾನು ಶಾಲೆಯಲ್ಲಿ ಹಿಂದಿ ಕಲಿತಿದ್ದೇನೆ. ಆದರೆ ಅದನ್ನು ಹೆಚ್ಚು ಮಾತನಾಡಲಿಲ್ಲ’ ಎಂದು ಪಿಚೈ ಹೇಳಿರುವುದು ವಿಡಿಯೊದಲ್ಲಿದೆ. ಇದನ್ನು ಆಧರಿಸಿ ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಸೇರಿದಂತೆ ಹಲವು ಬಿಜೆಪಿ ನಾಯಕರು, ‘ಗೂಗಲ್ ಸಿಇಒ ಶಾಲೆಯಲ್ಲಿ ಹಿಂದಿಯನ್ನು ಮೂರನೇ ಭಾಷೆಯಾಗಿ ಕಲಿತಿದ್ದಾರೆ’ ಎಂದು ಹೇಳಿದ್ದಾರೆ.

ಈ ವಿಡಿಯೊವನ್ನು ಪರಿಶೀಲಿಸಿರುವ ತಮಿಳು ಫ್ಯಾಕ್ಟ್‌ಚೆಕಿಂಗ್ ವೆಬ್‌ಸೈಟ್ ‘ಯು ಟರ್ನ್’, ಅದು ತಿರುಚಿದ ವಿಡಿಯೊ ಎಂದು ಹೇಳಿದೆ.

‘ಬಹುಭಾಷೆ ಕಲಿಕೆಯಿಂದ ಲಾಭ’

ನವದೆಹಲಿ: ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ (ಎನ್‌ಇಪಿ) ಪ್ರಸ್ತಾವ ಆಗಿರುವ ತ್ರಿಭಾಷಾ ಸೂತ್ರವನ್ನು ರಾಜ್ಯಸಭಾ ಸದಸ್ಯೆ ಸುಧಾ ಮೂರ್ತಿ ಬೆಂಬಲಿಸಿದ್ದಾರೆ.

ಸುಧಾ ಮೂರ್ತಿ

ತಮ್ಮ ವೈಯಕ್ತಿಕ ಉದಾಹರಣೆಯನ್ನು ನೀಡಿದ ಸುಧಾ ಅವರು, ಬೇರೆ ಬೇರೆ ಭಾಷೆಗಳನ್ನು ಕಲಿಯುವುದರಿಂದ ಸಿಗುವ ಪ್ರಯೋಜನಗಳನ್ನು ಹೇಳಿದರು. ‘ನಾವು ಹಲವು ಭಾಷೆಗಳನ್ನು ಕಲಿಯಬಹುದು ಎಂಬುದು ನನ್ನ ನಂಬಿಕೆ. ನನಗೆ 7–8 ಭಾಷೆಗಳು ಗೊತ್ತಿವೆ. ನನಗೆ ಕಲಿಕೆ ಇಷ್ಟ. ಮಕ್ಕಳು ಬಹಳಷ್ಟು ಕಲಿಯಬಹುದು’ ಎಂದು ಅವರು ಹೇಳಿದ್ದಾರೆ.

ಮಹಾರಾಷ್ಟ್ರ ಅಧಿವೇಶನದಲ್ಲಿ ಪ್ರಶ್ನೆ ಕೇಳದಿರಲು ಹಣ: ಆರೋಪ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾ ವಿಕಾಸ ಆಘಾಡಿ ಮೈತ್ರಿಕೂಟಕ್ಕೆ ಸೇರಿದ ಶಾಸಕರೊಬ್ಬರು ಗಢಚಿರೋಲಿ ಜಿಲ್ಲೆಯ ಅಕ್ಕಿ ಗಿರಣಿಗಳಿಗೆ ಸಂಬಂಧಿಸಿದ ವಿಚಾರವಾಗಿ ಪ್ರಶ್ನೆಗಳನ್ನು ಕೇಳದೆ ಇರಲು ಏಜೆಂಟರ ಮೂಲಕ ಹಣ ಕೇಳಿದ್ದಾರೆ ಎಂದು ಬಿಜೆಪಿ ಶಾಸಕ ಡಾ. ಪರಿಣಯ್ ಫುಕೆ ಅವರು ಆರೋಪಿಸಿದ್ದಾರೆ.

ಹಣ ಕೇಳಿದ್ದಾರೆ ಎಂಬ ಆರೋಪವು ಮಹಾರಾಷ್ಟ್ರದಲ್ಲಿ ಮುಂದಿನ ದಿನಗಳಲ್ಲಿ ದೊಡ್ಡ ಮಟ್ಟದ ವಿವಾದದ ಸ್ವರೂಪ ಪಡೆದುಕೊಳ್ಳುವ ಸಾಧ್ಯತೆ ಇದೆ.

ಫುಕೆ ಅವರು ಮಹಾರಾಷ್ಟ್ರದ ವಿಧಾನ ಪರಿಷತ್ ಸದಸ್ಯ. ಇವರು ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರ ಆಪ್ತರು. ಶಾಸಕರೊಬ್ಬರು ಹಣ ಕೇಳಿದ್ದಾರೆ ಎಂಬ ಆರೋಪವನ್ನು ಫುಕೆ ಅವರು ವಿಧಾನ ಪರಿಷತ್ತಿನಲ್ಲಿ ಬಜೆಟ್ ಮೇಲಿನ ಚರ್ಚೆಯ ಸಂದರ್ಭದಲ್ಲಿ ಮಾಡಿದ್ದಾರೆ. ಆದರೆ ಅವರು ಶಾಸಕರು ಹೆಸರು ಉಲ್ಲೇಖಿಸಿಲ್ಲ.

ಆರೋಪಕ್ಕೆ ಸಂಬಂಧಿಸಿದಂತೆ ಫುಕೆ ಅವರು ಮುಖ್ಯಮಂತ್ರಿ ಫಡಣವೀಸ್ ಅವರಿಗೆ ಆಡಿಯೊ ಮತ್ತು ವಿಡಿಯೊ ಸಾಕ್ಷ್ಯಗಳನ್ನು ಕೂಡ ಸಲ್ಲಿಸಿದ್ದಾರೆ. ಫಡಣವೀಸ್ ಅವರು ಮಹಾರಾಷ್ಟ್ರದ ಗೃಹ ಖಾತೆಯನ್ನೂ ಹೊಂದಿದ್ದಾರೆ.

ಪರಿಷತ್ತಿನಲ್ಲಿ ಈ ಆರೋಪ ಮಾಡಿದಾಗ ಸಭಾಪತಿ ಪ್ರೊ. ರಾಮ ಶಿಂದೆ ಅವರು ಸದನದಲ್ಲಿ ಇದ್ದರು. ‘ಶಾಸಕ ಯಾರೇ ಆಗಿರಲಿ, ಆತ ಯಾವುದೇ ಪಕ್ಷಕ್ಕೆ ಸೇರಿರಲಿ, ನಾವು ಕಠಿಣ ಕ್ರಮ ಜರುಗಿಸುತ್ತೇವೆ’ ಎಂದು ಗೃಹ ಖಾತೆ ರಾಜ್ಯ ಸಚಿವ ಯೋಗೇಶ್ ಕದಮ್ ಹೇಳಿದ್ದಾರೆ.

ಏಜೆಂಟರ ರೀತಿ ವರ್ತಿಸುವ ವ್ಯಕ್ತಿಗಳು ಅಕ್ಕಿ ಗಿರಣಿಗಳ ಕಚೇರಿಗೆ ಬಂದಿದ್ದಾರೆ. ಪ್ರಶ್ನೆಗಳನ್ನು ಕೇಳಿದರೆ ಏನಾಗುತ್ತದೆ, ಪ್ರಶ್ನೆಗಳನ್ನು ಕೇಳದಂತೆ ಮಾಡಲು ಆಗಬೇಕಿರುವ ಕೆಲಸ ಏನು ಎಂಬುದನ್ನು ಅವರು ವಿವರಿಸಿದ್ದಾರೆ. ಅವರ ಮಾತುಗಳು ಇರುವ ಕ್ಲಿಪ್‌ಗಳು ಬೆದರಿಸುವಂತೆ ಇವೆ ಎಂದು ಫುಕೆ ಹೇಳಿದ್ದಾರೆ.

ಉಪಗ್ರಹ ‘ಅನ್‌ಡಾಕಿಂಗ್’ ಯಶಸ್ವಿ

ಒಂದನೇ ಪುಟದಿಂದ...

ಉಪಗ್ರಹಗಳನ್ನು ಬೇರ್ಪಡಿಸುವ ಇಸ್ರೊದ ಈ ಸಾಧನೆ ಕುರಿತು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಘೋಷಿಸಿದ್ದಾರೆ.

‘ಸ್ಪೇಡೆಕ್ಸ್ ಯೋಜನೆ ಭಾಗವಾಗಿ ನಂಬಲಸಾಧ್ಯವಾದಂತಹ, ಉಪಗ್ರಹಗಳನ್ನು ಬೇರ್ಪಡಿಸುವ ಕಾರ್ಯವನ್ನು ಸಾಧಿಸಲಾಗಿದೆ. ಭಾರತೀಯ ಅಂತರಿಕ್ಷ ನಿಲ್ದಾಣ, ಚಂದ್ರಯಾನ–4, ಗಗನಯಾನದಂತಹ ಭವಿಷ್ಯದ ಮಹತ್ವಾಕಾಂಕ್ಷಿ ಬಾಹ್ಯಾಕಾಶ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಈ ಸಾಧನೆ ದಾರಿ ಮಾಡಿಕೊಟ್ಟಿದೆ’ ಎಂದು ಪೋಸ್ಟ್ ಮಾಡಿರುವ ಸಿಂಗ್, ಇಸ್ರೊ ತಂಡಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

‘ಸ್ಪೇಡೆಕ್ಸ್: ಇಸ್ರೊ ಸಾಮರ್ಥ್ಯ ಸಾಬೀತು’

‘ವೃತ್ತಾಕಾರದ ಕಕ್ಷೆಯೊಂದರಲ್ಲಿ ಎರಡು ಉಪಗ್ರಹಗಳನ್ನು ಜೋಡಿಸುವ ಹಾಗೂ ಬೇರ್ಪಡಿಸುವ ಈ ಪ್ರಾತ್ಯಕ್ಷಿಕೆಯ ಮೂಲಕ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸಿದಂತಾಗಿದೆ’ ಎಂದು ಇಸ್ರೊ ಹೇಳಿದೆ.

‘460 ಕಿ.ಮೀ. ದೂರದ ಕಕ್ಷೆಯಲ್ಲಿ ಪರಿಭ್ರಮಿಸುತ್ತಿರುವ ಎರಡು ಉಪಗ್ರಹಗಳನ್ನು ಯಶಸ್ವಿಯಾಗಿ ಬೇರ್ಪಡಿಸಲಾಗಿದೆ. ಈಗ, ಅವು ಉತ್ತಮ ಸ್ಥಿತಿಯಲ್ಲಿದ್ದು, ಸ್ವತಂತ್ರವಾಗಿ ಪರಿಭ್ರಮಿಸುತ್ತಿವೆ’ ಎಂದು ಇಸ್ರೊ ತನ್ನ ವೆಬ್‌ಸೈಟ್‌ನಲ್ಲಿ ತಿಳಿಸಿದೆ.

‘ಮಾರ್ಚ್ 10ರಿಂದ 25ರ ವರೆಗಿನ ಅವಧಿಯು ಉಪಗ್ರಹಗಳನ್ನು ಬೇರ್ಪಡಿಸಲು ಸೂಕ್ತ ಎಂಬುದು ದತ್ತಾಂಶಗಳ ವಿಶ್ಲೇಷಣೆಯಿಂದ ತಿಳಿದು ಬಂದಿತ್ತು. ಗುರುವಾರ ಈ ಕಾರ್ಯವನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ. ಬೆಂಗಳೂರು, ಲಖನೌ ಹಾಗೂ ಮಾರಿಷಸ್‌ನಲ್ಲಿರುವ ಭೂಕೇಂದ್ರಗಳ ಮೂಲಕ ಈ ಸಂಪೂರ್ಣ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸಲಾಯಿತು’ ಎಂದೂ ತಿಳಿಸಿದೆ.

ಎರಡು ಪ್ರತ್ಯೇಕ ಪ್ರಕರಣ: ಇಬ್ಬರ ಬಂಧನ

ಬ್ರಿಟನ್ ಮಹಿಳೆ ಮೇಲೆ ಅತ್ಯಾಚಾರ

ನವದೆಹಲಿ (ಪಿಟಿಐ): ದೆಹಲಿಯ ಮಹಿಪಾಲಪುರದ ಹೋಟೆಲ್‌ನಲ್ಲಿ ಬ್ರಿಟನ್ ಮಹಿಳೆಯ ಮೇಲಿನ ಅತ್ಯಾಚಾರ ಮತ್ತು ಮಾನಭಂಗ ಕುರಿತ ಪ್ರತ್ಯೇಕ ಪ್ರಕರಣಗಳಿಗೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ.

ಈ ಘಟನೆಗಳು ಮಂಗಳವಾರ ರಾತ್ರಿ ನಡೆದಿದ್ದು, ಬ್ರಿಟಿಷ್ ಹೈಕಮಿಷನ್‌ಗೆ ಮಾಹಿತಿ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಿಂಗಳ ಹಿಂದೆ ಭಾರತಕ್ಕೆ ಬಂದಿದ್ದ ಬ್ರಿಟನ್ ಮಹಿಳೆ ಮಹಾರಾಷ್ಟ್ರದಲ್ಲಿ ಕೆಲ ದಿನ ತಂಗಿದ್ದರು. ನಂತರ ಗೋವಾಗೆ ತೆರಳಿದ್ದರು. ಇನ್‌ಸ್ಟಾಗ್ರಾಂನಲ್ಲಿ ಇತ್ತೀಚೆಗೆ ಪರಿಚಿತನಾದ ಗೆಳೆಯ ಕೈಲಾಶ್‌ನನ್ನು (24) ಭೇಟಿಯಾಗಲು ಮಹಿಳೆ ಮಂಗಳವಾರ ದೆಹಲಿಗೆ ಬಂದಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

‘ಮೊದಲಿಗೆ ಹೋಟೆಲ್‌ನ ಲಿಫ್ಟ್‌ನಲ್ಲಿ ಸ್ವಚ್ಛತಾ ಸಿಬ್ಬಂದಿ ತನ್ನ ಮೇಲೆ ಅಸಭ್ಯವಾಗಿ ವರ್ತಿಸಿದ್ದ. ಬಳಿಕ ಗೆಳೆಯ ಕೈಲಾಶ್, ಹೋಟೆಲ್ ಕೊಠಡಿಯಲ್ಲಿ ಅತ್ಯಾಚಾರ ಎಸಗಿದ್ದಾನೆ ಎಂದು ಮಹಿಳೆ ಆರೋಪಿಸಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಸಂಬಂಧ ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಡಿಸಿಪಿ ಸುರೇಂದ್ರ ಚೌಧರಿ ಹೇಳಿದ್ದಾರೆ.

ಮಹಿಳೆಯು ಗೋವಾದಿಂದ ದೆಹಲಿಗೆ ಬಂದು ಮಹಿಪಾಲಪುರದ ಹೋಟೆಲ್‌ನಲ್ಲಿ ಕೊಠಡಿ ಕಾಯ್ದಿರಿಸಿದ್ದರು. ‘ನನ್ನನ್ನು ಭೇಟಿಯಾಗಲು ಬಂದಿದ್ದ ಕೈಲಾಶ್ ಅತ್ಯಾಚಾರ ಎಸಗಿದ್ದಾನೆ’ ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

ಪೊಲೀಸರು ತನಿಖೆಯ ಭಾಗವಾಗಿ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಬೇರೆ ಮಹಿಳೆಯರನ್ನು ಆರೋಪಿ ಸಂಪರ್ಕಿಸಿದ್ದಾನೆಯೇ ಎಂಬುದನ್ನೂ ಪರಿಶೀಲಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

‘ಹೋಳಿಕಾ’ ದಹನ ಹೋಳಿ ಹಬ್ಬದ ಅಂಗವಾಗಿ ಅಹಮದಾಬಾದ್‌ನ ಅರಮನೆಯಲ್ಲಿ ಭಕ್ತರು ‘ಹೋಳಿಕಾ ದಹನ’ ವಿಧಿಯನ್ನು ಗುರುವಾರ ನೆರವೇರಿಸಿದರು –ಪಿಟಿಐ ಚಿತ್ರ

ಖನಿಜ ನಿಕ್ಷೇಪಗಳ ಶೋಧನೆ ಲೈಸೆನ್ಸ್ ಹರಾಜು ಪ್ರಕ್ರಿಯೆಗೆ ಚಾಲನೆ

ಪಣಜಿ (ಪಿಟಿಐ): ದೇಶದ ವಿವಿಧೆಡೆ ಪ್ರಮುಖ ಖನಿಜ ನಿಕ್ಷೇಪಗಳ ಶೋಧನೆಗೆ ಸಂಬಂಧಿತ ಲೈಸೆನ್ಸ್‌ಗಳನ್ನು ಇದೇ ಮೊದಲ ಬಾರಿಗೆ ಹರಾಜು ಹಾಕುವ ಪ್ರಕ್ರಿಯೆಗೆ ಕೇಂದ್ರ ಗಣಿ ಖಾತೆ ರಾಜ್ಯ ಸಚಿವ ಜಿ.ಕಿಶನ್ ರೆಡ್ಡಿ ಗುರುವಾರ ಇಲ್ಲಿ ಚಾಲನೆ ನೀಡಿದರು.

ಇಲ್ಲಿಗೆ ಸಮೀಪದ ಡೋನಾ ಪೌಲಾದಲ್ಲಿ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರ ಉಪಸ್ಥಿತಿಯಲ್ಲಿ ಚಾಲನೆ ನೀಡಿದ ಸಚಿವರು, ‘ಪ್ರಮುಖ ಖನಿಜ ಸಂಪನ್ಮೂಲಗಳ ಶೋಧನೆ ಹಿನ್ನೆಲೆಯಲ್ಲಿ ಇದು ಪ್ರಮುಖ ಸುಧಾರಣಾ ಹೆಜ್ಜೆಯಾಗಿದೆ’ ಎಂದರು.

ಸತು, ವಜ್ರ, ತಾಮ್ರ, ಪ್ಲಾಟಿನಂ ಸಮೂಹದ ಖನಿಜಗಳು ಸೇರಿ ವಿವಿಧ ಖನಿಜಗಳ ಪರಿಶೋಧನೆಗೆ ಸಂಬಂಧಿಸಿ ಲೈಸೆನ್ಸ್ ಇದರಲ್ಲಿ ಸೇರಿವೆ.

ಒಟ್ಟು 13 ಬ್ಲಾಕ್‌ಗಳಲ್ಲಿ ಶೋಧನೆಗೆ ಸಂಬಂಧಿಸಿದ ಲೈಸೆನ್ಸ್‌ಗಳ ಹರಾಜು ಹಾಕಲಾಗುತ್ತಿದೆ. ಖಾಸಗಿ ಕಂಪನಿಗಳು ಪ್ರತಿ ಲೈಸೆನ್ಸ್‌ನಡಿ 1 ಸಾವಿರ ಚದರ ಮೀಟರ್ ವ್ಯಾಪ್ತಿಯಲ್ಲಿ ಖನಿಜ ನಿಕ್ಷೇಪಗಳ ಶೋಧನೆ ನಡೆಸಬಹುದಾಗಿದೆ. ಈ ಹೊಸ ಪರಿಕ್ರಮವು ಪಾರದರ್ಶಕತೆ, ದಕ್ಷತೆ, ನವೀನತೆಗೆ ಉತ್ತೇಜನ ನೀಡಲಿದೆ ಎಂದು ಇದೇ ಸಂದರ್ಭದಲ್ಲಿ ಹೇಳಿದರು.

ನರೇಂದ್ರ ಮೋದಿ ಅವರ ಆಡಳಿತಾವಧಿಯಲ್ಲಿ ಕಳೆದ 10 ವರ್ಷಗಳಲ್ಲಿ ನಿಕ್ಷೇಪ ಶೋಧನೆ ಚಟುವಟಿಕೆ ಗಣನೀಯವಾಗಿ ಏರಿದೆ. ಖಾಸಗಿ ವಲಯವನ್ನೂ ಈ ಕಾರ್ಯದಲ್ಲಿ ಸೇರ್ಪಡೆ ಗೊಳಿಸುವಲ್ಲಿ ಲೈಸೆನ್ಸ್ ಹರಾಜು ಕಾರ್ಯ ಮಹತ್ವದ್ದಾಗಿದೆ ಎಂದು ಹೇಳಿದರು.

ನೇರಳಾತೀತ ವಿಕಿರಣ ತೀವ್ರತೆ ಅಧಿಕ: ಕೆಎಸ್‌ಡಿಎಂಎ

ಪಾಲಕ್ಕಾಡ್ ಜಿಲ್ಲೆಯಲ್ಲಿ ‘ರೆಡ್ ಅಲರ್ಟ್’

ತಿರುವನಂತಪುರ(ಪಿಟಿಐ): ಕೇರಳದ ಪಾಲಕ್ಕಾಡ್ ಜಿಲ್ಲೆಯಲ್ಲಿ ನೇರಳಾತೀತ ವಿಕಿರಣಗಳ ತೀವ್ರತೆ ಅಧಿಕವಾಗಿರುವುದು ಪತ್ತೆಯಾಗಿದೆ. ಹೀಗಾಗಿ, ಕೇರಳ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರವು (ಕೆಎಸ್‌ಡಿಎಂಎ) ಜಿಲ್ಲೆಯಲ್ಲಿ ಗುರುವಾರ ‘ರೆಡ್ ಅಲರ್ಟ್’ ಘೋಷಿಸಿದೆ.

ದೀರ್ಘಕಾಲದವರೆಗೆ ನೇರಳಾತೀತ ವಿಕಿರಣಗಳಿಗೆ ಒಡ್ಡಿಕೊಳ್ಳುವುದು ಅಪಾಯಕಾರಿ. ಇದರಿಂದ ಚರ್ಮಕ್ಕೆ ಹಾನಿ, ಹಾಗೂ ಕಣ್ಣಿನ ಕಾಯಿಲೆಗಳು ಸೇರಿದಂತೆ ಇತರ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳಬಹುದು ಎಂದು ಪ್ರಾಧಿಕಾರ ಎಚ್ಚರಿಸಿದೆ.

ಪಾಲಕ್ಕಾಡ್ ಜಿಲ್ಲೆಯ ತೃತ್ತಾಲ ಹಾಗೂ ಮಲಪ್ಪುರಂ ಜಿಲ್ಲೆಯ ಪೊನ್ನಾನಿಯಲ್ಲಿ ನೇರಳಾತೀತ ವಿಕಿರಣಗಳ ತೀವ್ರತೆ ದಾಖಲಿಸಲು ಮಾಪಕಗಳನ್ನು ಸ್ಥಾಪಿಸಿದ್ದು, ವಿಕಿರಣಗಳ ತೀವ್ರತೆಯ ಸೂಚ್ಯಂಕ 11ರಷ್ಟಿರುವುದು ದಾಖಲಾಗಿದೆ ಎಂದು ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಜಿಲ್ಲೆಯಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರ ನಡುವೆ ನೇರಳಾತೀತ ವಿಕಿರಣಗಳ ತೀವ್ರತೆ ಅಧಿಕವಿರುವುದು ದಾಖಲಾಗಿದೆ. ಹೀಗಾಗಿ, ಜನರು ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸಾಧ್ಯವಾದಷ್ಟು, ಈ ಅವಧಿಯಲ್ಲಿ ಸೂರ್ಯನ ಕಿರಣಗಳು ಮೈ ಮೇಲೆ ನೇರವಾಗಿ ಬೀಳದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದೆ.

ಪ್ರಾಧಿಕಾರ ನೀಡಿರುವ ಸಲಹೆಗಳು

- ಹೊರಗೆ ಕೆಲಸಕ್ಕೆ ಹೋಗುವವರು, ಮೀನುಗಾರರು, ಬೈಕ್ ಓಡಿಸುವವರು, ಪ್ರವಾಸಿಗರು ಎಚ್ಚರಿಕೆ ವಹಿಸಬೇಕು
- ಚರ್ಮ ಹಾಗೂ ಕಣ್ಣಿನ ತೊಂದರೆ ಉಳ್ಳವರು, ಕ್ಯಾನ್ಸರ್ ರೋಗಿಗಳು ಹಾಗೂ ರೋಗ ನಿರೋಧಕ ಶಕ್ತಿ ಕಡಿಮೆ ಇರುವವರು ಸಾಕಷ್ಟು ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು
- ಇಡೀ ದೇಹ ಮುಚ್ಚುವಂತೆ ಅರಳೆಯಿಂದ ತಯಾರಿಸಿದ ವಸ್ತ್ರಗಳನ್ನು ಧರಿಸಬೇಕು. ಸೂರ್ಯ ಕಿರಣಗಳಿಂದ ರಕ್ಷಣೆ ಪಡೆಯಲು ಟೋಪಿ, ಕೊಡೆ ಮತ್ತು ತಂಪು ಕನ್ನಡಕಗಳನ್ನು ಬಳಸಬೇಕು

ಆರ್‌ಎಸ್‌ಎಸ್, ಬಿಜೆಪಿ ಕಾರ್ಯಕರ್ತರ ವಿರುದ್ಧ ಪ್ರಕರಣ

ತಿರುವನಂತಪುರ (ಪಿಟಿಐ): ಮಹಾತ್ಮ ಗಾಂಧಿ ಅವರ ಮೊಮ್ಮಗ ತುಷಾರ್ ಗಾಂಧಿ ವಿರುದ್ಧ ಪ್ರತಿಭಟನೆ ನಡೆಸಿದ್ದ ಆರೋಪದಡಿ ಬಿಜೆಪಿ–ಆರ್‌ಎಸ್‌ಎಸ್ ಕಾರ್ಯಕರ್ತರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಎಫ್‌ಐಆರ್‌ನಲ್ಲಿ ಯಾರ ಹೆಸರು ಉಲ್ಲೇಖಿಸಿಲ್ಲ.

ಗಾಂಧಿವಾದಿ ಗೋಪಿನಾಥನ್ ನಾಯರ್ ಪ್ರತಿಮೆ ಅನಾವರಣ ವೇಳೆ ಬುಧವಾರ ಮಾತನಾಡಿದ್ದ ತುಷಾರ್ ಗಾಂಧಿ ಅವರು, ‘ಬಿಜೆಪಿಯನ್ನು ಸೋಲಿಸಬಹುದು. ಆದರೆ, ‘ಆರ್‌ಎಸ್‌ಎಸ್ ವಿಷ ಇದ್ದಂತೆ, ಎಚ್ಚರ ಅಗತ್ಯ’ ಎಂದಿದ್ದರು.

ಈ ಮಾತು ವಿರೋಧಿಸಿ ಬಿಜೆಪಿ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದ್ದರು. ಪ್ರತಿಭಟನೆಯನ್ನು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಖಂಡಿಸಿದ್ದರು.

रजिस्ट्री सं. डी.एल.- 33004/99 REGD. NO. D. L.-33004/99

भारत का राजपत्र
The Gazette of India

सी.जी.-डी.एल.-अ.- 01032025-261404
CG-DL-E- 01032025-261404
असाधारण
EXTRAORDINARY
भाग II-खण्ड 3-उप-खण्ड (ii)
PART II—Section 3—Sub-section (ii)
प्राधिकार से प्रकाशित
PUBLISHED BY AUTHORITY

No. 1050] NEW DELHI, FRIDAY, FEBRUARY 28, 2025/PHALGUNA 9, 1946

ವಿಶೇಷ ಭೂ–ಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು
ರಾಷ್ಟ್ರೀಯ ಹೆದ್ದಾರಿ ಸಂಖ್ಯೆ –367 (ಬಾಣಾಪೂರ– ಗದ್ದನಕೇರಿ ಸೆಕ್ಷನ್)
ಕಿ.ಮೀ 40.00 ರಿಂದ ಕಿ.ಮೀ 47.00 ರವರೆಗೆ, ರಾಷ್ಟ್ರೀಯ ಹೆದ್ದಾರಿಗಳು, ಮಿನಿ ವಿಧಾನಸೌಧ ಧಾರವಾಡ.

ನಂ: ವಿ.ಭೂ.ಸ್ವಾ.ಅ/ರಾಹೆ/ವಿ.ವಿ/ **ಸಾರ್ವಜನಿಕ ಪ್ರಕಟಣೆ**

ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ಸೆಕ್ಷನ್ 3ಡಿ (1) ಮತ್ತು (2) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭಾರತ ಸರಕಾರವು ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಈ ಕೆಳಗೆ ಅಧಿಸೂಚನೆಯಲ್ಲಿ ಪ್ರಕಟಿಸಿರುವ ಜಮೀನುಗಳನ್ನು ರಾಷ್ಟ್ರೀಯ ಹೆದ್ದಾರಿ ಸಂಖ್ಯೆ367ರಲ್ಲಿ (ಬಾಣಾಪೂರ– ಗದ್ದನಕೇರಿ ಸೆಕ್ಷನ್) ಕಿ.ಮೀ 40.00 ರಿಂದ ಕಿ.ಮೀ 47.00ರವರೆಗೆ ದ್ವಿಪಥ ಬೈಪಾಸ್ ರಸ್ತೆ ನಿರ್ಮಾಣ (ಅಗಲಗೊಳಿಸುವುದು/ 4 ಲೇನ್ ಇತ್ಯಾದಿ) ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳಲು 3ಡಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಈ ಅಧಿಸೂಚನೆಯು ಭಾರತ ರಾಜ ಪತ್ರದ ಅಸಾಧಾರಣ, ಭಾಗ– 02, ಸೆಕ್ಷನ್ 3, ಸಬ್‌ಸೆಕ್ಷನ್ (2) ರಲ್ಲಿ ಎಸ್.ಓ. ಸಂ 4749 (ಇ) ದಿನಾಂಕ: 29–10–2024 ರಂದು ಪ್ರಕಟವಾಗಿರುತ್ತದೆ.

ಆದ ಕಾರಣ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956 ರ 48) ಮತ್ತು ತಿದ್ದುಪಡಿ ಕಾಯ್ದೆ 1997ರ ಸೆಕ್ಷನ್ 3ಜಿ ಉಪಕಲಂ (1) (2) (3) ಮತ್ತು (4) ಹಾಗೂ 1997ರ ತಿದ್ದುಪಡಿಯಡಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆಯಲ್ಲಿ ನಮೂದಿಸಿದ ಭೂಮಿಯ ಮಾಲೀಕರು ಹಾಗೂ ಸದರಿ ಭೂಮಿಗಳಲ್ಲಿ ಹಿತಾಸಕ್ತಿ ಉಳ್ಳವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಅಧಿಸೂಚನೆಯಲ್ಲಿ ನಮೂದಿಸಿರುವ ಜಮೀನುಗಳನ್ನು ಕೇಂದ್ರ ಸರ್ಕಾರವು ಭೂಸ್ವಾಧೀನ ಪಡಿಸಿಕೊಂಡಿರುವುದರಿಂದ ಸದರಿ ಜಮೀನುಗಳಿಗೆ ಪರಿಹಾರ ನಿಗಧಿಪಡಿಸಿ ಪಾವತಿಸಲು ಜಮೀನಿಗೆ ಸಂಬಂಧಿಸಿದ ಅಧಿಕೃತ ದಾಖಲೆಗಳನ್ನು ಅಂದರೆ (1) ಮೂಲ ದಾಖಲೆ ಪತ್ರಗಳು (2) ಕ್ರಯಪತ್ರ, ವಿಭಾಗಪತ್ರ, ಇತರೆ ಹಕ್ಕು ಪತ್ರಗಳು, (3) ಪಹಣಿ ಪತ್ರಿಕೆಗಳು (ಆರ್.ಟಿ.ಸಿ) (4) ಹಕ್ಕು ಬದಲಾವಣೆ ದಾಖಲೆ (ಮ್ಯುಟೇಶನ್) (5) ಕಂದಾಯ ಪಾವತಿಸಿದ ರಶೀದಿ (6) ಋಣಭಾರ ರಹಿತ ದೃಢೀಕರಣ ಪತ್ರ (ಇ.ಸಿ) (7) ಗ್ರಾಮ ಪಂಚಾಯತಿ ಸ್ವತ್ತಿಗೆ ಸಂಬಂಧಿಸಿದಂತೆ ಇ–ಸ್ವತ್ತು ದಾಖಲೆ (ನಿವೇಶನಗಳಿಗೆ), ಇತರ ಅನ್ವಯವಾಗುವ ದಾಖಲೆಗಳು ಹಾಗೂ ಅಪೇಕ್ಷಿಸುವ ಪರಿಹಾರ ಧನ (ಸೂಕ್ತ ಸಮರ್ಥನೆಗಳೊಂದಿಗೆ) ದಾಖಲೆಗಳನ್ನು ಪ್ರಕಟಣೆಗೊಂಡ ದಿನಾಂಕದಿಂದ 21 ದಿನಗಳೊಳಗಾಗಿ ಕಚೇರಿ ವೇಳೆಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು, ಮಿನಿ ವಿಧಾನಸೌಧ, ಧಾರವಾಡ ಇವರಿಗೆ ಸಲ್ಲಿಸತಕ್ಕದ್ದು ತಪ್ಪಿದಲ್ಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಪರಿಹಾರಧನ ನಿಗದಿಪಡಿಸಿ ವಿತರಿಸಲಾಗುವುದು.

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ, ನವದೆಹಲಿ ಅಧಿಸೂಚನೆ
ನವದೆಹಲಿ ದಿನಾಂಕ: 28 ನೇ ಫೆಬ್ರವರಿ 2025

ಎಸ್.ಓ. 1058(ಇ) ಕೇಂದ್ರ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ ಮೂಲಕ ಪ್ರಕಟಿಸಲಾದ ಅಧಿಸೂಚನೆ **ಸಂಖ್ಯೆ ಎಸ್. ಓ 4749** (ಇ) ದಿನಾಂಕ 29ನೇ ಅಕ್ಟೋಬರ್ 2024 ರಂದು ಭಾರತರಾಜ ಪತ್ರದ ಅಸಾಧಾರಣ, ಭಾಗ–2, ಸೆಕ್ಷನ್3, ಸಬ್‌ಸೆಕ್ಷನ್ (2) ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48) ಪ್ರಕಾರ ಸೆಕ್ಷನ್ 3 (ಎ) ರ ಸಬ್ ಸೆಕ್ಷನ್ (1) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಕೇಂದ್ರ ಸರ್ಕಾರವು ಇದರೊಂದಿಗೆ ಲಗತ್ತಿಸಿರುವ ಅನುಸೂಚಿ (ಶೆಡ್ಯೂಲ್) ಯಂತೆ ಜಮೀನುಗಳನ್ನು ಕರ್ನಾಟಕ ರಾಜ್ಯದಲ್ಲಿರುವ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನಲ್ಲಿ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿ ನಂ.367 (ಬಾಣಾಪೂರ–ಗದ್ದನಕೇರಿ ಸೆಕ್ಷನ್) ರಸ್ತೆಯ ಕಿ.ಮೀ 40.00 ರಿಂದ ಕಿ.ಮೀ 47.00 ರವರೆಗೆ ದ್ವಿಪಥ ಬೈಪಾಸ್ ರಸ್ತೆ ನಿರ್ಮಾಣ (ಅಗಲಗೊಳಿಸುವುದು/ 4 ಲೇನ್ ಇತ್ಯಾದಿ) ಸಂರಕ್ಷಣೆ ಕಾರ್ಯ ನಿರ್ವಹಣೆ ಮತ್ತು ಕಾರ್ಯಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದೆ.

ಸದರಿ ಅಧಿಸೂಚನೆಯನ್ನು "ವಿಜಯ ಕರ್ನಾಟಕ" ಮತ್ತು "ವಿಜಯವಾಣಿ" ದಿನಪತ್ರಿಕೆಗಳಲ್ಲಿ **ದಿನಾಂಕ: 27–11–2024** ರಂದು ಪ್ರಚುರಪಡಿಸಿ, ರಾಷ್ಟ್ರೀಯ ಹೆದ್ದಾರಿ ಕಾಯ್ದೆ ಸೆಕ್ಷನ್ 3 (ಎ) ರ ಸಬ್‌ಸೆಕ್ಷನ್ (3) ರ ಪ್ರಕಾರ ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು.

ಅದರಂತೆ ಆಕ್ಷೇಪಣೆಗಳನ್ನು ಸ್ವೀಕರಿಸಿ ಮತ್ತು ಪರಿಶೀಲನೆ ನಡೆಸಿ ಸಕ್ಷಮ ಪ್ರಾಧಿಕಾರಿಯವರು ಅಂಗೀಕರಿಸಿರುತ್ತಾರೆ /ತಿರಸ್ಕರಿಸಿರುತ್ತಾರೆ. ಅಂತಹ ಆಕ್ಷೇಪಣೆಗಳಿಗೆ ಕಾಯಿದೆಯ ಸೆಕ್ಷನ್ 3(ಡಿ) ರ ಸಬ್–ಸೆಕ್ಷನ್ (1) ರ ಪ್ರಕಾರ ಸಕ್ಷಮ ಪ್ರಾಧಿಕಾರವು ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಆದ್ದರಿಂದ ಈಗ ಸಕ್ಷಮ ಪ್ರಾಧಿಕಾರಿಯವರಿಂದ ಬಂದ ವರದಿ ಪ್ರಕಾರ ಮತ್ತು ಸೆಕ್ಷನ್ 3(ಡಿ) ರ ಸಬ್‌ಸೆಕ್ಷನ್ (1) ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಅನುಸೂಚಿಯಲ್ಲಿ ತೋರಿಸಿದ ಭೂಮಿಯನ್ನು ಮೇಲೆ ತಿಳಿಸಿದ ಉಪಯೋಗಕ್ಕಾಗಿ ಸ್ವಾಧೀನ ಮಾಡಿಕೊಳ್ಳಲು ಕೇಂದ್ರ ಸರಕಾರವು ಘೋಷಿಸುತ್ತದೆ ಮತ್ತು ಈಗ ಸೆಕ್ಷನ್ 3 (ಡಿ) ರ ಸಬ್ ಸೆಕ್ಷನ್ (2) ರ ಅನುಸಾರ ರಾಜ್ಯ ಪತ್ರದಲ್ಲಿ ಅಧಿಸೂಚನೆ ಪ್ರಕಟಣೆಗೊಂಡ ಮೇಲೆ ಅನುಸೂಚಿಯಲ್ಲಿ ವಿವರಿಸಿರುವ ಭೂಮಿಯು ಯಾವುದೇ ಋಣ ಭಾರವಿಲ್ಲದೇ ಕೇಂದ್ರ ಸರಕಾರದ ಸಂಪೂರ್ಣ ಸ್ವಾಧೀನಕ್ಕೆ ಒಳಪಟ್ಟಿರುತ್ತದೆ ಎಂದು ಕೇಂದ್ರ ಸರ್ಕಾರವು ಘೋಷಿಸಿದೆ.

ಅನುಸೂಚಿ

ಕರ್ನಾಟಕ ರಾಜ್ಯದಲ್ಲಿರುವ ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನಲ್ಲಿ ಹಾಯ್ದು ಹೋಗುವ ರಾಷ್ಟ್ರೀಯ ಹೆದ್ದಾರಿ ನಂ. 367 (ಬಾಣಾಪೂರ–ಗದ್ದನಕೇರಿ ಸೆಕ್ಷನ್) ರಸ್ತೆಯ ಕಿ.ಮೀ 40.00 ರಿಂದ ಕಿ.ಮೀ 47.00ರವರೆಗೆ ದ್ವಿಪಥ ಬೈಪಾಸ್ ರಸ್ತೆ ನಿರ್ಮಾಣಕ್ಕಾಗಿ ಕಟ್ಟಡಗಳು ಹಾಗೂ ಕಟ್ಟಡಗಳ ರಹಿತ ಭೂಸ್ವಾಧೀನಗೊಳ್ಳಲಿರುವ ಜಮೀನುಗಳ ಸಂಕ್ಷಿಪ್ತ ವಿವರ.

ರಾಜ್ಯ: ಕರ್ನಾಟಕ					ಜಿಲ್ಲೆ: ಗದಗ
ಅ ನಂ	ಸರ್ವೆ ನಂ. / ಪ್ಲಾಟ್ ನಂ	ಜಮೀನಿನ ಪ್ರಕಾರ (ಟೈಪ್ ಆಫ್ ಲ್ಯಾಂಡ)	ಜಮೀನಿನ ತರಹೆ	ಜಮೀನಿನ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)	ಭೂಮಾಲಿಕರ/ ಹಿತಾಸಕ್ತಿವುಳ್ಳವರ ಹೆಸರು ಮತ್ತು ಸರ್ವೆ ನಂಬರಿನ ಭಾಗ
1	2	3	4	5	6
ತಾಲ್ಲೂಕ: ಗಜೇಂದ್ರಗಡ					ಗ್ರಾಮ: ಉಣಚಗೇರಿ
1	137/4	ಖಾಸಗಿ	ಖುಷ್ಕಿ	0.037935	ಲಲಿತವ್ವ ಗಂಡ ಮಲ್ಲಪ್ಪ ಸಂಗನಾಳ್ 137/4
2	137/6	ಖಾಸಗಿ	ಖುಷ್ಕಿ	0.035407	ಶೀತಲ್ ಕುವಮಾರ್ ತಂದೆ ರಿಕಾಬಚಂದ್ ಬಾಗಮಾರ್ (ಭೂ.ಪ) 137/6
3	137/7	ಖಾಸಗಿ	ಖುಷ್ಕಿ	0.087464	ಶೀತಲ್ ಕುಮಾರ್ ತಂದೆ ರಿಕಾಬಚಂದ್ ಬಾಗಮಾರ್ (ಭೂ.ಪ) 137/7
4	225/2	ಖಾಸಗಿ	ಖುಷ್ಕಿ	0.016062	ಗೋಲಗೇರಿ ಜನ್ನತಬಿ ಗಂಡ ಮೆಹಬೂಬ್ ಸಾಬ್ 225/2
5	246	ಖಾಸಗಿ	ಖುಷ್ಕಿ	0.01084	ಬಡಿಗೇರಿ ಗುರುನಾಥ್ ತಂದೆ ಮಲ್ಲಪ್ಪ 246/*
6	264/2	ಖಾಸಗಿ	ಖುಷ್ಕಿ	0.018492	ಇಂಡಿ ಶಾಂತಾ ಗಂಡ ನಾಗಪ್ಪ, ಇಂಡಿ ಕಿರಣ್ ನಾಗಪ್ಪ, ಇಂಡಿ ವತ್ಸಲಾ ತಂದೆ ನಾಗಪ್ಪ, ಇಂಡಿ ಶೃತಿ ತಂದೆ ನಾಗಪ್ಪ, ಇಂಡಿ ರೇಖಾ ಗಂಡ ಅಶೋಕ್, ಇಂಡಿ ಉಲ್ಲಾಸ್ ತಂದೆ ಅಶೋಕ್, ಇಂಡಿ ಈಶ್ವರಯ್ಯ ತಂದೆ ಅಶೋಕ್ 264/2
7	266	ಖಾಸಗಿ	ಖುಷ್ಕಿ	0.005056	ಮಹಾಂತಪ್ಪ ತಂದೆ ಶಿವಪ್ಪ ಗೊಂಗಡಶೆಟ್ರ 266/*
8	271	ಖಾಸಗಿ	ಬಿನ್ ಶೇತ್ಕಿ	0.003372	ಶ್ರೀ ಲೋಕನಾಥಸಾ ವೆಂಕುಸಾ ಭಾಂಡಗೆ 271ಬಿ/9
9	271	ಖಾಸಗಿ	ಬಿನ್ ಶೇತ್ಕಿ	0.018	ಶ್ರೀ ಲೋಕನಾಥಸಾ ವೆಂಕುಸಾ ಭಾಂಡಗೆ 272 ಬಿ/10
10	271	ಖಾಸಗಿ	ಬಿನ್ ಶೇತ್ಕಿ	0.02385	ಶ್ರೀ ಲೋಕನಾಥಸಾ ವೆಂಕುಸಾ ಭಾಂಡಗೆ 271ಬಿ/20
11	271	ಖಾಸಗಿ	ಬಿನ್ ಶೇತ್ಕಿ	0.01725	ಶ್ರೀ ಲೋಕನಾಥಸಾ ವೆಂಕುಸಾ ಭಾಂಡಗೆ 271ಬಿ/21
12	271	ಖಾಸಗಿ	ಬಿನ್ ಶೇತ್ಕಿ	0.0135	ಶ್ರೀ ಲೋಕನಾಥಸಾ ವೆಂಕುಸಾ ಭಾಂಡಗೆ 271ಬಿ/22
13	271	ಖಾಸಗಿ	ಬಿನ್ ಶೇತ್ಕಿ	0.0135	ಶ್ರೀ ಲೋಕನಾಥಸಾ ವೆಂಕುಸಾ ಭಾಂಡಗೆ 271ಬಿ/29
14	271	ಖಾಸಗಿ	ಬಿನ್ ಶೇತ್ಕಿ	0.02175	ಶ್ರೀ ಲೋಕನಾಥಸಾ ವೆಂಕುಸಾ ಭಾಂಡಗೆ 271ಬಿ/30
15	271	ಖಾಸಗಿ	ಬಿನ್ ಶೇತ್ಕಿ	0.026362	ಶ್ರೀ ಲೋಕನಾಥಸಾ ವೆಂಕುಸಾ ಭಾಂಡಗೆ 271 ಬಿ/31
16	271	ಖಾಸಗಿ	ಬಿನ್ ಶೇತ್ಕಿ	0.0216	ಶ್ರೀ ಲೋಕನಾಥಸಾ ವೆಂಕುಸಾ ಭಾಂಡಗೆ 271ಬಿ/32
17	271	ಖಾಸಗಿ	ಬಿನ್ ಶೇತ್ಕಿ	0.003536	ಶ್ರೀ ಲೋಕನಾಥಸಾ ವೆಂಕುಸಾ ಭಾಂಡಗೆ 271ಬಿ/33
18	271	ಖಾಸಗಿ	ಬಿನ್ ಶೇತ್ಕಿ	0.008385	ಶ್ರೀ ಲೋಕನಾಥಸಾ ವೆಂಕುಸಾ ಭಾಂಡಗೆ 271ಬಿ/38
19	271	ಖಾಸಗಿ	ಬಿನ್ ಶೇತ್ಕಿ	0.0216	ಶ್ರೀ ಲೋಕನಾಥಸಾ ವೆಂಕುಸಾ ಭಾಂಡಗೆ 271ಬಿ/39
20	271	ಖಾಸಗಿ	ಬಿನ್ ಶೇತ್ಕಿ	0.0333	ಶ್ರೀ ಲೋಕನಾಥಸಾ ವೆಂಕುಸಾ ಭಾಂಡಗೆ 271ಬಿ/40
ತಾಲ್ಲೂಕ: ಗಜೇಂದ್ರಗಡ					ಗ್ರಾಮ: ಪುರ್ತಗೇರಿ
21	52/6	ಖಾಸಗಿ	ಖುಷ್ಕಿ	0.085992	ಲಕ್ಷ್ಮವ್ವ ಭದ್ರಪ್ಪ ಮಾಲೋತ್ತರ್ 52/6
ತಾಲ್ಲೂಕ: ಗಜೇಂದ್ರಗಡ					ಗ್ರಾಮ: ರಾಜೂರ
22	136	ಖಾಸಗಿ	ತರಿ	0.12864	136/1) ಕಮತ್ರ ಫಕೀರಪ್ಪ ಮಲೇಶಪ್ಪ, 136/2) ಅಜಿತ ಕುಮಾರ ತಂದೆ ಅಶೋಕ ಕುಮಾರ ಬಾಗಮಾರ್, 136/3) ಅಜಿತ ಕುಮಾರ ತಂದೆ ಅಶೋಕ ಕುಮಾರ ಬಾಗಮಾರ್, 136/4) ಅಜಿತ ಕುಮಾರ ತಂದೆ ಅಶೋಕ ಕುಮಾರ ಬಾಗಮಾರ್, 136/5) ಕಮತ್ರ ಫಕೀರಪ್ಪ ತಂದೆ ಮಲ್ಲೇಶಪ್ಪ 136/6) ಕಮತ್ರ ಶರಣಪ್ಪ ತಂದೆ ಮಲ್ಲೇಶಪ್ಪ 136/7) ಕಮತ್ರ ಬಸಪ್ಪ ತಂದೆ ಮಲ್ಲೇಶಪ್ಪ, 136/8) ಕಮತ್ರ ಗೂಳಪ್ಪ ದೇವಪ್ಪ, 136/9) ಅಜಿತ ಕುಮಾರ ತಂದೆ ಅಶೋಕ್ ಕುಮಾರ್ ಬಾಗಮಾರ್, 136/10) ಅಜಿತ ಕುಮಾರ ತಂದೆ ಅಶೋಕ್ ಕುಮಾರ್ ಬಾಗಮಾರ್, 136/11) ಕಮತ್ರ ತಿಪ್ಪಣ್ಣ ತಂದೆ ಕಳಕಪ್ಪ, ಕಮತ್ರ ಸೋಮಪ್ಪ ತಂದೆ ಕಳಕಪ್ಪ 136/*
23	150/6	ಖಾಸಗಿ	ಖುಷ್ಕಿ	0.010802	ಈರಪ್ಪ ತಂದೆ ಸಂಜೀವಪ್ಪ ಮೇದಾರ್ 150/6
24	150/7	ಖಾಸಗಿ	ಖುಷ್ಕಿ	0.036671	ಸವಣೂರು ಯಲ್ಲಪ್ಪ ತಂದೆ ಚನ್ನವೀರಪ್ಪ 150/7
25	150/8	ಖಾಸಗಿ	ಖುಷ್ಕಿ	0.042364	ಸವಣೂರು ಯಲ್ಲಪ್ಪ ತಂದೆ ಚನ್ನವೀರಪ್ಪ 150/8

ಸಹಿ/– ಕ್ಯಾಪ್ಟನ್ ಶ್ರೀನಿವಾಸಗೌಡ (ಕ.ಆ.ಸೇ)
ವಿಶೇಷ ಭೂ–ಸ್ವಾಧೀನಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳು
ರಾಷ್ಟ್ರೀಯ ಹೆದ್ದಾರಿಗಳು, ಮಿನಿ ವಿಧಾನಸೌಧ, ಧಾರವಾಡ – 580 001

❦ ಸುಭಾಷಿತ ❦

ಗೆಲುವಿನ ಖಚಿತತೆಯಲ್ಲೂ ಸೋಲಿನ ಎಚ್ಚರ ಇರಬೇಕು.

–ಪಿ.ಲಂಕೇಶ್

ಬೆಂಗಳೂರಿನ ಆಡಳಿತಕ್ಕೆ ಹೊಸ ಮಸೂದೆ ಜನರ ಅಗತ್ಯಕ್ಕೆ ಆದ್ಯತೆ ನೀಡಿದರೆ ಯಶಸ್ಸು

ಬೆಂಗಳೂರು ಮಹಾನಗರದ ಆಡಳಿತದಲ್ಲಿ ಇರುವ ಸವಾಲುಗಳನ್ನು ನಿರ್ವಹಿಸುವ ಉದ್ದೇಶದಿಂದ ವಿಧಾನಮಂಡಲದ ಜಂಟಿ ಸಮಿತಿಯ ಪರಿಶೀಲನೆ ಬಳಿಕ ಅಂತಿಮಗೊಳಿಸಿರುವ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ'ಗೆ ವಿಧಾನ ಮಂಡಲದ ಉಭಯ ಸದನಗಳು ಅಂಗೀಕಾರ ನೀಡಿವೆ. ಬೆಂಗಳೂರಿನ ಆಡಳಿತ ವ್ಯವಸ್ಥೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ತರುವ ಪ್ರಸ್ತಾವ ಈ ಮಸೂದೆಯಲ್ಲಿ ಇದೆ. ಈಗ ಅಸ್ತಿತ್ವದಲ್ಲಿ ಇರುವ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಪರ್ಯಾಯವಾಗಿ ಏಳಕ್ಕಿಂತ ಹೆಚ್ಚಿಲ್ಲದಂತೆ ನಗರಪಾಲಿಕೆಗಳನ್ನು ರಚಿಸಲು ಅವಕಾಶ ಕಲ್ಪಿಸುವ ಪ್ರಸ್ತಾವವೂ ಮಸೂದೆಯಲ್ಲಿ ಇದೆ. ಮಹಾನಗರದ ಆಡಳಿತ ವ್ಯವಸ್ಥೆಯನ್ನು ವಿಕೇಂದ್ರೀಕರಿಸಿ, ವ್ಯವಸ್ಥೆಯನ್ನು ಇನ್ನಷ್ಟು ಪಾರದರ್ಶಕ ಹಾಗೂ ಜನಸ್ನೇಹಿಯನ್ನಾಗಿ ಮಾಡಿ, ಆಡಳಿತವನ್ನು ಮತ್ತಷ್ಟು ಉತ್ತರದಾಯಿ ಆಗಿಸುವ ಉದ್ದೇಶವು ಮಸೂದೆಗೆ ಇದೆ. ಮಸೂದೆಯಲ್ಲಿ ಇರುವ ಈ ಅಂಶಗಳೆಲ್ಲ ಬಹಳ ಮುನ್ನೋಟ ಇರುವಂಥವು ಎಂದು ಅದರ ಸಮರ್ಥಕರು ಹೇಳುತ್ತಿದ್ದಾರೆ. ಆದರೆ, ಬೆಂಗಳೂರಿಗೆ ಅಗತ್ಯವಿರುವ ಆಮೂಲಾಗ್ರ ಬದಲಾವಣೆಗಳನ್ನು ಈ ಮಸೂದೆಯು ಕಾರ್ಯರೂಪಕ್ಕೆ ತರುವುದೇ ಎಂಬ ಪ್ರಶ್ನೆ ಇದೆ. ನಗರದಲ್ಲಿನ ನೀರು ಪೂರೈಕೆ, ಸಾರ್ವಜನಿಕ ಸಾರಿಗೆ, ವಿದ್ಯುತ್, ಮೂಲಸೌಕರ್ಯ ಮತ್ತು ಇತರ ನಾಗರಿಕ ಸೌಲಭ್ಯಗಳ ನಿರ್ವಹಣೆಗೆ ರಚನೆಯಾಗಿರುವ ಪ್ರಾಧಿಕಾರಗಳು, ಮಂಡಳಿಗಳು, ನಿಗಮಗಳು ಪರಸ್ಪರ ಸಮನ್ವಯ ಇಲ್ಲದೆ ಕೆಲಸ ಮಾಡುತ್ತಿವೆ ಎಂಬ ದೂರುಗಳು ದಶಕಗಳಿಂದಲೂ ಇವೆ. ಇವು ಸರ್ಕಾರದ ನಿಯಂತ್ರಣದಲ್ಲಿರುವ, ರಾಜಕೀಯ ಪ್ರಭಾವಕ್ಕೆ ಹೊರತಾಗಿಲ್ಲದ ಸಂಸ್ಥೆಗಳು ಎಂಬುದೂ ನಿಜ. ಸಮನ್ವಯವನ್ನು ಉತ್ತಮಪಡಿಸಲು ಹಾಗೂ ದಕ್ಷತೆಯನ್ನು ಹೆಚ್ಚು ಮಾಡಲು ಈ ಎಲ್ಲ ನಿಗಮ, ಮಂಡಳಿ, ಪ್ರಾಧಿಕಾರಗಳನ್ನು ಒಂದೇ ಚೌಕಟ್ಟಿನ ಒಳಗೆ ತರುವ ಪ್ರಸ್ತಾವವು ಮಸೂದೆಯಲ್ಲಿದೆ.

ಮಹಾನಗರದ ಆಡಳಿತ ವ್ಯವಸ್ಥೆಯಲ್ಲಿ ಇರುವ ಲೋಪಗಳನ್ನು ಸರಿಪಡಿಸಲು ಈ ಮಸೂದೆಯು ಒಂದು ಅವಕಾಶ ಕಲ್ಪಿಸುತ್ತದೆ

ಆದರೆ, ಹೊಸ ವ್ಯವಸ್ಥೆಯಲ್ಲಿ ಹೇಳಿರುವ ಆಡಳಿತದ ಸ್ವರೂಪವು ಹಲವು ಪ್ರಶ್ನೆಗಳನ್ನು ಮೂಡಿಸುತ್ತದೆ. ಮುಖ್ಯಮಂತ್ರಿಯವರು ಜಿಬಿಎ (ಗ್ರೇಟರ್ ಬೆಂಗಳೂರು ಪ್ರಾಧಿಕಾರ) ನೇತೃತ್ವ ಹೊಂದಿರುತ್ತಾರೆ. ಹೀಗಿರುವಾಗ, 30 ತಿಂಗಳ ಅಧಿಕಾರ ಅವಧಿಯ ಮೇಯರ್‌ಗಳು ಹೆಸರಿಗೆ ಮಾತ್ರ ಕೌನ್ಸಿಲ್‌ನಲ್ಲಿ ಮುಖ್ಯಸ್ಥರಾಗಿರುತ್ತಾರೆ ಎಂಬುದರಲ್ಲಿ ಅನುಮಾನ ಇಲ್ಲ. ಇದರಿಂದಾಗಿ ಸ್ಥಳೀಯ ಸ್ವಯಂ ಆಡಳಿತದ ಪರಿಕಲ್ಪನೆ ದುರ್ಬಲಗೊಳ್ಳುತ್ತದೆ, ಜಿಬಿಎ ವ್ಯವಸ್ಥೆಯಿಂದ ಪಾಲಿಕೆಗಳ ಸ್ವಾಯತ್ತೆಗೆ ಧಕ್ಕೆ ಉಂಟಾಗುತ್ತದೆ. ರಾಜ್ಯ ಸರ್ಕಾರವು ಮಹಾನಗರದ ಆಡಳಿತದ ಮೇಲೆ ಗಣನೀಯ ಪ್ರಮಾಣದಲ್ಲಿ ಪ್ರಭಾವ ಬೀರುತ್ತಿರುತ್ತದೆ. ಜಿಬಿಎ ಆಡಳಿತ ವ್ಯವಸ್ಥೆಯ ಸ್ವರೂಪದ ಬಗ್ಗೆ ಇನ್ನಷ್ಟು ಸ್ಪಷ್ಟತೆಯ ಅಗತ್ಯ ಇದೆ. ಮೇಯರ್‌ಗೆ ಐದು ವರ್ಷಗಳ ಅಧಿಕಾರ ಅವಧಿ ಇರಬೇಕು, ಮೇಯರ್ ಅವರನ್ನು ನೇರವಾಗಿ ಆಯ್ಕೆ ಮಾಡಬೇಕು ಎಂಬ ಬಹುಕಾಲದ ಬೇಡಿಕೆಗೆ ಮಸೂದೆಯು ಸ್ಪಂದಿಸಿಲ್ಲ. ಜಿಬಿಎಯಲ್ಲಿ ಸದಸ್ಯರಾಗಿರುವ ಸ್ಥಳೀಯ ಶಾಸಕರು, ವಿಧಾನ ಪರಿಷತ್ ಸದಸ್ಯರು ಮತ್ತು ಸಂಸದರಿಗೆ ಕೌನ್ಸಿಲ್‌ನಲ್ಲಿ ಮತದಾನದ ಹಕ್ಕು ಕಲ್ಪಿಸುವ ಪ್ರಸ್ತಾವ ಕೂಡ ಒಂದು ಲೋಪ. ಈ ಬಗೆಯ ವ್ಯವಸ್ಥೆಯನ್ನು ಈ ಹಿಂದೆ ಬಳಸಿಕೊಂಡು, ಕೌನ್ಸಿಲ್‌ನಲ್ಲಿ ನಿರ್ದಿಷ್ಟ ಪಕ್ಷದ ಪರವಾಗಿ ಕೃತಕ ಬಹುಮತವನ್ನು ಸೃಷ್ಟಿಸಿ, ಜನರ ಆಯ್ಕೆಯಲ್ಲದ ವ್ಯಕ್ತಿಯನ್ನು ಮೇಯರ್ ಸ್ಥಾನಕ್ಕೆ ತಂದ ನಿದರ್ಶನಗಳು ಇವೆ. ಶಾಸನಸಭೆಗಳ ಸದಸ್ಯರ ಕರ್ತವ್ಯವು ಬೇರೆಯದೇ ಆಗಿರುತ್ತದೆ, ನಗರದ ಆಡಳಿತದಲ್ಲಿ ಅವರು ತೊಡಗಿಸಿಕೊಳ್ಳಬೇಕಾದ ಅಗತ್ಯ ಇಲ್ಲ. ಶಾಸನಸಭೆಗಳ ಸದಸ್ಯರನ್ನು ಕೌನ್ಸಿಲ್ ಸಭೆಗಳಿಗೆ ಆಹ್ವಾನಿಸಬಹುದು. ಆದರೆ ಅವರಿಗೆ ಕೌನ್ಸಿಲ್‌ನಲ್ಲಿ ಮತದಾನದ ಅಧಿಕಾರ ನೀಡುವುದು ಸ್ಥಳೀಯ ಆಡಳಿತದ ಪರಿಕಲ್ಪನೆಗೆ ವಿರುದ್ಧವಾದುದು.

ಈ ಮಸೂದೆಯಲ್ಲಿ ಒಳಿತೂ ಇದೆ ಕೆಡುಕೂ ಇದೆ. ವಿಧಾನ ಪರಿಷತ್ತು ಮತ್ತು ವಿಧಾನಸಭೆಯಲ್ಲಿ ಇದರ ಬಗ್ಗೆ ರಾಜಕೀಯ ಚೌಕಟ್ಟು ಮೀರಿದ ವಿಸ್ತೃತ ಚರ್ಚೆ ಆಗಬೇಕಿತ್ತು. ಬಿಬಿಎಂಪಿಗೆ ಚುನಾವಣೆ ನಡೆಯದೆ ನಾಲ್ಕು ವರ್ಷಗಳೇ ಕಳೆದಿವೆ. ಈಗ ಈ ಮಸೂದೆಯನ್ನು ನೆಪವಾಗಿ ಇರಿಸಿಕೊಂಡು ಚುನಾವಣೆಯನ್ನು ಇನ್ನಷ್ಟು ಮುಂದಕ್ಕೆ ಹಾಕುವ ಸಾಧ್ಯತೆಯೂ ಇಲ್ಲದಿಲ್ಲ. ಮಹಾನಗರದ ಆಡಳಿತವನ್ನು ಇನ್ನಷ್ಟು ಸುಗಮವಾಗಿಸುವುದು ಎಲ್ಲರ ಗುರಿಯಾಗಬೇಕೇ ವಿನಾ ಇಲ್ಲಿನ ಆಡಳಿತ ವ್ಯವಸ್ಥೆಯನ್ನು ಇನ್ನಷ್ಟು ಸಂಕೀರ್ಣವಾಗಿಸುವ ಕೆಲಸವನ್ನು ಯಾರೂ ಮಾಡಬಾರದು. ಮಹಾನಗರದ ಆಡಳಿತ ವ್ಯವಸ್ಥೆಯಲ್ಲಿ ಇರುವ ಲೋಪಗಳನ್ನು ಸರಿಪಡಿಸಲು ಈ ಮಸೂದೆಯು ಒಂದು ಅವಕಾಶ ಕಲ್ಪಿಸುತ್ತದೆ. ಆದರೆ, ತಮ್ಮ ರಾಜಕೀಯ ಲಾಭಕ್ಕಿಂತಲೂ ಬೆಂಗಳೂರಿನ ಜನರಿಗೆ ಆಗಬೇಕಿರುವ ಲಾಭಗಳಿಗೆ ಹೆಚ್ಚಿನ ಗಮನವನ್ನು ನೀಡಲು ಸಾಧ್ಯವಾದರೆ ಮಾತ್ರ ಈ ಮಸೂದೆಯು ಯಶಸ್ಸು ಕಾಣುತ್ತದೆ.

ದಿನದ ಟ್ವೀಟ್

ಹೋಳಿ: ಸುರಕ್ಷತೆಗೆ ಆದ್ಯತೆ ಇರಲಿ

ಹೋಳಿ ಹಬ್ಬವನ್ನು ಕುಟುಂಬದವರು ಮತ್ತು ಸ್ನೇಹಿತರೊಂದಿಗೆ ಆಚರಿಸಿ. ಸಾಮೂಹಿಕ ಆಚರಣೆಯಲ್ಲಿ ಆದಷ್ಟೂ ಪಾಲ್ಗೊಳ್ಳದಿರಿ. ವಿಶೇಷವಾಗಿ, ಮಹಿಳೆಯರ ಸುರಕ್ಷತೆಯ ದೃಷ್ಟಿಯಿಂದ ಇದು ಅಗತ್ಯ.

ವೀಣಾ ಜೈನ್

ಕಿಡಿನುಡಿ

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ತಾಲ್ಲೂಕು ಮಟ್ಟದ ಸದಸ್ಯರು– ಅಧ್ಯಕ್ಷರಿಗೆ ತಿಂಗಳಿಗೆ ₹25 ಸಾವಿರ, ಜಿಲ್ಲಾ ಮಟ್ಟದ ಸಮಿತಿಯಲ್ಲಿ ಇರುವವರಿಗೆ ₹40 ಸಾವಿರ ಗೌರವಧನ ಸಿಗುತ್ತಿದೆ. ಆದರೆ, ನಾವೆಲ್ಲ ಇದಕ್ಕಿಂತ ಹೆಚ್ಚಿಗೇ ಖರ್ಚು ಮಾಡುತ್ತಿದ್ದೇವೆ. ಇದರಿಂದಲೇ ಕಾಂಗ್ರೆಸ್ ಕಾರ್ಯಕರ್ತರು ಬದುಕುತ್ತಿಲ್ಲ. ಬಿಜೆಪಿ ಅವಧಿಯಲ್ಲಿ ಗ್ರಾಮ ಒನ್‌ನಿಂದ ಯಾವ್ಯಾವ ಸಂಸ್ಥೆ– ಹುದ್ದೆಗಳಿಗೆ ಎಷ್ಟು ಕಾರ್ಯಕರ್ತರನ್ನು ನೇಮಿಸಲಾಗಿತ್ತು ಎಂಬುದು ಗೊತ್ತಿದೆ.

ಪುಷ್ಪಾ ಅಮರನಾಥ್, ರಾಜ್ಯ ಉಪಾಧ್ಯಕ್ಷೆ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ

25 ವರ್ಷಗಳ ಹಿಂದೆ

ಮಂಗಳವಾರ, 14-3-2000

● **ದಲಿತರ ದಹನ: ಚಿಂತಾಮಣಿ ಬಂದ್**

ಚಿಂತಾಮಣಿ, ಮಾರ್ಚ್ 13– ತಾಲ್ಲೂಕಿನ ಕಂಬಾಲಪಲ್ಲಿಯಲ್ಲಿ ಭಾನುವಾರ ರಾತ್ರಿ ನಡೆದ ಏಳು ಜನರ ಸಜೀವ ದಹನ ಖಂಡಿಸಿ ಇಂದು ನಡೆದ ಚಿಂತಾಮಣಿ ಬಂದ್ ಸಂಪೂರ್ಣ ಯಶಸ್ವಿಯಾಯಿತು.

ನಗರದ ಎಲ್ಲ ವಾಣಿಜ್ಯ ಮಳಿಗೆಗಳು, ಅಂಗಡಿಗಳು ಹಾಗೂ ಸರ್ಕಾರಿ ಕಚೇರಿಗಳು ಮುಚ್ಚಿದ್ದವು.

ಏಳನೇ ತರಗತಿಗೆ ರಾಜ್ಯ ಮಟ್ಟದಲ್ಲಿ ಪಬ್ಲಿಕ್ ಪರೀಕ್ಷೆ ಹಾಗೂ ಎಂಟು ಮತ್ತು ಒಂಬತ್ತನೇ ತರಗತಿಗಳಿಗೆ ಪರೀಕ್ಷೆಗಳು ಇಂದು ಪ್ರಾರಂಭವಾದ ಕಾರಣ, ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂದು ಶಾಲೆಗಳಿಗೆ ಬಂದ್‌ನಿಂದ ವಿನಾಯಿತಿ ನೀಡಲಾಗಿತ್ತು.

ಬಂದ್ ಸಂಪೂರ್ಣ ಶಾಂತಿಯುತವಾಗಿದ್ದು, ಬಸ್ ಮತ್ತಿತರ ವಾಹನಗಳು ನಗರದ ಹೊರವಲಯದಿಂದ ಸಂಚರಿಸಿದವು.

50 ವರ್ಷಗಳ ಹಿಂದೆ

ಶುಕ್ರವಾರ, 14-3-1975

● **ಬೇಕಾಗಿದ್ದಾನೆ, ಕಿಂದರಿಜೋಗಿ**

ಬೆಂಗಳೂರು, ಮಾರ್ಚ್ 13– ಒಂದು ಜೋಡಿ ಹೆಗ್ಗಣಗಳ ಸಂತಾನ ಮೂರು ವರ್ಷದಲ್ಲಿ 35 ಕೋಟಿ ಆಗುವುದೆಂದು ಈ ಬಾರಿಯ ಕಾಂಗ್ರೆಸ್ ವಸ್ತುಪ್ರದರ್ಶನದಲ್ಲಿರುವ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಸ್ಟಾಲ್‌ನಲ್ಲಿನ ಪ್ರಕಟಣೆಯೊಂದು ತಿಳಿಸುತ್ತದೆ.

ಆಹಾರ ಪೂರೈಕೆ ಮಾಡುವ ಇಲಾಖೆಯ ದೊಡ್ಡ ಶತ್ರು ಹೆಗ್ಗಣ ಅಥವಾ ಇಲಿ.

ಇಲಿಗಳ ಮೇಲೆ ವೈಜ್ಞಾನಿಕ ಕಾಳಗ ಹೂಡಿರುವ ರಾಜ್ಯ ಉಗ್ರಾಣಗಳ ಕಾರ್ಪೊರೇಷನ್ ತಜ್ಞರ ಪ್ರಕಾರ, ನಗರದ ತರಗುಪೇಟೆ ಮುಂತಾದ ಧಾನ್ಯ ಸಂಗ್ರಹಣೆ ಇರುವ ಕಡೆ ಗೋಣಿಚೀಲಗಟ್ಟಲೆ ಇಲಿಗಳು ಸಿಕ್ಕಿವೆ. ಅಲ್ಲಿನ ಕೆಲವು ಗೋದಾಮುಗಳಲ್ಲಿ ಇಲಿ ನಾಶಕ್ಕೆ ಕ್ರಮ ಕೈಗೊಳ್ಳಲು ಹೋದಾಗ ಸಾಲು ಸಾಲು ಇಲಿಗಳು ಕಾರ್ಪೊರೇಷನ್ ನೌಕರರನ್ನು ಕುತೂಹಲದಿಂದ ನೋಡುತ್ತಿದ್ದವಂತೆ.

ಆರು ಇಲಿಗಳು ಒಬ್ಬನಷ್ಟು ಆಹಾರ ಸೇವಿಸುವುದಲ್ಲದೆ, ಸೇವಿಸದೇ ಬಿಟ್ಟ ಧಾನ್ಯ, ಆಹಾರವನ್ನು ತಮ್ಮ ಪಿಕ್ಕೆ, ಮೂತ್ರ ಮತ್ತು ಉದುರುವ ಕೂದಲುಗಳಿಂದ ಹಾಳು ಮಾಡುತ್ತವೆ.

● **ಟಿಕೆಟ್ ರಹಿತ ಪ್ರಯಾಣಿಕರಿಗೆ ದಂಡ**

ಬೆಂಗಳೂರು, ಮಾರ್ಚ್ 13– ಟಿಕೆಟ್ ರಹಿತ ಬಸ್ ಪ್ರಯಾಣಿಕರಿಗೆ ದಂಡ ವಿಧಿಸಲು ರಾಜ್ಯದ ರಸ್ತೆ ಸಾರಿಗೆ ಕಾರ್ಪೊರೇಷನ್ ತೀರ್ಮಾನಿಸಿದೆ.

ಗ್ರಾಮಾಂತರ ಹಾಗೂ ನಗರ ಬಸ್ಸುಗಳಲ್ಲಿ ಸಂಚರಿಸುವ ಟಿಕೆಟ್ ರಹಿತ ಪ್ರಯಾಣಿಕರಿಗೆ ದಂಡ ವಿಧಿಸಲು ಸಾಧ್ಯವಾಗುವಂತಹ, ಸಾರಿಗೆ ಕಾರ್ಪೊರೇಷನ್ ರಚಿಸಿರುವ ನಿಯಮಗಳನ್ನು ಶೀಘ್ರದಲ್ಲಿ ಜಾರಿಗೆ ತರಲು ಆಲೋಚಿಸಲಾಗಿದೆ.

ಬಸ್ಸು ಹೊರಟ ಸ್ಥಳದಿಂದ ಕೊಡಬೇಕಾಗಿದ್ದ ಟಿಕೆಟ್ ಹಣವನ್ನು ದಂಡ ರೂಪದಲ್ಲಿ ಪ್ರಯಾಣಿಕರಿಂದ ವಸೂಲಿ ಮಾಡಲಾಗುವುದು. ಆದರೆ ಹೀಗೆ ವಸೂಲಿ ಮಾಡಲಾಗುವ ದಂಡದ ಮೊತ್ತ ಕನಿಷ್ಠ ಎರಡು ರೂಪಾಯಿ ಇರಲೇಬೇಕು ಎಂದು ನಿರ್ಧರಿಸಲಾಗಿದೆ.

ಸದ್ಯಕ್ಕೆ ಇಂತಹ ನಿಯಮಗಳು ಮುಂಬೈ ನಗರ ಹಾಗೂ ಆಂಧ್ರಪ್ರದೇಶದಲ್ಲಿ ಜಾರಿಯಲ್ಲಿ ಇವೆ.

ಬೇಡ ತ್ರಿಭಾಷಾ ಸೂತ್ರ, ಭಾಷಾ ವಿಕಸನಕ್ಕೆ ಇರಲಿ ಹೊಸ ಸೂತ್ರ

ರಾಜ್ಯ ಸ್ವಾಯತ್ತೆ ಮತ್ತು ಭಾಷಾ ಸೂತ್ರ

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಭಾರತದ ಬಹು ದೊಡ್ಡ ಸಾಂಸ್ಕೃತಿಕ ಸಂಪತ್ತೆಂದರೆ ಭಾಷಾ ವೈವಿಧ್ಯ. 2011ರ ಜನಗಣತಿಯ ಪ್ರಕಾರ, ಭಾರತದ ಭಾಷಾ ಪ್ರಭೇದದಲ್ಲಿ 19,569 ಉಪಭಾಷೆ ಅಥವಾ ನುಡಿಗಟ್ಟುಗಳನ್ನು ದಾಖಲಿಸಲಾಯಿತು. ಈ ಉಪಭಾಷೆಗಳನ್ನು ಪರಿಶೀಲನೆಗೆ ಒಳಪಡಿಸಿದಾಗ, ಇವುಗಳಲ್ಲಿ 1,369 ಅನ್ನು ತರ್ಕಬದ್ಧ ಮಾತೃಭಾಷೆಗಳೆಂದು ಪರಿಗಣಿಸಲಾಯಿತು. ಇವುಗಳನ್ನು ಲಭ್ಯವಿರುವ ಭಾಷಾ ಮಾಹಿತಿಯ ಆಧಾರದ ಮೇಲೆ ಮತ್ತಷ್ಟು ವರ್ಗೀಕರಿಸಲಾಯಿತು. ಅಂತಿಮವಾಗಿ, 10,000 ಅಥವಾ ಅದಕ್ಕಿಂತ ಹೆಚ್ಚು ಭಾಷಿಕರು ಮಾತನಾಡುವ ಒಟ್ಟು ಮಾತೃಭಾಷೆಗಳ ಸಂಖ್ಯೆ 121 ಎಂದು ಗುರುತಿಸಿ ದಾಖಲಿಸಲಾಯಿತು.

ಈ ಭಾಷೆಗಳನ್ನು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲನೆಯದು, ಭಾರತದ ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ರಾಷ್ಟ್ರೀಯ ಅಧಿಕೃತ ಭಾಷೆಗಳೆಂದು ಗುರುತಿಸಲಾಗಿರುವ 22 ಭಾಷೆಗಳು. ಎರಡನೆಯದು, ಎಂಟನೇ ಪರಿಚ್ಛೇದದಲ್ಲಿ ಸೇರದ (ಸೇರಬಯಸುವ) 99 ಭಾಷೆಗಳು. ಮೂರನೆಯದು, 10,000ಕ್ಕಿಂತ ಕಡಿಮೆ ಜನ ಮಾತನಾಡುವ ಉಳಿದೆಲ್ಲ ಭಾಷೆಗಳನ್ನು ಇತರ ಭಾಷೆಗಳಡಿ ವರ್ಗೀಕರಿಸಲಾಗಿದೆ.

ಇಂತಹ ವೈವಿಧ್ಯವಿರುವ ಭಾಷಾ ನಾಡಿನಲ್ಲಿ ಭಾಷಾ ನೀತಿ ಅಥವಾ ಭಾಷಾ ಸೂತ್ರವು ಹಿಂಬಾಗಿಲಿನ ಹೇರಿಕೆಯಾಗಬಾರದು. ಬದಲಿಗೆ ಎಲ್ಲಾ ರಾಜ್ಯಗಳ ಜೊತೆ ಪ್ರಜಾಸತ್ತಾತ್ಮಕವಾದ ಚರ್ಚೆಯ ಮೂಲಕ ಒಮ್ಮತ ಸಾಧಿಸುವ ಪಾರದರ್ಶಕ ಪ್ರಕ್ರಿಯೆಯಾಗಬೇಕು. ಈಗ ವಿವಾದಕ್ಕೆ ಒಳಗಾಗಿರುವ ತ್ರಿಭಾಷಾ ಸೂತ್ರವು ಕೊಠಾರಿ ಆಯೋಗ ಎಂದೂ ಕರೆಯಲಾಗುವ ಶಿಕ್ಷಣ ಆಯೋಗದ ಶಿಫಾರಸಿನ ಭಾಗವಾಗಿ ಹೊರಹೊಮ್ಮಿತು. 1968ರಲ್ಲಿ ಮೊದಲ ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ ಈ ಸೂತ್ರವನ್ನು ಔಪಚಾರಿಕವಾಗಿ ಶಿಕ್ಷಣದಲ್ಲಿ ಅಂಗೀಕರಿಸಿ ಜಾರಿಗೊಳಿಸಲಾಯಿತು. ಈ ನೀತಿಯು ಹಿಂದಿ ಮಾತನಾಡುವ ಉತ್ತರ ಭಾರತದ ರಾಜ್ಯಗಳಲ್ಲಿ ಹಿಂದಿ ಮತ್ತು ಇಂಗ್ಲಿಷ್ ಜೊತೆಗೆ ಆಧುನಿಕ ಭಾರತೀಯ ಭಾಷೆ, ಅದರಲ್ಲೂ ವಿಶೇಷವಾಗಿ ದಕ್ಷಿಣ ಭಾರತದ ಭಾಷೆಗಳಲ್ಲಿ ಒಂದನ್ನು ಕಲಿಯುವುದು ಮತ್ತು ದಕ್ಷಿಣದ ರಾಜ್ಯಗಳಲ್ಲಿ ಪ್ರಾದೇಶಿಕ ಭಾಷೆ ಮತ್ತು ಇಂಗ್ಲಿಷ್ ಜೊತೆಗೆ ಹಿಂದಿಯನ್ನು ಕಲಿಯಬೇಕೆಂಬ ಸೂತ್ರವನ್ನು ಹೊಂದಿತ್ತು. ಆದರೆ, ತ್ರಿಭಾಷಾ ಸೂತ್ರದ ಆಶಯವು ದೇಶದಾದ್ಯಂತ ಪ್ರಾಮಾಣಿಕವಾಗಿ ಅನುಷ್ಠಾನವಾಗಲಿಲ್ಲ.

ಸಿಬಿಎಸ್‌ಇ ಸಂಯೋಜಿತ ಕೇಂದ್ರೀಯ ವಿದ್ಯಾಲಯಗಳು ಮತ್ತು ದಕ್ಷಿಣ ಭಾರತದ ಕೆಲವು ರಾಜ್ಯ ಶಿಕ್ಷಣ ಮಂಡಳಿಗಳು ತ್ರಿಭಾಷಾ ಸೂತ್ರ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿದರೆ, ಇನ್ನುಳಿದ ರಾಜ್ಯಗಳು ಸ್ವಾಯತ್ತತೆಯನ್ನು ಚಲಾಯಿಸಿ ದ್ವಿಭಾಷಾ ಸೂತ್ರ ಅಳವಡಿಸಿಕೊಂಡಿವೆ. ಪ್ರಾರಂಭಿಕವಾಗಿ, ದಕ್ಷಿಣ ಭಾರತದ ಹಲವು ರಾಜ್ಯಗಳು ತ್ರಿಭಾಷಾ ಸೂತ್ರದ ಪ್ರಾಮಾಣಿಕ ಜಾರಿಗೆ ಪ್ರಯತ್ನಿಸಿದವಾದರೂ ಉತ್ತರ ಭಾರತದ ರಾಜ್ಯಗಳು ಈ ಸೂತ್ರ ಅಳವಡಿಸಿಕೊಳ್ಳಲು ದಯನೀಯವಾಗಿ ಸೋತವು. ಈ ಕಾರಣದಿಂದ ತ್ರಿಭಾಷಾ ಸೂತ್ರದ ಆಶಯಕ್ಕೆ ಭಂಗವಾಗಿದೆ. ನಿಜ ಹೇಳಬೇಕೆಂದರೆ, ಈ ಸೂತ್ರ ಇಂದು ಪೂರ್ಣವಾಗಿ ವಿಫಲವಾಗಿದೆ ಮತ್ತು ಕಾರ್ಯಸಾಧುವಲ್ಲ ಎಂಬುದು ಖಚಿತವಾಗಿದೆ. ಉದಾಹರಣೆಗೆ, ಉತ್ತರ ಭಾರತದ ಹಿಂದಿ ಮಾತನಾಡುವ ರಾಜ್ಯಗಳಲ್ಲಿ, ತ್ರಿಭಾಷಾ ಸೂತ್ರದ ಅನುಷ್ಠಾನವೆಂದರೆ ಹಿಂದಿ, ಇಂಗ್ಲಿಷ್ ಮತ್ತು ಸಂಸ್ಕೃತವನ್ನು ಅಧ್ಯಯನ ಮಾಡುವುದಾಗಿದೆ. ಖಂಡಿತ ಇದು ಆಧುನಿಕ ಭಾರತೀಯ ಭಾಷೆ ಅದರಲ್ಲೂ ವಿಶೇಷವಾಗಿ ದಕ್ಷಿಣ ಭಾರತದ ಭಾಷೆಯನ್ನು ಕಲಿಯುವ ಆಶಯವನ್ನು ಪೂರೈಸುವುದಿಲ್ಲ ಎಂಬುದು ವಾಸ್ತವಿಕ ಸತ್ಯ.

ತಮಿಳುನಾಡು ಹೊರತುಪಡಿಸಿ, ದಕ್ಷಿಣದ ರಾಜ್ಯಗಳ ಶಿಕ್ಷಣ ಮಂಡಳಿಗಳು ಸಾಮಾನ್ಯವಾಗಿ ಈ ಸೂತ್ರವನ್ನು ಸಮಗ್ರವಾಗಿ ಜಾರಿಗೆ ತಂದಿವೆ. ಅಲ್ಲಿ ವಿದ್ಯಾರ್ಥಿಗಳು ಪ್ರಾದೇಶಿಕ ಭಾಷೆ, ಇಂಗ್ಲಿಷ್, ಹಿಂದಿ ಕಲಿಯುತ್ತಾರೆ. ಆದರೆ, ಕೇಂದ್ರ ಸರ್ಕಾರದ ಆಡಳಿತ ವ್ಯಾಪ್ತಿಗೆ ಬರುವ ಬಹುತೇಕ ಸಿಬಿಎಸ್‌ಇ, ಐಸಿಎಸ್‌ಇ ಮತ್ತು ಐ.ಬಿ. ಶಾಲೆಗಳು ಈ ಸೂತ್ರವನ್ನು ಸಾರಾಸಗಟಾಗಿ ತಿರಸ್ಕರಿಸಿ ರಾಜ್ಯ ಭಾಷೆಗೆ ಅಪಚಾರ ಎಸಗಿವೆ.

ಹಿಂದಿ ಹೇರಿಕೆಯ ವಿರುದ್ಧ ತಮಿಳುನಾಡಿನ ಪ್ರತಿರೋಧ ತ್ರಿಭಾಷಾ ಸೂತ್ರ ಜಾರಿಗೆ ಮೊದಲೇ ಪ್ರಾರಂಭವಾಗಿತ್ತು ಎಂಬುದು ಗಮನಾರ್ಹ. ತಮಿಳುನಾಡಿನ 1937- 1940, 1960 ಮತ್ತು 1965ರ ಹಿಂದಿ ವಿರೋಧಿ ಆಂದೋಲನಗಳು ರಾಜ್ಯದ ರಾಜಕೀಯದಲ್ಲಿ ಮಹತ್ವದ ತಿರುವುಗಳಾಗಿದ್ದವು ಎಂಬುದು ಗಮನಾರ್ಹ ಸಂಗತಿ. ಹಿಂದಿಯನ್ನು ಏಕೈಕ ಅಧಿಕೃತ ಭಾಷೆಯಾಗಿ ಹೇರುವ ಪ್ರಯತ್ನದ ವಿರುದ್ಧ 1965ರ ಹಿಂಸಾತ್ಮಕ ಪ್ರತಿಭಟನೆಗಳು ಹಾಗೂ ಭಾಷಾಭಿಮಾನದ ಆತ್ಮಾಹುತಿಯು ಬರೀ ಭಾಷಾ ಹೇರಿಕೆಯ ಹೋರಾಟಗಳಾಗದೆ, ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ– ರಾಜ್ಯಗಳ ಸಂಬಂಧ ಮತ್ತು ರಾಜ್ಯ ಸ್ವಾಯತ್ತೆಯ ಕಾಳಜಿಯ ಪ್ರಶ್ನೆಗಳಾಗಿ ಹುಟ್ಟಿಕೊಂಡವು ಎಂಬುದು ಮುಖ್ಯ. ಈ ಕಾರಣದಿಂದ ತಮಿಳುನಾಡಿನಲ್ಲಿ ದ್ರಾವಿಡ ಪಕ್ಷಗಳು ಪ್ರಬಲ ರಾಜಕೀಯ ಶಕ್ತಿಗಳಾಗಿ ಹೊರಹೊಮ್ಮಲು ಕಾರಣವಾಯಿತು ಎಂಬುದು ಮುಖ್ಯವಾದ ಸಂಗತಿ.

ದಕ್ಷಿಣ ಭಾರತದ ರಾಜ್ಯಗಳು, ಅದರಲ್ಲೂ ವಿಶೇಷವಾಗಿ ತಮಿಳುನಾಡು, ಕೇರಳ, ಕರ್ನಾಟಕ ಮತ್ತು ತೆಲಂಗಾಣವು ಹಿಂದಿ ಅಥವಾ ಸಂಸ್ಕೃತ ಭಾಷೆಯ ಹೇರಿಕೆಯನ್ನು ವಿರೋಧಿಸಲು ಬಲವಾದ ಕಾರಣಗಳಿವೆ. ಈ ಎಲ್ಲಾ ಭಾಷೆಗಳು ಅತ್ಯಂತ ಹಳೆಯ ಶಾಸ್ತ್ರೀಯ ಭಾಷೆಗಳಾಗಿವೆ. ಹಿಂದಿ ಹೇರಿಕೆಯು ಈ ಭಾಷೆಗಳ ಸ್ಥಾನಮಾನ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಕುಗ್ಗಿಸುತ್ತದೆ ಎಂಬ ಬಲವಾದ ಭಾವನೆ ಇದೆ. ಈ ಭಾವನೆಯನ್ನು ಪುಷ್ಟೀಕರಿಸುವ ರೀತಿಯಲ್ಲಿ ಕೇಂದ್ರ ಸರ್ಕಾರ ನಡೆದುಕೊಳ್ಳುತ್ತಿದೆ. ಸಂವಿಧಾನದ ಎಲ್ಲಾ 22 ರಾಷ್ಟ್ರೀಯ ಭಾಷೆಗಳನ್ನು ಸಮಾನವಾಗಿ ಕಾಣುವ ಭಾಷಾ ಹಕ್ಕುಗಳ ಸಮಾನತೆಯ ತತ್ವ ಅಥವಾ ಕಾಳಜಿಗಳು ಕೇಂದ್ರ ಸರ್ಕಾರದ ಯಾವುದೇ ನೀತಿ, ನಿಯಮ, ಕಾನೂನು ಮತ್ತು ಆಡಳಿತದಲ್ಲಿ ಕಾಣುತ್ತಿಲ್ಲ. ಬದಲಿಗೆ, ಸಂಘರ್ಷ ಮತ್ತು ರಾಜಕೀಯ ಪ್ರತೀಕಾರದ ಮೂಲಕ ಅನುದಾನಗಳನ್ನು ತಡೆಹಿಡಿಯುವ ಅಥವಾ ಅಧಿಕಾರದ ಮೂಲಕ ಬೆದರಿಕೆ ಒಡ್ಡುವ ಪ್ರವೃತ್ತಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಈ ಕಾರಣಗಳಿಂದ, ತ್ರಿಭಾಷಾ ಸೂತ್ರವು ಉತ್ತರದ ಹಿಂದಿ ಭಾಷಿಕರಿಗೆ ಬರೀ ಎರಡು ಭಾಷೆಗಳನ್ನು (ಹಿಂದಿ ಮತ್ತು ಇಂಗ್ಲಿಷ್) ಕಲಿಯುವ ಅನುಕೂಲವನ್ನು ಕಲ್ಪಿಸಿದರೆ, ಹಿಂದಿಯೇತರ ಭಾಷಿಕರು ಮೂರು ಭಾಷೆಗಳನ್ನು ಕಲಿಯಬೇಕೆಂದು ನಿರ್ದೇಶಿಸುತ್ತದೆ. ಹೀಗಾಗಿ, ಹಿಂದಿ ಹೇರಿಕೆಯ ಹುನ್ನಾರವು ತ್ರಿಭಾಷಾ ಸೂತ್ರದ ಮೂಲಮಂತ್ರವಾಗಿದೆ. ಈ ಇಬ್ಬಗೆಯ ಸೂತ್ರ ಒಂದು ಕಣ್ಣಿಗೆ ಸುಣ್ಣ, ಮತ್ತೊಂದು ಕಣ್ಣಿಗೆ ಬೆಣ್ಣೆ ಎನ್ನುವಂತಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ, ಸಂವಿಧಾನದ 42ನೇ ತಿದ್ದುಪಡಿಯ ಮೂಲಕ ಶಿಕ್ಷಣವನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಗಿದೆ. ಇದರ ಅನ್ವಯ, ಶಿಕ್ಷಣದ ವಿಷಯದಲ್ಲಿ ರಾಜ್ಯ ಸರ್ಕಾರಗಳು ರಾಜ್ಯದ ಮಕ್ಕಳ ಹಿತಾಸಕ್ತಿಗೆ ಪೂರಕವಾದ ನೀತಿಗಳನ್ನು ಅನುಸರಿಸಲು ಸ್ವತಂತ್ರವಾಗಿವೆ. ಈ ಕಾರಣದಿಂದ ಭಾಷಾ ನೀತಿಯನ್ನು ರಾಜ್ಯ ವಿಷಯವೆಂದು ತಮಿಳುನಾಡು ಪರಿಗಣಿಸುತ್ತದೆ ಮತ್ತು ಭಾಷೆಯ ಮೇಲಿನ ಕೇಂದ್ರದ ನಿರ್ದೇಶನಗಳನ್ನು ತನ್ನ ಸಾಂವಿಧಾನಿಕ ಹಕ್ಕುಗಳ ಮೇಲಿನ ಅತಿಕ್ರಮಣ ಎಂದು ಭಾವಿಸುತ್ತದೆ. ಇದರ ಪರಿಣಾಮವಾಗಿ, ತಮಿಳುನಾಡು 1960ರ ದಶಕದಿಂದ ತನ್ನ ಶಾಲೆಗಳಲ್ಲಿ ದ್ವಿಭಾಷಾ ನೀತಿಯನ್ನು (ತಮಿಳು ಮತ್ತು ಇಂಗ್ಲಿಷ್) ಉಳಿಸಿಕೊಂಡಿದೆ.

ಕೊನೆಯದಾಗಿ, ಇದು ಬರೀ ತಮಿಳುನಾಡಿನ ಪ್ರಶ್ನೆ ಅಲ್ಲ. ಇತರ ರಾಜ್ಯಗಳು ಸಹ ಈ ವಿಷಯದಲ್ಲಿ ಕಳವಳ ವ್ಯಕ್ತಪಡಿಸಿವೆ. ಪಶ್ಚಿಮ ಬಂಗಾಳವು ಐತಿಹಾಸಿಕವಾಗಿ ಬಂಗಾಳಿ ಮತ್ತು ಇಂಗ್ಲಿಷ್‌ಗೆ ಒತ್ತು ನೀಡಿದೆ. ಕರ್ನಾಟಕವು ತ್ರಿಭಾಷಾ ಸೂತ್ರವನ್ನು ಜಾರಿಗೆ ತಂದಿದ್ದರೂ ಸಾಂದರ್ಭಿಕವಾಗಿ ಹಿಂದಿ ಹೇರಿಕೆಯ ಬಗ್ಗೆ ಪ್ರಬಲ ಪ್ರತಿರೋಧ ಒಡ್ಡುತ್ತಿದೆ. ಕೇರಳವು ಈ ಸೂತ್ರವನ್ನು ಜಾರಿಗೆ ತಂದಿದ್ದರೂ ಮಲಯಾಳಂ, ಇಂಗ್ಲಿಷ್ ಮತ್ತು ಹಿಂದಿ ನಡುವಿನ ಸಮತೋಲನದ ಬಗ್ಗೆ ಚರ್ಚಿಸುತ್ತಲೇ ಇದೆ. ಇನ್ನು ಈಶಾನ್ಯ ರಾಜ್ಯಗಳಾದ ಮಿಜೋರಾಂ, ನಾಗಾಲ್ಯಾಂಡ್ ಮತ್ತು ಮಣಿಪುರದಂತಹ ರಾಜ್ಯಗಳು ತಮ್ಮ ವಿಶಿಷ್ಟ ಭಾಷಾ ಸಂಪ್ರದಾಯಗಳನ್ನು ಕಡೆಗಣಿಸುತ್ತಿರುವ ಬಗ್ಗೆ ಪ್ರಾರಂಭದಿಂದಲೂ ಕಳವಳ ವ್ಯಕ್ತಪಡಿಸುತ್ತಲೇ ಇವೆ.

ಈ ಎಲ್ಲಾ ಕಾರಣಗಳಿಂದ, ಕೇಂದ್ರ ಸರ್ಕಾರ ತನ್ನ ಸಾಂಸ್ಕೃತಿಕ ರಾಷ್ಟ್ರೀಯತೆ ಮತ್ತು ರಾಜಕೀಯ ಕಾರ್ಯಸೂಚಿಯ ಭಾಗವಾಗಿ ಹಿಂದಿ ಮತ್ತು ಸಂಸ್ಕೃತ ಹೇರಿಕೆಯನ್ನು ಉತ್ತೇಜಿಸುವ ಕಾರ್ಯಸಾಧುವಲ್ಲದ ತ್ರಿಭಾಷಾ ಸೂತ್ರವನ್ನು ಕೈಬಿಟ್ಟು, ರಾಜ್ಯಗಳ ಸ್ವಾಯತ್ತತೆಯನ್ನು ಗೌರವಿಸಬೇಕಿದೆ. ಈ ಮೂಲಕ ದ್ವಿಭಾಷಾ ಅಥವಾ ಬಹುಭಾಷಾ ಸೂತ್ರದ ಮೂಲಕ ಭಾಷಾ ಹಕ್ಕುಗಳನ್ನು ವಿಕಸನಗೊಳಿಸುವ ಹೊಸ ಸೂತ್ರದತ್ತ ಯೋಚಿಸಬೇಕಿದೆ.

ಚುರುಮುರಿ



ನಾನೇ ಸಿಎಂ!

• ಬಿ.ಎನ್.ಮಲ್ಲೇಶ್

'ಅಲ್ಲ, ಮದುವೆ ಆದ ಕೂಡ್ಲೆ ಮಕ್ಕಳನ್ನ ಹೆರಿ ಅಂದ್ರೆ ಹೆಂಗೆ? ಮ್ಯಾಜಿಕ್ ಮಾಡಾಕಾಗುತ್ತಾ?' ಪೇಪರಲ್ಲಿ ತಮಿಳುನಾಡು ಡಿಸಿಎಂ ಕರೆ ಕೊಟ್ಟ ಸುದ್ದಿ ಓದಿ ಗುಡ್ಡೆ ಆಶ್ಚರ್ಯ ವ್ಯಕ್ತಪಡಿಸಿದ.

'ಇದು ಆರ್ಟಿಫಿಶಿಯಲ್ ಇಂಟೆಲಿಜನ್ಸ್ ಕಾಲ ಕಣ್ರಲೆ, ಕಾಯಾಕಾಗಲ್ಲ, ಎಲ್ಲ ಅರ್ಜೆಂಟಾಗಿ ಆಗ್ಬೇಕು' ದುಬ್ಬೀರ ನಕ್ಕ.

'ಕರೆಕ್ಟ್, ಎಲ್ಲ ಅರ್ಜೆಂಟೇ... ನಮ್ ಡಿಸಿಎಂ ಡಿ.ಕೆ. ಸಾಹೇಬ್ರು ಕಾಂಗ್ರೆಸ್ ಅಧ್ಯಕ್ಷರಾಗಿ ಮೇ ತಿಂಗಳಿಗೆ ಐದು ವರ್ಷಾಗ್ತದಂತೆ. ಆದ್ರೂ ಈಗ್ಲೇ ಎಲ್ಲರ್ನೂ ಕರೆದು ಪಾರ್ಟಿ ಕೊಟ್ರಂತೆ'.

'ಅಲ್ಲ, ಅವ್ರು ಮುಂದೆ ಸಿಎಂ ಆಗ್ತೀನಿ ಅಂತಾನೂ ಈಗ್ಲೇ ಯಾಕೆ ಒಂದು ಪಾರ್ಟಿ ಕೊಡ್ಬಾರ್ದು?' ಕೊಟ್ರೇಶಿ ಕೊಕ್ಕೆ.

'ಕೊಡಬೋದಿತ್ತೇನಪ, ಆದ್ರೆ ನಮ್ ಸಿದ್ರಾಮಣ್ಣ ಸಾಹೇಬ್ರು ಈಗ್ಲೂ ನಾನೇ ಸಿಎಂ, ಮುಂದೂ ನಾನೇ ಸಿಎಂ ಅಂದಿರೋದು ಎಲ್ಲೋ ಯಡವಟ್ಟಾದಂಗೆ ಕಾಣುಸ್ತತಿ'.

'ಸಿದ್ರಾಮಣ್ಣ ಮುಂದೂ ಸಿಎಂ ಆಗೋದು ನಿಜಾನಾ ಅಂತ ಆರ್ಟಿಫಿಶಿಯಲ್ ಇಂಟೆಲಿಜನ್ಸ್‌ಗೆ ಕೇಳಿದ್ರೆ ಹೆಂಗೆ?'

'ಲೇಯ್, ಆರ್ಟಿಫಿಶಿಯಲ್ ಇಂಟೆಲಿಜನ್ಸ್ ಅಂದ್ರೆ ಗಿಳಿಶಾಸ್ತ್ರ ಅನ್ಕಂಡ್ಯಾ? ಅಥ್ವ ವಿದೇಶದಿಂದ ಚಿನ್ನ ತಂದೋರ ಬಾಯಿ ಬಿಡ್ಸೋದೆಂಗೆ, ಯತ್ನಾಳ್, ರೇಣುಕಾಚಾರ್ಯ ಅಂಥೋರ ಬಾಯಿ ಮುಚ್ಸೋದು ಹೆಂಗೆ ಇದ್ನೆಲ್ಲ ಹೇಳುತ್ತೆ ಅನ್ಕಂಡ್ಯಾ?' ದುಬ್ಬೀರಂಗೆ ಸಿಟ್ಟು ಬಂತು.

'ಹೇಳಲ್ಲ ಅಂತೀಯ? ಹೋಗ್ಲಿ ಬಿಡಪ್ಪ, ಬೇರೆ ಏನ್ ಸುದ್ದಿ?'

'ಬೇರೇನಾ? 'ಕುಕ್ಕೆಕಕೈ' ಎಂದ ಗುಡ್ಡೆ.

'ಏನದು? ಕಾಗುಣಿತಾನ?'

'ಅಲ್ಲ, ಕುಕ್ಕೆ ಸುಬ್ರಹ್ಮಣ್ಯಕ್ಕೆ ಕತ್ರಿನಾ ಕೈಫ್ ಅಂತ'.

'ಓ... ಹಂಗಾದ್ರೆ ಅದೇ ಥರ ನಂದೂ ಒಂದು, ಮಾಮೋಮಯಾ'.

'ಏನು ಹಂಗಂದ್ರೆ?'

'ಮಾರಿಷಸ್‌ಗೆ ಮೋದಿ, ಮಣಿಪುರಕ್ಕೆ ಯಾವಾಗ ಅಂತ'.

'ನೀನು ಕರೆದಾಗ' ಎಂದಳು ಮಂಜಮ್ಮ. ಎಲ್ಲರೂ ಹೋ ಎಂದರು.

ಸಂಗತ

ಮನಸ್ಸು ಜಾಲಿ, ಹೊಟ್ಟೆ ಖಾಲಿ!

ವೆಚ್ಚ ಕಡಿತ, ಸ್ವಚ್ಛತೆಯ ದೃಷ್ಟಿಯಂತಹ ಕಾರಣಗಳಿಂದ ವಿಮಾನದಲ್ಲಿ ಊಟ, ತಿಂಡಿ ನೀಡಲಾಗದು ಎಂಬ ಸಮರ್ಥನೆಯು ಹಸಿದ ಹೊಟ್ಟೆಗೆ ನಾಟದು

• ಯೋಗಾನಂದ

ವಿಮಾನ ಪ್ರಯಾಣ ಎಂದರೇನೆ ಮನಸ್ಸಿನಲ್ಲಿ ಎಲ್ಲಿಲ್ಲದ ಪುಳಕ ಆವರಿಸುತ್ತದೆ. ವಿಮಾನವೇರುವ ಬಂಧು ಮಿತ್ರರನ್ನು ಬೀಳ್ಕೊಡುವುದು, ಇಳಿದು ಬರುವವರನ್ನು ಬರಮಾಡಿಕೊಳ್ಳುವುದು ಕೂಡ ಸಂಭ್ರಮವೇ. ಅಲ್ಲಿ ಮಿಶ್ರ ಭಾವನೆಗಳ ಮದುವೆ ಮನೆಯ ವಾತಾವರಣ. ವಿಮಾನದಲ್ಲಿ ಕಿಟಕಿ ಪಕ್ಕದ ಸೀಟಿನಲ್ಲಿ ಕೂತರಂತೂ ಬೆಟ್ಟ, ಗುಡ್ಡ, ನದಿ, ಹಸಿರು, ಸಮುದ್ರದ ಪಕ್ಷಿನೋಟ ಸವಿಯುವ ಖುಷಿಗೆ ಸಾಟಿಯಿಲ್ಲ. ರಸ್ತೆ, ರೈಲು ಮಾರ್ಗದಲ್ಲಿ ದಿನಗಟ್ಟಲೆಯ ದೂರವನ್ನು ವಿಮಾನವು ಕೆಲವೇ ತಾಸುಗಳಲ್ಲಿ ಕ್ರಮಿಸಬಲ್ಲದು. ದರ ಬಲು ದುಬಾರಿ, ಆದರೆ ಅನುಕೂಲ?

ಚಲನೆಯ ವೇಗ ಹೆಚ್ಚಿದಂತೆ ಕಾಲವು ಮೊಟಕಾಗುತ್ತದೆ ಎನ್ನುವುದು ಆಲ್ಬರ್ಟ್ ಐನ್‌ಸ್ಟೀನ್ ಸಿದ್ಧಾಂತ. ವಿವಿಧ ಕಾರಣಗಳಿಂದ ಒಂದೆಡೆಯಿಂದ ಇನ್ನೊಂದೆಡೆಗೆ ತಲುಪಬೇಕಾದ ಜರೂರಿನಲ್ಲಿ ಸಮಯವು ಹಣಕ್ಕಿಂತ ಅಮೂಲ್ಯವಾಗುತ್ತದೆ. ವಿಮಾನ ಹೊರಡುವ ಮೂರು ತಾಸು ಮೊದಲೇ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರು ಇರಬೇಕು ಎಂಬುದು ಸರಿಯೆ. ಬೆಂಗಳೂರಿನ ಯಾವುದೇ ಬಡಾವಣೆಯಿರಲಿ, ಮನೆಯಿಂದ ಹೊರಟು ವಿಮಾನ ನಿಲ್ದಾಣ ತಲುಪಲು ಕನಿಷ್ಠ ಒಂದೂವರೆ ತಾಸು ಬೇಕು. ಅಲ್ಲಂತೂ ಹೆಚ್ಚಿನವರು ಅಲ್ಪ ಉಪಾಹಾರವಿರಲಿ, ಕಾಫಿಯನ್ನೂ ಕೊಳ್ಳಲಾಗದು. ಆ ಮಟ್ಟಿಗೆ ಕೈಗೆಟುಕದ ಬೆಲೆ. ಮನೆಯಿಂದ ಎಷ್ಟೇ ಗಾತ್ರದ ಬುತ್ತಿ ತೆಗೆದುಕೊಂಡು ಹೋದರೂ ಬೇಗ ಕರಗಿರುತ್ತದೆ. ಮುಖ್ಯ ದ್ವಾರದಲ್ಲಲ್ಲದೆ ಒಳಗೆ ಅಲ್ಲಲ್ಲಿ ಅಗತ್ಯ ದಾಖಲೆಗಳನ್ನು ತೋರಿಸಬೇಕಾದದ್ದನ್ನು ಒಪ್ಪೋಣ. ಹಿರಿಯ ನಾಗರಿಕರಿಗೆ, ಅಂಗವಿಕಲರಿಗೆ ಗಾಲಿಕುರ್ಚಿಯ ಏರ್ಪಾಟಿರುತ್ತದೆ. ಭದ್ರತೆಯ ದೃಷ್ಟಿಯಿಂದ ನೀರು ಸೇರಿದಂತೆ ಯಾವ ಆಹಾರ ವಸ್ತುವನ್ನೂ ವಿಮಾನದಲ್ಲಿ ಒಯ್ಯುವಂತಿಲ್ಲ. ಬಾಟಲಿಯಲ್ಲಿ ಅರ್ಧ ಕಪ್ ನೀರು ಉಳಿದಿದ್ದರೂ ಅದನ್ನು ಸೇವಿಸಿ ಬರಿದಾಗಿಸಬೇಕು.

ಅಂತರ್ದೇಶಿ ಫ್ಲೈಟ್‌ಗಳಲ್ಲಿ ನೀರು ಬೇಕೆಂದರೆ ಕೊಡುತ್ತಾರೆ. ಆದರೆ ದೇಶಿ ಫ್ಲೈಟ್‌ಗಳಲ್ಲಿ ತಾತ್ಸಾರವೆ. ಹಣ ತೆತ್ತು ಅದೂ ಚಿಕ್ಕ ಬಾಟಲಿ ನೀರು ಖರೀದಿಸಬೇಕು ಇಲ್ಲವೆ ಯಾವಾಗ ವಿಮಾನ ಭೂಸ್ಪರ್ಶವಾಗುತ್ತದೆ ಎಂದು ಎದುರು ನೋಡಬೇಕು. ಕೋವಿಡ್- 19ಕ್ಕೆ ಮೊದಲು ಪರಿಸ್ಥಿತಿ ಹೀಗಿರಲಿಲ್ಲ. ಬೆಂಗಳೂರಿನಿಂದ ಹೊರಟು ಒಂದು ಅಥವಾ ಒಂದೂವರೆ ತಾಸಿನಲ್ಲಿ ಮುಟ್ಟಬಹುದಾದ ಚೆನ್ನೈ, ಹೈದರಾಬಾದ್, ತಿರುವನಂತಪುರದಂತಹ ವಿಮಾನಗಳಲ್ಲಿ ಕೂಡ ಲಘು ಉಪಾಹಾರ ನೀಡುತ್ತಿದ್ದರು. ಅಂತರದ ಅಂತರ್ದೇಶಿ ವಿಮಾನಗಳಲ್ಲಂತೂ ಪ್ರಯಾಣಿಕರಿಗೆ ಸಾಕೆನಿಸುವಷ್ಟು ಊಟ, ತಿಂಡಿ, ಕಾಫಿ, ಜ್ಯೂಸ್ ಉಪಚಾರ ಇರುತ್ತಿತ್ತು. ಆಗ ವಿಮಾನ ಪ್ರಯಾಣದ ಅನುಭವ ಹೇಳಿಕೊಳ್ಳುವುದೇ ಹೆಮ್ಮೆ ಎನಿಸುತ್ತಿತ್ತು. ಈಗ ಆ ವಿಮಾನಗಳಲ್ಲೂ ಒದಗಿಸುವ ಆಹಾರದ ಪ್ರಮಾಣವೂ ಕಡಿಮೆ, ಅದರ ಗುಣಮಟ್ಟವೂ ಸಾಲದು.

ಇಲ್ಲಿ ಹೇಳಲೇಬೇಕಾದ ಒಂದು ಸೂಕ್ಷ್ಮವಿದೆ. ಪ್ರಯಾಣಿಕರ ಸೀಟುಗಳ ನಡುವಿನ ಕಿರುದಾರಿಯಲ್ಲಿ ಕೈಗಾಡಿಯೊಂದು ಬರುತ್ತದೆ. ಅದು ಆಹಾರ, ಪಾನೀಯ ಮಾರಾಟದ್ದು. ದರ ಕೇಳುವಂತೆಯೇ ಇಲ್ಲ, ಐದಾರು ಪಟ್ಟಿಗೂ ಅಧಿಕ. ಸುಮಾರು 35,000 ಅಡಿ ಎತ್ತರದಲ್ಲಿ ಇನ್ನೇನು ಕೊಟ್ಟಾರು ಅಂತ ಕಾಸು ತುಸು ಹೆಚ್ಚಾದರೆ ಖರೀದಿಸಬಹುದು. ಆದರೆ ಡಾಲರ್‌ಗಳ ಲೆಕ್ಕದೊಂದಿಗೆ ಸ್ಪರ್ಧೆ ಸಾಧ್ಯವೇ? ಪ್ರಯಾಣಿಕರ ಹಸಿವು, ದಾಹವನ್ನು ಅಲ್ಲಿ ನಗದಾಗಿಸಿಕೊಳ್ಳುವ ವ್ಯಾಪಾರಿ ಮನೋಭಾವ ಕೂಡದು. ಪ್ರಯಾಣಿಕರ ಅಸಹಾಯಕತೆಯನ್ನು ಮನಗಾಣಬೇಕು.

ವಿಮಾನದಲ್ಲಿ ಅಡುಗೆ ಮನೆ ಇರದು. ವಿಮಾನ ನಿಲ್ದಾಣಕ್ಕೆ ಹತ್ತಿರವಿರುವ ಕೇಟರಿಂಗ್ ಕಂಪನಿಗಳು ದೊಡ್ಡ ಪ್ರಮಾಣದಲ್ಲಿ ನೀರಿನ ಬಾಟಲಿಗಳ ಸಮೇತ ತಿಂಡಿ, ತಿನಿಸು, ಊಟ ತಯಾರಿಸಿ ಕೊಡುತ್ತವೆ. ಅವು ವಿಮಾನದಲ್ಲಿ ದಾಸ್ತಾನಾಗುತ್ತವೆ.

ಭಾರತದ ಸಂದರ್ಭದಲ್ಲಿ ಸೊಗಸಾದ ಸುಭಾಷಿತವೊಂದಿದೆ: 'ಭೂಮಿಯಲ್ಲಿ ಜಲ, ಅನ್ನ, ಒಳ್ಳೆಯ ಮಾತು ಎಂಬ ಮೂರು ರತ್ನಗಳಿವೆ'. ನಮ್ಮ ದೇಶದೊಳಗಿನ ವಿಮಾನ ಪ್ರಯಾಣದಲ್ಲಾದರೂ ಇದು ಮಾರ್ದನಿಸಬೇಕಲ್ಲವೇ? ವೆಚ್ಚ ಕಡಿತ, ಸ್ವಚ್ಛತೆಯ ದೃಷ್ಟಿಯಂತಹ ಕಾರಣಗಳಿಗೆ ಊಟ, ತಿಂಡಿ ನೀಡಲಾಗುತ್ತಿಲ್ಲ ಎಂದು ವಿಮಾನಯಾನ ಸಂಸ್ಥೆಗಳು ವಾದಿಸಬಹುದು. ಆದರೆ ಹೊಟ್ಟೆ ತುಂಬಿರುವುದು ಸಂತೃಪ್ತಿಯ ಮೂಲರೂಪ. ಹಸಿದ ಹೊಟ್ಟೆಗೆ ಸಮರ್ಥನೆಗಳು ನಾಟವು, ಸರಿ-ತಪ್ಪು ಕಾಣದು.



ಮನುಷ್ಯರನ್ನು ಒಗ್ಗೂಡಿಸುವುದು ನೀರು, ಆಹಾರವೇ ತಾನೆ? ಅಸಮರ್ಪಕ ವ್ಯವಸ್ಥೆಯಿಂದ ವೃದ್ಧರು ಹಾಗೂ ಮಕ್ಕಳು ವಿಪರೀತ ಬಾಧೆಗೆ ಒಳಗಾಗುತ್ತಾರೆ. ರಕ್ತದೊತ್ತಡ ಮತ್ತು ಮಧುಮೇಹ ಬಾಧಿತರ ಪಾಡು ಹೇಳತೀರದು. ಪ್ರಯಾಣ ಒಂದು ತಾಸಿನೊಳಗೆ ಇದ್ದರೂ ಉಪಾಹಾರ ಅಗತ್ಯವಾಗುತ್ತದೆ. ಮೂರರಿಂದ ಐದು ತಾಸುಗಳಾದರೆ ಒಂದು ಉಪಾಹಾರ ಹಾಗೂ ಊಟ ಒದಗಿಸಿದರೆ ಪ್ರಯಾಣ ಕಳೆಗಟ್ಟುತ್ತದೆ. ನೀರನ್ನು ಉಚಿತವಾಗಿ ಕೊಡುವ ವ್ಯವಸ್ಥೆ ಇರಲೇಬೇಕು. ವಿಮಾನದಲ್ಲಿ ನೀರನ್ನು ವ್ಯರ್ಥ ಮಾಡುವ ಪ್ರಶ್ನೆಯೇ ಇರದು. ವಿಮಾನಯಾನ ಸಂಸ್ಥೆಯವರು ಒಂದೆರಡು ಸೀಟುಗಳನ್ನು ಕಡಿಮೆ ಮಾಡಿದರೂ ಆ ತೂಕದ ಬದಲಿಗೆ ಅಷ್ಟು ಆಹಾರ, ನೀರು ಶೇಖರಿಸಿ ಪ್ರಯಾಣಿಕರಿಗೆ ಧಾರಾಳವಾಗಿಯೇ ಉಪಚರಿಸಬಹುದಲ್ಲ. ಪ್ರಯಾಣಿಕರಿಗೆ ಹೀಗೆ ಮಾನವೀಯತೆಯಿಂದ ಆದ್ಯತೆ ನೀಡಿದರೆ ಸಿಬ್ಬಂದಿಯ ನಗೆಮುಖದ ಸ್ವಾಗತ ಮತ್ತು 'ನಿಮ್ಮ ಹಾರಾಟ ಉಲ್ಲಾಸಕರ ಆಗಿತ್ತೆಂದು ಭಾವಿಸುತ್ತೇವೆ' ಎಂಬ ವಿದಾಯವು ಮೌಲಿಕ ಎನಿಸುತ್ತದೆ.

ವಾಚಕರ ವಾಣಿ

ಬಣ್ಣಗಳ ಹಬ್ಬ, ಭಾವೈಕ್ಯದ ಹಬ್ಬ

ಹೋಳಿ ಹಬ್ಬ ಬಂದಿದೆ. 'ಬಣ್ಣ ಬಣ್ಣದ ಲೋಕ ಬಣ್ಣಿಸಲು ಸಾಲದು' ಎಂಬ ಹಾಡು ಹಲವು ಆಯಾಮಗಳನ್ನು ತೋರ್ಪಡಿಸುತ್ತದೆ. ಬಣ್ಣ ಹಳೆಯದನ್ನು ಕಳಚಿ ಹೊಸದನ್ನು ಬೆಸೆಯುವ ಬಂಧ. ಈ ಋತುವಿನಲ್ಲಿ ಗಿಡಗಳು ಬಣ್ಣ ಬಣ್ಣದ ಹೂವು, ಎಲೆಗಳೊಂದಿಗೆ ಸಂಭ್ರಮಿಸುತ್ತವೆ. ವಸಂತ ಮಾಸದಲ್ಲಿ ಎಲೆಗಳು ಚಿಗುರುವ ಸಮಯದಲ್ಲಿ ಬಣ್ಣವು ತನ್ನತನವನ್ನು ಬಣ್ಣಿಸುತ್ತದೆ. ಮುಖಕ್ಕೆ ಬಣ್ಣ ಹಚ್ಚುವವರು ಕೆಲವರು. ಆದರೆ ಇಂದು ನಾಲಿಗೆಗೆ ಬಣ್ಣ ಹಚ್ಚಿ ಮಾತನಾಡುವವರು ಬಹಳ ಮಂದಿ ಇದ್ದಾರೆ. ಎಲ್ಲಾ ಜನಾಂಗದವರನ್ನು ಒಳಗೊಂಡ ಭಾವೈಕ್ಯದ ಬಂಧವನ್ನು ಬಣ್ಣಗಳ ಹಬ್ಬ ನಿರೂಪಿಸುವಂತೆ ಆಗಲಿ. ರಾಸಾಯನಿಕ ಬಣ್ಣಗಳಿಂದ ದೂರ ಇರೋಣ. ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾದ ಜರೂರು ಇದೆ. ಯಾರ ಮನಸ್ಸನ್ನೂ ನೋಯಿಸದಂತೆ ಬಣ್ಣದ ಆಟ ಆಡೋಣ, ಖುಷಿ ಹಂಚೋಣ.

ರಾಜೇಂದ್ರ ಕುಮಾರ್ ಮುದ್ನಾಳ್, ಯಾದಗಿರಿ

ಈಜು ಕಲಿಕೆ ಕಡ್ಡಾಯವಾಗಲಿ

ಬೇಸಿಗೆ ದಿನಗಳಲ್ಲಿ ಕೆಲವು ಮಕ್ಕಳು ಕೃಷಿ ಹೊಂಡ ಅಥವಾ ಕೆರೆ, ಬಾವಿಗಳಲ್ಲಿ ಈಜಾಡಲು ಹೋಗಿ ಸಾವನ್ನಪ್ಪುತ್ತಾರೆ. ರಜೆಯ ದಿನಗಳನ್ನು ಖುಷಿಯಿಂದ ಕಳೆಯಲು ಪ್ರವಾಸ ಹೋದ ಸಂದರ್ಭಗಳಲ್ಲಿ ನದಿ, ಸಮುದ್ರದಲ್ಲಿ ಆಡಲು ಹೋಗಿ ಪ್ರಾಣ ಕಳೆದುಕೊಳ್ಳುವವರೂ ಇದ್ದಾರೆ. ಇದಕ್ಕೆಲ್ಲ ಪರಿಹಾರವೆಂದರೆ, ಪ್ರಾಥಮಿಕ ಹಂತದಿಂದಲೇ ಮಕ್ಕಳಿಗೆ ಈಜು ಕಲಿಸಬೇಕು. ಗ್ರಾಮೀಣ ಭಾಗದ ಕೆರೆ ಅಥವಾ ಬಾವಿಗಳಲ್ಲಿ ಗಂಡುಮಕ್ಕಳು ನಿರಾಯಾಸವಾಗಿ ಈಜು ಕಲಿಯುತ್ತಾರೆ. ಆದರೆ ಹೆಣ್ಣುಮಕ್ಕಳು ಸಂಕೋಚ ಮತ್ತು ಹೆದರಿಕೆಯಿಂದ ಈಜು ಕಲಿಯಲು ಹಿಂದೇಟು ಹಾಕುತ್ತಾರೆ. ನಗರ ಪ್ರದೇಶಗಳಲ್ಲಿ ಕೆಲವು ಪಾಲಕರು ದುಡ್ಡು ಕೊಟ್ಟು ಈಜು ಕಲಿಸಲು ಬಯಸುವುದಿಲ್ಲ. ಹಾಗಾಗಿ, ಪ್ರಾಥಮಿಕ ಹಂತದಿಂದಲೇ ಮಕ್ಕಳಿಗೆ ಈಜು ಕಲಿಯುವಿಕೆಯನ್ನು ಕಡ್ಡಾಯಗೊಳಿಸುವುದು ಒಳ್ಳೆಯದು.

ಸುರೇಶ ಅರಳಿಮರ, ಬಾದಾಮಿ

ಅಂತ್ಯಸಂಸ್ಕಾರದ ಹಕ್ಕು: ವ್ಯಾಪಕ ಚರ್ಚೆ ಅಗತ್ಯ

ಹೆಣ್ಣುಮಕ್ಕಳಿಗೂ ಅಂತ್ಯಸಂಸ್ಕಾರದ ಹಕ್ಕು ಸಿಗಬೇಕೆಂದು ಪ್ರೀತಿ ಟಿ.ಎಸ್. ತಮ್ಮ ಲೇಖನದಲ್ಲಿ (ಸಂಗತ, ಮಾರ್ಚ್ 8) ಪ್ರತಿಪಾದಿಸಿದ್ದಾರೆ. ಪಿತೃಪಕ್ಷದ ಕರ್ತವ್ಯಗಳನ್ನು ಗಂಡುಮಕ್ಕಳೇ ನಿರ್ವಹಿಸಬೇಕು ಎಂಬ ಹಳೆಯ ಸಂಪ್ರದಾಯ ಬದಲಾಗಿ, ಹೆಣ್ಣುಮಕ್ಕಳೂ ಅಂತ್ಯಸಂಸ್ಕಾರ ಮಾಡುವ ಹಕ್ಕು ಹೊಂದಬೇಕು ಎಂಬ ಚರ್ಚೆ ಈಚಿನ ದಿನಗಳಲ್ಲಿ ಮುನ್ನೆಲೆಗೆ ಬಂದಿದೆ. ನಿರೂಪಕಿ ದಿವ್ಯಾ ಆಲೂರು ಕೆಲ ತಿಂಗಳ ಹಿಂದೆ ತಮ್ಮ ತಂದೆಯ ಅಂತ್ಯಸಂಸ್ಕಾರವನ್ನು ಸ್ವತಃ ನೆರವೇರಿಸಿದ್ದು ಸುದ್ದಿಯಾಗಿತ್ತು. ಹೀಗೆ ಕೆಲವು ಕುಟುಂಬಗಳಲ್ಲಿ ಹೆಣ್ಣುಮಕ್ಕಳೂ ಅಂತ್ಯಸಂಸ್ಕಾರ ನಡೆಸುತ್ತಿರುವುದು ಬೆಳಕಿಗೆ ಬರುತ್ತಿದೆ.

ಈ ವಿಚಾರದಲ್ಲಿ ಸಮಾಜದ ದೃಷ್ಟಿಕೋನ ನಿಧಾನವಾಗಿ ಬದಲಾಗುತ್ತಿದೆ. ಆದರೆ ಈ ಚರ್ಚೆ ಇನ್ನೂ ವ್ಯಾಪಕವಾಗಬೇಕಾಗಿದೆ. ಸಮಾಜದ ಬದಲಾವಣೆಗೂ ಧಾರ್ಮಿಕ ನಂಬಿಕೆಗಳಿಗೂ ನಡುವೆ ಸಮತೋಲನವನ್ನು ಹೇಗೆ ಸಾಧಿಸಬಹುದು ಎಂಬ ಪ್ರಶ್ನೆ ಇಂದಿಗೂ ಸದ್ಭಾವನೆಯ ಚರ್ಚೆಗೆ ಅವಕಾಶ ಮಾಡಿಕೊಡುತ್ತಿದೆ. ಅಂತ್ಯಸಂಸ್ಕಾರದ ಹಕ್ಕಿನ ಕುರಿತು ಸ್ಪಷ್ಟ ಮಾರ್ಗಸೂಚಿಗಳನ್ನು ತರುವ ದಿಸೆಯಲ್ಲಿ ಧಾರ್ಮಿಕ ಮುಖಂಡರು, ಕಾನೂನು ತಜ್ಞರು ಮತ್ತು ಸಮಾಜಶಾಸ್ತ್ರಜ್ಞರು ನಿರ್ಧಾರ ಕೈಗೊಳ್ಳಬೇಕಿದೆ. ಇದು ಒಂದು ಚರ್ಚೆ ಮಾತ್ರವಲ್ಲ, ಹೆಣ್ಣುಮಕ್ಕಳಿಗೂ ಸಮಾನ ಹಕ್ಕು ನೀಡುವ ಹೋರಾಟದ ಪ್ರಮುಖ ಹಂತವೂ ಹೌದು.

ಎಂ.ವಿ.ಶಿವಯೋಗಿ, ರಾಂಪುರ

ಹಿರಿಯ ನಾಗರಿಕರ ಪರ ಕಾಯ್ದೆ: ಬೇಕು ಪ್ರಚಾರ

ತಂದೆ– ತಾಯಿಯನ್ನು ವೃದ್ಧಾಪ್ಯದಲ್ಲಿ ಆರೈಕೆ ಮಾಡುವುದು ತಮ್ಮ ಕರ್ತವ್ಯ ಎಂಬುದನ್ನು ಎಷ್ಟೋ ಮಕ್ಕಳು ಮರೆತುಬಿಟ್ಟಿದ್ದಾರೇನೋ ಅನ್ನಿಸುತ್ತದೆ. ಹೆತ್ತವರನ್ನು ದೊಡ್ಡ ದೊಡ್ಡ ನಗರಗಳಲ್ಲಿ ವೃದ್ಧಾಶ್ರಮಗಳಿಗೆ ಸೇರಿಸುವುದನ್ನು ಕಾಣುತ್ತೇವೆ. ಅಷ್ಟೇ ಅಲ್ಲದೆ ತಂದೆ-ತಾಯಿ ಗಳಿಸಿದ ಆಸ್ತಿಯನ್ನು ಮಕ್ಕಳು ಮತ್ತು ಸಂಬಂಧಿಕರು ತಮ್ಮ ಹೆಸರಿಗೆ ವಿಲ್ ಮಾಡಿಸಿಕೊಂಡು, ನಂತರ ಅವರನ್ನು ನಿರ್ಲಕ್ಷಿಸುವ ನಿದರ್ಶನಗಳನ್ನೂ ಕಾಣುತ್ತೇವೆ. ಇಂಥ ವ್ಯವಸ್ಥೆಯನ್ನು ತಡೆಯಲು ಕೇಂದ್ರ ಸರ್ಕಾರವು ಪೋಷಕರು ಮತ್ತು ಹಿರಿಯ ನಾಗರಿಕರ ನಿರ್ವಹಣೆ ಹಾಗೂ ಕಲ್ಯಾಣ ಕಾಯ್ದೆ ಜಾರಿಗೆ ತಂದಿರುವುದನ್ನು ರಾಜ್ಯ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ವಿಧಾನ ಪರಿಷತ್ತಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರ ನೀಡುವ ಸಂದರ್ಭದಲ್ಲಿ ಪ್ರಸ್ತಾಪಿಸಿದ್ದಾರೆ.

ತಂದೆ– ತಾಯಿಯಿಂದ ಆಸ್ತಿ ಪಡೆದು ಅವರ ಆರೈಕೆ ಮಾಡದಿದ್ದರೆ ಅವರಿಂದ ಬರೆಸಿಕೊಂಡ ವಿಲ್ ಅಥವಾ ದಾನಪತ್ರವನ್ನು ರದ್ದುಗೊಳಿಸಿ ಮತ್ತೆ ಹಿರಿಯ ನಾಗರಿಕರ ಹೆಸರಿಗೇ ವರ್ಗಾಯಿಸಲು ಕಾನೂನಿನಲ್ಲಿ ಅವಕಾಶ ಇದೆ. ಆದರೆ ಇಂತಹ ಅದ್ಭುತವಾದ ಕಾಯ್ದೆಯ ಬಗ್ಗೆ ಹೆಚ್ಚಿನವರಿಗೆ ಸರಿಯಾದ ಮಾಹಿತಿ ಇಲ್ಲ. ಸರ್ಕಾರ ಜಾಹೀರಾತುಗಳ ಮೂಲಕ ಈ ಕಾಯ್ದೆಯ ಬಗ್ಗೆ ಹೆಚ್ಚೆಚ್ಚು ಪ್ರಚಾರ ಮಾಡಿ, ಹಿರಿಯ ನಾಗರಿಕರಿಗೆ ಶಕ್ತಿ ತುಂಬುವ ಕೆಲಸವನ್ನು ಮಾಡಬೇಕು. ಇದರಿಂದ ಎಷ್ಟೋ ಮಕ್ಕಳು ಹೆತ್ತವರನ್ನು ನಿರ್ಲಕ್ಷಿಸುವುದನ್ನು ತಪ್ಪಿಸಬಹುದು ಅಥವಾ ಅವರನ್ನು ಶೋಷಣೆಗೆ ಒಳಪಡಿಸುವುದನ್ನು ತಡೆಗಟ್ಟಬಹುದು.

ಭೀಮಾಶಂಕರ ದಾದೆಲಿ ಹಳಿಸಗರ, ಶಹಾಪುರ

ವಿಶೇಷ ಸವಲತ್ತು ಅನಗತ್ಯ

ಚಿತ್ರನಟಿ ರನ್ಯಾ ರಾವ್ ಭಾಗಿಯಾಗಿರುವ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ, ಅವರ ಮಲತಂದೆ, ಹಿರಿಯ ಪೊಲೀಸ್ ಅಧಿಕಾರಿ ರಾಮಚಂದ್ರ ರಾವ್ ಅವರಿಗೆ ಒದಗಿಸಿರುವ ಶಿಷ್ಟಾಚಾರ ನಿಯಮದಡಿಯ ಸೌಲಭ್ಯವನ್ನು ನಟಿ ದುರುಪಯೋಗ ಮಾಡಿಕೊಳ್ಳುತ್ತಿದ್ದುದಾಗಿ ವರದಿಯಾಗಿದೆ. ವಿಮಾನ ನಿಲ್ದಾಣದಲ್ಲಿ ಇತರ ಪ್ರಯಾಣಿಕರಿಗೆ ಇರುವಷ್ಟು ಬಿಗಿಯಾದ ನಿರ್ಬಂಧಗಳು ರಾಜಕಾರಣಿಗಳು, ಐಎಎಸ್, ಐಪಿಎಸ್ ಅಧಿಕಾರಿಗಳಿಗೆ ಇರುವುದಿಲ್ಲ. ಜೊತೆಗೆ ಒಳಹೋಗಲು ಮತ್ತು ಹೊರಬರಲು ಪ್ರತ್ಯೇಕ ದ್ವಾರಗಳಿರುತ್ತವೆ. ಈ ವರ್ಗಕ್ಕೆ ಸೇರಿದವರು ಅತಿಮಾನುಷರೂ ಅತೀತರೂ ಅಲ್ಲ. ಅವರ ಹುದ್ದೆಗೆ ಗೌರವ ನೀಡಬೇಕು, ಆದರೆ ಅವರಿಗೂ ಸಾಮಾನ್ಯರಿಗೆ ಮಾಡುವಂತೆಯೇ ತಪಾಸಣೆಯನ್ನು ಮಾಡಬೇಕು. ಅಗತ್ಯವೆನಿಸಿದರೆ ಅವರಿಗೆ ಆದ್ಯತೆ ನೀಡಲಿ. ಇಂತಹ ಸೌಲಭ್ಯಗಳು ಕಳ್ಳಸಾಗಣೆ ಮಾಡಲು ಅಥವಾ ಮಾಡಿಸಲು ಪ್ರೇರೇಪಿಸಬಹುದು. ಎಲ್ಲರಿಗೂ ಕಾನೂನು ಒಂದೇ ಎಂದಿರುವಾಗ ಇಂತಹ ವಿಶೇಷ ಸವಲತ್ತುಗಳು ಏಕೆ?

ಪತ್ತಂಗಿ ಎಸ್. ಮುರಳಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಾಕಿ: ವಿಶ್ವಕಪ್ ಬರ ನೀಗಿಸುವ ಭರವಸೆ ಬಾಕಿ

1975ರ ವಿಶ್ವಕಪ್ ಗೆಲುವಿಗೆ ಸುವರ್ಣ ಸಂಭ್ರಮ

ಭಾರತ ಹಾಕಿ ತಂಡದ ವಿಶ್ವಕಪ್ ಜಯಕ್ಕೆ ಈಗ ಚಿನ್ನದ ಮೆರುಗು. ಮಲೇಷ್ಯಾದಲ್ಲಿ 1975ರ ಮಾರ್ಚ್ 15ರಂದು ನಡೆದಿದ್ದ ಫೈನಲ್‌ನಲ್ಲಿ ಅಜಿತ್ ಪಾಲ್ ಸಿಂಗ್ ನಾಯಕತ್ವದ ಭಾರತ ತಂಡವು ಪಾಕಿಸ್ತಾನದ ಎದುರು ಜಯಿಸಿತು. ಈ ಐತಿಹಾಸಿಕ ಗೆಲುವಿಗೆ ಈಗ 50 ವರ್ಷ. ಸುವರ್ಣ ಸಂಭ್ರಮದ ಹೊಸ್ತಿಲಿನಲ್ಲಿ ಅಂದಿನ ಸಾಧನೆಯ ಮೆಲುಕು ಇಲ್ಲಿದೆ

• ಅಶೋಕ್ ಕುಮಾರ್ ಧ್ಯಾನ್‌ಚಂದ್

50 ವರ್ಷಗಳು ಕಳೆದುಹೋದವು. ರೇಡಿಯೊ ವೀಕ್ಷಕ ವಿವರಣೆಯಲ್ಲಿ ಹೊರಹೊಮ್ಮಿದ ಆ ಸಾಲು ಈಗಲೂ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತದೆ. ಎದೆಯಲ್ಲಿ ಸಂಭ್ರಮ, ಹೆಮ್ಮೆಯ ಅಲೆಗಳನ್ನು ಎಬ್ಬಿಸುತ್ತದೆ. 'ಇಸ್ ತರಹ್ ಭಾರತ್ ನೇ ಪಾಕಿಸ್ತಾನ್ ಕೊ ಏಕ್ ಗೋಲ್ ಸೆ ಹರಾ ಕರ್ ವರ್ಲ್ಡ್‌ಕಪ್ ಜೀತ್ ಲಿಯಾ... ' ಎಂದು ಜಸ್‌ದೇವ್ ಸಿಂಗ್ ಅವರು ಮಾಡಿದ್ದ ಉದ್ಘೋಷ ಕೋಟಿ ಕೋಟಿ ಭಾರತೀಯರನ್ನು ರೋಮಾಂಚನಗೊಳಿಸಿತ್ತು.

ನಾನಷ್ಟೇ ಅಲ್ಲ; ಹಾಕಿ ಕ್ರೀಡೆಯ ಚಿನ್ನದ ದಿನಗಳನ್ನು ಬಾನುಲಿಯ ವೀಕ್ಷಕ ವಿವರಣೆ ಮೂಲಕ ಎದೆ ತುಂಬಿಕೊಂಡವರು ಇವತ್ತಿಗೂ ಇದ್ದಾರೆ. ನಮ್ಮನ್ನು (ಅಂದು ಆ ತಂಡದಲ್ಲಿ ಆಡಿದ ಆಟಗಾರರು) ಹುಡುಕಿಕೊಂಡು ಬಂದು ಅಭಿನಂದಿಸುತ್ತಾರೆ. ಕಾಣಿಕೆಗಳನ್ನು ಕೊಟ್ಟು ಸ್ನೇಹ ಬೆಳೆಸುತ್ತಾರೆ. ಒಂದೆರಡು ಘಟನೆಗಳನ್ನು ಮೊದಲು ಇಲ್ಲಿ ಹಂಚಿಕೊಳ್ಳುವೆ.

ಕೆಲವು ವರ್ಷಗಳ ಹಿಂದೆ ಮೈಸೂರು ದಸರಾ ಕ್ರೀಡಾಕೂಟಕ್ಕೆ ನನ್ನನ್ನು ಅತಿಥಿಯಾಗಿ ಆಹ್ವಾನಿಸಿದ್ದರು. ಜಿಮ್ನಾಸ್ಟ್ ದೀಪಾ ಕರ್ಮಾಕರ್ ಕೂಡ ಇದ್ದರು. ನನ್ನನ್ನು ನೋಡಲು ಬಹಳಷ್ಟು ಜನ ಸೇರಿದ್ದರು. ಅವರಲ್ಲಿ ಬಹುತೇಕರು ಬಂದು 1975ರ ವಿಶ್ವಕಪ್ ವಿಜಯದ ಕುರಿತು ಅಭಿನಂದಿಸಿದ್ದರು. ಈಗಲೂ ಮೈಸೂರಿನ ಹಲವರು ಕರೆ ಮಾಡುತ್ತಾರೆ. ಪ್ರೀತಿ ತೋರಿಸುತ್ತಾರೆ.

ಜೈಪುರದ ರಘುನಂದನ್ ಸಿಂಗ್ ನಿವೃತ್ತ ಅಧಿಕಾರಿ. ಝೂನ್ಸಿಯಲ್ಲಿರುವ (ಮಧ್ಯಪ್ರದೇಶ) ನಮ್ಮ ಮನೆಗೆ ಒಂದು ಸಲ ಬಂದು ಪರಿಚಯಿಸಿಕೊಂಡರು. ನನ್ನ ಕೈಗೆ ₹1 ಲಕ್ಷ ನೀಡಿದರು. ಈ ಹಣ ಏಕೆ ಎಂದು ಕೇಳಿದೆ. ಅದಕ್ಕವರು, 'ನಿಮ್ಮ ತಂಡವು ವಿಶ್ವಕಪ್ ಗೆದ್ದಾಗ ನಾನು 14 ವರ್ಷದ ಹುಡುಗ. ಆ ದಿನ ತಾವು ಹೊಡೆದ ನಿರ್ಣಾಯಕ ಗೋಲು ನನ್ನ ಮನಗೆದ್ದಿತ್ತು. ಆಗ ನಿಮಗೆ ₹1 ಲಕ್ಷ ನೀಡಬೇಕು ಅನ್ಕೊಂಡಿದ್ದೆ. ಈಗ ಅದು ಸಾಧ್ಯವಾಯಿತು' ಎಂದರು. ಅಷ್ಟೇ ಅಲ್ಲ; ಈಗ ಆ ವಿಜಯಕ್ಕೆ 50 ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ನಾನು ಮತ್ತು ಉಳಿದಿರುವ ಎಲ್ಲ ಆಟಗಾರರನ್ನೂ ತಮ್ಮೂರಿಗೆ ಕರೆಸಿ ಸನ್ಮಾನ ಮಾಡುವ ಕಾರ್ಯಕ್ರಮ ಯೋಜಿಸಿದ್ದಾರೆ.

ಇದು ನನ್ನನ್ನು ಬಹಳ ರೋಮಾಂಚನಗೊಳಿಸುತ್ತದೆ. ಟಿ.ವಿ. ಮಾಧ್ಯಮಗಳಿರದ ಆ ಕಾಲದಲ್ಲಿ ನಾವು ಮಾಡಿದ ಸಾಧನೆಯನ್ನು ಜನ ಈಗಲೂ ನೆನಪಿಸಿಕೊಳ್ಳುವುದು, ಹಾಕಿ ಕ್ರೀಡೆ ಮತ್ತು ಭಾರತೀಯರ ನಡುವಿನ ಭಾವನಾತ್ಮಕ ಸಂಬಂಧದ ದ್ಯೋತಕ. ಈಗಲೂ ಆ ಟೂರ್ನಿಯನ್ನು ನೆನಪಿಸಿಕೊಂಡರೆ ನನ್ನ ಸ್ನೇಹಿತರ ಸಾಧನೆಗಳು ಕಣ್ಮುಂದೆ ಸಾಲುಗಟ್ಟುತ್ತವೆ; ಮನತುಂಬಿ ಬರುತ್ತದೆ. ಎಲ್ಲ ಪಂದ್ಯಗಳನ್ನು ವಿವರಿಸಲಾಗದು. ಆದರೆ, ಸೆಮಿಫೈನಲ್ ಮತ್ತು ಫೈನಲ್‌ಗಳು ದಂತಕಥೆಗಳಾಗಿವೆ. ಅದನ್ನೇ ಹೇಳುವೆ.

ಭಾರತಕ್ಕೆ ವಿಶ್ವ ಹಾಕಿ ಕಪ್
ಪಾಕ್ ವಿರುದ್ಧ 2-1 ಗೋಲಿನ ರೋಮಾಂಚಕ ವಿಜಯ
ಭಾರತ ಹಾಕಿ ಕ್ಯಾಪ್ಟನ್ ಅಜಿತ್‌ಪಾಲ್ ಸಿಂಗ್

1975ರಲ್ಲಿ ಭಾರತ ತಂಡವು ಹಾಕಿ ವಿಶ್ವಕಪ್ ಜಯಿಸಿದ ಸಂದರ್ಭದಲ್ಲಿ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿ

1975ರ ವಿಶ್ವಕಪ್ ಗೆದ್ದ ತಂಡದೊಂದಿಗೆ ಆಗಿನ ಪ್ರಧಾನಿ ಇಂದಿರಾ ಗಾಂಧಿ
ಚಿತ್ರ ಕೃಪೆ: ಹಾಕಿ ಇಂಡಿಯಾ

ಮರ್ಡೆಕಾ ಕ್ರೀಡಾಂಗಣದಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಆತಿಥೇಯ ಮಲೇಷ್ಯಾದ ಎದುರು ಛಲದಿಂದ ಆಡಿ ಜಯಿಸಿದ್ದೆವು. 50 ಸಾವಿರ ಜನ ಸೇರಿದ್ದರು. ನಾವು 3-2ರಿಂದ ಗೆದ್ದೆವು. ಶಿವಾಜಿ ಪವಾರ್, ಅಸ್ಲಂ ಖಾನ್ ಮತ್ತು ಹರಚರಣ್ ಸಿಂಗ್ ಗೋಲುಗಳು ಗೆಲುವು ತಂದುಕೊಟ್ಟಿದ್ದವು. ಮಲೇಷ್ಯಾ 2 ಗೋಲು ಗಳಿಸಿತ್ತು.

ಫೈನಲ್‌ಗೂ ಮುಂಚೆ ನಾವು ದೇವಸ್ಥಾನ, ಗುರುದ್ವಾರ, ಮಸೀದಿ ಮತ್ತು ಚರ್ಚ್‌ಗಳಿಗೆ ಹೋಗಿ ಪ್ರಾರ್ಥನೆ ಸಲ್ಲಿಸಿದೆವು. ಫೈನಲ್ ಪಂದ್ಯ ಶನಿವಾರ (ಮಾರ್ಚ್ 15, 1975) ಇತ್ತು. ನಾನು ಕೋಣೆಯಿಂದ ಹೊರಡುವ ಮುಂಚೆ ನನ್ನಲ್ಲಿದ್ದ ಸಾಸಿವೆ ಎಣ್ಣೆಯ ಎರಡು ಹನಿ ನೆಲದ ಮೇಲೆ ಹಾಕಿ ಶನಿದೇವರಿಗೆ ಪ್ರಾರ್ಥಿಸಿದೆ. ಎಲ್ಲರೂ ಪ್ರಾರ್ಥಿಸಿ ಪಾಕಿಸ್ತಾನದ ಎದುರು ಕಣಕ್ಕಿಳಿದೆವು. ವೆಸ್ಟ್ ಜರ್ಮನಿಯನ್ನು ಸೆಮಿಫೈನಲ್‌ನಲ್ಲಿ ಹಣಿದಿದ್ದ ಇಸ್ಲಾಹುದ್ದೀನ್ ನಾಯಕತ್ವದ ಪಾಕ್ ತಂಡವು ಆರಂಭದಿಂದಲೇ ಜೋರಾಗಿ ಆಡತೊಡಗಿತು. 17ನೇ ನಿಮಿಷದಲ್ಲಿಯೇ ಗೋಲು ಹೊಡೆದ ಝಹೀದ್ ಶೇಖ್ ಪಾಕಿಸ್ತಾನಕ್ಕೆ ಮುನ್ನಡೆ ಒದಗಿಸಿದರು. ಮೊದಲ ಅರ್ಧ ಅವಧಿ ಮುಗಿದರೂ ಅವರು ಮುನ್ನಡೆಯಲ್ಲಿದ್ದರು.

44ನೇ ನಿಮಿಷದಲ್ಲಿ ಸುರ್ಜಿತ್, ಪಾಕ್ ರಕ್ಷಣಾ ಗೋಡೆಯನ್ನು ಮುರಿದು ನುಗ್ಗಿದರು. ಪುಟ್ಟ ಪುಟ್ಟ ಪಾಸ್‌ಗಳ ಮೂಲಕ ತಮ್ಮ ಬಳಿ ಬಂದ ಚೆಂಡನ್ನು ಚೆಂದದ ರೀತಿಯಲ್ಲಿ ಗೋಲುಪೆಟ್ಟಿಗೆಗೆ ಸೇರಿಸಿದರು. ಸಂಭ್ರಮ ಪುಟಿದೆದ್ದಿತ್ತು. 1-1ರ ಸಮಬಲ ವಿಶ್ವಾಸ ಮೂಡಿಸಿತ್ತು. ನಂತರದ ಆಟ ರೋಚಕವಾಗಿತ್ತು. 51ನೇ ನಿಮಿಷದಲ್ಲಿ ಲಾಂಗ್ ಕಾರ್ನರ್‌ನಲ್ಲಿದ್ದ ಅಜಿತ್ ಪಾಲ್ ಚೆಂಡನ್ನು ತಡೆದು ನನಗೆ ಪಾಸ್ ನೀಡಿದರು. ನಾನು ರೈಟ್‌ನಲ್ಲಿದ್ದೆ. ಡಾಡ್ಜ್ ಮಾಡುತ್ತಾ ಸರ್ಕಲ್ ಪ್ರವೇಶಿಸಿದೆ. ಫಿಲಿಪ್ ಅವರಿಗೆ ಪಾಸ್ ಮಾಡಿದೆ. ಅವರು ಚುಟುಕು ಪಾಸ್ ಮೂಲಕ ಚೆಂಡನ್ನು ಮುನ್ನುಗ್ಗಿಸಿದರು. ಗೋಲು ಪೆಟ್ಟಿಗೆಯ ಮೂರ್ನಾಲ್ಕು ಗಜಗಳ ದೂರದಲ್ಲಿದ್ದ ನನಗೆ ಫಿಲಿಪ್ ಮರಳಿ ಪಾಸ್ ಮಾಡಿದರು. ಫ್ಲಿಕ್ ಮಾಡಿದೆ. ವೇಗವಾಗಿ ಸಾಗಿದ ಚೆಂಡು ಗೋಲುಪೆಟ್ಟಿಗೆಯನ್ನು ಪ್ರವೇಶಿಸಿತು. ಆದರೆ ಹಿಂದಿನ ಗೋಡೆಯ ತಳಕ್ಕೆ ಅಪ್ಪಳಿಸುವ ಬದಲು, ಟ್ರಯಾಂಗಲ್‌ಗೆ ಬಡಿದು ಮರಳಿತು. ಮಲೇಷ್ಯಾದ ಅಂಪೈರ್ ವಿಜಯನಾಥನ್ ಕೂಡಲೇ ತೀರ್ಪು ನೀಡಲಿಲ್ಲ. ಮೂರ್ನಾಲ್ಕು ಸೆಕೆಂಡುಗಳವರೆಗೆ ಯೋಚನೆ ಮಾಡಿ ಗೋಲು ಎಂದು ಘೋಷಿಸಿದರು. ಇದರಿಂದ ಕುಪಿತಗೊಂಡ ಪಾಕ್ ಆಟಗಾರರು ಪ್ರತಿಭಟಿಸಿದರು. ನಂತರದ 16 ನಿಮಿಷಗಳಲ್ಲಿ ಆಟ ಮುಗಿಯುವವರೆಗೂ ಅವರು ಬಿರುಸಿನ ಆಟಕ್ಕೆ ಇಳಿದರು. ನನ್ನ ಒಂದು ಕಣ್ಣು ಮಾತ್ರ ಬೌಂಡರಿ ಲೈನ್ ಹೊರಗೆ ಇದ್ದ ದೊಡ್ಡ ಗಡಿಯಾರದ ಮೇಲೆಯೇ ಇತ್ತು. ಒಂದೊಂದು ಕ್ಷಣವೂ ಯುಗದಂತೆ ಭಾಸವಾಗಿತ್ತು. ಪಂದ್ಯ ಮುಕ್ತಾಯದ ವಿಷಲ್ ಸದ್ದು ಕೇಳಿದಾಗ ಭಾರತ 2-1ರಿಂದ ಗೆದ್ದಿತ್ತು. ಇಡೀ ದೇಶ ಸಂಭ್ರಮಿಸಿತ್ತು.

ಐದು ದಶಕಗಳಲ್ಲಿ ದೇಶ ಬಹಳಷ್ಟು ಬದಲಾಗಿದೆ. ಕ್ರಿಕೆಟ್ ಜನಪ್ರಿಯ ಆಟವಾಗಿದೆ. ದೇಶಕ್ಕೆ ಆ ಕ್ರೀಡೆಯೂ ಬಹಳಷ್ಟು ಗೌರವ ತಂದುಕೊಟ್ಟಿದೆ. ಹಾಕಿ ಕ್ರೀಡೆಯೂ ಬದಲಾಗಿದೆ. ನಾವು ಆಡುತ್ತಿದ್ದ ನೈಜ ನೆಲದ ಹಾಕಿ ಈಗಿಲ್ಲ. ಕೃತಕ ಹುಲ್ಲುಹಾಸಿನ ಮೇಲೆ ಹಾಕಿ ನಡೆಯುತ್ತಿದೆ. ನೈಜ ಕೌಶಲಗಳೆಂಬ ಆತ್ಮವೇ ಇಲ್ಲ. ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಗಳಿಸುವುದೇ ಮುಖ್ಯ. ಗೋಲ್ ಕೀಪರ್ ಮೇಲೆ ಅವಲಂಬನೆ ಹೆಚ್ಚು; ಕಾಲಾಯ ತಸ್ಮೈ ನಮಃ. ಒಂದು ಸಮಾಧಾನವೆಂದರೆ, ನಮ್ಮ ದೇಶದ ತಂಡವು ಕಳೆದ ಎರಡು ಒಲಿಂಪಿಕ್ಸ್‌ಗಳಲ್ಲಿ ಕಂಚಿನ ಪದಕ ಜಯಿಸಿದೆ. ಈಗಿರುವ ಆಟಗಾರರು ಪ್ರತಿಭಾವಂತರಾಗಿದ್ದಾರೆ. ಆಧುನಿಕತೆ ಮೈಗೂಡಿಸಿಕೊಂಡಿದ್ದಾರೆ. 50 ವರ್ಷಗಳಿಂದ ಕಾಡುತ್ತಿರುವ ವಿಶ್ವಕಪ್ ಬರವನ್ನು ನಿವಾರಿಸುವ ಭರವಸೆ ಮೂಡಿಸಿದ್ದಾರೆ. ಈ ಸುವರ್ಣ ಕಾಲದಲ್ಲಿ ಮತ್ತೊಂದು ವಿಶ್ವಕಪ್ ಗೆಲುವು ನಮ್ಮದಾಗಲಿ ಎಂದು ಹಾರೈಸುವೆ.

ನಿರೂಪಣೆ: ಗಿರೀಶ ದೊಡ್ಡಮನಿ

ತಂದೆಯ ಧ್ಯಾನ...

ಅಶೋಕ್ ಕುಮಾರ್

ಅಶೋಕ್ ಕುಮಾರ್ ಅವರು ಹಾಕಿ ಮಾಂತ್ರಿಕ ಮೇಜರ್ ಧ್ಯಾನಚಂದ್ ಅವರ ಮಗ. ಅಪ್ಪನ ಪ್ರೇರಣೆಯಿಂದಲೇ ಹಾಕಿಪಟುವಾದವರು. ವಿಶ್ವಕಪ್ ಚಿನ್ನ ಗೆದ್ದು ಬಂದ ಕ್ಷಣವನ್ನು ನೆನೆದು ಭಾವುಕರಾಗುತ್ತಾರೆ.

'ಆ ದಿನ ಕ್ವಾಲಾಲಂಪುರದಿಂದ ಭಾರತಕ್ಕೆ ಬಂದ ಕೂಡಲೇ ನನ್ನ ತವರೂರು ಝೂನ್ಸಿಗೆ ತೆರಳಿದೆ. ಮನೆಯಲ್ಲಿ ಅಪ್ಪನ ಮುಂದೆ ಚಿನ್ನದ ಪದಕ ಹಿಡಿದು ನಿಂತೆ. ವಿಧೇಯ ವಿದ್ಯಾರ್ಥಿಯಂತೆ ನಿಂತಿದ್ದ ನನ್ನನ್ನು ನೋಡಿದ ಅವರಿಂದ ಒಂದೇ ಒಂದು ಮಾತು ಹೊರಡಲಿಲ್ಲ. ಆದರೆ, ನನ್ನ ಬೆನ್ನ ಮೇಲೆ ಮೂರು ಬಾರಿ ಪ್ರೀತಿಯಿಂದ ತಟ್ಟಿದ್ದರು ಅಷ್ಟೇ. ಅದಕ್ಕಿಂತ ದೊಡ್ಡ ಅಭಿನಂದನೆಯನ್ನು ನಾನು ಜೀವಮಾನದಲ್ಲಿ ಸ್ವೀಕರಿಸಲು ಸಾಧ್ಯವೇ ಇಲ್ಲ. ಇಡೀ ಜಗತ್ತೇ ಅವರ ಹಾಕಿ ಆಟಕ್ಕೆ ಮನಸೋತಿತ್ತು. ಅಂತಹವರ ಮಗ ನಾನು ಎಂಬ ಹೆಮ್ಮೆ ಇತ್ತು. ಆದರೆ, ವಿಶ್ವಕಪ್ ಅನ್ನು ಭಾರತ ತಂಡವು ಗೆಲ್ಲಲು ನಾನು ಗಳಿಸಿದ ಗೋಲು ಕೂಡ ಕಾರಣವಾಗಿತ್ತು. ಆದ್ದರಿಂದ ಅಪ್ಪನ ಮುಂದೆ ಹೋಗಿ ಹೆಮ್ಮೆಯಿಂದ ನಿಲ್ಲುವ ಧೈರ್ಯ ಮಾಡಿದ್ದೆ. ಅವರಿಗೂ ನಾನು ಕೇವಲ ಧ್ಯಾನಚಂದ್ ಮಗನಾಗಿ ಅಲ್ಲ. ಉತ್ತಮ ಆಟಗಾರನಾಗಿಯೂ ಬೆಳೆದಿದ್ದೇನೆ ಎಂದು ಅನಿಸಿದ್ದು ಅವರ ಕಂಗಳಲ್ಲಿ ಕಂಡಿದ್ದೆ' ಎಂದು ಅಶೋಕ್ ಹೇಳುತ್ತಾರೆ.

1973ರ ವಿಶ್ವಕಪ್ ಫೈನಲ್‌ನಲ್ಲಿ ಭಾರತ ಸೋತಿತ್ತು. ನಂತರದ ವರ್ಷದಲ್ಲಿಯೇ ಪುಟಿದೆದ್ದು ಚಿನ್ನ ಗೆದ್ದಿತ್ತು.

ಸ್ನೇಹಮಯಿ ಗೋವಿಂದ...


ಬಿ.ಪಿ. ಗೋವಿಂದ

'ಕೊಡಗಿನ ಆಟಗಾರ ಬಿ.ಪಿ. ಗೋವಿಂದ ಮತ್ತು ನಾನು ಆಪ್ತಮಿತ್ರರು. ನಮ್ಮಿಬ್ಬರದ್ದು 'ಎರಡು ದೇಹ ಒಂದೇ ಮನಸ್ಸು' ಎಂಬಂತಹ ಸ್ನೇಹ. ಮೈದಾನದೊಳಗೆ ಕೇವಲ ಕಣ್ಸನ್ನೆ ವಿನಿಮಯದಿಂದಲೇ ಚೆಂಡನ್ನು ಪಾಸ್ ಮಾಡುವುದು, ಬ್ಲಾಕ್ ಮಾಡುವುದು, ಡಾಡ್ಜ್ ಮಾಡುವುದು ನಮ್ಮ ರೂಢಿಯಾಗಿತ್ತು. ಪಂದ್ಯದ ಪ್ರತಿಯೊಂದು ನಿಮಿಷದಲ್ಲಿಯೂ ತಂಡದ ಗೆಲುವಿಗಾಗಿ ಜೊತೆಯಾಗಿ ಶ್ರಮಿಸಿದ್ದೇವೆ. 1975ರ ಫೈನಲ್‌ನಲ್ಲಿ ಪಾಕ್ ಆಟಗಾರರ ದಾಳಿಯನ್ನು ಇಬ್ಬರೂ ಜೊತೆಗೂಡಿ ತಡೆದ ನೆನಪುಗಳು ಇಂದಿಗೂ ಹಸಿರು. ಅವರ ಆಟ ನೋಡುವುದೇ ಕಣ್ಣಿಗೆ ಹಬ್ಬ' ಎಂದು ಅಶೋಕ್‌ಕುಮಾರ್ ನೆನಪಿಸಿಕೊಳ್ಳುತ್ತಾರೆ.

ಗಣೇಶ್‌ಗೆ ಅರಸು ಅಂತಾರೆ ಆ್ಯಕ್ಷನ್ ಕಟ್

ಅಮೃತ ಅಯ್ಯರ್

'ಕೃಷ್ಣಂ ಪ್ರಣಯ ಸಖಿ' ಬಳಿಕ 'ಪಿನಾಕ' ಸಿನಿಮಾ ಒಪ್ಪಿಕೊಂಡಿದ್ದ ನಟ ಗಣೇಶ್ ಇದೀಗ ಮತ್ತೊಂದು ಚಿತ್ರ ಒಪ್ಪಿಕೊಂಡಿದ್ದಾರೆ. ಗೀತಸಾಹಿತಿ ಹಾಗೂ ನಿರ್ದೇಶಕ ಅರಸು ಅಂತಾರೆ ನಿರ್ದೇಶನದ ಹೊಸ ಚಿತ್ರದಲ್ಲಿ ಬಣ್ಣಹಚ್ಚುತ್ತಿದ್ದಾರೆ.

ಎಸ್‌ಎನ್‌ಟಿ ಎಂಟರ್‌ಪ್ರೈಸಸ್‌ನಡಿ ರವಿ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಚಿತ್ರದಲ್ಲಿ ತೆಲುಗಿನ 'ಹನು-ಮ್ಯಾನ್' ಖ್ಯಾತಿಯ ನಟಿ ಅಮೃತ ಅಯ್ಯರ್ ನಟಿಸುತ್ತಿದ್ದಾರೆ. ಈ ಮೂಲಕ ಅವರು ಚಂದನವನಕ್ಕೆ ಹೆಜ್ಜೆ ಇಡುತ್ತಿದ್ದಾರೆ. 'ಲವ್ ಇನ್ ಮಂಡ್ಯ' ಸಿನಿಮಾ ಮೂಲಕ ಪ್ರೇಕ್ಷಕರನ್ನು ಸೆಳೆದಿದ್ದ ಅರಸು ಅಂತಾರೆ ಈ ಸಿನಿಮಾದಲ್ಲಿ ಮತ್ತೊಂದು ಕೌಟುಂಬಿಕ ಕಥಾಹಂದರವನ್ನು ಪ್ರೇಕ್ಷಕರೆದುರಿಗೆ ಇಡಲಿದ್ದಾರೆ. ಏಪ್ರಿಲ್ 6ರಂದು ಚಿತ್ರದ ಮುಹೂರ್ತ ನಡೆಯಲಿದ್ದು, 7ರಿಂದಲೇ ಚಿತ್ರೀಕರಣಕ್ಕೆ ಚಿತ್ರತಂಡ ಇಳಿಯಲಿದೆ. ಬೆಂಗಳೂರು, ಮೈಸೂರು ಮುಂತಾದೆಡೆ ಚಿತ್ರೀಕರಣ ನಡೆಯಲಿದೆ ಎಂದು ತಿಳಿಸಿದ್ದಾರೆ ಅರಸು ಅಂತಾರೆ.

ಅರಸು ಅಂತಾರೆಯವರೇ ಚಿತ್ರಕಥೆ ಬರೆದಿದ್ದಾರೆ. ಕ್ರಾಂತಿಕುಮಾರ್ ಹಾಗೂ ಶೈಲೇಶ್ ಕುಮಾರ್ ಸಂಭಾಷಣೆಯಲ್ಲಿ ಸಾಥ್ ನೀಡಿದ್ದಾರೆ. ಸುಜ್ಞಾನ್ ಛಾಯಾಚಿತ್ರಗ್ರಹಣ, ಅಕ್ಷಯ್ ಪಿ. ರಾವ್ ಸಂಕಲನ, ವಿಜಯ್ ರಾಕೇಶ್ ಕಶ್ಯಪ್ ಮತ್ತು ಕೀರ್ತಿ ಕೃಷ್ಣಪ್ಪ ಅವರ ಸಹ ನಿರ್ದೇಶನ ಚಿತ್ರಕ್ಕಿದೆ. ❖

ಗಣೇಶ್

ಚಿತ್ರ ನಿರ್ಮಾಣಕ್ಕಿಳಿದ ರಾಜವರ್ಧನ್

ಕನ್ನಡ ಚಿತ್ರರಂಗದ ಖ್ಯಾತ ಹಾಸ್ಯ ನಟ ಡಿಂಗ್ರಿ ನಾಗರಾಜ್ ಪುತ್ರ ರಾಜವರ್ಧನ್ ನಟರಾಗಿ ಈಗಾಗಲೇ ಗುರುತಿಸಿಕೊಂಡಿದ್ದಾರೆ. ಅವರ ನಟನೆಯ 'ಗಜರಾಮ' ಚಿತ್ರ ಈ ವರ್ಷದ ಪ್ರಾರಂಭದಲ್ಲಿ ಬಿಡುಗಡೆಗೊಂಡಿತ್ತು. ಅವರು ಈಗಾಗಲೇ ಮತ್ತೊಂದು ಚಿತ್ರವನ್ನು ಪೂರ್ಣಗೊಳಿಸಿದ್ದು, ನಟನೆಯ ಜೊತೆಗೆ ಆ ಚಿತ್ರ ನಿರ್ಮಾಣವನ್ನೂ ಮಾಡಿದ್ದಾರೆ.

'ಚಿತ್ರದ ಶೀರ್ಷಿಕೆ ಅಂತಿಮವಾಗಿಲ್ಲ. ನಮ್ಮ ಹೋಂ ಬ್ಯಾನರ್‌ನಿಂದ ನಿರ್ಮಿಸಿರುವ ಚಿತ್ರವಿದು. ಚಿತ್ರೀಕರಣ ಮುಗಿದು ಡಬ್ಬಿಂಗ್ ಕೆಲಸಗಳು ನಡೆಯುತ್ತಿವೆ. ಇದೊಂದು ಕಂಟೆಂಟ್ ಆಧಾರಿತ ಚಿತ್ರ. ಪಾತ್ರಗಳ ಮೇಲೆ ಕಥೆ ಸಾಗುತ್ತದೆ. ಹೀಗಾಗಿ ಇಲ್ಲಿ ನಾಯಕ, ನಾಯಕಿ ಎಂಬ ಪರಿಕಲ್ಪನೆ ಇಲ್ಲ. ಶೀಘ್ರದಲ್ಲಿ ಚಿತ್ರದ ಮತ್ತಿತರ ಮಾಹಿತಿ ನೀಡುತ್ತೇವೆ. ಈಗ ವಿಪರೀತ ಚಿತ್ರಗಳು ಬಿಡುಗಡೆಯಾಗುತ್ತಿದ್ದು, ಚಿತ್ರ ಬಿಡುಗಡೆಗೆ ಇದು ಸಕಾಲವಲ್ಲ. ಹೀಗಾಗಿ ಸದ್ಯಕ್ಕೆ ತೆರೆಗೆ ಬರುವ ಆಲೋಚನೆಯಿಲ್ಲ' ಎಂದರು ರಾಜವರ್ಧನ್.

'ಸದ್ಯ ತೆಲುಗಿನಲ್ಲಿ ಒಂದು ಚಿತ್ರದಲ್ಲಿ ನಟಿಸುತ್ತಿದ್ದೇನೆ. ನಿರ್ಮಾಣ ಸಂಸ್ಥೆಯೇ ಮುಂದಿನ ತಿಂಗಳು ಆ ಬಗ್ಗೆ ಅಧಿಕೃತ ಘೋಷಣೆ ಮಾಡಲಿದೆ. ತಮಿಳಿನ ಚಿತ್ರವೊಂದರ ಮಾತುಕತೆ ಪ್ರಗತಿಯಲ್ಲಿದೆ. 'ಗೊಂಬೆಗಳ ಲವ್' ಚಿತ್ರ ನಿರ್ದೇಶಿಸಿದ್ದ ಸಂತೋಷ್ ನಿರ್ದೇಶನದ ಮತ್ತೊಂದು ಚಿತ್ರದಲ್ಲಿ ನಟಿಸಬೇಕಿತ್ತು. ಕಾರಣಾಂತರಗಳಿಂದ ಆ ಚಿತ್ರ ಸೆಟ್ಟೇರಲಿಲ್ಲ' ಎಂದು ಮುಂದಿನ ಯೋಜನೆಗಳ ಮಾಹಿತಿ ನೀಡಿದರು. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಆಂಧ್ರ ಪ್ರದೇಶದ ಉಪಮುಖ್ಯಮಂತ್ರಿ, ಜನಸೇನಾ ಪಕ್ಷದ ನಾಯಕ ಪವನ್ ಕಲ್ಯಾಣ್ ಅವರು ಬಿಳಿ ಟೋಪಿ ಧರಿಸಿ, ಮುಸ್ಲಿಮರೊಂದಿಗೆ ಆಹಾರ ಸೇವಿಸುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ವಿಡಿಯೊ ಅನ್ನು ಹಂಚಿಕೊಳ್ಳುತ್ತಿರುವವರು, ಎನ್‌ಡಿಎ ಪಾಲುದಾರ ಪಕ್ಷದ ಮುಖಂಡ ಪವನ್ ಕಲ್ಯಾಣ್ ಅವರು ರಂಜಾನ್ ತಿಂಗಳ ಸಲುವಾಗಿ ಇಫ್ತಾರ್ ಕೂಟದಲ್ಲಿ ಪಾಲ್ಗೊಂಡಿದ್ದರು ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊ ಅನ್ನು ಇನ್‌ವಿಡ್ ಟೂಲ್ ಮತ್ತು ಗೂಗಲ್ ಲೆನ್ಸ್ ಬಳಸಿ ಪರಿಶೀಲನೆ ಮಾಡಿದಾಗ, ಅದೇ ವಿಡಿಯೊ ಅನ್ನು ಬಹುತೇಕರು ಇಂಥದ್ದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡುಬಂತು. ನಿರ್ದಿಷ್ಟ ಪದಗಳನ್ನು ಬಳಸಿ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ 'ಹನ್ಸ್ ಇಂಡಿಯಾ' ವೆಬ್‌ಸೈಟ್‌ನಲ್ಲಿ 2019ರ ಮಾರ್ಚ್ 25ರಂದು ಈ ಚಿತ್ರದ ಜತೆಗೆ ಇಂಥ ಮತ್ತಷ್ಟು ಚಿತ್ರಗಳು ಪ್ರಕಟವಾಗಿದ್ದು ಕಂಡಿತು. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಗುಂಟೂರಿನಲ್ಲಿ ಪವನ್ ಕಲ್ಯಾಣ್ ತಮ್ಮ ಮುಸ್ಲಿಂ ಸ್ನೇಹಿತರ ಮನೆಯಲ್ಲಿ ಬಿರಿಯಾನಿ ಸವಿದರು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. 6 ವರ್ಷಗಳ ಹಳೆಯ ವಿಡಿಯೊ ಅನ್ನು ಕೆಲವರು ಸುಳ್ಳು ಪ್ರತಿಪಾದನೆಗಳೊಂದಿಗೆ ಈಗ ಹಂಚಿಕೊಳ್ಳುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ಗುಂಡಣ್ಣ

ದೇಹ ಶುಚಿಯಾಗಿ ಇಟ್ಟುಕೊಳ್ಳುವುದು ಹೇಗೆ?

ನುಡಿ ಬೆಳಗು

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ
152

ಮನುಷ್ಯ ಆರೋಗ್ಯವಾಗಿರಲು, ಆನಂದವಾಗಿರಲು ಸ್ವಚ್ಛತೆ ಬೇಕು. ಎರಡು ರೀತಿಯಲ್ಲಿ ಸ್ವಚ್ಛತೆ ಮಾಡಿಕೊಳ್ಳಬೇಕು. ಒಂದು ಬಾಹ್ಯ ಸ್ವಚ್ಛತೆ, ಇನ್ನೊಂದು ಆಂತರಿಕ ಸ್ವಚ್ಛತೆ. ಬಾಹ್ಯ ಸ್ವಚ್ಛತೆ ಎಂದರೆ ದೇಹದ ಶುದ್ಧತೆ, ಆಂತರ್ಯದ ಸ್ವಚ್ಛತೆ ಎಂದರೆ ಮನದ ಸ್ವಚ್ಛತೆ. ಎರಡೂ ಶುದ್ಧವಾಗಿರಬೇಕು ಎಂದು ಪತಂಜಲಿ ಹೇಳುತ್ತಾರೆ. ಸ್ವಚ್ಛತೆ ಎನ್ನುವುದು ಕೇವಲ ಮನುಷ್ಯರಿಗೇ ಯಾಕೆ?

ಮನೆಯಲ್ಲಿ ಒಂದು ಎತ್ತು ಇದೆ. ಅದು ಹೊಲಕ್ಕೆ ಹೋಗಿ ದುಡಿದು ಬಂದಿದೆ. ಆದರೆ, ಮಾಲೀಕ ಮನೆಗೆ ಬಂದ ತಕ್ಷಣ ಮುಖ, ಕೈಕಾಲು ತೊಳೆಯುತ್ತಾನೆಯೇ ವಿನಾ, ಎತ್ತು ಮುಖ ತೊಳೆದು ಕೊಟ್ಟಿಗೆಗೆ ಹೋಗುವುದಿಲ್ಲ. ಅಂದರೆ ನಿಸರ್ಗ ಅದರೊಳಗೆ ಶುಚಿತ್ವವನ್ನು ಇಟ್ಟೇ ಕಳಿಸಿದೆ. ನವಿಲು ಇಳಕಲ್ ಸೀರೆ ಉಟ್ಟುಕೊಂಡು ಕುಣಿತೈತೇನು? ನಿಸರ್ಗವೇ ಅದಕ್ಕೆ ಸ್ವಚ್ಛತೆಯನ್ನು ಇಟ್ಟಿದೆ. ಬೇರೆ ಬೇರೆ ಬಣ್ಣಗಳು ಇವೆ ಅದರಲ್ಲಿ. ಯಾರು ಕೊಟ್ಟವರು? ನಿಸರ್ಗದೊಳಗೆ ಇರುವ ಸ್ವಚ್ಛತೆ ಮನುಷ್ಯನಿಗೆ ಯಾಕೆ ಬರಲಿಲ್ಲ? ಕಲಿಯಬೇಕಾಗಿತ್ತಲ್ಲ ಮನುಷ್ಯ. ದೇಹ ಯಾವುದರಿಂದ ಶುದ್ಧವಾಗುತ್ತದೆ?

ಸ್ನಾನದಿಂದ ದೇಹ ಸ್ವಚ್ಛ. ಆಹಾರದಿಂದ ದೇಹ ಸ್ವಚ್ಛ ಮಾಡಿಕೊಳ್ಳಬೇಕು. ಉಣ್ಣುವ ಆಹಾರ ಕೆಟ್ಟಿತು ಎಂದರೆ ದೇಹದ ಆರೋಗ್ಯವೂ ಕೆಡುತ್ತದೆ, ಮನಸ್ಸೂ ಕೆಡುತ್ತದೆ. ಮನಸ್ಸು ಕೆಟ್ಟರೆ ವಿಚಾರ ಕೆಡುತ್ತದೆ. ವಿಚಾರ ಕೆಟ್ಟರೆ ಸಮಾಜವೇ ಕೆಡುತ್ತದೆ. ಇವೆಲ್ಲ ಆಗಿದ್ದು ಅನ್ನದಿಂದ. ಅನ್ನವನ್ನು ಬೆಳೆಯುವ ಭೂಮಿ ಆರೋಗ್ಯವಾಗಿರಬೇಕು. ಬೀಜವೂ ಆರೋಗ್ಯವಾಗಿರಬೇಕು. ಎಷ್ಟು ಉಣ್ಣಬೇಕು ಎನ್ನುವುದಕ್ಕೂ ನಿಯಮ ಇದೆ. ಅರ್ಧ ಹೊಟ್ಟೆ ಮಾತ್ರ ಉಣ್ಣಬೇಕು. ಅದರಲ್ಲಿ ಶೇ 25ರಷ್ಟು ಗಾಳಿಗೆ ಮತ್ತು ಶೇ 25ರಷ್ಟು ನೀರಿಗೆ ಬಿಡಬೇಕು. ಹೊಟ್ಟೆ ಬಿರಿಯುವಷ್ಟು ಉಣ್ಣಬಾರದು. ಹಿತಭುಕ್, ಮಿತಭುಕ್, ಋತಭುಕ್ ನಿಯಮ ಪಾಲಿಸಬೇಕು. ನಿಮ್ಮ ಆಹಾರವೇ ಔಷಧಿಯಾಗಬೇಕು.

ನೀವು ಆಹಾರವನ್ನು ಔಷಧದಂತೆ ತಿನ್ನದಿದ್ದರೆ ಮುಂದೆ ಔಷಧವೇ ಆಹಾರವಾಗುತ್ತದೆ.

ದೇಹ ಶುಚಿಯಾಗಿರಬೇಕು ಎಂದರೆ ಮನುಷ್ಯ ದುಡಿಯುತ್ತಾ ಇರಬೇಕು. ಮನುಷ್ಯನ ದೊಡ್ಡ ಶತ್ರು ಎಂದರೆ ಆಲಸ್ಯ. ಆಲಸ್ಯ ಎಂದರೆ ಏನು ಎಂದರೆ, ಸಂಪತ್ತು ಬೇಕು; ಶ್ರಮ ಬೇಡ. ಮೊದಲ ಸ್ಥಾನ ಬರಬೇಕು, ಆದರೆ ಓದುವುದು ಬೇಡ. ಮನೆ ತುಂಬಿರಬೇಕು, ಆದರೆ ಹೊಲಕ್ಕೆ ಹೋಗುವುದು ಬೇಡ. ಬ್ಯಾಗ್ ತುಂಬಿರಬೇಕು, ಆದರೆ ಅಂಗಡಿಯಲ್ಲಿ ಕುಳಿತುಕೊಳ್ಳುವುದು ಬೇಡ. ಇದು ಸಾಧ್ಯವಿದೆಯೇ? ಅದಕ್ಕೆ ಶ್ರಮ ಜೀವನ ಬಹಳ ಮುಖ್ಯ. ನಮ್ಮ ಮಕ್ಕಳಿಗೆ ದುಡಿಯುವುದನ್ನು ಕಲಿಸಬೇಕು. ಎಲ್ಲರೂ ದುಡಿದೇ ಹೊಟ್ಟೆ ತುಂಬಿಸಿಕೊಳ್ಳಬೇಕು ಎನ್ನುವುದು ನಿಸರ್ಗದ ನಿಯಮ.

ಒಬ್ಬ ಋಷಿ ದೇವರ ಬಳಿ, 'ದೇವನೇ ನಿನ್ನ ಬಳಿ ಸಂಪತ್ತು ಕೊಡು ಎಂದು ಕೇಳಿಕೊಳ್ಳುವಷ್ಟು ಬಡವ ನಾನಲ್ಲ. ನಾನು ನಿನಗೆ ಎರಡೇ ಕೇಳುವುದು. ನೋವಿಲ್ಲದ ಸಾವು ಕೊಡು. ಈ ದೇಹದಲ್ಲಿ ಪ್ರಾಣ ಇರುವವರೆಗೂ ಇನ್ನೊಬ್ಬರ ಮುಂದೆ ಕೈಯೊಡ್ಡಿ ಬೇಡದಂತಹ ಬದುಕು ಕೊಡು' ಎಂದು ಕೇಳಿಕೊಳ್ಳುತ್ತಾರೆ. ಅದೇ 'ಅನಾಯಾಸೇನ ಮರಣಂ, ವಿನಾ ದೈನ್ಯೇನ ಜೀವನಂ'. ಅದಕ್ಕೆ ಮನುಷ್ಯನ ದೇಹ ಶುದ್ಧಿಯಾಗಬೇಕಾದರೆ ದುಡಿಯುವುದನ್ನು ಕಲಿಯಬೇಕು. ಜ್ಞಾನದಿಂದ ಶುಚಿ, ಆಹಾರದಿಂದ ಶುಚಿ, ದುಡಿಯುವದರಿಂದ ಶುಚಿಯಾಗುತ್ತದೆ ದೇಹ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶುಕ್ರವಾರ ಮಾರ್ಚ್ 14, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಪೂರ್ಣಿಮಾ ಗಂ. 12-25 ನಕ್ಷತ್ರ: ಪೂರ್ವಫಲ್ಗುನಿ ಗಂ. 06-20 ಯೋಗ: ಶೂಲ ಗಂ. 13-24 ಕರಣ: ಬವ ಗಂ. 12-25, ಕುಂಭ ಮಾಸದ 30 ನೇ ದಿನ, **ಮಳೆನಕ್ಷತ್ರ:** ಪೂರ್ವಾಭಾದ್ರ 4.
ರಾಹುಕಾಲ: ಬೆಳಗ್ಗೆ 10-30 - 12-00
ಸೂರ್ಯೋದಯ: 06-42 **ಸೂರ್ಯಾಸ್ತ:** 06-37
ಮುಸ್ಲಿಂ ದಿನಾಂಕ: 13 ರಂಜಾನ್ **ದಿನ ವಿಶೇಷ:** ಹೋಳಿ ಹುಣ್ಣಿಮೆ, ಶ್ರೀ ಚೈತನ್ಯರ ಜನ್ಮದಿನ, ಪುರಿಮ್ (ಜ್ಯೂಯಿಷ್) **ಅದೃಷ್ಟ ಸಂಖ್ಯೆ:** 6, 9

ಮೇಷ: ಜನರೊಂದಿಗಿನ ನಿಕಟ ಸಂಪರ್ಕದಿಂದಾಗಿ, ಕಷ್ಟಕರ ಸನ್ನಿವೇಶಗಳನ್ನು ಸುಲಭವಾಗಿ ಎದುರಿಸಬಹುದು. ಷೇರುಪೇಟೆ ವ್ಯವಹಾರದಲ್ಲಿ ನಿರೀಕ್ಷಿತ ಲಾಭ ದೊರಕುವುದು ಕಷ್ಟ. ವ್ಯಾಪಾರದಲ್ಲಿ ಪ್ರಗತಿ ಸಾಧಿಸುವಿರಿ.

ವೃಷಭ: ಹುಡುಕಾಟದಿಂದ ಜೀವನೋಪಾಯಕ್ಕೆ ಅನುಕೂಲವಾಗುವ ಪರ್ಯಾಯ ಮಾರ್ಗ ಗೋಚರವಾಗಲಿದೆ. ಸ್ವಂತ ಕಾರ್ಯಗಳನ್ನು ಮನೆಯವರ ಸಹಾಯದಿಂದ ಪೂರ್ತಿಗೊಳಿಸುವಿರಿ. ಸ್ನೇಹಿತರು ಇನ್ನಷ್ಟು ಹತ್ತಿರವಾಗುವರು.

ಮಿಥುನ: ಇಲಾಖೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ನೌಕರಿ ಅಥವಾ ಬಡ್ತಿ ಪಡೆಯಲಿದ್ದೀರಿ. ಆರ್ಥಿಕವೃದ್ಧಿ, ಆರೋಗ್ಯವೃದ್ಧಿ, ಆಕಸ್ಮಿಕ ಧನಲಾಭ ಯೋಗ ಈ ದಿನದಲ್ಲಿದೆ. ವೈಯಕ್ತಿಕ ನಿಲುವಿಗೆ ಆದ್ಯತೆ ಕೊಡುವುದು ಲೇಸು.

ಕರ್ಕಾಟಕ: ಸೇವಾ ಮನೋಭಾವದ ವ್ಯಕ್ತಿಗಳು ಪ್ರಸಂಶೆ ಪಡೆಯಲಿದ್ದೀರಿ. ವಿದ್ಯುತ್ ಉಪಕರಣಗಳ ಮಾರಾಟದಿಂದ ಲಾಭ ಪಡೆಯುವಿರಿ. ಕೈಗೊಂಡ ಕೆಲಸಗಳು ಈ ದಿನ ಸುಗಮವಾಗಿ ಸಾಗಲಿವೆ.

ಸಿಂಹ: ನೂತನ ವ್ಯವಹಾರ ಆರಂಭಿಸಬೇಕೆಂದು ಯೋಚಿಸುತ್ತಿರುವವರು, ಅದರ ಸಾಧಕ ಬಾಧಕಗಳ ಬಗ್ಗೆಯೂ ಆಲೋಚಿಸುವುದು ಉತ್ತಮ. ಮಾನಸಿಕ ಯಾತನೆಯು ಕ್ರಮೇಣ ಕಡಿಮೆಯಾಗುವುದು.

ಕನ್ಯಾ: ವಾಹನ ವಹಿವಾಟುಗಳಲ್ಲಿ ಲಾಭ ದೊರಕದಿದ್ದರೂ, ಅಸಲಿಗೆ ಯಾವ ರೀತಿಯ ತೊಂದರೆಯೂ ಉಂಟಾಗುವುದಿಲ್ಲ. ಸಿದ್ಧ ಉಡುಪು ಮಾರಾಟಗಾರರಿಗೆ ಹೆಚ್ಚಿನ ಲಾಭ ಸಿಗಲಿದೆ. ವಾಗ್ಮಿಗಳಿಗೆ ಶುಭವಾಗುವುದು.

ತುಲಾ: ಬೋಧನೆಯಲ್ಲಿ ಪರಿಣತೆ ಹೊಂದಿರುವವರಿಗೆ ಶಿಷ್ಯರ ಸಂಖ್ಯೆ ವೃದ್ಧಿ ಆಗಲಿದೆ. ಕಾರ್ಯಕ್ಷೇತ್ರದಲ್ಲಿನ ಹೆಚ್ಚಿನ ಜವಾಬ್ದಾರಿಯ ಜತೆಗೆ, ಕಲಿಕೆಗಾಗಿ ದೂರ ಪ್ರಯಾಣ ಅನಿವಾರ್ಯ. ವಿವಾಹದ ಬಗ್ಗೆ ಯೋಚನೆ ಬರಲಿದೆ.

ವೃಶ್ಚಿಕ: ಈ ದಿನ ನೀವು ಸರಿಯಾದ ತೀರ್ಮಾನಗಳನ್ನೇ ತೆಗೆದುಕೊಳ್ಳುವಿರಿ. ಹಾಗಾಗಿ, ಇತರರ ಸಲಹೆಯಂತೆ ತೀರ್ಮಾನಗಳನ್ನು ಬದಲಾಯಿಸುವ ಅಗತ್ಯವಿಲ್ಲ. ಚಿನ್ನ, ಬೆಳ್ಳಿ ವ್ಯಾಪಾರಿಗಳಿಗೆ ಲಾಭ ಹೆಚ್ಚುವುದು.

ಧನು: ಕೃಷಿ ಮತ್ತು ಹೈನುಗಾರಿಕೆ ಉತ್ಪನ್ನಗಳಿಂದ ಆದಾಯ ಹೆಚ್ಚಲಿದೆ. ಹೆಚ್ಚಿನ ಸಂಬಳದ ಬಗ್ಗೆ ಚಿಂತಿಸಬೇಡಿ, ಕೆಲಸದಲ್ಲಿ ನಿರಂತರತೆ ಮತ್ತು ಅಸ್ತಿತ್ವವನ್ನು ಕಾಪಾಡಿಕೊಳ್ಳಿ. ಹೊರಗುತ್ತಿಗೆ ಕೆಲಸ ಲಾಭ ತರಲಿದೆ.

ಮಕರ: ವಿದ್ಯಾರ್ಥಿಗಳಿಗೆ ಮಿತ್ರರ ಸಹವಾಸ ಅನುಕೂಲವನ್ನುಂಟು ಮಾಡಲಿದೆ. ಕೋರ್ಟ್ ವ್ಯವಹಾರಗಳಲ್ಲಿ ಹಿನ್ನಡೆ ಅಥವಾ ನಿರೀಕ್ಷಿಸಿದಂತಹ ತೀರ್ಪು ಸಿಗದಂತಾಗುತ್ತದೆ. ಅದರಿಂದಾಗಿ ಮನಸ್ಸು ಅಸ್ಥಿರವಾಗುವುದು.

ಕುಂಭ: ಆರ್ಥಿಕವಾಗಿ ಲಾಭ ಗಳಿಸಲು ಹೋರಾಟ ನಡೆಸಬೇಕಾದ ಪರಿಸ್ಥಿತಿ ಎದುರಾಗಬಹುದು. ಸಮಯೋಚಿತ ನಿರ್ಧಾರದಿಂದ ಸಂಕಟಗಳು ದೂರಾಗಲಿವೆ. ಲೋಹ ವಸ್ತುಗಳ ವ್ಯಾಪಾರಿಗಳಿಗೆ ಹೆಚ್ಚಿನ ಲಾಭವಾಗಲಿದೆ.

ಮೀನ: ಹೋಟೆಲ್ ಉದ್ಯಮಿಗಳಿಗೆ ವ್ಯವಹಾರದಲ್ಲಿ ಹೆಚ್ಚಿನ ಲಾಭ ಸಿಗಲಿದ್ದು, ಸ್ನೇಹಪರ ಸ್ವಭಾವದಿಂದ ಸಮಾಜದಲ್ಲಿ ಗೌರವವೂ ಹೆಚ್ಚಾಗಲಿದೆ. ಗೊಂದಲಗಳಿಂದ ಈ ದಿನ ಹೊರಬರಲಿದ್ದೀರಿ.

ಪದಬಂಧ 5981

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಹಾಡಿನ ಆರಂಭದ ಸಾಲು (3)
3.ವನದಲ್ಲಿರುವ ಉಡುಗೆ! (3)
5.ಕಾಡಿನಲ್ಲಿ ಸಂಚರಿಸುವಿಕೆ (5)
6.ಶರಧಿಯಲ್ಲಿ ಬಿದ್ದಿರುವ ಬಾಣ (2)
8.ನಾವಿಕನಿಗೆ ಪ್ರಾಪ್ತಿಯಾಗಿರುವ ಸ್ವರ್ಗ (2)
9.ಹತೋಟಿಗೊಂದು ಪರ್ಯಾಯ ಪದ (2)
10.ಕಲಾವಿದನ ಮನೆ ಬಾಗಿಲು (2)
14.ಕೈಗೂಡದ ಆಸೆಯಿದು (5)
15.ಕರಿಯ ಮರಿ ಬಿದ್ದಿರುವ ಆಳವಾದ ಗುಂಡಿ (3)
16.ದೇವರಿಗೆ ಮಾಡುವ ಸೇವೆಯ ನಿರ್ಧಾರ (3)

ಮೇಲಿಂದ ಕೆಳಕ್ಕೆ
1.ಬೇರೆಯವರ ಅಧೀನದಲ್ಲಿರುವಿಕೆ (4)
2.ಅನಿರ್ಬಂಧಿತವಾದುದು (3)
3.ವರ ತೋರಿದ ವ್ಯಾಯಾಮ ಪಟ್ಟು (3)
4.ಬೆಂಬಿಡದೆ ಕಾಡುವವನೀತ (4)
7.ರಸಿಕನ ಕಾಲಿನಿಂದ ಒಸರುತ್ತಿರುವ ಕೀವು (3)
8.ನಾಕದಲ್ಲಿ ತೂರಿಸಿದ ಮೂಗು! (3)
9.ಮಂಗಳ ಗ್ರಹವನ್ನು ಹೀಗೂ ಕರೆವರು (4)
11.ಬಲಾತ್ಕಾರದ ಆಡಳಿತ (4)
12.ನಗರದ ಹತ್ತಿರ ಕೇಳಿದ ಚರ್ಮವಾದ್ಯ (3)
13.ಪ್ರೇಮಿಗಳ ಅಗಲಿಕೆಯ ನೋವು (3)



5980ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಾಕೃತಿಕ 3.ಅಪರೂಪ
5.ನಡುಕ 8.ಮಿಥುನ
9.ಯೋಗ್ಯತಾಪತ್ರ 10.ತಪ್ಪಲೆ
12.ಹಡಪ 15.ರಿಕ್ತಹಸ್ತ
16.ಅಭಿಲಾಷೆ

ಮೇಲಿಂದ ಕೆಳಕ್ಕೆ:
1.ಪ್ರಾಚೀನ 2.ಕತ್ತೆ
3.ಅತ್ಯುಕ್ತಿ 4.ಪರಧನ
6.ಕರೆಯೋಲೆ 7.ಸಂತಾಪ
8.ಮಿತ್ರದ್ರೋಹ 10.ತರಕಾರಿ
11.ಪ್ರಶಸ್ತ 12.ಪರಿಷೆ
14.ಣ್ಣಲಿ

ಸುಡೊಕು 6366

	2			6	7	4		
3								
	7	1		4	8		6	
	4						8	
8		9		7	1			6
	5		8		4		9	
2				9			3	
4		3		5	2			8
	1		4			5	2	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6365 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,470
ಇಂದಿನ ಅಂತ್ಯ	22,397
▼	73
ದಿನದ ಕನಿಷ್ಠ	22,377

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹435
12 ಕ್ಕೆ	₹60
ಮೈಸೂರು	
100ಕ್ಕೆ	₹430

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹155-685
ದ್ವಿತಳಿ (ಬಿ.ವಿ)	₹263-820

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹192
ಆರ್‌ಎಸ್‌ಎಸ್-5	₹187
ಗುಡ್ ಲಾಟ್	₹180

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹26750
ಎಸಿ	₹16100
ಆರ್‌ಪಿ	₹23000
ಆರ್‌ಸಿ	₹12420

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹9800-14500
ತಿಪಟೂರು	₹14000-14896

ಖಾದ್ಯ ತೈಲ ಮುಂಬೈ (10 ಕೆಜಿಗೆ)



(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1410 (1410)
ಸೋಯಾ (ರಿಫೈನ್ಡ್)	₹1320 (1325)
ಸೂರ್ಯಕಾಂತಿ (ರಿಫೈನ್ಡ್)	₹1410 (1420)
ಪಾಮೋಲಿನ್	₹1370 (1365)

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

6ನೇ ವರ್ಷದ ಸವಿನೆನಪು

ಶ್ರೀಮತಿ ಜಯಲಕ್ಷ್ಮಮ್ಮ
ದಿ. ವೈ ನಂಜಪ್ಪ ರೆಡ್ಡಿ (ಪಾಳ್ಯದ ಕೃಷ್ಣಪ್ಪ) ನವರ ಧರ್ಮಪತ್ನಿ
ನಂ. 84, ಕೋರಮಂಗಲ, ಬೆಂಗಳೂರು-560095
ನೀವು ನಮ್ಮನ್ನು ಅಗಲಿ ಆರು ವರ್ಷ ಕಳೆದರೂ ನಿಮ್ಮ ಸವಿನೆನಪು ನಮ್ಮಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ
ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು.

ಓಲಾ ಎಲೆಕ್ಟ್ರಿಕ್ ಸ್ಕೂಟರ್‌ಗೆ ರಿಯಾಯಿತಿ ಪ್ರಕಟ

ನವದೆಹಲಿ (ಪಿಟಿಐ): ಓಲಾ ಎಲೆಕ್ಟ್ರಿಕ್ ಕಂಪನಿಯು ಹೋಳಿ ಹಬ್ಬದ ಅಂಗವಾಗಿ ತನ್ನ ಎಸ್‌1 ಸರಣಿಯ ಇ-ಸ್ಕೂಟರ್ ಮಾರಾಟದ ಬೆಲೆಯಲ್ಲಿ ರಿಯಾಯಿತಿ ಪ್ರಕಟಿಸಿದೆ. ಸೀಮಿತ ಅವಧಿವರೆಗೆ ಈ ಸೌಲಭ್ಯ ದೊರೆಯಲಿದೆ.

ಎಸ್‌1 ಏರ್ ಸ್ಕೂಟರ್‌ಗೆ ₹26,750 ರಿಯಾಯಿತಿ ಘೋಷಿಸಿದ್ದು, ಇದು ₹89,999ಕ್ಕೆ ದೊರೆಯಲಿದೆ. ಎಸ್‌1ಎಕ್ಸ್ ಪ್ಲಸ್ (ಜೆನ್ 2) ಸ್ಕೂಟರ್‌ಗೆ ₹22 ಸಾವಿರ ರಿಯಾಯಿತಿ ಪ್ರಕಟಿಸಿದ್ದು, ₹82,999ಕ್ಕೆ ಲಭ್ಯವಿದೆ ಎಂದು ಕಂಪನಿ ತಿಳಿಸಿದೆ.

ಎಸ್‌1 ಸರಣಿ ಹಾಗೂ ಇತ್ತೀಚೆಗೆ ಬಿಡುಗಡೆಯಾಗಿರುವ ಎಸ್‌1 ಜೆನ್ 3 ಸರಣಿಯ ಸ್ಕೂಟರ್‌ಗಳ ಬೆಲೆಯಲ್ಲಿ ₹25 ಸಾವಿರವರೆಗೆ ರಿಯಾಯಿತಿ ಪ್ರಕಟಿಸಲಾಗಿದೆ. ಮಾರ್ಚ್ 17ರ ವರೆಗೆ ಗ್ರಾಹಕರಿಗೆ ಈ ಸೌಲಭ್ಯ ದೊರೆಯಲಿದೆ ಎಂದು ತಿಳಿಸಿದೆ.

ಕರ್ನಾಟಕಕ್ಕೆ ದ್ವಿತೀಯ ಸ್ಥಾನ: ತ್ವರಿತ ಪಾವತಿಗೆ ಕ್ರಮ– ಕೇಂದ್ರ ಸರ್ಕಾರ

ಕಬ್ಬಿನ ಬಾಕಿ ₹3,365 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: 2024–25ನೇ ಮಾರುಕಟ್ಟೆ ಋತುವಿನಲ್ಲಿ (ಅಕ್ಟೋಬರ್‌ನಿಂದ ಸೆಪ್ಟೆಂಬರ್) ಮಾರ್ಚ್ 5ರ ವರೆಗೆ ದೇಶದ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಒಟ್ಟು ₹15,504 ಕೋಟಿ ಮೊತ್ತವನ್ನು ಬಾಕಿ ಉಳಿಸಿಕೊಂಡಿವೆ. ಈ ಪೈಕಿ ಕರ್ನಾಟಕದ ರೈತರಿಗೆ ₹3,365 ಕೋಟಿ ಪಾವತಿಗೆ ಬಾಕಿ ಇದೆ.

ಉತ್ತರ ಪ್ರದೇಶದ ಕಾರ್ಖಾನೆಗಳು ₹4,793 ಕೋಟಿ ಪಾವತಿ ಮಾಡಬೇಕಿದೆ. ಬಾಕಿ ಉಳಿಸಿಕೊಂಡಿರುವ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವು ಎರಡನೇ ಸ್ಥಾನದಲ್ಲಿದೆ. ಮಹಾರಾಷ್ಟ್ರ (₹2,949 ಕೋಟಿ) ಮತ್ತು ಗುಜರಾತ್ (₹1,454 ಕೋಟಿ) ಆ ನಂತರದ ಸ್ಥಾನದಲ್ಲಿವೆ.

ಕರ್ನಾಟಕದ ಸಕ್ಕರೆ ಕಾರ್ಖಾನೆಗಳು 2023-24ನೇ ಆರ್ಥಿಕ ವರ್ಷದವರೆಗೆ ರೈತರಿಗೆ ಎಲ್ಲ ಬಾಕಿ ಮೊತ್ತ ಪಾವತಿಸಿವೆ.

'ಸಕ್ಕರೆ ಬಾಕಿ ಉಳಿಸಿಕೊಳ್ಳುವುದು ನಿರಂತರ ಪ್ರಕ್ರಿಯೆಯಾಗಿದೆ. ಕಾರ್ಖಾನೆಗಳು ಹಂತ ಹಂತವಾಗಿ ಬಾಕಿ ಮೊತ್ತ ಪಾವತಿಸಲಿವೆ' ಎಂದು ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ರಾಜ್ಯ ಖಾತೆ ಸಚಿವೆ ನಿಮುಬೇನ್ ಜಯಂತಿಭಾಯ್ ಬಮ್ಖಾನಿಯಾ ಅವರು, ರಾಜ್ಯಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ರೈತರಿಗೆ ಸಕಾಲದಲ್ಲಿ ಬಾಕಿ ಮೊತ್ತ ಪಾವತಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರವು ಹಲವು ಕ್ರಮಗಳನ್ನು ಕೈಗೊಂಡಿದೆ. ಕಬ್ಬಿಗೆ ನ್ಯಾಯಸಮ್ಮತ ಮತ್ತು ಪ್ರೋತ್ಸಾಹದಾಯಕ ದರ (ಎಫ್‌ಆರ್‌ಪಿ) ಹೆಚ್ಚಿಸಿದೆ. ಅಲ್ಲದೆ, ಅವರಿಗೆ ಹೆಚ್ಚಿನ ಲಾಭ ಕಲ್ಪಿಸಲು ಸಕ್ಕರೆ ಬಳಸಿ ಎಥೆನಾಲ್ ತಯಾರಿಕೆಗೆ ಅನುಮತಿ ನೀಡಿದೆ ಎಂದು ಹೇಳಿದ್ದಾರೆ.

ಸಕ್ಕರೆ ರಫ್ತಿಗೆ ಅನುಮತಿ: ಬೆಲೆ ಕುಸಿತ ತಡೆಯಲು ಮತ್ತು ರೈತರಿಗೆ ಬಾಕಿ ಮೊತ್ತ ಪಾವತಿಗೆ ಅನುಕೂಲವಾಗುವಂತೆ ಪ್ರಸಕ್ತ ಮಾರುಕಟ್ಟೆ ಋತುವಿನಲ್ಲಿ 10 ಲಕ್ಷ ಟನ್ ಸಕ್ಕರೆ ರಫ್ತಿಗೆ ಸರ್ಕಾರವು ಅನುಮತಿ ನೀಡಿದೆ. ಅಲ್ಲದೆ, ಕನಿಷ್ಠ ಸಕ್ಕರೆ ಮಾರಾಟ ದರವನ್ನು ಕೆ.ಜಿಗೆ ₹31ಕ್ಕೆ ನಿಗದಿಪಡಿಸಿದೆ.

'ಸರ್ಕಾರ ಕೈಗೊಂಡಿರುವ ಕ್ರಮಗಳಿಂದಾಗಿ 2023–24ನೇ ಮಾರುಕಟ್ಟೆ ಋತುವಿನಲ್ಲಿ ಸಕ್ಕರೆ ಬಾಕಿ ಪಾವತಿಯಲ್ಲಿ ಶೇ 99.9ರಷ್ಟು ಗುರಿ ಸಾಧನೆಯಾಗಿದೆ. 2024–25ನೇ ಋತುವಿನಲ್ಲಿ ಶೇ 80ರಷ್ಟು ಬಾಕಿ ಪಾವತಿಸಲಾಗಿದೆ' ಎಂದು ಸಚಿವೆ ತಿಳಿಸಿದ್ದಾರೆ.

ಸಕ್ಕರೆ ಉತ್ಪಾದನೆ ಇಳಿಕೆ ನಿರೀಕ್ಷೆ

ದೇಶದಲ್ಲಿ ಕಳೆದ ಮಾರುಕಟ್ಟೆ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಸಕ್ಕರೆ ಉತ್ಪಾದನೆಯು ಕಡಿಮೆಯಾಗಲಿದೆ ಎಂದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಸಂಘ (ಐಎಸ್‌ಎಂಎ) ಅಂದಾಜಿಸಿದೆ.

264 ಲಕ್ಷ ಟನ್ ಉತ್ಪಾದನೆಯಾಗುವ ನಿರೀಕ್ಷೆಯಿದೆ ಎಂದು ತನ್ನ ಪರಿಷ್ಕೃತ ಅಂದಾಜು ವರದಿಯಲ್ಲಿ ಹೇಳಿದೆ.

ಪ್ರಸ್ತುತ ದೇಶದಾದ್ಯಂತ 228 ಕಾರ್ಖಾನೆಗಳು ಕಬ್ಬು ಅರೆಯುವಿಕೆ ಪ್ರಕ್ರಿಯೆ ಆರಂಭಿಸಿದ್ದು, ಮಾರ್ಚ್ 10ರ ವರೆಗೆ ಒಟ್ಟು 233.09 ಲಕ್ಷ ಟನ್ ಸಕ್ಕರೆ ಉತ್ಪಾದಿಸಿವೆ.

ಸುದ್ದಿ 2 ನಿಮಿಷ

ಕರಡಿ ಕುಣಿತ ಮುಂದುವರಿಕೆ

ಮುಂಬೈ (ಪಿಟಿಐ): ರಿಯಾಲ್ಟಿ, ಐ.ಟಿ ಮತ್ತು ಆಟೊ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಗುರುವಾರವೂ ದೇಶದ ಷೇರುಪೇಟೆಯಲ್ಲಿ ಕರಡಿ ಕುಣಿತ ಮುಂದುವರಿಯಿತು. ಸತತ ಐದು ವಹಿವಾಟುಗಳಲ್ಲಿ ಸೂಚ್ಯಂಕಗಳು ಇಳಿಕೆ ಕಂಡಿವೆ.

ಆರಂಭಿಕ ವಹಿವಾಟಿನಲ್ಲಿ ಏರಿಕೆ ದಾಖಲಿಸಿದ್ದ ಸೂಚ್ಯಂಕಗಳು ವಹಿವಾಟಿನ ಅಂತ್ಯದಲ್ಲಿ ಇದನ್ನು ಕಾಯ್ದುಕೊಳ್ಳುವಲ್ಲಿ ವಿಫಲವಾದವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 200 ಅಂಶ ಇಳಿಕೆ ಕಂಡು, 73,828 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 73 ಅಂಶ ಇಳಿಕೆ ಕಂಡು 22,397 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಅಮೆರಿಕದ ಷೇರುಪೇಟೆ ಚೇತರಿಕೆ: ಮೂರು ದಿನದ ಹಿಂದೆ ಭಾರಿ ಕುಸಿತ ಕಂಡಿದ್ದ ಅಮೆರಿಕದ ಷೇರುಪೇಟೆ ಸೂಚ್ಯಂಕಗಳು ಬುಧವಾರದ ವಹಿವಾಟಿನಲ್ಲಿ ಚೇತರಿಕೆ ಕಂಡಿವೆ.

ಡೌ ಜೋನ್ಸ್ ಶೇ 0.2ರಷ್ಟು ಏರಿಕೆ ಕಂಡು 41,350 ಅಂಶಗಳಲ್ಲಿ ಸ್ಥಿರಗೊಂಡಿದೆ. ನಾಸ್ಡಾಕ್ ಶೇ 1.2ರಷ್ಟು ಏರಿಕೆ ಕಂಡಿದ್ದು, 17,660 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿದೆ. ಎಸ್ ಆ್ಯಂಡ್ ಪಿ 500 ಶೇ 0.5ರಷ್ಟು ಏರಿಕೆ ಕಂಡು, 5,599 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿದೆ. ಮತ್ತೊಂದೆಡೆ ಏಷ್ಯಾದ ಷೇರುಪೇಟೆಗಳು ಕುಸಿತ ಕಂಡಿವೆ.

ರೂಪಾಯಿ ಮೌಲ್ಯ 17 ಪೈಸೆ ಏರಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಗುರುವಾರ ನಡೆದ ವಹಿವಾಟಿನಲ್ಲಿ 17 ಪೈಸೆ ಏರಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹87.05 ಆಗಿದೆ.

ಕಚ್ಚಾ ತೈಲ ಬೆಲೆ ಮತ್ತು ಡಾಲರ್ ಮೌಲ್ಯ ಇಳಿಕೆಯಾಗಿರುವುದು ರೂಪಾಯಿ ಮೌಲ್ಯ ಹೆಚ್ಚಳಕ್ಕೆ ನೆರವಾಯಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಹೋಳಿ ಹಬ್ಬದ ಅಂಗವಾಗಿ ಶುಕ್ರವಾರ ವಿದೇಶಿ ವಿನಿಮಯ ಮಾರುಕಟ್ಟೆಗೆ ರಜೆ ಇರಲಿದೆ.

ಬುಧವಾರ ನಡೆದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ 1 ಪೈಸೆ ಇಳಿಕೆಯಾಗಿತ್ತು.

ಒಣಮೆಣಸಿನಕಾಯಿ ಖರೀದಿ ಕೇಂದ್ರ ಆರಂಭಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಒಣಮೆಣಸಿನಕಾಯಿ ಬೆಳೆಯಲಾಗುತ್ತಿದ್ದು, ವಾರ್ಷಿಕ 2.50 ಲಕ್ಷ ಟನ್ ಉತ್ಪಾದನೆ ಆಗುತ್ತದೆ. ಬಳ್ಳಾರಿ ಜಿಲ್ಲೆಯೊಂದರಲ್ಲೇ 1.96 ಲಕ್ಷ ಟನ್ ಉತ್ಪಾದನೆಯಾಗುತ್ತದೆ. ಸರ್ಕಾರವು ಆಯಾ ಜಿಲ್ಲೆಯಲ್ಲಿ ಖರೀದಿ ಕೇಂದ್ರ ಆರಂಭಿಸಬೇಕು' ಎಂದು ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ಅಧ್ಯಕ್ಷ ಕರೂರು ಮಾಧವ ರೆಡ್ಡಿ ಆಗ್ರಹಿಸಿದರು.

'ಕಳೆದ ವರ್ಷ ಬ್ಯಾಡಗಿ ಮೆಣಸಿನಕಾಯಿ ಕ್ವಿಂಟಲ್‌ಗೆ ₹40 ಸಾವಿರದಿಂದ ₹50 ಸಾವಿರದವರೆಗೆ ಮಾರಾಟವಾಗಿತ್ತು. ಈ ವರ್ಷ ದರ ಕನಿಷ್ಠ ₹6 ಸಾವಿರಕ್ಕೆ ಕುಸಿದಿದೆ' ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ರೈತರ ಸಮಸ್ಯೆಗೆ ಸ್ಪಂದಿಸುವಂತೆ ಆಂಧ್ರಪ್ರದೇಶ ಸರ್ಕಾರವು ಕೇಂದ್ರಕ್ಕೆ ಮನವಿ ಮಾಡಿ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ (ಎಂಐಎಸ್) ಬೆಲೆ ಕೊರತೆ ಪಾವತಿ (ಪಿಡಿಪಿ) ಸೌಲಭ್ಯ ಜಾರಿಗೊಳಿಸಲು ಶ್ರಮಿಸಿತ್ತು. ಅದರಂತೆ ಕೇಂದ್ರ ಸರ್ಕಾರವು ಕ್ವಿಂಟಲ್‌ಗೆ ₹11,781 ಕನಿಷ್ಠ ಮಧ್ಯಂತರ ಬೆಲೆ (ಎಂಐಪಿ) ನಿಗದಿಪಡಿಸಿದೆ' ಎಂದರು.

'ಕರ್ನಾಟಕಕ್ಕೂ ಪಿಡಿಪಿ ಯೋಜನೆ ವಿಸ್ತರಿಸಬೇಕು. ರಾಜ್ಯದಲ್ಲಿ ಪ್ರತಿ ಕ್ವಿಂಟಲ್ ಮೆಣಸಿನಕಾಯಿಗೆ ₹13,500 ದರ ನಿಗದಿ ಮಾಡಬೇಕು' ಎಂದು ಆಗ್ರಹಿಸಿದರು.

1.31 ಲಕ್ಷ ಟನ್ ತೊಗರಿ ಖರೀದಿ

ನವದೆಹಲಿ (ಪಿಟಿಐ): ಧಾರಣೆ ಕುಸಿತದಿಂದ ತೊಂದರೆಗೆ ಸಿಲುಕಿರುವ ರೈತರ ಹಿತದೃಷ್ಟಿಯಿಂದ ಬೆಲೆ ಬೆಂಬಲ ಯೋಜನೆಯಡಿ (ಪಿಎಸ್‌ಎಸ್) ತೊಗರಿ ಖರೀದಿಗೆ ಚಾಲನೆ ನೀಡಿದ್ದು, ಇಲ್ಲಿಯವರೆಗೆ 1.31 ಲಕ್ಷ ಟನ್ ಖರೀದಿಸಲಾಗಿದೆ. ಒಟ್ಟು 89,219 ರೈತರು ಪ್ರಯೋಜನ ಪಡೆದಿದ್ದಾರೆ ಎಂದು ಕೇಂದ್ರ ಕೃಷಿ ಸಚಿವಾಲಯವು ಗುರುವಾರ ತಿಳಿಸಿದೆ.

2024–25ನೇ ಮುಂಗಾರು ಋತುವಿನಲ್ಲಿ ಕರ್ನಾಟಕ ಸೇರಿ ಆಂಧ್ರಪ್ರದೇಶ, ಛತ್ತೀಸಗಢ, ಗುಜರಾತ್, ಹರಿಯಾಣ, ಮಧ್ಯಪ್ರದೇಶ, ಮಹಾರಾಷ್ಟ್ರ, ತೆಲಂಗಾಣ ಮತ್ತು ಉತ್ತರಪ್ರದೇಶದಲ್ಲಿ ಖರೀದಿಗೆ ಸಚಿವಾಲಯವು ಅನುಮತಿ ನೀಡಿದೆ.

ಈಗಾಗಲೇ ಆಂಧ್ರಪ್ರದೇಶ, ಗುಜರಾತ್, ಕರ್ನಾಟಕ, ಮಹಾರಾಷ್ಟ್ರ ಮತ್ತು ತೆಲಂಗಾಣದಲ್ಲಿ ಖರೀದಿಗೆ ಚಾಲನೆ ನೀಡಲಾಗಿದೆ. ಶೀಘ್ರವೇ, ಉಳಿದ ರಾಜ್ಯಗಳಲ್ಲೂ ಖರೀದಿ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ತಿಳಿಸಿದೆ.



ನಾಫೆಡ್ ಮತ್ತು ಎನ್‌ಸಿಸಿಎಫ್‌ನ ಇ-ಸಮೃದ್ಧಿ ಪೋರ್ಟಲ್‌ನಡಿ ನೋಂದಣಿ ಮಾಡಿದ ರೈತರಿಂದಲೂ ತೊಗರಿ ಖರೀದಿಸಲಾಗುತ್ತಿದೆ. ಮುಕ್ತ ಮಾರುಕಟ್ಟೆಯಲ್ಲಿ ಕನಿಷ್ಠ ಬೆಂಬಲ ಬೆಲೆಗಿಂತ (ಎಂಎಸ್‌ಪಿ) ಕಡಿಮೆ ದರದಲ್ಲಿ ಮಾರಾಟವಾಗುತ್ತಿದ್ದರೆ ಬೆಲೆ ಬೆಂಬಲ ಯೋಜನೆಯಡಿ ಕೃಷಿ ಹುಟ್ಟುವಳಿಗಳನ್ನು ಖರೀದಿಸಲಾಗುತ್ತದೆ ಎಂದು ಹೇಳಿದೆ.

ದೇಶದಲ್ಲಿ ದ್ವಿದಳ ಧಾನ್ಯಗಳ ಉತ್ಪಾದನೆ ಹೆಚ್ಚಿಸಲು ಕೇಂದ್ರವು ಆತ್ಮನಿರ್ಭರ ಮಿಷನ್‌ ಅನ್ನು 2028–29ರ ವರೆಗೂ ವಿಸ್ತರಿಸಿದೆ. ಕೇಂದ್ರದ ಏಜೆನ್ಸಿಗಳ ಮೂಲಕ ರೈತರಿಂದ ತೊಗರಿ, ಚೆನ್ನಂಗಿ ಬೇಳೆ ಮತ್ತು ಉದ್ದು ಖರೀದಿಸಲಾಗುವುದು ಎಂದು ಸರ್ಕಾರವು ಬಜೆಟ್‌ನಲ್ಲಿ ಘೋಷಿಸಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಕಾರ್ಕಳ	
ಹೊಸತು	25000-40000
ಹಳತು	30000-49500
ಸಾಗರ	
ಬಿಳಿಗೋಟು	6099-19800
ಚಾಲಿ	16989-33809
ಕೋಕ	6100-19899
ಕೆಂಪುಗೋಟು	10199-28899
ರಾಶಿ	21899-51870
ಸಿಪ್ಪೆಗೋಟು	6070-16859
ಶಿವಮೊಗ್ಗ	
ಬೆಟ್ಟೆ	45159-56199
ಗೊರಬಲು	17023-27069
ರಾಶಿ	35006-52009
ಸರಕು	52010-89986
ಸಿದ್ದಾಪುರ	
ಬಿಳಿಗೋಟು	21089-26189
ಚಾಲಿ	32819-36509
ಕೋಕ	14819-24919
ಹೊಸಚಾಲಿ	31009-35909
ಕೆಂಪುಗೋಟು	19819-22119
ರಾಶಿ	41599-49199
ತಟ್ಟಿಬೆಟ್ಟೆ	28909-35719
ಶಿರಸಿ	
ಬೆಟ್ಟೆ	27110-37099
ಬಿಳಿಗೋಟು	14599-28509
ಚಾಲಿ	32308-37891
ಕೆಂಪುಗೋಟು	15700-24199
ರಾಶಿ	40009-46899
ಯಲ್ಲಾಪುರ	
ಅಪಿ	64379-64379
ಬಿಳಿಗೋಟು	13299-26199
ಚಾಲಿ	27599-38849
ಕೋಕ	4499-17299
ಕೆಂಪುಗೋಟು	13661-26969
ರಾಶಿ	40319-56999
ತಟ್ಟಿಬೆಟ್ಟೆ	28199-38299

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Devanahalli

PLOT FOR SALE @ Jangammakote 1200Sqft N/F in Gated Layout Near Sugaturu Village. Via Hoskote. Whatsapp/ Call: 9972528503

Srirampura

SALE 30X100, Site, 1st cross, Single owner, 2 mins from Srirampuram metro, 17000/sqft Ph 9739732433

ಉದ್ಯೋಗಾವಕಾಶ

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

Teachers/ Professors

ORCHIDS The International School
TEACHERS WANTED
Freshers and Experienced Female candidates can only apply
English, Mathematics, Chess, Dance, Music, Theatre, Drawing, Physical Education & Other Subject Teachers
For Walk In, visit Sarjapur Branch & other branches during weekends
Kindly drop your CV to: careers@orchids.edu.in
8888-060-888

ಭವಿಷ್ಯ

Astrology

★ಓಂ ದುರ್ಗಾಂಜನಂ★ ಇಚ್ಛಾಸಿದ್ಧಿ ಶಕ್ತಿಪೀಠ, ಭಾರತದ ಪ್ರಖ್ಯಾತ ಲಕ್ಷಾಂತರ ಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀದೇವಾನಂದ ಮಹಾರಾಜ,ನಿಮ್ಮೆಲ್ಲಾ ಸಂಕಷ್ಟಗಳಿಗೆ ಪರಿಹಾರ, ಬೆಂಗಳೂರು.9845005009

ವೈಯಕ್ತಿಕ

Change of Name

I, BHAVISHYA Mandanna Balekuttira (Bhavishya B M) D/o Mandanna B M (Mandanna Machaiah Balekuttira) have changed my name to Bhavishya Mandanna vide affidavit Dtd 10-March-25 sworn before notary C Sharada.

ಸಾರ್ವಜನಿಕ ಪ್ರಕಟಣೆ

THE INDIAN PENTECOSTAL CHURCH OF GOD
KARNATAKA STATE
Agara Horamavu, Bangalore - 560 043
email: ipckarnatakastate@gmail.com
www.ipckarnatakastate.org Registered in 1935 at Eluru, A.P. Under Society act XXI of 1860, Reg. No. 9/1935-36
IPC KARNATAKA STATE ELECTION COMISSION-2025
Ref IPCKS-EC-04/2025 Date : 07-03-2025
PAPER NOTIFICATION
General Body meeting of IPC Karnataka State and the Election for the period of 2025 - 2029 will be held on Thursday 1, May 2025 @11 a.m at IPCKS Head quarters, Horamavu Agara, Bangalore - 560043.
For more details contact: Election Commission, IPCKS Head Quarters, Bangalore.
ಐ.ಪಿ.ಸಿ ಕರ್ನಾಟಕ ರಾಜ್ಯ ದೇವರ ಸಭೆಗಳ ಸರ್ವ ಸದಸ್ಯರ ಮಹಾ ಸಭೆ ಹಾಗೂ ಚುನಾವಣೆ (2025–2029) ಯನ್ನು 1ನೇ ಮೇ 2025 ರಂದು ಬೆಳಿಗ್ಗೆ 11 ಗಂಟೆಗೆ ಐ.ಪಿ.ಸಿ ಹೆಡ್ ಕ್ವಾರ್ಟ್ಸ್ ಹೊರಮಾವು ಆಗರ, ಬೆಂಗಳೂರಿನಲ್ಲಿ ಜರುಗಲಿದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಐ.ಪಿ.ಸಿ ಕರ್ನಾಟಕ ಎಲಕ್ಷನ್ ಕಮ್ಮಿಷನ್ ಹೊರಮಾವು ಆಗರ, ಬೆಂಗಳೂರು.
For Eection Commission 2025
Sd/- Br. P.V. Mathews
Chief Election Commissioner
IPC Karnataka State.

ಪ್ರವಾಸ

Travel

ಚಾರ್ ಧಾಮ್ ಸ್ಪೆಷಲ್ ಯಾತ್ರೆ: 28.5.2025 ರಿಂದ 14ದಿನಗಳು ಕೇದಾರನಾಥ್,ಬದರಿನಾಥ್ (ಪುಷ್ಕರ ಸರಸ್ವತಿ ನದಿಸ್ನಾನ) ಯಮುನೋತ್ರಿ,ಗಂಗೋತ್ರಿ ಇತ್ಯಾದಿ.ಕೆಲವೇ ಸೀಟುಗಳಿವೆ. ಸಂಪರ್ಕಿಸಿ:ಕೆಪಿ.ಟೂರ್ಸ್ ಅಂಡ್ ಟ್ರಾವೆಲ್ಸ್,ಬೆಂಗಳೂರು. 9741024122, 9740311411.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಮತ್ತೆ ಚಿನ್ನ, ಬೆಳ್ಳಿ ದರ ಗರಿಷ್ಠ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು, ಮತ್ತೆ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಹೂಡಿಕೆದಾರರಿಂದ ಚಿನ್ನದ ಖರೀದಿಯು ಹೆಚ್ಚಳವಾಗಿದೆ. ಇದರಿಂದ ದರ ಏರಿಕೆಯಾಗಿದೆ. ದೇಶೀಯ ಮಾರುಕಟ್ಟೆ ಮೇಲೂ ಇದು ಪರಿಣಾಮ ಬೀರಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹600 ಹೆಚ್ಚಳವಾಗಿ, ₹89,450ರಂತೆ ಮಾರಾಟವಾಗಿದೆ. ಆಭರಣ ಚಿನ್ನದ ದರವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿ ₹89,050 ಆಗಿದೆ.

ಫೆಬ್ರುವರಿ 20 ರಂದು ಶೇ 99.9 ಪರಿಶುದ್ಧತೆ ಮತ್ತು ಶೇ 99.5 ಪರಿಶುದ್ಧತೆ ಚಿನ್ನದ ದರವು ಕ್ರಮವಾಗಿ ₹89,450 ಮತ್ತು ₹89,050ಕ್ಕೆ ತಲುಪಿತ್ತು.

ಬೆಳ್ಳಿ ಧಾರಣೆಯು ಕೆ.ಜಿಗೆ ₹1 ಸಾವಿರ ಹೆಚ್ಚಳವಾಗಿ, ₹1.01 ಲಕ್ಷಕ್ಕೆ ಮುಟ್ಟಿದೆ. ಇದು ಐದು ತಿಂಗಳ ಗರಿಷ್ಠ ಮಟ್ಟವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರವು ₹1,015 (ಶೇ 0.40) ಹೆಚ್ಚಳವಾಗಿದೆ. ಪ್ರತೀ ಔನ್ಸ್ ಚಿನ್ನದ (28.34 ಗ್ರಾಂ) ಬೆಲೆ ₹2.56 ಲಕ್ಷವಾಗಿದೆ.

'ಅಮೆರಿಕದಲ್ಲಿ ಚಿಲ್ಲರೆ ಹಣದುಬ್ಬರವು ಇಳಿಕೆಯಾಗಿದೆ. ಇದರಿಂದ ಅಲ್ಲಿನ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಈ ವರ್ಷವೂ ಬಡ್ಡಿದರ ಕಡಿತಗೊಳಿಸುವ ಸಾಧ್ಯತೆ ಬಗ್ಗೆ ಭರವಸೆ ಮೂಡಿದೆ. ಇದರಿಂದ ಹೂಡಿಕೆದಾರರು ಹಳದಿ ಲೋಹದ ಖರೀದಿಗೆ ಮುಂದಾಗಿದ್ದಾರೆ. ಹಾಗಾಗಿ, ಚಿನ್ನದ ದರ ಏರಿಕೆಯಾಗಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಅಮೆರಿಕದ ಉತ್ಪನ್ನಗಳಿಗೆ ಹೊಸ ಸುಂಕ

ಬ್ರಸೆಲ್ಸ್(ಎಪಿ): ಮದ್ಯ, ಗೋಮಾಂಸ ಸೇರಿದಂತೆ ಅಮೆರಿಕದಿಂದ ಆಮದಾಗುವ ಎಲ್ಲ ಉತ್ಪನ್ನಗಳ ಮೇಲೆ ಹೊಸ ಸುಂಕ ವಿಧಿಸಿ ಕೆನಡಾ ಸೇರಿದಂತೆ ಐರೋಪ್ಯ ಒಕ್ಕೂಟದ (ಇಯು) ಪ್ರಮುಖ ವ್ಯಾಪಾರ ಪಾಲುದಾರ ರಾಷ್ಟ್ರಗಳು ಅಮೆರಿಕಕ್ಕೆ ತಿರುಗೇಟು ನೀಡಿವೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಅಲ್ಯೂಮಿನಿಯಂ ಮತ್ತು ಉಕ್ಕಿನ ಆಮದುಗಳ ಮೇಲೆ ಸುಂಕ ಹೆಚ್ಚಿಸಿರುವುದಕ್ಕೆ ಪ್ರತೀಕಾರವಾಗಿ ಈ ಕ್ರಮಕೈಗೊಳ್ಳಲಾಗಿದೆ.

ಅಮೆರಿಕಕ್ಕೆ ಉಕ್ಕು ಮತ್ತು ಅಲ್ಯೂಮಿನಿಯಂ ಅನ್ನು ಅತೀ ಹೆಚ್ಚು ರಫ್ತು ಮಾಡುವ ರಾಷ್ಟ್ರವಾಗಿ ಕೆನಡಾ ಗುರುತಿಸಿಕೊಂಡಿದೆ. ಉಕ್ಕು ಮತ್ತು ಅಲ್ಯೂಮಿನಿಯಂ ಆಮದಿನ ಮೇಲೆ ಅಮೆರಿಕ ಶೇ 25 ಸುಂಕ ವಿಧಿಸಿರುವುದಕ್ಕೆ, ಕೆನಡಾ ಕೂಡ ಅಮೆರಿಕದಿಂದ ಆಮದು ಮಾಡಿಕೊಳ್ಳುವ ಕಂಪ್ಯೂಟರ್‌ಗಳು ಮತ್ತು ಸರ್ವರ್‌ಗಳು ಹಾಗೂ ಉಪಕರಣಗಳು, ಕ್ರೀಡಾ ಸಾಮಗ್ರಿಗಳು, ಎರಕ ಹೊಯ್ದ ಕಬ್ಬಿಣದ ಉತ್ಪನ್ನಗಳ ಮೇಲೆ ಶೇ 25ರಷ್ಟು ಹೆಚ್ಚು ಸುಂಕವನ್ನು ವಿಧಿಸಿರುವುದಾಗಿ ಹೇಳಿದೆ.

ತಮಿಳುನಾಡು: ₹ ಚಿಹ್ನೆಗೆ ಕೊಕ್

ಒಂದನೇ ಪುಟದಿಂದ...

'₹' ಚಿಹ್ನೆ ಇದ್ದ, 2024–25ನೇ ಸಾಲಿನ ಬಜೆಟ್ ಪ್ರತಿಯನ್ನು ಕೂಡ ಅವರು ತಮ್ಮ ಪೋಸ್ಟ್ ಜತೆ ಹಂಚಿಕೊಂಡಿದ್ದಾರೆ. 'ರೂಪಾಯಿ ಎಂಬುದನ್ನು ಚಿಹ್ನೆ ಬದಲಾಗಿ ಅಕ್ಷರದಲ್ಲಿ ತೋರಿಸುವುದನ್ನು ನಿರ್ಬಂಧಿಸುವ ನಿಯಮವೇನಾದರೂ ಇದೆಯೇ' ಎಂದು ಪ್ರಶ್ನಿಸುವ ಮೂಲಕ ಡಿಎಂಕೆ ತಿರುಗೇಟು ನೀಡಿದೆ.

ಬಿಜೆಪಿಯ ಹಿರಿಯ ನಾಯಕಿ ತಮಿಳಿಸೈ ಸೌಂದರ ರಾಜನ್ ಕೂಡ, ರಾಜ್ಯ ಸರ್ಕಾರದ ಈ ನಡೆಯನ್ನು ಟೀಕಿಸಿದ್ದಾರೆ.

'ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಹಾಗೂ ಅವರ ನೇತೃತ್ವದ ಸರ್ಕಾರದ ಈ ವರ್ತನೆ ಅಸಹ್ಯಕರ' ಎಂದು ಅವರು ಪಿಟಿಐ ವಿಡಿಯೊಗೆ ಪ್ರತಿಕ್ರಿಯಿಸಿದ್ದಾರೆ.

ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಇ.ಕೆ. ಪಳನಿಸ್ವಾಮಿ, 'ರಾಜ್ಯದ ಜ್ವಲಂತ ಸಮಸ್ಯೆಗಳಿಂದ ಜನರ ಗಮನ ಬೇರೆಡೆ ಸೆಳೆಯುವ ತಂತ್ರದ ಭಾಗವಾಗಿ ಸರ್ಕಾರ ಈ ನಿರ್ಧಾರ ಕೈಗೊಂಡಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.

ಬಿಜೆಪಿ ಟೀಕೆಗಳಿಗೆ ಸಾಮಾಜಿಕ ಮಾಧ್ಯಮ 'ಎಕ್ಸ್' ಮೂಲಕ ಪ್ರತಿಕ್ರಿಯಿಸಿರುವ ಡಿಎಂಕೆ ವಕ್ತಾರ ಸರವಣನ್ ಅಣ್ಣಾದೊರೈ,'ಯಾವುದೇ ನಿಯಮವು ತಮಿಳು ಅಕ್ಷರ 'ರೂ' ಅನ್ನು ಬಜೆಟ್ ಪ್ರತಿಗಳಲ್ಲಿ ಬಳಸುವುದನ್ನು ವಿರೋಧಿಸಿಲ್ಲ ಇಲ್ಲವೇ ತಡೆದಿಲ್ಲ. ಹೀಗಾಗಿ ಈ ಆಕ್ರೋಶ ಏಕೆ' ಎಂದಿದ್ದಾರೆ.

ರಾಜ್ಯ ಯೋಜನಾ ಆಯೋಗದ ಉಪಾಧ್ಯಕ್ಷ ಜೆ.ಜಯರಂಜನ್,'ನಾವು ದೇವನಾಗರಿ ಲಿಪಿಯನ್ನು ಬಳಸುವುದಿಲ್ಲ, ಅಷ್ಟೆ' ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಡಿಎಂಕೆ ಶಾಸಕ ಎನ್.ಇಳಿಯನ್, 'ತ್ರಿಭಾಷಾ ಸೂತ್ರವನ್ನು ಹೇರಲು ಯತ್ನಿಸುತ್ತಿರುವ ಕೇಂದ್ರ ಸರ್ಕಾರದ ನಡೆಗೆ ಈ ಬೆಳವಣಿಗೆ ಒಂದು ಪ್ರತಿಕ್ರಿಯೆಯಷ್ಟೆ' ಎಂದಿದ್ದಾರೆ.

ರೂಪಾಯಿ ಚಿಹ್ನೆಯನ್ನು 2010ರ ಜುಲೈ 15ರಂದು ಕೇಂದ್ರ ಸರ್ಕಾರ ಅಳವಡಿಸಿಕೊಂಡಿದೆ.

'₹: ಡಿಎಂಕೆ ಮಾಜಿ ಶಾಸಕರ ಪುತ್ರನಿಂದ ವಿನ್ಯಾಸ'

ಒಂದನೇ ಪುಟದಿಂದ...

'ರೂಪಾಯಿ ಚಿಹ್ನೆಯನ್ನು ವಿನ್ಯಾಸಗೊಳಿಸಿರುವ ಉದಯಕುಮಾರ್ ಅವರು ಡಿಎಂಕೆಯ ಮಾಜಿ ಶಾಸಕರೊಬ್ಬರ ಪುತ್ರ. ಈಗ ಈ ಚಿಹ್ನೆಯನ್ನು ಬಳಸದಿರುವ ನೀವು ಎಂತಹ ಅಜ್ಞಾನಿ, ಸ್ಟಾಲಿನ್ ಅವರೇ' ಎಂದೂ ಅಣ್ಣಾಮಲೈ ಪ್ರಶ್ನಿಸಿದ್ದಾರೆ.

ವಿಲ್ಲುಪುರಂ ಜಿಲ್ಲೆಯ ರಿಷಿವಂದ್ಯಮ್ ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕರ ಪುತ್ರ ಡಿ.ಉದಯ ಕುಮಾರ್ '₹' ಚಿಹ್ನೆ ವಿನ್ಯಾಸ ಮಾಡಿದ್ದಾರೆ. ಸದ್ಯ ಅವರು ಐಐಟಿ–ಗುವಾಹಟಿಯ ಡಿಸೈನ್ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ.

ಈ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿರುವ ಅವರು, 'ನಾನು ವಿನ್ಯಾಸಗೊಳಿಸಿರುವ ರೂಪಾಯಿ ಚಿಹ್ನೆ ಬದಲು ತಮಿಳು ಅಕ್ಷರವನ್ನು ಬಳಸುವುದಕ್ಕೆ ತಮಿಳುನಾಡು ಸರ್ಕಾರ ಏಕೆ ನಿರ್ಧರಿಸಿದೆಯೋ ನನಗೆ ಗೊತ್ತಿಲ್ಲ' ಎಂದಿದ್ದಾರೆ.

'ಈ ನಿರ್ಧಾರ ಕುರಿತು ರಾಜ್ಯ ಸರ್ಕಾರ ಮಾತ್ರ ವಿವರಿಸಬೇಕು. ನಾನು ವಿನ್ಯಾಸ ಮಾಡಿರುವ ಈ ಚಿಹ್ನೆ ಕಳೆದ 15 ವರ್ಷಗಳಿಂದ ಬಳಕೆಯಲ್ಲಿದೆ' ಎಂದೂ ಕುಮಾರ್ ಹೇಳಿದ್ದಾರೆ.

ಅಮೆರಿಕ ಚಿಂತನೆಗೆ ಬೆಂಬಲವಿದೆ, ಷರತ್ತು ಚರ್ಚೆಯಾಗಬೇಕಿದೆ: ಪುಟಿನ್

'ಕದನ ವಿರಾಮ ಪ್ರಸ್ತಾವ: ತಾತ್ವಿಕ ಒಪ್ಪಿಗೆ'

ಮಾಸ್ಕೊ/ಕೀವ್ (ರಾಯಿಟರ್ಸ್/ಎಎಫ್‌ಪಿ/ಎಪಿ): ಉಕ್ರೇನ್‌ನಲ್ಲಿ 30 ದಿನ ಅವಧಿಗೆ ಕದನವಿರಾಮ ಘೋಷಿಸಬೇಕು ಎಂಬ ಅಮೆರಿಕದ ಪ್ರಸ್ತಾವವನ್ನು ತಾತ್ವಿಕವಾಗಿ ಒಪ್ಪಿಕೊಂಡಿರುವುದಾಗಿ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಪ್ರತಿಕ್ರಿಯಿಸಿದ್ದಾರೆ.

ಆದರೆ,ಕದನ ವಿರಾಮ ಘೋಷಿಸುವ ಷರತ್ತುಗಳನ್ನು ಅಂತಿಮಗೊಳಿಸಬೇಕಾಗಿದೆ ಹಾಗೂ ಇದು, ಶಾಂತಿ ಪ್ರಕ್ರಿಯೆ ಸುದೀರ್ಘ ಅವಧಿ ಇರಲು ಪೂರಕವಾಗಿರಬೇಕಿದೆ ಎಂದು ಹೇಳಿದ್ದಾರೆ.

'ಕದನ ವಿರಾಮ ಚಿಂತನೆ ಸರಿಯಾಗಿದೆ. ಖಂಡಿತವಾಗಿ ಇದನ್ನು ಬೆಂಬಲಿಸಲಿದ್ದೇವೆ. ಆದರೆ, ಈ ಕುರಿತು ನಾವು ಅಮೆರಿಕದ ನಮ್ಮ ಸಹೋದ್ಯೋಗಿಗಳು, ಭಾಗಿದಾರರ ಜೊತೆಗೆ ಚರ್ಚಿಸಬೇಕಾಗಿದೆ' ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಉಕ್ರೇನ್‌ನ ಸೇನೆಯು ರಷ್ಯಾದ ಕರ್ಸ್ಕ್ ವಲಯವನ್ನು ಸುತ್ತುವರಿದಿವೆ. ಕದನವಿರಾಮ ಘೋಷಣೆಗೂ ಮೊದಲು ಸೇನೆಯು ಶಸ್ತ್ರಾಸ್ತ್ರಗಳನ್ನು ಕೆಳಗಿಟ್ಟು, ಶರಣಾಗಲಿವೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಕನದವಿರಾಮ ಒಪ್ಪುವಂತೆ ಅಮೆರಿಕವೇ ಉಕ್ರೇನ್ ಅನ್ನು ಒಪ್ಪಿಸಲಿದೆ ಎಂದು ಭಾವಿಸುತ್ತೇನೆ. ಯುದ್ಧಭೂಮಿಯ ಈಗಿನ ಪರಿಸ್ಥಿತಿಯಿಂದಾಗಿ ಉಕ್ರೇನ್ ಕೂಡಾ ಈ ಕುರಿತು ಆಕಸ್ತಿ ಹೊಂದಿರುವಂತಿದೆ ಎಂದು ಅಭಿಪ್ರಾಯ ಪಟ್ಟರು.

ಯುದ್ಧದಿಂದಾಗಿ ಸುಡ್ಜ ನಗರದಲ್ಲಾಗಿರುವ ನಾಶ —ಎಎಫ್‌ಪಿ ಚಿತ್ರ

ಇದಕ್ಕೂ ಮುನ್ನ ಕದನ ವಿರಾಮ ಕುರಿತ ಅಮೆರಿಕ ಪ್ರಸ್ತಾವಕ್ಕೆ ಉಕ್ರೇನ್ ಸಮ್ಮತಿ ಸೂಚಿಸಿ ಎರಡು ದಿನ ಕಳೆದಿದ್ದರೂ ರಷ್ಯಾ ಪ್ರತಿಕ್ರಿಯಿಸಿರಲಿಲ್ಲ. 'ಈ ವಿಚಾರದ ಬಗ್ಗೆ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರೇ ಸ್ಪಷ್ಟ ನಿಲುವು ವ್ಯಕ್ತಪಡಿಸಲಿದ್ದಾರೆ ಎಂದು ಪುಟಿನ್ ಅವರ ಸಲಹೆಗಾರ ಯುರಿ ಯುಶೆಕಾಫ್ ಅವರು ಸುದ್ದಿ ವಾಹಿನಿಯೊಂದಕ್ಕೆ ಪ್ರತಿಕ್ರಿಯಿಸಿದ್ದರು.

'ದೇಶದ ಹಿತದೃಷ್ಟಿಯಿಂದ ದೂರಗಾಮಿ ಒಪ್ಪಂದ ಮೂಡಬೇಕು ಎಂಬುದು ನಮ್ಮ ನಿಲುವು. ಶಾಂತಿ ಒಪ್ಪಂದದಂತೆ ತೋರುವ ಇಂಥ ಪ್ರಸ್ತಾವಗಳ ಅಗತ್ಯವೇ ಇಲ್ಲ' ಎಂದರು. 'ಈ ಪ್ರಸ್ತಾವವನ್ನು ರಷ್ಯಾ ತಿರಸ್ಕರಿಸುತ್ತದೆಯೇ' ಎಂಬ ಪ್ರಶ್ನೆಗೆ ಪುಟಿನ್ ತೀರ್ಮಾನಿಸುವರು ಎಂದಿದ್ದರು.

ಸೇನಾ ಕಾರ್ಯಾಚರಣೆ: ಕದನ ವಿರಾಮ ಘೋಷಣೆ ಕುರಿತು ಚರ್ಚೆ ನಡೆದಿರುವಂತೇ ಕರ್ಸ್ಕ್ ನಗರದಿಂದ ರಷ್ಯಾ ಗುರುವಾರ ಉಕ್ರೇನ್ ಸೇನೆಯನ್ನು ಹಿಮ್ಮೆಟ್ಟಿಸಿದೆ. ರಷ್ಯಾ ಸೇನೆಗೆ ಉತ್ತೇಜನನೀಡಲು ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಸೇನಾ ಸಮವಸ್ತ್ರದಲ್ಲಿಯೇ ಕರ್ಸ್ಕ್ ನಗರಕ್ಕೆ ತೆರಳಿದ್ದರು. ಈ ಭೇಟಿಯ ವಿಡಿಯೊವನ್ನು ಮಾರ್ಚ್ 12ಕ್ಕೆ ರಷ್ಯಾ ಹಂಚಿಕೊಂಡಿತ್ತು.

'ಯುದ್ಧದಾಹಿ ರಷ್ಯಾ'

ಕದನ ವಿರಾಮ ಪ್ರಸ್ತಾವ ಕುರಿತ ಚರ್ಚೆಗೆ ರಷ್ಯಾದಿಂದ 'ಅರ್ಥಪೂರ್ಣ'ವಾದ ಪ್ರತಿಕ್ರಿಯೆ ಬಂದಿಲ್ಲ. ರಷ್ಯಾದ ಈ ನಡೆಯು, ಅದಕ್ಕೆ ಇರುವ ಯುದ್ಧ ದಾಹವನ್ನೂ ಈ ಮೂಲಕ ಶಾಂತಿ ಸ್ಥಾಪನೆ ಮುಂದೂಡಲು ಬಯಸುವ ಅದರ ಸ್ವಭಾವವನ್ನು ತೋರಿಸುತ್ತದೆ. ಯುದ್ಧ ಅಂತ್ಯಗೊಳಿಸಲು ಅಮೆರಿಕ ಒತ್ತಡ ಹೇರುತ್ತದೆ ಎಂದು ನಾವು ನಂಬಿದ್ದೇವೆ

ವೊಲೊಡಿಮಿರ್ ಝೆಲೆನ್‌ಸ್ಕಿ
ಉಕ್ರೇನ್ ಅಧ್ಯಕ್ಷ

ಪಾಕ್: ರೈಲು ಮೇಲಿನ ದಾಳಿ– 25 ಶವ ಪತ್ತೆ

ಮ್ಯಾಕ್ (ಪಾಕಿಸ್ತಾನ) (ಎಎಫ್‌ಪಿ): ಪಾಕಿಸ್ತಾನದ ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ಬಂಡುಕೋರರು ಜಾಫರ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಗುಂಡಿನ ದಾಳಿ ನಡೆಸಿದ್ದರಿಂದ ಹತರಾದ 21 ಒತ್ತೆಯಾಳುಗಳ ಶವಗಳು ಸೇರಿ 25 ಮಂದಿಯ ಶವಗಳು ಘಟನಾ ಸ್ಥಳದಲ್ಲಿ ಪತ್ತೆಯಾಗಿವೆ ಎಂದು ಗುರುವಾರ ಅಧಿಕಾರಿಯೊಬ್ಬರು ತಿಳಿಸಿದರು.

ಸ್ಥಳದಿಂದ ಬೆಳಿಗ್ಗೆ 25 ಶವಗಳನ್ನು ಹತ್ತಿರದ ಮ್ಯಾಕ್ ಪಟ್ಟಣಕ್ಕೆ ರೈಲಿನಲ್ಲಿ ಸಾಗಿಸಲಾಯಿತು ಎಂದು ಬಲೂಚಿಸ್ತಾನದ ರೈಲ್ವೆ ಅಧಿಕಾರಿಯೊಬ್ಬರು ಹೇಳಿದರು.

ಮಂಗಳವಾರ ಮಧ್ಯಾಹ್ನ ಕ್ವೆಟ್ಟಾದಿಂದ ಪೆಶಾವರಕ್ಕೆ ಒಂಬತ್ತು ಬೋಗಿಗಳ ಜಾಫರ್ ಎಕ್ಸ್‌ಪ್ರೆಸ್ ರೈಲು ಸಂಚರಿಸುತ್ತಿತ್ತು. ಪರ್ವತಗಳಿಂದ ಕೂಡಿದ ಬಲೂಚಿಸ್ತಾನ್‌ನ ಗಡಾಲರ್ ಮತ್ತು ಪೆಹ್ರೊ ಕುನ್ರಿ ಕಣಿವೆ ಪ್ರದೇಶದಲ್ಲಿ ರೈಲು ಹಳಿ ಮೇಲೆ ಪ್ರತ್ಯೇಕತಾವಾದಿ ಗುಂಪು ಬಾಂಬ್ ಸ್ಫೋಟಿಸಿ, ಸುಮಾರು 450 ಪ್ರಯಾಣಿಕರಿದ್ದ ರೈಲಿಗೆ ನುಗ್ಗಿ, ಪ್ರಯಾಣಿಕರನ್ನು ಒತ್ತೆ ಇರಿಸಿಕೊಂಡಿತ್ತು. ಬುಧವಾರ ತಡರಾತ್ರಿ ಕೊನೆಗೊಂಡ ಎರಡು ದಿನಗಳ ರಕ್ಷಣಾ ಕಾರ್ಯಾಚರಣೆಯಲ್ಲಿ 340ಕ್ಕೂ ಹೆಚ್ಚು ಪ್ರಯಾಣಿಕರನ್ನು ರಕ್ಷಿಸಲಾಗಿದೆ ಎಂದು ಭದ್ರತಾ ಪಡೆಗಳು ತಿಳಿಸಿವೆ.

21 ಒತ್ತೆಯಾಳುಗಳು ಮತ್ತು ನಾಲ್ವರು ಯೋಧರನ್ನು ಪ್ರತ್ಯೇಕತಾವಾದಿಗಳು ಕೊಂದಿದ್ದಾರೆ. ಕಾರ್ಯಾಚರಣೆ ವೇಳೆ 33 ಪ್ರತ್ಯೇಕತಾವಾದಿಗಳನ್ನು ಹತ್ಯೆ ಮಾಡಲಾಗಿದೆ ಎಂದು ಪಾಕಿಸ್ತಾನದ ಸೇನೆಯು ಅಧಿಕೃತ ಹೇಳಿಕೆಯಲ್ಲಿ ತಿಳಿಸಿದೆ. ಈ ದಾಳಿಯ ಹೊಣೆಯನ್ನು ಬಲೂಚ್ ಲಿಬರೇಶನ್ ಆರ್ಮಿ (ಬಿಎಲ್‌ಎ) ಹೊತ್ತುಕೊಂಡಿದೆ.

ಮೃತರಲ್ಲಿ ಬಹುತೇಕರು ಯೋಧರು?

'ಮೃತ ಒತ್ತೆಯಾಳುಗಳನ್ನು, ರೈಲಿನಲ್ಲಿದ್ದ 19 ಮಂದಿ ಸೇನಾ ಸಿಬ್ಬಂದಿ, ಒಬ್ಬ ಪೊಲೀಸ್ ಅಧಿಕಾರಿ ಹಾಗೂ ಒಬ್ಬ ರೈಲ್ವೆ ಅಧಿಕಾರಿ ಎಂದು ಗುರುತಿಸಲಾಗಿದೆ. ಇನ್ನು ನಾಲ್ವರ ಗುರುತು ಪತ್ತೆಯಾಗಿಲ್ಲ' ಎಂದು ಹೆಸರು ಹೇಳಲು ಇಚ್ಛಿಸದ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಯೋಧರ ಸಾವಿನ ಸಂಖ್ಯೆ 28ಕ್ಕೆ ಏರಿಕೆಯಾಗಿದೆ. ಇದರಲ್ಲಿ ಪ್ರತ್ಯೇಕತಾವಾದಿಗಳು ಒತ್ತೆ ಇರಿಸಿಕೊಂಡಿದ್ದ, ರಜೆ ಮೇಲಿದ್ದ 27 ಯೋಧರು ಸೇರಿದ್ದಾರೆ' ಎಂದು ಹೆಸರು ಬಹಿರಂಗಪಡಿಸಬಾರದೆಂಬ ಷರತ್ತಿನ ಮೇಲೆ ಸೇನಾ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಇದನ್ನು ಸೇನಾ ಕಾರ್ಯಾಚರಣೆಯ ಮೇಲ್ವಿಚಾರಣೆಯಲ್ಲಿದ್ದ ಹಿರಿಯ ಅಧಿಕಾರಿಯೊಬ್ಬರು ದೃಢಪಡಿಸಿದ್ದಾರೆ. ಪ್ರಧಾನಿ ಮುಹಮ್ಮದ್ ಶೆಹಬಾಜ್ ಶರೀಫ್ ಕ್ವೆಟ್ಟಾಕ್ಕೆ ಭೇಟಿ ನೀಡಿದರು.

ಹೇಯ್ಲಿ, ಬ್ರಂಟ್, ಹರ್ಮನ್‌ಪ್ರೀತ್ ಅಬ್ಬರ • ಗುಜರಾತ್ ಜೈಂಟ್ಸ್‌ಗೆ ನಿರಾಸೆ

ಫೈನಲ್‌ಗೆ ಲಗ್ಗೆಯಿಟ್ಟ ಮುಂಬೈ

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 213 (ಹೇಯ್ಲಿ ಮ್ಯಾಥ್ಯೂಸ್ 77, ನ್ಯಾಟ್ ಶಿವರ್ ಬ್ರಂಟ್ 77, ಹರ್ಮನ್‌ಪ್ರೀತ್ ಕೌರ್ 36, ಡೇನಿಯಲ್ ಗಿಬ್ಸನ್ 40ಕ್ಕೆ2).ಗುಜರಾತ್ ಜೈಂಟ್ಸ್: 19.2 ಓವರ್‌ಗಳಲ್ಲಿ 166 (ಡೇನಿಯಲ್ ಗಿಬ್ಸನ್ 34, ಫೋಬೆ ಲಿಚ್‌ಫೀಲ್ಡ್ 31, ಭಾರತಿ ಫೂಲ್ಮಾಲಿ 30; ಹೇಯ್ಲಿ ಮ್ಯಾಥ್ಯೂಸ್ 31ಕ್ಕೆ 3, ಅಮೆಲಿಯಾ ಕೆರ್ 28ಕ್ಕೆ 2, ನ್ಯಾಟ್ ಶಿವರ್ ಬ್ರಂಟ್ 31ಕ್ಕೆ 1). ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 47 ರನ್‌ಗಳ ಜಯ.

ಪಂದ್ಯದ ಆಟಗಾರ್ತಿ: ಹೇಯ್ಲಿ ಮ್ಯಾಥ್ಯೂಸ್

ಮುಂಬೈ ಇಂಡಿಯನ್ಸ್‌ನ ನ್ಯಾಟ್ ಶಿವರ್ ಬ್ರಂಟ್ ಮತ್ತು ಹೇಯ್ಲಿ ಮ್ಯಾಥ್ಯೂಸ್ ಪಿಟಿಐ ಚಿತ್ರಗಳು

ಮುಂಬೈ (ಪಿಟಿಐ): ಹೇಯ್ಲಿ ಮ್ಯಾಥ್ಯೂಸ್ ಮತ್ತು ನ್ಯಾಟ್ ಶಿವರ್ ಬ್ರಂಟ್ ಅವರ ಆಲ್‌ರೌಂಡ್ ಆಟದ ಬಲದಿಂದ ಮುಂಬೈ ಇಂಡಿಯನ್ಸ್ ತಂಡವು ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಎಲಿಮಿನೇಟರ್‌ನಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು 47 ರನ್‌ಗಳಿಂದ ಮಣಿಸಿ ಎರಡನೇ ಬಾರಿ ಫೈನಲ್ ಪ್ರವೇಶಿಸಿತು.

ಶನಿವಾರ ನಡೆಯುವ ಫೈನಲ್‌ನಲ್ಲಿ 2023ರ ಆವೃತ್ತಿಯ ಚಾಂಪಿಯನ್ ಮುಂಬೈ ತಂಡವು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಎದುರಿಸಲಿದೆ. ಡೆಲ್ಲಿ ತಂಡವು ಲೀಗ್ ಹಂತದಲ್ಲಿ ಅಗ್ರಸ್ಥಾನದೊಡನೆ ಸತತ ಮೂರನೇ ಬಾರಿ ಫೈನಲ್ ತಲುಪಿದೆ.

ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಆತಿಥೇಯ ಇಂಡಿಯನ್ಸ್ ತಂಡವು ಹೇಯ್ಲಿ (77;50ಎ, 4x10, 6x3) ಮತ್ತು ಬ್ರಂಟ್ (77;41ಎ, 4x10, 6x2) ಅವರ ಅಬ್ಬರದ ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 213 ರನ್ ಗಳಿಸಿತು. ಈ ಬೃಹತ್ ಮೊತ್ತದ ಗುರಿಯನ್ನು ಬೆನ್ನಟ್ಟಿದ ಗುಜರಾತ್ ತಂಡವು 19.2 ಓವರ್‌ಗಳಲ್ಲಿ 166 ರನ್ ಗಳಿಸಿ ಹೋರಾಟ ಮುಗಿಸಿತು. ಇದು ಜೈಂಟ್ಸ್‌ಗೆ ಮುಂಬೈ ವಿರುದ್ಧ ಸತತ ಏಳನೇ ಸೋಲಾಗಿದೆ.

ಗುಜರಾತ್‌ನ ಡೇನಿಯಲ್ ಗಿಬ್ಸನ್ (34), ಫೋಬೆ ಲಿಚ್‌ಫೀಲ್ಡ್ (31), ಭಾರತಿ ಫೂಲ್ಮಾಲಿ (30) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ನಿರಾಸೆ ಮೂಡಿಸಿದರು. ಹೇಯ್ಲಿ ಮತ್ತು ಅಮೆಲಿಯಾ ಕೆರ್ ಕ್ರಮವಾಗಿ ಮೂರು ಮತ್ತು ಎರಡು ವಿಕೆಟ್ ಪಡೆದು ಎದುರಾಳಿ ತಂಡಕ್ಕೆ ಕಡಿವಾಣ ಹಾಕಿದರು.

ಇದಕ್ಕೂ ಮೊದಲು ಟಾಸ್ ಗೆದ್ದ ಗುಜರಾತ್ ಜೈಂಟ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಯಷ್ತಿಕಾ ಭಾಟಿಯಾ (15; 14ಎ) ಮತ್ತು ಹೇಯ್ಲಿ ಅವರು ಉತ್ತಮ ಆರಂಭ ನೀಡಿದರು. ಆದರೆ 5ನೇ ಓವರ್‌ನಲ್ಲಿ ಡೇನಿಯಲ್ ಗಿಬ್ಸನ್ ಬೌಲಿಂಗ್‌ನಲ್ಲಿ ಯಷ್ತಿಕಾ ಔಟಾದರು. ಈ ಸಂದರ್ಭದಲ್ಲಿ ಹೇಯ್ಲಿ ಜೊತೆಗೂಡಿದ ಬ್ರಂಟ್ ಎರಡನೇ ವಿಕೆಟ್ ಜೊತೆಯಾಟದಲ್ಲಿ 133 ರನ್ ಸೇರಿಸಿದರು. ಇವರಿಬ್ಬರು 17ನೇ ಓವರ್‌ವರೆಗೂ ಬೌಲರ್‌ಗಳನ್ನು ಕಾಡಿದರು.

ಕಶ್ವಿ ಗೌತಮ್ ಎಸೆತದಲ್ಲಿ ದೊಡ್ಡ ಹೊಡೆತಕ್ಕೆ ಯತ್ನಿಸಿದ ಮ್ಯಾಥ್ಯೂಸ್ ಅವರು ಬೆತ್ ಮೂನಿಗೆ ಕ್ಯಾಚಿತ್ತರು. ಆದರೆ ಗುಜರಾತ್ ಸಂಕಷ್ಟ ಮುಗಿಯಲಿಲ್ಲ. ಕ್ರೀಸ್‌ಗೆ ಬಂದ ನಾಯಕಿ ಹರ್ಮನ್‌ಪ್ರೀತ್ ಕೌರ್ (36; 12ಎ, 4x2, 6x4) ಮಿಂಚಿನ ಬ್ಯಾಟಿಂಗ್ ಮಾಡಿ ತಂಡದ ಮೊತ್ತವು 'ದ್ವಿಶತಕ' ದಾಟಲು ಕಾರಣರಾದರು. 300ರ ಸ್ಟ್ರೈಕ್‌ರೇಟ್‌ನಲ್ಲಿ ಅವರು ಬ್ಯಾಟಿಂಗ್ ಮಾಡಿದರು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ಆಟಗಾರರ ಅಭ್ಯಾಸ

ಭುವಿ ಬೌಲಿಂಗ್, ಡಿಕೆ ಕೋಚಿಂಗ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಾನನಗರಿಯಲ್ಲಿ ಹೋಳಿ ಹಬ್ಬದ ಜೊತೆಜೊತೆಗೆ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ರಂಗೇರಲು ಆರಂಭವಾಗಿದೆ. ಟೂರ್ನಿ ಆರಂಭ ವಾಗಲು ಇನ್ನೂ ಎಂಟು ದಿನ ಬಾಕಿ ಇದೆ. ಆದರೂ ಬೆಂಗಳೂರಿನಲ್ಲಿ ಅಭಿಮಾನಿಗಳ ಚಿತ್ತ ತಮ್ಮ ನೆಚ್ಚಿನ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದತ್ತ ನೆಟ್ಟಿದೆ.

ಈ ಬಾರಿ ಹೊಸ ನಾಯಕ ರಜತ್ ಪಾಟೀದಾರ್ ಮುಂದಾಳತ್ವದಲ್ಲಿ ಕಣಕ್ಕಿಳಿಯಲು ಆರ್‌ಸಿಬಿ ಸಿದ್ಧವಾಗಿದೆ. 2008ರಿಂದ ಇಲ್ಲಿಯವರೆಗೂ ತಂಡವು ಪ್ರಶಸ್ತಿ ಜಯಿಸಲು ಸಾಧ್ಯವಾಗಿಲ್ಲ. ಈ ಬಾರಿ ಕೆಲವು ಹೊಸ ಆಟಗಾರರೊಂದಿಗೆ ಕಣಕ್ಕಿಲಿಯಲಿದೆ. ಅದಕ್ಕಾಗಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ಆರಂಭಿಸಿದೆ.

'ಸ್ವಿಂಗ್ ಸ್ಟಾರ್' ಭುವನೇಶ್ವರ್ ಕುಮಾರ್, ಸ್ಪಿನ್ ಆಲ್‌ರೌಂಡರ್ ಕೃಣಾಲ್ ಪಾಂಡ್ಯ, ಬ್ಯಾಟರ್ ದೇವದತ್ತ ಪಡಿಕ್ಕಲ್ ಅವರು ಈ ವರ್ಷದ ಹರಾಜು ಪ್ರಕ್ರಿಯೆಯಲ್ಲಿ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಅವರು ಮತ್ತು , ಸ್ವಪ್ನಿಲ್ ಸಿಂಗ್, ವೇಗಿ ಯಶ್ ದಯಾಳ್ ಮತ್ತಿತರರು ಅಭ್ಯಾಸ ನಡೆಸಿದರು.

ಹೋದ ಆವೃತ್ತಿಗಳಲ್ಲಿ ಆರ್‌ಸಿಬಿ ತಂಡದ ವಿಕೆಟ್‌ಕೀಪರ್–ಬ್ಯಾಟರ್ ಆಗಿದ್ದ ದಿನೇಶ್ ಕಾರ್ತಿಕ್ ಈಗ ಬ್ಯಾಟಿಂಗ್ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ ಆವೃತ್ತಿಯಲ್ಲಿ 5 ಅಥವಾ 6ನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದು ಬೀಸಾಟವಾಡಿ ಅಭಿಮಾನಿಗಳ ಮನ ಗೆದ್ದಿದ್ದ ದಿನೇಶ್ ಈಗ ಹೊಸ ಪಾತ್ರ ನಿರ್ವಹಿಸುವರು. ಆಟಗಾರರ ಅಭ್ಯಾಸ ಸಂದರ್ಭದಲ್ಲಿ ಮುಖ್ಯ ಕೋಚ್ ಆ್ಯಂಡಿ ಫ್ಲವರ್ ಅವರೊಂದಿಗೆ ಸೇರಿ ಕಾರ್ಯನಿರ್ವಹಿಸುತ್ತಿದ್ದಾರೆ.

ಭುವನೇಶ್ವರ್ ಕುಮಾರ್ ಮತ್ತು ರೊಮಾರಿಯೊ ಶೆಫರ್ಡ್ –ಆರ್‌ಸಿಬಿ ಟ್ವೀಟ್

ಆಟಗಾರರು ಗುರುವಾರ ನೆಟ್ಸ್‌ನಲ್ಲಿ ನಾಲ್ಕು ಗಂಟೆಗಳಿಗೂ ಹೆಚ್ಚು ಕಾಲ ಅಭ್ಯಾಸ ನಡೆಸಿದರು.

ಭಾರತ ತಂಡವು ಚಾಂಪಿಯನ್ಸ್ ಟ್ರೋಫಿ ಜಯಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ವಿರಾಟ್ ಕೊಹ್ಲಿಯ ಆಗಮನಕ್ಕಾಗಿ ತಂಡವು ಕಾದಿದೆ. ವಿದೇಶಿ ಆಟಗಾರರಾದ ಫಿಲ್ ಸಾಲ್ಟ್, ಲಿಯಾಮ್ ಲಿವಿಂಗ್‌ಸ್ಟೋನ್ ಅವರಿನ್ನೂ ತಂಡ ಸೇರಿಕೊಳ್ಳಬೇಕಿದೆ. ಸೋಮವಾರ ಇಲ್ಲಿನಡೆಯಲಿರುವ ತಂಡದ ಅನ್‌ಬಾಕ್ಸ್ ಸಮಯಕ್ಕೆ ಪೂರ್ಣ ತಂಡವು ಹಾಜರಾಗುವ ನಿರೀಕ್ಷೆ ಇದೆ.

ಬ್ರೂಕ್‌ಗೆ 2 ವರ್ಷ ನಿಷೇಧ

ನವದೆಹಲಿ (ಪಿಟಿಐ): ಇಂಗ್ಲೆಂಡ್ ಬ್ಯಾಟರ್ ಹ್ಯಾರಿ ಬ್ರೂಕ್ ಅವರನ್ನು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯ ಎರಡು ಆವೃತ್ತಿ ಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ.

ಅವರು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಪ್ರತಿನಿಧಿಸುತ್ತಾರೆ. ಆದರೆ ಅವರುಪ್ರಸಕ್ತ ವರ್ಷದ ಟೂರ್ನಿಯಿಂದ ಕೊನೆ ಕ್ಷಣದಲ್ಲಿ ಹಿಂದೆ ಸರಿದಿದ್ದರು. ಹೋದ ವರ್ಷವೂ ಅವರು ಅಲಭ್ಯರಾಗಿದ್ದರು.

'ಐಪಿಎಲ್‌ನಿಂದ ಹಿಂದೆ ಸರಿಯುವ ನಿರ್ಧಾರವನ್ನು ತೆಗೆದುಕೊಳ್ಳಲು ನನಗೆ ಬಹಳ ಕಠಿಣವೆನಿಸಿತು.

'ವಿದೇಶದ ಆಟಗಾರರು ಹರಾಜು ಪ್ರಕ್ರಿಯೆಗೆ ನೋಂದಣಿ ಮಾಡಿಕೊಳ್ಳುತ್ತಾರೆ. ತಂಡಕ್ಕೆ ಆಯ್ಕೆಯಾಗುತ್ತಾರೆ. ಆದರೆ ಟೂರ್ನಿ ಆರಂಭವಾಗುವ ಮುಂಚೆ ತಾವು ಅಲಭ್ಯ ಎಂದು ಘೋಷಿಸಿಕೊಳ್ಳುತ್ತಾರೆ. ಇಂತಹ ನಡವಳಿಕೆ ನಿಯಂತ್ರಿಸಲು ಐಪಿಎಲ್‌ನಲ್ಲಿ ನಿಯಮ ಇದೆ' ಎಂದು ಬಿಸಿಸಿಐ ದಾಖಲೆಗಳಲ್ಲಿ ತಿಳಿಸಲಾಗಿದೆ.

ಈ ನಿಯಮದ ಪ್ರಕಾರ ಬ್ರೂಕ್ ಅವರನ್ನು 2025 ಮತ್ತು 2026ರ ಆವೃತ್ತಿಗಳಿಗೆ ನಿಷೇಧಿಸಲಾಗಿದೆ.

ಐಎಂಎಲ್: ಇಂಡಿಯಾ ಮಾಸ್ಟರ್ಸ್ ಫೈನಲ್‌ಗೆ

ರಾಯಪುರ್ (ಪಿಟಿಐ): ಯುವರಾಜ್ ಸಿಂಗ್ (59; 30ಎ, 4x1, 6x7) ಅವರ ಅರ್ಧಶತಕ ಮತ್ತು ಶಹಬಾಜ್ ನದೀಂ (15ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಇಂಡಿಯಾ ಮಾಸ್ಟರ್ಸ್ ತಂಡವು ಗುರುವಾರ ಇಂಟರ್‌ನ್ಯಾಷನಲ್ ಮಾಸ್ಟರ್ಸ್ ಲೀಗ್‌ನ ಸೆಮಿಫೈನಲ್‌ನಲ್ಲಿ 94 ರನ್‌ಗಳಿಂದ ಆಸ್ಟ್ರೇಲಿಯಾ ಮಾಸ್ಟರ್ಸ್ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿತು.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಇಂಡಿಯಾ ತಂಡವು ಸಚಿನ್ ತೆಂಡೂಲ್ಕರ್ (42;30ಎ, 4x7) ಮತ್ತು ಯುವರಾಜ್ ಅವರ ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 220 ರನ್ ಕಲೆ ಹಾಕಿತು. ಈ ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ 126 ರನ್‌ಗೆ ಆಲೌಟ್ ಆಯಿತು. ಶಹಬಾಜ್ ನಾಲ್ಕು ವಿಕೆಟ್ ಪಡೆದು ಮಿಂಚಿದರೆ, ವಿನಯಕುಮಾರ್ ಮತ್ತು ಇರ್ಫಾನ್ ಪಠಾಣ್ ತಲಾ ಎರಡು ವಿಕೆಟ್ ಪಡೆದರು.

ಮತ್ತೊಂದು ಸೆಮಿಫೈನಲ್‌ನಲ್ಲಿ ಶ್ರೀಲಂಕಾ ಮತ್ತು ವೆಸ್ಟ್ ಇಂಡೀಸ್ ತಂಡಗಳು ಶುಕ್ರವಾರ ಸೆಣಸಲಿದ್ದು, ವಿಜೇತ ತಂಡವು ಭಾನುವಾರ ಇಂಡಿಯಾ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ಇಂಡಿಯಾ ಮಾಸ್ಟರ್ಸ್: 20 ಓವರ್‌ಗಳಲ್ಲಿ 7ಕ್ಕೆ 220 (ಸಚಿನ್ ತೆಂಡೂಲ್ಕರ್ 42, ಯುವರಾಜ್ ಸಿಂಗ್ 59, ಸ್ಟುವರ್ಟ್ ಬಿನ್ನಿ 36; ಝೇವಿಯರ್ ದೊಹಾರ್ತಿ 30ಕ್ಕೆ 2, ಡೇನಿಯಲ್ ಕ್ರಿಶ್ಚಿಯನ್ 40ಕ್ಕೆ 2). ಆಸ್ಟ್ರೇಲಿಯಾ ಮಾಸ್ಟರ್ಸ್: 18.1 ಓವರ್‌ಗಳಲ್ಲಿ 126 (ಬೆನ್ ಕಟಿಂಗ್ 39; ಶಹಬಾಜ್ ನದೀಂ 15ಕ್ಕೆ 4, ವಿನಯಕುಮಾರ್ 10ಕ್ಕೆ 2, ಇರ್ಫಾನ್ ಪಠಾಣ್ 31ಕ್ಕೆ 2. ಫಲಿತಾಂಶ: ಇಂಡಿಯಾ ಮಾಸ್ಟರ್ಸ್‌ಗೆ 94 ರನ್‌ಗಳ ಜಯ

ಯುವರಾಜ್ ಸಿಂಗ್ ಬ್ಯಾಟಿಂಗ್ –ಐಎಂಎಲ್ ಎಕ್ಸ್ ಚಿತ್ರ

ಕೊಕೇನ್ ವ್ಯವಹಾರ ಮೆಕ್‌ಗಿಲ್ ದೋಷಿ

ಸಿಡ್ನಿ (ಪಿಟಿಐ): ಆಸ್ಟ್ರೇಲಿಯಾದ ಮಾಜಿ ಲೆಗ್ ಸ್ಪಿನ್ನರ್ ಸ್ಟುವರ್ಟ್ ಮೆಕ್‌ಗಿಲ್ ಅವರು ಕೊಕೇನ್ ವ್ಯವಹಾರದಲ್ಲಿ ಭಾಗಿಯಾಗಿರುವ ಆರೋಪದಲ್ಲಿ ತಪ್ಪಿತಸ್ಥನೆಂದು ಸಾಬೀತಾಗಿದೆ. ಆದರೆ, ದೊಡ್ಡ ಪ್ರಮಾಣದ ಮಾದಕವಸ್ತು ಪೂರೈಕೆ ಪ್ರಕರಣದಲ್ಲಿ ಅವರನ್ನು ಖುಲಾಸೆಗೊಳಿಸಲಾಗಿದೆ.

2021ರ ಏಪ್ರಿಲ್‌ನಲ್ಲಿ ನಡೆದಿದ್ದ ಒಂದು ಕೆ.ಜಿ ಕೊಕೇನ್ (ಅಂದಾಜು ₹1.80 ಕೋಟಿ ಮೌಲ್ಯ) ವ್ಯವಹಾರಕ್ಕೆ ಅನುಕೂಲ ಮಾಡಿಕೊಟ್ಟ ಆರೋಪದಿಂದ 54 ವರ್ಷ ವಯಸ್ಸಿನ ಮೆಕ್‌ಗಿಲ್ ಅವರನ್ನು ಗುರುವಾರ ಸಿಡ್ನಿ ಜಿಲ್ಲಾ ನ್ಯಾಯಾಲಯ ಖುಲಾಸೆಗೊಳಿಸಿತು.

ಆಸ್ಟ್ರೇಲಿಯಾ ಪರ 44 ಟೆಸ್ಟ್ ಪಂದ್ಯಗಳನ್ನು ಆಡಿರುವ ಮೆಕ್‌ಗಿಲ್, ತೀರ್ಪನ್ನು ಓದುತ್ತಿದ್ದಂತೆ ಕೊಂಚ ಭಾವೋದ್ವೇಗಕ್ಕೆ ಒಳಗಾದರು ಎಂದು ಆಸ್ಟ್ರೇಲಿಯಾದ ಮಾಧ್ಯಮ ವರದಿ ಮಾಡಿದೆ. ಅವರ ಶಿಕ್ಷೆಯ ಪ್ರಮಾಣದ ವಿಚಾರಣೆಯನ್ನು ಎಂಟು ವಾರಗಳ ಕಾಲ ಮುಂದೂಡಲಾಗಿದೆ.

ಕೊಕೇನ್ ವ್ಯವಹಾರದಲ್ಲಿ ತಮ್ಮ ಪಾತ್ರವಿಲ್ಲ ಎಂದು ಮೆಕ್‌ಗಿಲ್ ಮನವರಿಕೆ ಮಾಡಲು ಪ್ರಯತ್ನಿಸಿದರು. ಆದರೆ, ಪ್ರಾಸಿಕ್ಯೂಟರ್‌ಗಳು ಅವರ ಪಾಲ್ಗೊಳ್ಳುವಿಕೆಯಿಲ್ಲದೆ ವ್ಯವಹಾರ ನಡೆಯಲು ಸಾಧ್ಯವಿಲ್ಲ ಎಂದು ವಾದಿಸಿದರು.

ಸಂವಾದದಲ್ಲಿ ಮಾತನಾಡಿದ ಕರ್ನಾಟಕದ ಬ್ಯಾಟರ್ ಕೆ.ಎಲ್. ರಾಹುಲ್

'ಅಗ್ರ ಕ್ರಮಾಂಕವೇ ನನಗೆ ಆರಾಮ'

ನವದೆಹಲಿ (ಪಿಟಿಐ): ಬ್ಯಾಟಿಂಗ್ ಕ್ರಮಾಂಕದಲ್ಲಿ ಏನೇ ಬದಲಾವಣೆ ಆದರೂ ಅದಕ್ಕೆ ಹೊಂದಿಕೊಂಡು ಕೆ.ಎಲ್.ರಾಹುಲ್ ಸ್ಥಿರ ಪ್ರದರ್ಶನ ನೀಡುತ್ತಾ ಬಂದಿದ್ದಾರೆ. ಆದರೆ ಕೆಳ ಕ್ರಮಾಂಕದ ಬದಲು ಮೇಲಿನ ಕ್ರಮಾಂಕಗಳಲ್ಲಿ ಆಡುವುದು ತಮಗೆ 'ಹೆಚ್ಚು ಆರಾಮ' ನೀಡುತ್ತದೆ ಎಂದು ಈ ಆಕರ್ಷಕ ಶೈಲಿಯ ಬ್ಯಾಟರ್ ಹೇಳುತ್ತಾರೆ.

ಸಾಮಾನ್ಯವಾಗಿ ಐದನೇ ಕ್ರಮಾಂಕದಲ್ಲಿ ಆಡುತ್ತಿದ್ದ ರಾಹುಲ್ ಅವರನ್ನು ಇತ್ತೀಚಿನ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಆರನೇ ಕ್ರಮಾಂಕಕ್ಕೆ ಇಳಿಸಲಾಗಿತ್ತು. ಅವರು ದುಬೈನಲ್ಲಿ ಆಡಿದ ಐದು ಪಂದ್ಯಗಳಲ್ಲಿ 174 ರನ್ ಗಳಿಸಿದ್ದರು. ಇದು, ಸವಾಲು ಸ್ವೀಕರಿಸಲು ಅವರು ನಡೆಸಿದ ಸಿದ್ಧತೆ ಮತ್ತು ತೋರಿದ ಬದ್ಧತೆಗೆ ಕನ್ನಡಿಯಾಗಿತ್ತು.

'ನಾನು ಮೇಲಿನ ಕ್ರಮಾಂಕದಲ್ಲಿ ಆಡಿ ಬೆಳೆದವನು. 11ನೇ ವಯಸ್ಸಿನಲ್ಲಿ ಮಂಗಳೂರಿನಲ್ಲಿ ನನ್ನ ಮೊದಲ ಸ್ಪರ್ಧಾತ್ಮಕ ಕ್ರಿಕೆಟ್ ಆಡಿದ ದಿನಗಳಿಂದ ಹಿಡಿದು ಭಾರತಕ್ಕೆ ಆಡಿದ ಮೊದಲ ಕೆಲವು ವರ್ಷ ಅಗ್ರ ಕ್ರಮಾಂಕಗಳಲ್ಲೇ ಆಡಿದ್ದೆ. ಈ ಕ್ರಮಾಂಕದಲ್ಲಿ ಆಡುವುದು ನನಗೆ ಹೆಚ್ಚು ಹಿತಾನುಭವ ನೀಡುತ್ತದೆ ಮತ್ತು ನನ್ನ ಆಟಕ್ಕೆ ಸಹಜ ಸ್ಥಾನವೆನಿಸುವ ಭಾವನೆ ಮೂಡಿಸುತ್ತದೆ' ಎಂದರು.

ಕೆ.ಎಲ್. ರಾಹುಲ್ –ಎಎಫ್‌ಪಿ ಚಿತ್ರ

'ಆದರೆ ತಂಡವಾಗಿ ಆಡುವ ಕ್ರೀಡೆಗಳಲ್ಲಿ, ಪ್ರತಿ ಬಾರಿ ನಾವು ಬಯಸಿದ ಸ್ಥಾನ ನೀಡಲು ಸಾಧ್ಯ ಆಗುವುದಿಲ್ಲ. ನಾವು ತಂಡಕ್ಕೆ ಅಗತ್ಯಕ್ಕೆ ತಕ್ಕಂತೆ ನಮ್ಮನ್ನು ಒಗ್ಗಿಸಿಕೊಳ್ಳಬೇಕಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ನಾನು ಈ ಸವಾಲುಗಳಿಗೆ ಹೊಂದಿಕೊಳ್ಳುವುದನ್ನು ಕಲಿತಿದ್ದು, ನನಗೆ ವಹಿಸಿದ ಪಾತ್ರದಲ್ಲಿ ಸಾಧ್ಯವಾದಷ್ಟು ಉತ್ತಮವಾಗಿ ಆಡುತ್ತಿದ್ದೇನೆ' ಎಂದು ಅವರು ಜಿಯೊ ಹಾಟ್‌ಸ್ಟಾರ್ ಜೊತೆಗಿನ ಸಂವಾದದಲ್ಲಿ ತಿಳಿಸಿದರು.

ಈ ಹಿಂದೆ ಪಂಜಾಬ್ ಕಿಂಗ್ಸ್ ಮತ್ತು ಲಖನೌ ಸೂಪರ್ ಜೈಂಟ್ಸ್ ತಂಡಗಳನ್ನು ಮುನ್ನಡೆಸಿದ್ದ ಕರ್ನಾಟಕದ ಈ ಆಟಗಾರ, ಈ ಬಾರಿ ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿದ್ದು, ನಾಯಕತ್ವದ ಕೊಡುಗೆ ಒಪ್ಪಿಕೊಂಡಿಲ್ಲ ಎನ್ನಲಾಗಿದೆ.

ಹೀಗಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ಮುನ್ನಡೆಸುವ ಹೊಣೆ ಅಕ್ಷರ್ ಪಟೇಲ್ ಹೆಗಲಿಗೆ ಬೀಳುವ ಸಾಧ್ಯತೆಯಿದೆ.

ಐಪಿಎಲ್ ಹರಾಜಿಗೆ ಸಂಬಂಧಿಸಿ ಮಾತನಾಡಿದ ಅವರು, 'ಇದು ಕ್ರಿಕೆಟ್‌ಲ್ಲಿ ಆಟಗಾರನ ಭವಿಷ್ಯದ ಮೇಲೆ ಗಾಢವಾದ ಪ್ರಭಾವ ಬೀರುತ್ತದೆ' ಎಂದರು. 'ಕಳೆದ ಮೂರು ಋತುಗಳಿಂದ ನಾಯಕನಾಗಿರುವ ಕಾರಣ ತಂಡ ಕಟ್ಟುವ ಪ್ರಕ್ರಿಯೆಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದೇನೆ. ತಂಡ ರೂಪಿಸುವಾಗ ಫ್ರಾಂಚೈಸಿಗಳು ಎದುರಿಸುವ ಒತ್ತಡವನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಆದರೆ ಆಟಗಾರರನ್ನು ಗಮನದಲ್ಲಿಟ್ಟುಕೊಂಡಾಗ ಅವರ ಸ್ಥಿತಿ ಇನ್ನೂ ಕಠಿಣ. ಅಲ್ಲಿ ಅವರ ಭವಿಷ್ಯವೇ ಪಣಕ್ಕಿರುತ್ತದೆ. ಹರಾಜು ಆಟಗಾರನೊಬ್ಬನ ಭವಿಷ್ಯ ರೂಪಿಸುತ್ತದೆ ಅಥವಾ ಅವನ ಮುಂದೆ ಅನಿರೀಕ್ಷಿತ ಸವಾಲುಗಳನ್ನು ತಂದಿಡುತ್ತದೆ' ಎಂದರು.

ಲಖನೌ ಸೂಪರ್ ಕಿಂಗ್ಸ್‌ನಲ್ಲಿ ಹೋದ ಬಾರಿಯ ಐಪಿಎಲ್ ರಾಹುಲ್ ಪಾಲಿಗೆ ಹಿತಕರ ಎನಿಸಿರಲಿಲ್ಲ. ಈಗ ಕ್ಯಾಪಿಟಲ್ಸ್‌ನಲ್ಲಿ ಅವರು ಹೊಸದಾಗಿ ಸವಾಲು ಎದುರಿಸಬೇಕಾಗಿದೆ.

'ಡೆಲ್ಲಿ ತಂಡದಲ್ಲಿರುವ ಮಿಚೆಲ್ ಸ್ಟಾರ್ಕ್, ಅಕ್ಷರ್ ಪಟೇಲ್, ಕುಲದೀಪ್ ಯಾದವ್ ಮೊದಲಾದ ಆಟಗಾರರ ಜೊತೆ ಈ ಹಿಂದೆ ನಾನು ಆಡಿದ್ದು, ನಮ್ಮ ತಂಡ ಪ್ರಬಲವಾಗಿದೆ. ಐಪಿಎಲ್ ಆರಂಭಕ್ಕೆ ಕಾತರನಾಗಿದ್ದೇನೆ' ಎಂದರು.

ಕ್ರಿಸ್ಟಿಗೆ ಆಘಾತ ನೀಡಿದ ಲಕ್ಷ್ಯ ಕ್ವಾರ್ಟರ್‌ಗೆ

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್: ಎಂಟರ ಘಟ್ಟಕ್ಕೆ ಟ್ರೀಸಾ– ಗಾಯತ್ರಿ ಜೋಡಿ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಅತ್ಯುತ್ಕೃಷ್ಟ ಆಟವಾಡಿದ ಭಾರತದ ಲಕ್ಷ್ಯ ಸೇನ್, ವಿಶ್ವದ ಎರಡನೇ ಕ್ರಮಾಂಕದ ಆಟಗಾರ ಜೊನಾಥನ್ ಕ್ರಿಸ್ಟಿ ಅವರಿಗೆ ನೇರ ಆಟಗಳಿಂದ ಆಘಾತ ನೀಡಿ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ಸ್ ಪುರುಷರ ಸಿಂಗಲ್ಸ್ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು.

23 ವರ್ಷ ವಯಸ್ಸಿನ ಲಕ್ಷ್ಯ ಗುರುವಾರ ನಡೆದ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 21–13, 21–10 ರಿಂದ ಇಂಡೊನೇಷ್ಯಾದ ಪ್ರಬಲ ಆಟಗಾರನನ್ನು ಸೋಲಿಸಿದರು. ಪಂದ್ಯ ನಿರೀಕ್ಷೆ ಮೀರಿ ಏಕಪಕ್ಷೀಯವಾಯಿತು. ಅಲ್ಮೋರಾದ ಆಟಗಾರ ಗೆಲುವಿಗೆ ತೆಗೆದುಕೊಂಡ ಅವಧಿ 36 ನಿಮಿಷಗಳನ್ನಷ್ಟೇ.

ಕ್ರಿಸ್ಟಿ ವಿರುದ್ಧ ಆಡಿದ ಏಳು ಪಂದ್ಯಗಳಲ್ಲಿ ಲಕ್ಷ್ಯ ಗಳಿಸಿದ ಮೂರನೇ ಜಯ ಇದು. ಕಳೆದ ವರ್ಷದ ಮಧ್ಯದಲ್ಲಿ ನಡೆದ ಪ್ಯಾರಿಸ್ ಒಲಿಂಪಿಕ್ಸ್ ನಂತರ ಇವರಿಬ್ಬರು ಇದೇ ಮೊದಲ ಬಾರಿ ಮುಖಾಮುಖಿಯಾಗಿದ್ದರು.

ಈ ಟೂರ್ನಿಗೆ ಮೂರನೇ ಶ್ರೇಯಾಂಕ ಪಡೆದಿದ್ದ ಕ್ರಿಸ್ಟಿ ವಿರುದ್ಧ ಲಕ್ಷ್ಯ ಕೌಶಲಪೂರ್ಣ ಆಟದಿಂದ ಮೇಲುಗೈ ಸಾಧಿಸಿದರು. ಹುರುಪಿನಿಂದ ಅಂಕಣ ದುದ್ದಕ್ಕೂ ಓಡಾಡಿ, ಎದುರಾಳಿಯನ್ನು ವಂಚಿಸಿ ರಿಟರ್ನ್‌ಗಳನ್ನು ಮಾಡಿದ ಲಕ್ಷ್ಯ ಮೊದಲ ಗೇಮ್‌ನ ವಿರಾಮದ ವೇಳೆ 11–7ರ ಅಲ್ಪ ಮುನ್ನಡೆ ಕಟ್ಟಿಕೊಂಡಿದ್ದರು. ನಂತರ ಅವರು ಕೆಲವು ತಪ್ಪುಗಳನ್ನು ಎಸಗಿದ ಪರಿಣಾಮ ಕ್ರಿಸ್ಟಿ ಚೇತರಿಸಿ 12–12ರಲ್ಲಿ ಸಮಮಾಡಿಕೊಂಡರು.

ಭಾರತದ ಲಕ್ಷ್ಯ ಸೇನ್ ಪಿಟಿಐ ಸಂಗ್ರಹ ಚಿತ್ರ

ಆದರೆ ಈ ಸಂದರ್ಭದಲ್ಲಿ ಆಟದ ಮಟ್ಟ ಸುಧಾರಿಸಿಕೊಂಡ ಭಾರತದ ಆಟಗಾರ ಪಂದ್ಯದ ಮೇಲೆ ಹಿಡಿತ ಪಡೆದರು. ಎರಡನೇ ಗೇಮ್‌ನಲ್ಲೂ ಅವರ ಕೈಮೇಲಾಯಿತು.

2022ರಲ್ಲಿ ಈ ಕೂಟದ ಫೈನಲ್ ತಲುಪಿದ್ದ ಲಕ್ಷ್ಯ, ಹೋದ ವರ್ಷ ಇದೇ ಎದುರಾಳಿ ಎದುರು ಸೆಮಿಫೈನಲ್‌ನಲ್ಲಿ ಸೋಲನುಭವಿಸಿದ್ದರು.

ಟ್ರೀಸಾ-ಗಾಯತ್ರಿ ಜೋಡಿಗೆ ಮುನ್ನಡೆ: ಭಾರತದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿಯು ಮಹಿಳೆಯರ ಡಬಲ್ಸ್‌ನಲ್ಲಿ ಎಂಟರ ಘಟ್ಟ ಪ್ರವೇಶಿಸಿತು.

ಗುರುವಾರ ನಡೆದ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಆಟಗಾರ್ತಿಯರು ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು 15–21, 21–18, 21–18ರಿಂದ ದಕ್ಷಿಣ ಕೊರಿಯಾದ ಕಾಂಗ್ ಹೀ ಯೋಂಗ್ ಮತ್ತು ಕಿಮ್ ಹೈ ಜಿಯೋಂಗ್ ಅವರನ್ನು ಹಿಮ್ಮೆಟ್ಟಿಸಿದರು.

ಹೊರಬಿದ್ದ ಮಾಳವಿಕಾ: ವಿಶ್ವದ ಮೂರನೇ ಕ್ರಮಾಂಕದ ಆಟಗಾರ್ತಿ ಅಕಾನೆ ಯಮಾಗುಚಿ ಮಹಿಳಾ ಸಿಂಗಲ್ಸ್ ಎರಡನೇ ಸುತ್ತಿನಲ್ಲಿ ಒಂದಿಷ್ಟೂ ಪ್ರಯಾಸವಿಲ್ಲದೇ ಭಾರತದ ಮಾಳವಿಕಾ ಅವರನ್ನು 21–16, 21–13ರಿಂದ ಸೋಲಿಸಿದರು. ಇದಕ್ಕೆ ತೆಗೆದುಕೊಂಡಿದ್ದು 33 ನಿಮಿಷಗಳನ್ನಷ್ಟೇ.

ಇವರಿಬ್ಬರ ಮುಖಾಮುಖಿಯಲ್ಲಿ ಜಪಾನ್‌ನ ಆಟಗಾರ್ತಿ 4–0 ದಾಖಲೆ ಹೊಂದಿದ್ದಾರೆ.

ಭಾರತದ ಅಗ್ರ ಆಟಗಾರ್ತಿ ಪಿ.ವಿ. ಸಿಂಧು ಬುಧವಾರ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದರು.

ಮಿಶ್ರ ಡಬಲ್ಸ್‌ನಲ್ಲಿ ರೋಹನ್ ಕಪೂರ್ ಮತ್ತು ರುತ್ವಿಕಾ ಗದ್ದೆ ಜೋಡಿಯ ಸವಾಲು ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಅಂತ್ಯಗೊಂಡಿತು.

ಚೀನಾದ ವೀ ಯಾ ಷಿನ್– ಫೆಂಗ್ ಯನ್ ಝೇ ಜೋಡಿ ಎರಡನೇ ಸುತ್ತಿನ ಪಂದ್ಯದಲ್ಲಿ 21–10, 21–12 ರಿಂದ ಭಾರತದ ರೋಹನ್– ರುತ್ವಿಕಾ ಜೋಡಿಯನ್ನು ಹಿಮ್ಮೆಟ್ಟಿಸಿತು.

ಸಾತ್ವಿಕ್–ಚಿರಾಗ್ ಜೋಡಿಗೆ ನಿರಾಸೆ

ಪುರುಷರ ಡಬಲ್ಸ್‌ನಲ್ಲಿ ಭಾರತದ ಭರವಸೆಯಾಗಿದ್ದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರು ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ ಅರ್ಧದಲ್ಲೇ ಪಂದ್ಯದಿಂದ ನಿವೃತ್ತರಾದರು. ಚಿರಾಗ್ ಅವರಿಗೆ ಬೆನ್ನುನೋವು ಕಾಣಿಸಿಕೊಂಡ ಕಾರಣ ಹಿಂದೆ ಸರಿದರು. ಆ ವೇಳೆ ಎದುರಾಳಿಯಾಗಿದ್ದ ಚೀನಾದ ಝೊಂಗ್ ವೀ ಹಾನ್– ಷಿ ಹಾವೊ ನಾನ್ ಅವರು 21–16, 2–2ರಲ್ಲಿ ಮುಂದಿದ್ದರು.

ಕಾಲುನೋವಿನಲ್ಲಿ ಅಭ್ಯಾಸಕ್ಕೆ ದ್ರಾವಿಡ್ ಹಾಜರು

ಬೆಂಗಳೂರು: 'ಗೋಡೆ' ಖ್ಯಾತಿಯ ರಾಹುಲ್ ದ್ರಾವಿಡ್ ಗುರುವಾರ ರಾಜಸ್ಥಾನ ರಾಯಲ್ಸ್ ಆಟಗಾರರ ಅಭ್ಯಾಸ ನೋಡಲು ಬಂದಾಗ ಅಲ್ಲಿದ್ದವರೆಲ್ಲರಿಗೂ ಅಚ್ಚರಿ.

ಏಕೆಂದರೆ; ಮೂರು ದಿನಗಳ ಹಿಂದಷ್ಟೇ ಬೆಂಗಳೂರಿನಲ್ಲಿ ನಾಸೂರ್ ಮೆಮೊರಿಯಲ್ ಶೀಲ್ಡ್ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ವಿಜಯಾ ಕ್ರಿಕೆಟ್ ಕ್ಲಬ್ (ಮಾಲೂರು) ತಂಡದ ಪರವಾಗಿ ಆಡುವ ಸಂದರ್ಭದಲ್ಲಿ ದ್ರಾವಿಡ್ ಕಾಲಿಗೆ ಪೆಟ್ಟಾಗಿತ್ತು.

ಮೂಳೆಮುರಿತ ಇದ್ದ ಕಾರಣ ದಪ್ಪ ಬ್ಯಾಂಡೇಜ್ ಕೂಡ ಹಾಕಲಾಗಿತ್ತು. ಆದರೆ ಅವರು ಜೈಪುರಕ್ಕೆ ತೆರಳಿದರು. ಬುಧವಾರ ಮತ್ತು ಗುರುವಾರ ಆಟಗಾರರು ಅಭ್ಯಾಸ ನಡೆಸುವ ಸ್ಥಳಕ್ಕೆ ಬಂದು ಮಾರ್ಗದರ್ಶನ ಮಾಡಿದರು. ರಾಜಸ್ಥಾನ ರಾಯಲ್ಸ್ ತಂಡವು ತನ್ನ ಸಾಮಾಜಿಕ ಜಾಲತಾಣಗಳ ಖಾತೆಯಲ್ಲಿ ವಿಡಿಯೊವೊಂದನ್ನು ಪೋಸ್ಟ್ ಮಾಡಿದೆ. ಅದರಲ್ಲಿ ದ್ರಾವಿಡ್ ಅವರು ಗಾಲ್ಫ್ ಕಾರ್ಟ್‌ನಲ್ಲಿ ಮೈದಾನಕ್ಕೆ ಬರುವ ದೃಶ್ಯವಿದೆ. ಊರುಗೋಲುಗಳ ಸಹಾಯದಿಂದ ನೆಟ್ಸ್‌ನತ್ತ ಬಂದು ಎಲ್ಲರೊಂದಿಗೆ ಮಾತನಾಡುತ್ತಾರೆ. ನಂತರ ಒಂದು ಬದಿಯಲ್ಲಿರುವ ಕುರ್ಚಿಯಲ್ಲಿ ಕುಳಿತು ಅಭ್ಯಾಸ ವೀಕ್ಷಿಸುತ್ತಾರೆ.

52 ವರ್ಷ ವಯಸ್ಸಿನ ದ್ರಾವಿಡ್ ಅವರು ಈಚೆಗೆ ಬೆಂಗಳೂರಿನಲ್ಲಿ ತಮ್ಮ ಮಗ ಅನ್ವಯ್ ಜೊತೆಗೆ ಸ್ಥಳೀಯ ಕ್ರಿಕೆಟ್‌ನಲ್ಲಿ ಆಡಿದ್ದರು.

ಸಂಕ್ಷಿಪ್ತ ಸುದ್ದಿ

ಏಕದಿನ ಕ್ರಿಕೆಟ್: ಬಾಂಗ್ಲಾದ ಮಹಮದುಲ್ಲಾ ವಿದಾಯ

ಢಾಕಾ (ಪಿಟಿಐ): ಬಾಂಗ್ಲಾದೇಶದ ಅನುಭವಿ ಬ್ಯಾಟರ್ ಮಹಮದುಲ್ಲಾ ಅವರು ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಬುಧವಾರ ನಿವೃತ್ತಿ ಘೋಷಿಸಿದ್ದಾರೆ.

2021ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಹಾಗೂ 2024ರಲ್ಲಿ ಟಿ20 ಮಾದರಿಗೆ ನಿವೃತ್ತಿ ಘೋಷಿಸಿದ್ದ 39 ವರ್ಷ ವಯಸ್ಸಿನ ಮಹಮದುಲ್ಲಾ ಏಕದಿನ ಕ್ರಿಕೆಟ್‌ನಿಂದಲೂ ದೂರ ಸರಿದಿದ್ದಾರೆ.

ಏಕದಿನ ಮಾದರಿಯಲ್ಲಿ ಬಾಂಗ್ಲಾದೇಶ ಪರ ಹೆಚ್ಚು ರನ್ ಗಳಿಸಿದ ಬ್ಯಾಟರ್‌ಗಳ ಪಟ್ಟಿಯಲ್ಲಿ ಮಹಮದುಲ್ಲಾ ನಾಲ್ಕನೇ ಸ್ಥಾನದಲ್ಲಿದ್ದಾರೆ. 239 ಏಕದಿನ ಪಂದ್ಯಗಳಲ್ಲಿ ನಾಲ್ಕು ಶತಕ ಮತ್ತು 32 ಅರ್ಧಶತಕ ಸೇರಿದಂತೆ 36.46ರ ಸರಾಸರಿಯಲ್ಲಿ 5,689 ರನ್ ಗಳಿಸಿದ್ದಾರೆ. ಜೊತೆಗೆ 82 ವಿಕೆಟ್ ಪಡೆದಿದ್ದಾರೆ.

ಮಹಮದುಲ್ಲಾ ತಮ್ಮ ನಾಲ್ಕೂ ಶತಕಗಳನ್ನು ಐಸಿಸಿ ಟೂರ್ನಿಗಳಲ್ಲೇ ದಾಖಲಿಸಿರುವುದು ವಿಶೇಷ. 2015ರ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಸತತ ಎರಡು ಶತಕ ಬಾರಿಸಿದ್ದ ಅವರು, 2017ರ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಲ್ಲಿ ಹಾಗೂ 2023ರ ಏಕದಿನ ವಿಶ್ವಕಪ್‌ನಲ್ಲಿ ತಲಾ ಒಂದೊಂದು ಶತಕ ಗಳಿಸಿದ್ದರು.

ಟಿ20 ಲೀಗ್: ಆಟಗಾರರ ಸಂಭಾವನೆ ಪರಿಷ್ಕರಿಸಿದ ಪಿಸಿಬಿ

ಕರಾಚಿ (ಪಿಟಿಐ): ಪಂದ್ಯ ಸಂಭಾವನೆ ಕಡಿತಗೊಳಿಸುವ ನಿರ್ಧಾರಕ್ಕೆ ತೀವ್ರ ವಿರೋಧ ಎದುರಾದ ಬೆನ್ನಲ್ಲೇ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಗುರುವಾರ ರಾಷ್ಟ್ರೀಯ ಟಿ20 ಚಾಂಪಿಯನ್‌ಷಿಪ್ಸ್‌ನಲ್ಲಿ ಆಡುವ ಆಟಗಾರರ ಸಂಭಾವನೆಯನ್ನು ಏರಿಕೆ ಮಾಡಿದೆ.

ಮೂರು ದಿನಗಳ ಹಿಂದೆ, ಪಾಕಿಸ್ತಾನ ಕ್ರಿಕೆಟ್ ಮಂಡಳಿಯು ಆಟಗಾರರ ಸಂಭಾವನೆಯನ್ನು ಪ್ರತಿ ಪಂದ್ಯಕ್ಕೆ ಒಂದು ಲಕ್ಷ ರೂಪಾಯಿಗಳಿಂದ 10,000 ರೂ.ಗಳಿಗೆ, ಮೀಸಲು ಆಟಗಾರರ ಸಂಭಾವನೆ 50 ಸಾವಿರ ರೂ.ಗಳಿಂದ 5 ಸಾವಿರ ರೂ.ಗಳಿಗೆ ಇಳಿಸಿತ್ತು. ಈ ನಿರ್ಧಾರ ಮರುಪರಿಶೀಲಿಸುವಂತೆ ಅಧ್ಯಕ್ಷ ಮೊಹ್ಸಿನ್ ನಕ್ವಿ ಆದೇಶ ನೀಡಿದ್ದರು.

ವ್ಯಾಪಕ ಟೀಕೆಗಳು ಮತ್ತು ಆಕ್ರೋಶ ಎದುರಾದ ಕಾರಣ ಪಿಸಿಬಿ ಈಗ ಸಂಭಾವನೆಯನ್ನು ಪ್ರತಿ ಪಂದ್ಯಕ್ಕೆ 40000 ರೂ.ಗಳಿಗೆ ಏರಿಸಿದೆ. ಮೀಸಲು ಆಟಗಾರರ ಸಂಭಾವನೆಯನ್ನು 20000 ರೂ.ಗಳಿಗೆ ಹೆಚ್ಚಿಸಿದೆ. ರಾಷ್ಟ್ರೀಯ 19 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ಅನ್ನು ಆರಂಭವಾದ ಒಂದೇ ದಿನದ ನಂತರ ಮಂಡಳಿಯ ದಿಢೀರನೇ ಸ್ಥಗಿತಗೊಳಿ ಸಿದ ಕಾರಣ ಈ ಋತುವಿನಲ್ಲಿ ಪಾಕಿಸ್ತಾನ ದೇಶಿ ಕ್ರಿಕೆಟ್‌ನ ವೇಳಾಪಟ್ಟಿ ಮತ್ತು ಸ್ವರೂಪದ ಬಗ್ಗೆ ಚರ್ಚೆಗಳಾಗಿದ್ದವು.

'ವಾರ್ಷಿಕ ಕೂಟವಾಗಿ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾನ್‌ಪ್ರಿ'

ನವದೆಹಲಿ (ಪಿಟಿಐ): ಗುರುವಾರ ಇಲ್ಲಿ ಮುಕ್ತಾಯಗೊಂಡ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾನ್‌ಪ್ರಿ ಕೂಟ ಇನ್ನು 2028ರವರೆಗೆ ಪ್ರತಿ ವರ್ಷ ನಡೆಯಲಿದೆ. ಈ ಸಂಬಂಧ ಭಾರತ ಮತ್ತು ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ನಡುವೆ ಒಪ್ಪಂದಕ್ಕೆ ಸಹಿಹಾಕಲಾಯಿತು.

ನವದೆಹಲಿಯ ವಿಶ್ವ ಪ್ಯಾರಾ ಗ್ರ್ಯಾನ್‌ಪ್ರಿ ಕೂಟ, ಮೊತ್ತಮೊದಲ ಅಂತರರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ ಕೂಟ ಎನಿಸಿತು. '2028ರ ಲಾಸ್ ಏಂಜಲೀಸ್ ಪ್ಯಾರಾಲಿಂಪಿಕ್ಸ್ ನಡೆಯುವ ತನಕ ಪ್ರತಿ ವರ್ಷ ಕೂಟ ನಡೆಸಲು ಭಾರತವು ಒಪ್ಪಂದಕ್ಕೆ ಸಹಿ ಮಾಡಿದೆ. ಹೀಗಾಗಿ ನವದೆಹಲಿ ಗ್ರ್ಯಾನ್‌ಪ್ರಿ ಕೂಟ ಇನ್ನು ನಾಲ್ಕು ವರ್ಷ ನಡೆಯಲಿದೆ ಎಂದು ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಕಾಂಪಿಟೀಷನ್ಸ್ ಸೀನಿಯರ್ ಮ್ಯಾನೇಜರ್ ಮಾರ್ಟಿನ್ ಕೋರ್ಲಿ ಸುದ್ದಿಸಂಸ್ಥೆಗೆ ತಿಳಿಸಿದರು.

ನವದೆಹಲಿಯಲ್ಲಿ ಪ್ರತಿಷ್ಠಿತ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಇದೇ ವರ್ಷದ ಸೆಪ್ಟೆಂಬರ್ 26ರಿಂದ ಅಕ್ಟೋಬರ್ 5ರವರೆಗೆ ನಡೆಯಲಿದೆ.

ಫುಟ್‌ಬಾಲ್: ಡೆಕ್ಕನ್ ತಂಡಕ್ಕೆ ಜಯ

ಬೆಂಗಳೂರು: ಎಫ್‌ಸಿ ಡೆಕ್ಕನ್ ತಂಡವು ಬಿಡಿಎಫ್‌ಎ ಎ ಡಿವಿಷನ್ ಲೀಗ್ ಫುಟ್‌ಬಾಲ್ ಪಂದ್ಯದಲ್ಲಿ 3–1 ರಿಂದ ಆದಾಯ ತೆರಿಗೆ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಬಿಟಿಎಂ ಎಫ್‌ಸಿ ತಂಡವು 6–0ರಿಂದ ವಿಜಯನಗರ ಎಫ್‌ಸಿ ತಂಡವನ್ನು ಸೋಲಿಸಿತು.

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ–577 222.

ದೂರವಾಣಿ: 08182–246165, website: www.shimul.coop

ಐ.ಎಫ್.ಟಿ. ಸಂಖ್ಯೆ:ಶಿದಾಚಿಸಹಾಒ:ಅಭಿಯಂತರ:9038:2024–25 ದಿನಾಂಕ: 12.03.2025

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಮಾತ್ರ)

KMF/2024-25/SE3303

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವ್ಯಾಪ್ತಿಯಲ್ಲಿನ ಇ.ಟಿ.ಪಿ ಘಟಕಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಚಾಲನೆ ಮತ್ತು ನಿರ್ವಹಣೆಯನ್ನು ಈ ಕೆಳಕಾಣಿಸಿದ ಕೋಷ್ಟಕದಂತೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತ ಗುತ್ತಿಗೆದಾರರು ಟೆಂಡರ್ ಬಿಡ್‌ಗಳನ್ನು ನಿಗದಿತ ಇ.ಎಂ.ಡಿ ಮೊತ್ತದೊಂದಿಗೆ **ದಿನಾಂಕ: 29.03.2025ರ ಸಂಜೆ 16:30 ಗಂಟೆಗಳ ಒಳಗಾಗಿ** ಇ–ಪ್ರೋಕ್ಯುರ್‌ಮೆಂಟ್ ಪ್ರೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳಿಗಾಗಿ ಕಛೇರಿ ಮತ್ತು ಅಭಿಯಂತರ ವಿಭಾಗವನ್ನು ಸಂಪರ್ಕಿಸಬಹುದಾಗಿದೆ.

ಕ್ರ. ಸಂ.	ಕೆಲಸದ ವಿವರ	ಇಂಡೆಟ್ ಸಂಖ್ಯೆ	ಟೆಂಡರ್‌ನ ಅಂದಾಜು ಮೊತ್ತ	ಟೆಂಡರ್‌ನ ಅವಧಿ	ಇ.ಎಂ.ಡಿ ಮೊತ್ತ
1	ಶಿವಮೊಗ್ಗ ಡೇರಿ, ದಾವಣಗೆರೆ ಡೇರಿ, ಹೊನ್ನಾಳಿ, ತಡಗಣಿ ಮತ್ತು ಚಿತ್ರದುರ್ಗ ಶೀತಲೀಕರಣ ಕೇಂದ್ರಗಳಲ್ಲಿರುವ ಇ.ಟಿ.ಪಿ. ಘಟಕಗಳನ್ನು ದ್ವೈ ವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಚಾಲನೆ ಮತ್ತು ನಿರ್ವಹಣೆ (ದ್ವಿ ಲಕೋಟೆ)	IFTNO:SDCMUL/ ENGG/ETP/ AMC/2024-25	ರೂ. 100 ಲಕ್ಷ	02 ವರ್ಷಗಳು	ರೂ. 2,50,000/–

ದಿನಾಂಕ: 12.03.2025
ಸ್ಥಳ: ಮಾಚೇನಹಳ್ಳಿ

ಸಹಿ/– ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಒಕ್ಕೂಟ

ಕರ್ನಾಟಕ ಸರ್ಕಾರ

ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ವೈದ್ಯಕೀಯ ಶಿಕ್ಷಣ ಸ್ವಾಯುತ್ತ ಸಂಸ್ಥೆ, ಸಾಗರ ರಸ್ತೆ, ಶಿವಮೊಗ್ಗ–577 201

ಫೋನ್: 08182 269700/ 269701, ಫ್ಯಾಕ್ಸ್ : 08182 264700,

ವೆಬ್‌ಸೈಟ್: www.sims.karnataka.gov.in

ಟೆಂಡರ್ ಅಧಿಸೂಚನೆ (ಇ – ಪ್ರೊಕ್ಯೂರ್ಮೆಂಟ್ ಮೂಲಕ)

No :SIMS/Store/Tender/2024-25 Date : 12.03.2025

ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇ–ಪ್ರೊಕ್ಯೂರ್ಮೆಂಟ್ ಮೂಲಕ (ಕೆಪಿಪಿ ಪೋರ್ಟಲ್) ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಿದೆ.

SI NO	Tender No. & Date	Name of the Item	Date of Bid documents available	Opening of Technical Bid
1	No. SIMS/CVL/MIS/ 1/MCW-SIMS-SMG, Dated: 13.03.2025	Purchase of Consumables to Super Speciality Hospital, SIMS.	13.03.2025 to 27.03.2025	29.03.2025
2	No. SIMS/Store/TNDR/ Lab Chemical & Re Agents/2024-25/ SIMS-SMG, Dated: 13.03.2025	Purchase of Chemical & Re Agents to VRDL Lab and Mc Gann Teaching Hospital, SIMS.	13.03.2025 to 27.03.2025	29.03.2025
3	SIMS/EST/OSSB/5/2025-EST1-SIMS-SMG, (DME/ 2024-25/SE0393) dated: 12-03-2025	Providing Group D Manpower Services to SIMS	12.03.2025 to 26.03.2025	28.03.2025

ಟೆಂಡರ್ ದಾಖಲೆಗಳು ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನ (ಕೆಪಿಪಿ ಪೋರ್ಟಲ್) ವೆಬ್‌ಸೈಟ್ http://kppp.karnataka.gov.in ನಲ್ಲಿ ಲಭ್ಯವಿದೆ.

ಸಹಿ/– ನಿರ್ದೇಶಕರು/ಡೀನ್
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಶಿವಮೊಗ್ಗ.

ವಾ.ಸಾ.ಸಂ.ಇ./ಶಿ/ನಂ.99–03/ಝೇಂಕಾರ್/2024–25

STANLEY
Makers Of Beautiful
sale
Off Season Limited Period
Kitchens · Wardrobes · Sofas · Recliners · Beds · Mattresses · Dining Tables · Armchairs · Bespoke
Luxury Format Store • Showcasing Full Home Solutions
STANLEY
LEVEL NEXT
Flagship Store, Bangalore
• Electronic City - 74064 44444
• Sadashivanagar - 99720 67005
• 100ft Road. Indiranagar - 74062 22222
• Airport Road - 96063 47970
Premium Format Store • Showcasing Living, Dining, Beds
STANLEY
BOUTIQUE
City Store, Bangalore
• Banashankri - 81476 92259
• Mission Road - 97314 84533
• Banaswadi - 96111 28236
• Dickenson Road - 81479 92779
• Airport Road - 96063 47970
lovestanley.com
Follow us @lovestanleyofficial
SCAN TO REACH US
T&C's Apply
Stanley Level Next and Stanley Boutique are a registered trademark of Stanley Lifestyles Limited. Any unauthorized use, copying, reproduction, or distribution of these trademark are strictly prohibited. All rights reserved.